
ಶುಕ್ರವಾರ, ಏಪ್ರಿಲ್ 1, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಗುಡಿ ಪಾಡ್ವಾ**

ಮರಾಠರ ಹೊಸ ವರ್ಷದ ಅಂಗವಾಗಿ ಆಚರಿಸಲಾಗುವ ಗುಡಿ ಪಾಡ್ವಾ ಹಬ್ಬಕ್ಕಾಗಿ ಮುಂಬೈನಲ್ಲಿ ಗುರುವಾರ ದುರ್ಗಾ ಮೂರ್ತಿಗೆ ಕಲಾವಿದ ಅಂತಿಮ ಸ್ಪರ್ಶ ನೀಡಿದರು – ಪಿಟಿಐ ಚಿತ್ರ






ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನ ಮಂತ್ರಿಗಳು

75 ಸ್ವಾತಂತ್ರ್ಯದ ಅಮೃತಮಹೋತ್ಸವ

ನವ ಭಾರತಕ್ಕಾಗಿ ನವ ಕರ್ನಾಟಕ



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

## ರಾಜ್ಯ ಸಹಕಾರ ಕ್ಷೇತ್ರದಲ್ಲಿ ಅಭಿವೃದ್ಧಿ, ರೈತ ಕುಟುಂಬಗಳ ಕಲ್ಯಾಣದತ್ತ ಹೊಸ ಹೆಜ್ಜೆಗಳು.

ಸಹಕಾರ ಇಲಾಖೆ ಹಾಗೂ ರಾಜ್ಯದ ಎಲ್ಲಾ ಸಹಕಾರ ಸಂಘಗಳ ಆಶ್ರಯದಲ್ಲಿ

# ಸಹಕಾರ ಸಮ್ಮೇಳನ

ರೈತ ಕುಟುಂಬಗಳಿಗೆ ಉತ್ತಮ ಆರೋಗ್ಯ ಸೇವೆ ನೀಡಲು ಯಶಸ್ವಿನಿ ಯೋಜನೆಯ ಮರು ಅನುಷ್ಠಾನ.

ಹಾಲು ಉತ್ಪಾದಕರ ಅಭಿವೃದ್ಧಿಗಾಗಿ ಕ್ಷೀರ ಸಮೃದ್ಧಿ ಬ್ಯಾಂಕ್

**01-04-2022, ಶುಕ್ರವಾರ, ಮಧ್ಯಾಹ್ನ 3.00 ಗಂಟೆ**
**ಸ್ಥಳ: ಬೆಂಗಳೂರು ಅರಮನೆ, ವಸಂತನಗರ**

**ಶ್ರೀ ಅಮಿತ್ ಶಾ,** ಸನ್ಮಾನ್ಯ ಕೇಂದ್ರ ಗೃಹ ಹಾಗೂ ಸಹಕಾರ ಸಚಿವರು, ಇವರಿಂದ ನಂದಿನಿ ಕ್ಷೀರ ಸಮೃದ್ಧಿ ಸಹಕಾರ ಬ್ಯಾಂಕ್ ಲಾಂಛನ ಬಿಡುಗಡೆ

**ಶ್ರೀ ಬಸವರಾಜ ಎಸ್. ಬೊಮ್ಮಾಯಿ,** ಸನ್ಮಾನ್ಯ ಮುಖ್ಯಮಂತ್ರಿಗಳು, ಇವರಿಂದ 'ಯಶಸ್ವಿನಿ ಆರೋಗ್ಯ ಸೇವೆ ಯೋಜನೆ'ಯ ಮರುಚಾಲನೆ ಹಾಗೂ ಲಾಂಛನ ಬಿಡುಗಡೆ



**ಶ್ರೀ ಪ್ರಲ್ಹಾದ ಜೋಶಿ,** ಸನ್ಮಾನ್ಯ ಕೇಂದ್ರ ಸಂಸದೀಯ ವ್ಯವಹಾರಗಳು, ಕಲ್ಲಿದ್ದಲು ಹಾಗೂ ಗಣಿ ಸಚಿವರು, ಇವರಿಂದ ಕೆ.ಎಂ.ಎಫ್. ಮಳಿಗೆ ಉದ್ಘಾಟನೆ

**ಪ್ರಾಸ್ತಾವಿಕ ನುಡಿ**
ಶ್ರೀ ಎಸ್. ಟಿ. ಸೋಮಶೇಖರ್
ಮಾನ್ಯ ಸಹಕಾರ ಸಚಿವರು, ಕರ್ನಾಟಕ ಸರ್ಕಾರ

**ಅಧ್ಯಕ್ಷತೆ**
ಡಾ. ಸಿ.ಎನ್. ಅಶ್ವತ್ಥನಾರಾಯಣ
ಮಾನ್ಯ ಉನ್ನತ ಶಿಕ್ಷಣ, ಐಟಿ-ಬಿಟಿ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು, ಕರ್ನಾಟಕ ಸರ್ಕಾರ

### ಹೈನುಗಾರಿಕೆ ಪ್ರೋತ್ಸಾಹಿಸಲು 'ಕ್ಷೀರ ಸಮೃದ್ಧಿ ಸಹಕಾರ ಬ್ಯಾಂಕ್' ರಚಿಸಲು ಕ್ರಮ



- ಬ್ಯಾಂಕ್ ರಚಿಸಲು ಯೋಜನಾ ವರದಿ, ಉಪನಿಯಮಗಳನ್ನು ರಚಿಸಿ, ಬ್ಯಾಂಕ್‌ನ ಸ್ಥಾಪನೆಗೆ ಸಹಕಾರ ಸಂಘಗಳ ನಿಬಂಧಕರ ಮೂಲಕ ಪ್ರಸ್ತಾವನೆ ಸಲ್ಲಿಸಲು ಅಗತ್ಯ ನಿರ್ದೇಶನ
- ಕ್ಷೀರ ಸಮೃದ್ಧಿ ಸಹಕಾರ ಬ್ಯಾಂಕ್ ಅನ್ನು ಸ್ಥಾಪಿಸಿ, ರಾಜ್ಯದ ಹಾಲು ಉತ್ಪಾದಕರಿಗೆ ಸರಳ ನಿಬಂಧನೆಗಳೊಂದಿಗೆ ಹೈನುಗಾರಿಕೆ ಹಾಗೂ ಹೈನುಗಾರಿಕೆ ಸಂಬಂಧಿತ ಕಸುಬುಗಳನ್ನು ಕೈಗೊಳ್ಳಲು ಸಾಲಗಳನ್ನು ವಿತರಿಸಲು ಕ್ರಮ ಕೈಗೊಳ್ಳುವುದು ಸರ್ಕಾರದ ಉದ್ದೇಶ
- ಇದಕ್ಕಾಗಿ ಹಾಲು ಉತ್ಪಾದಕರ ಸಹಕಾರ ಸಂಘ, ಕರ್ನಾಟಕ ಹಾಲು ಮಹಾಮಂಡಳ ಹಾಗೂ ಜಿಲ್ಲಾ ಹಾಲು ಒಕ್ಕೂಟಗಳಿಂದ ರೂ. 260.00 ಕೋಟಿ ಮತ್ತು ರಾಜ್ಯ ಸರ್ಕಾರದಿಂದ ರೂ.100.00 ಕೋಟಿ ಷೇರು ಬಂಡವಾಳ

### 'ಯಶಸ್ವಿನಿ' ಯೋಜನೆ ಮರು ಅನುಷ್ಠಾನಕ್ಕೆ ಕ್ರಮ. ಯೋಜನೆಗೆ ರೂ.300 ಕೋಟಿ ಮೀಸಲು

ಜನಪ್ರಿಯ 'ಯಶಸ್ವಿನಿ' ಯೋಜನೆಯನ್ನು ಮರು ಅನುಷ್ಠಾನಗೊಳಿಸಲು ಕ್ರಮ. ಇದಕ್ಕಾಗಿ ಆಯವ್ಯಯದಲ್ಲಿ ರೂ.300 ಕೋಟಿ ಘೋಷಣೆ. ಸದಸ್ಯರಿಂದ ವಾರ್ಷಿಕ ವಂತಿಕೆಯ ರೂಪದಲ್ಲಿ ರೂ.100 ಕೋಟಿ ಸಂಗ್ರಹಕ್ಕೆ ಚಿಂತನೆ.





### ಸಹಕಾರ ಸಂಸ್ಥೆಗಳ 33 ಲಕ್ಷ ರೈತರಿಗೆ 24,000 ಕೋಟಿ ರೂ.ಗಳ ಕೃಷಿ ಸಾಲವನ್ನು ವಿತರಿಸುವ ಗುರಿ.

## ರೈತರ ಹಿತರಕ್ಷಣೆ, ಮಹಿಳೆಯರು-ದುರ್ಬಲರ ಏಳಿಗೆಗೆ ಒತ್ತು

### ರೈತರಿಗೆ ಹೆಚ್ಚುವರಿ ನೆರವು

- ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ ಫಲಾನುಭವಿ ರೈತರಿಗೆ ಹೆಚ್ಚುವರಿಯಾಗಿ ರೂ. 4,000 ನೆರವು
- 2021-22ರಲ್ಲಿ ಮೊದಲ ಕಂತಿನಲ್ಲಿ ರೂ.961 ಕೋಟಿ. ಎರಡನೇ ಕಂತಿನಲ್ಲಿ ರೂ. 1007 ಕೋಟಿ ಬಿಡುಗಡೆ.
- ಅಕಾಲಿಕ ಮಳೆಯಿಂದಾದ ಬೆಳೆಹಾನಿಗೆ ಪರಿಹಾರವಾಗಿ 16.99 ಲಕ್ಷ ರೈತರಿಗೆ ಈವರೆಗೆ ರೂ.1,181.30 ಕೋಟಿ ಪರಿಹಾರ.

**ಕೃಷಿ ಯಂತ್ರೋಪಕರಣಗಳ ಬಳಕೆ ಪ್ರೋತ್ಸಾಹಿಸಲು ಎಕರೆಗೆ 250/- ರೂ.ಗಳಂತೆ ಡೀಸಲ್‌ಗೆ ಸಹಾಯಧನ.**



### ನೀರಾವರಿಗೆ ಅನುದಾನ

- ನೀರಾವರಿಗೆ ಒಟ್ಟು ಸುಮಾರು ರೂ. 20,000 ಕೋಟಿ.
- ಕೃಷ್ಣಾ ಮೇಲ್ದಂಡೆ ಯೋಜನೆಗೆ ರೂ. 5,000 ಕೋಟಿ.
- ಕಳಸಾ-ಬಂಡೂರಿ ನಾಲಾ ತಿರುವು ಯೋಜನೆಗೆ ರೂ. 1,000 ಕೋಟಿ.
- ಭದ್ರಾ ಮೇಲ್ದಂಡೆ ಯೋಜನೆಗೆ ರೂ. 3,000 ಕೋಟಿ.
- ಎತ್ತಿನಹೊಳೆ ಕುಡಿಯುವ ನೀರಿನ ಯೋಜನೆಗೆ ರೂ. 3,000 ಕೋಟಿ.
- ಮೇಕೆದಾಟು ಯೋಜನೆಗೆ ರೂ. 1,000 ಕೋಟಿ.

### ಹಿಂದುಳಿದವರ ಸಬಲೀಕರಣ

- SCSP/TSP ಯೋಜನೆಗಳಿಗೆ ರೂ. 28,234 ಕೋಟಿ ಮೀಸಲು
- ಸಮಾಜ ಕಲ್ಯಾಣ, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ಅಭಿವೃದ್ಧಿ ನಿಗಮಗಳ ಯೋಜನೆಗಳಿಗೆ ರೂ. 800 ಕೋಟಿ

### ಅಮೃತ ಯೋಜನೆಯಡಿ ಮಹಿಳಾ ಸ್ವಸಹಾಯ ಸಂಘಗಳಿಗೆ ರೂ.500 ಕೋಟಿ ನೆರವು

### ಬಡ, ಶ್ರಮಿಕ ವರ್ಗಕ್ಕೆ ನೆರವಿನ ಹಸ್ತ

- ಪೌರಕಾರ್ಮಿಕರಿಗೆ ಮಾಸಿಕ ರೂ.2000 ಸಂಕಷ್ಟ ಭತ್ಯೆ
- ಕಟ್ಟಡ ಕಾರ್ಮಿಕರಿಗೆ ರಿಯಾಯಿತಿ ಬಸ್ ಪಾಸ್ ಯೋಜನೆ
- ಅವಿವಾಹಿತ, ವಿಚ್ಛೇದಿತ ಮಹಿಳೆಯರು, ಲಿಂಗತ್ವ ಅಲ್ಪಸಂಖ್ಯಾತರ ಮಾಸಿಕ ಪಿಂಚಣಿ ರೂ. 800ಕ್ಕೆ ಹೆಚ್ಚಳ





### ಬಿಡಿಎಯಿಂದ 74 ಕಿ.ಮೀ. ಉದ್ದದ ಹೊರವರ್ತುಲ ರಸ್ತೆ ಅನುಷ್ಠಾನಕ್ಕೆ ಕ್ರಮ

ಈ ಯೋಜನೆಯ ಎಲ್ಲಾ ತೊಡಕುಗಳನ್ನು ನಿವಾರಿಸಿದ್ದು, 8-ಪಥಗಳ, 100 ಮೀ. ಅಗಲದ, 74 ಕಿ.ಮೀ. ಉದ್ದದ ಹೊರವರ್ತುಲ ರಸ್ತೆ ನಿರ್ಮಾಣ ಯೋಜನೆಯನ್ನು ಪಿಪಿಪಿ ಮಾದರಿ ಆಧಾರದ ಮೇಲೆ, ಗುತ್ತಿಗೆದಾರರೇ 2560 ಎಕರೆ ಭೂಸ್ವಾಧೀನ ವೆಚ್ಚ ಭರಿಸಿಕೊಂಡು, ರಸ್ತೆ ನಿರ್ಮಾಣ, ನಿರ್ವಹಣೆ, ಟೋಲ್ ಸಂಗ್ರಹಗಳೊಂದಿಗೆ ನಿರ್ಮಿಸಲು ಬಿಡಿಎ ಟೆಂಡರ್ ಕರೆಯಲಿದೆ.

## ಸರ್ವರಿಗೂ ಸುಸ್ವಾಗತ

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು." -ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ವಾರ್ತೆ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಶುಕ್ರವಾರ, ಏಪ್ರಿಲ್ 1, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 91 | ಪುಟ 24
www.prajavani.net
/prajavani.net @prajavani /prajavani http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಸಿನಿಮಾ ಪುರವಣಿ**
‘ಬಂಗಾರದ ಮನುಷ್ಯ’ ತೆರೆಕಂಡು ಐವತ್ತು ವರ್ಷಗಳಾದವು. ಈ ಚಿನ್ನದ ಮಲ್ಲಿಗೆಯ ಪರಿಮಳ ಈಗಲೂ ತಾಜಾ. ಈ ಸಿನಿಮಾ ರೂಪುಗೊಂಡಿದ್ದೇ ಒಂದು ಸ್ವಾರಸ್ಯಕರ ಕಥೆ.



ಆಳ–ಅಗಲ: ಪಾಕಿಸ್ತಾನ ಬಿಕ್ಕಟ್ಟಿನ ಹಲವು ಮುಖಗಳು

ಐಎಂಎ: ಅಡ ಇಟ್ಟ ಚಿನ್ನ 6ರಿಂದ ವಾಪಸ್ 10

ಸಚಿವ ಈಶ್ವರಪ್ಪ ವಿರುದ್ಧ ತನಿಖೆಗೆ ಆದೇಶ 9B

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 58,568 ▼ | 17,465 ▼ | ₹53,320 (ಬೆಂಗಳೂರು) ▼ | ₹69,100 (ಬೆಂಗಳೂರು) ▼ | 75.74 ▲ |

### ಪ್ರಗತಿಪರ ನಾಯಕ ಬೊಮ್ಮಾಯಿ ವಿವಾದ ಬಗೆಹರಿಸಲಿ: ಕಿರಣ್ ಮಜುಂದಾರ್ ಷಾ

# ‘ಕೋಮು ವಿಭಜನೆ ಮಾರಕ’

ಪ್ರಜಾವಾಣಿ ವಾರ್ತೆ



ಕಿರಣ್ ಮಜುಂದಾರ್ ಷಾ

**ಬೆಂಗಳೂರು:** ರಾಜ್ಯದಲ್ಲಿ ಹಿಜಾಬ್ ವಿವಾದ, ಮುಸ್ಲಿಂ ವರ್ತಕರಿಗೆ ಆರ್ಥಿಕ ಬಹಿಷ್ಕಾರದ ಬಳಿಕ ಹಲಾಲ್ ಕಟ್‌ಗೆ ವಿರೋಧದ ಸರಣಿ ಬೆಳವಣಿಗೆಗಳು ನಡೆಯುತ್ತಿರುವ ಬೆನ್ನಲ್ಲೇ, ಉದ್ಯಮಿ ಕಿರಣ್ ಮಜುಂದಾರ್ ಷಾ ಅವರು ‘ಧಾರ್ಮಿಕ ವಿಭಜನೆಯನ್ನು ದಯವಿಟ್ಟು ತಡೆಯಿರಿ’ ಎಂದು ಟ್ವೀಟ್ ಮಾಡಿರುವುದು ಚರ್ಚೆಗೆ ಗ್ರಾಸವಾಗಿದೆ.

ರಾಜ್ಯದಲ್ಲಿ ನಡೆಯುತ್ತಿರುವ ಕೋಮು ಧ್ರುವೀಕರಣವನ್ನು ಟೀಕಿಸಿರುವ ಬಯೊಕಾನ್ ಮುಖ್ಯಸ್ಥೆ ಕಿರಣ್ ಮಜುಂದಾರ್ ಷಾ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಟ್ವಿಟರ್ ಖಾತೆಯನ್ನು ಟ್ಯಾಗ್ ಮಾಡಿ ಸರಣಿ ಟ್ವೀಟ್ ಮಾಡಿದ್ದರು.

ಈ ಟ್ವೀಟ್‌ಗಳನ್ನು ನೂರಾರು ಜನ ರೀ–ಟ್ವೀಟ್ ಮಾಡಿದ್ದರೆ, ಅನೇಕರು ಆಕ್ಷೇಪಗಳನ್ನೂ ವ್ಯಕ್ತಪಡಿಸಿದ್ದಾರೆ.

ಕಿರಣ್ ಅವರ ಟ್ವೀಟ್‌ಗೆ ಪ್ರತಿಕ್ರಿಯಿಸಿರುವ ಬೊಮ್ಮಾಯಿ, ‘ಎಲ್ಲರೂ ಸಂಯಮದಿಂದ ವರ್ತಿಸಬೇಕು’ ಎಂದು ಗುರುವಾರ ಮನವಿ ಮಾಡಿದ್ದಾರೆ.

**ಟ್ವೀಟ್‌ಗಳಲ್ಲಿ ಏನಿದೆ?:** ‘ಕರ್ನಾಟಕವೂ ಸದಾ ಎಲ್ಲರನ್ನು ಒಳಗೊಳ್ಳುವ ಆರ್ಥಿಕ ಅಭಿವೃದ್ಧಿಯನ್ನು ಪಾಲಿಸುತ್ತಿದೆ. ನಾವು ಕೋಮು ಆಧರಿತ ಬಹಿಷ್ಕಾರಕ್ಕೆ ಅವಕಾಶ ಕಲ್ಪಿಸಬಾರದು. ಐಟಿ–ಬಿಟಿ ಕ್ಷೇತ್ರದಲ್ಲಿ ಕೋಮುವಾದಕ್ಕೆ ಅವಕಾಶ ಕಲ್ಪಿಸಿದರೆ, ನಮ್ಮ ಜಾಗತಿಕ ನಾಯಕತ್ವವನ್ನೇ ಅದು ನಾಶಪಡಿಸಬಹುದು’ ಎಂದು ಕಿರಣ್ ಮಜುಂದಾರ್ ಷಾ ಎಚ್ಚರಿಸಿದ್ದಾರೆ.

‘ನಾನೂ ಹೆಮ್ಮೆಯ ಕನ್ನಡತಿ. ಇಂತಹ ಘಟನೆಗಳಿಂದ ಆರ್ಥಿಕ ಬೆಳವಣಿಗೆಯು ಹಾದಿ ತಪ್ಪುವುದನ್ನು ನೋಡಲು ನಾನು ಬಯಸುವುದಿಲ್ಲ. ಎಲ್ಲ ಪಕ್ಷಗಳು ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತ ಆಗಬೇಕಿದೆ. ಬೊಮ್ಮಾಯಿ ಅವರು ಪ್ರಗತಿಪರ ನಾಯಕ. ಅವರು ಈ ವಿವಾದವನ್ನು ಆದಷ್ಟು ಬೇಗ ಶಾಂತಿಯುತವಾಗಿ ಬಗೆಹರಿಸುತ್ತಾರೆ ಎಂಬ ವಿಶ್ವಾಸವಿದೆ’ ಎಂದೂ ಅವರು ಪ್ರತಿಪಾದಿಸಿದ್ದಾರೆ.

‘ನಾನು ಯಾವುದೇ ರಾಜಕೀಯ ಉದ್ದೇಶದಿಂದ ಈ ಹೇಳಿಕೆ ನೀಡುತ್ತಿಲ್ಲ. ಇತ್ತೀಚೆಗೆ ಹೆಚ್ಚುತ್ತಿರುವ ಕೆಲವು ಘಟನೆಗಳು ಅನಗತ್ಯವಾಗಿ ಗಮನ ಸೆಳೆಯುತ್ತಿದ್ದು, ಹಾಗಾಗಿ ನಾನು ಈ ಹೇಳಿಕೆ ನೀಡಿದ್ದೇನೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರದ ಮೇಲೆ ಸಂಪೂರ್ಣ ವಿಶ್ವಾಸ ಇದೆ. ಈ ವಿವಾದ ಶಾಂತಿಯುತವಾಗಿ ಬಗೆಹರಿಯಲಿದೆ ಎಂಬ ನಂಬಿಕೆಯೂ ಇದೆ’ ಎಂದು ಟ್ವೀಟ್‌ನಲ್ಲಿ ತಿಳಿಸಿದ್ದಾರೆ.

‘ಮಸೀದಿಗಳ ಬಳಿ ಅನೇಕ ಹಿಂದೂ ವರ್ತಕರ ಮಳಿಗೆಗಳು ಇರುವುದನ್ನು ಬೆಂಗಳೂರಿನಾದ್ಯಂತ ನಾನು ನೋಡಿದ್ದೇನೆ. ವರ್ತಕರನ್ನು ನಾವು ಧರ್ಮದ ಆಧಾರದಲ್ಲಿ ಗುರುತಿಸುವುದು ಶುರುವಾಗಿದ್ದು ಯಾವಾಗ’ ಎಂದೂ ಅವರು ಪ್ರಶ್ನಿಸಿದ್ದಾರೆ.

## ‘ಗಂಡಸುತನ ಇದ್ದರೆ ಕ್ರಮ ಜರುಗಿಸಿ’

‘ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಗಂಡಸುತನ ಇದ್ದರೆ ಸಮಾಜದ ಶಾಂತಿ ಕದಡುತ್ತಿರುವ ವಿಶ್ವ ಹಿಂದೂ ಪರಿಷತ್, ಬಜರಂಗದಳದ ಕಿಡಿಗೇಡಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಸವಾಲು ಹಾಕಿದರು.

ಬೆಳಿಗ್ಗೆ ರಾಮನಗರದಲ್ಲಿ ಹೀಗೆ ಹೇಳಿದ್ದ ಕುಮಾರಸ್ವಾಮಿ ಅವರು ‘ಸಹಜವಾದ ಆಕ್ರೋಶ ವ್ಯಕ್ತಪಡಿಸುವಾಗ ಬಾಯಿ ತಪ್ಪಿನಿಂದ ಕೆಲವು ಪದಗಳು ಬರುತ್ತವೆ. ಗಂಡಸುತನ’ ಪದ ಬಳಕೆಗೆ ವಿಷಾದ ವ್ಯಕ್ತಪಡಿಸುತ್ತೇನೆ’ ಎಂದು ಮಧ್ಯಾಹ್ನ ಬೆಂಗಳೂರಿನಲ್ಲಿ ಸ್ಪಷ್ಟನೆ ನೀಡಿದರು.

**ಬೆಳಿಗ್ಗೆ ಹೇಳಿದ್ದೇನು?:** ‘ಹಿಂದೂ ಪರಿಷತ್, ಬಜರಂಗದಳದವರಿಗೆ ರೈತರ ಬದುಕು ಗೊತ್ತಿದೆಯಾ? ಈಗ ಇವರು ಬಂದು ಹಲಾಲ್ ಕಟ್ - ಜಟ್ಕಾ ಕಟ್ ಅಂತಿದ್ದಾರೆ. ನಮ್ಮ ರೈತರು ಕತ್ತರಿಸುವ ಮಾಂಸ ಸ್ವಚ್ಛ ಮಾಡಲು ಅದೇ ಸಮಾಜದವರೇ ಬರಬೇಕು. ರೈತರಿಂದ ಮಾವು, ದ್ರಾಕ್ಷಿ, ರೇಷ್ಮೆ ಖರೀದಿ ಮಾಡಲಿಕ್ಕೆ ಈ ಪೋಲಿಗಳು ಬರುತ್ತಾರಾ’ ಎಂದು ಪ್ರಶ್ನಿಸಿದರು.

‘ಇವರ ಹೊಟ್ಟೆಪಾಡಿಗೆ, ದೇಶ ಹಾಳು ಮಾಡಲು ಇಂತಹ ವಿಚಾರ ಇಟ್ಟುಕೊಂಡು ಬಂದಿದ್ದಾರೆ. ಎಷ್ಟು ವರ್ಷದಿಂದ ನಾವೆಲ್ಲ ಹಲಾಲ್ ಮಾಡಿದ ಮಾಂಸ ತಿಂದೇ ಬದುಕುತ್ತಿದ್ದೇವೆ. ಆಸ್ಪತ್ರೆಗಳಲ್ಲಿ ಆಮ್ಲಜನಕ ಇಲ್ಲದೇ ಜನ ಸತ್ತರು. ಆ ಸಂದರ್ಭವನ್ನು ಸರ್ಕಾರ ಹೇಗೆ ನಿರ್ವಹಣೆ ಮಾಡಿತು ಎನ್ನುವುದನ್ನು ನಾವೆಲ್ಲ ನೋಡಿದ್ದೇವೆ. ಬಿಜೆಪಿ ಸರ್ಕಾರದ ಯೋಗ್ಯತೆಗೆ ಆಸ್ಪತ್ರೆ ನಿರ್ವಹಣೆ ಮಾಡಲು ಆಗಲಿಲ್ಲ. ಆಗ ವಿಶ್ವ ಹಿಂದೂ ಪರಿಷತ್, ಬಜರಂಗದಳದವರು ಎಲ್ಲಿದ್ದರು’ ಎಂದು ಕೇಳಿದರು.

‘ರಾಜ್ಯದಲ್ಲಿ ಇಷ್ಟೆಲ್ಲಾ ನಡೆಯುತ್ತಿದ್ದರೂ ಏನು ಗೊತ್ತಿಲ್ಲದಂತೆ ಸರ್ಕಾರ ಮೌನವಾಗಿರಬಾರದು. ಯಾವ ಸಂವಿಧಾನಕ್ಕೆ ಗೌರವ ನೀಡುತ್ತಿದ್ದೀರಿ, ಯಾಕೆ ಅಂಬೇಡ್ಕರ್ ಜಯಂತಿ ಆಚರಿಸುತ್ತೀರಿ? ಅದೆಲ್ಲ ಯಾವ ಪುರುಷಾರ್ಥಕ್ಕೆ? ಇಂಥದ್ದನ್ನು ನಡೆಯಲು ಬಿಟ್ಟು ಸಂವಿಧಾನ, ಅಂಬೇಡ್ಕರ್ ಅವರ ಹೆಸರು ಹೇಳಿದರೆ ಏನು ಪ್ರಯೋಜನ’ ಎಂದು ಪ್ರಶ್ನಿಸಿದರು.

‘ಕಾಂಗ್ರೆಸ್ ನವರಿಗೆ ಈ ವಿಚಾರದಲ್ಲಿ ಮಾತನಾಡಲು ತಾಕತ್ತಿಲ್ಲ. ಮಾತನಾಡಿದರೆ ಹಿಂದೂಗಳು ವೋಟ್ ಹಾಕ್ತಾರೋ ಇಲ್ಲವೋ ಎಂಬ ಭಯ ಅವರನ್ನು ಕಾಡುತ್ತಿದೆ. ಆದರೆ ನನಗೆ ಅದಕ್ಕಿಂತ ಸಮಾಜದ ಶಾಂತಿ ಮುಖ್ಯ. ಉತ್ತರ ಪ್ರದೇಶದಲ್ಲಿ ನಿಮ್ಮ ಆಟ ಆಡಿಕೊಳ್ಳಿ, ಇಲ್ಲಿ ಬೇಡ’ ಎಂದು ಎಚ್ಚರಿಸಿದರು.

**ವ್ಯವಸ್ಥೆಯನ್ನು ಸರಿಪಡಿಸಿ ಎಂದು ಉದ್ಯಮಿ ಕಿರಣ್ ಮಜುಂದಾರ್ ಷಾ ಅವರು ಸರ್ಕಾರಕ್ಕೆ ಸಲಹೆ ನೀಡಿದ್ದಾರೆ. ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ**
**ಎಚ್‌.ಡಿ. ಕುಮಾರಸ್ವಾಮಿ,** ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

**ಸಿದ್ಧಗಂಗಾ ಮಠವು ಜಾತಿ, ಧರ್ಮ ನೋಡದೆ ಭ್ರಾತೃತ್ವ ಪ್ರಚಾರ ಮಾಡುತ್ತಿದೆ. ದ್ವೇಷ ಬಿತ್ತುತ್ತಿರುವ ಸಮಯದಲ್ಲಿ ಸಿದ್ಧಗಂಗಾ ಮಠದ ಜಾತ್ಯತೀತ ಸಂದೇಶ ನಮಗೆಲ್ಲ ಮಾದರಿ. ಅದಕ್ಕಾಗಿ ಸ್ವಾಮೀಜಿಗೆ ನಮನ ಸಲ್ಲಿಸುವೆ**
**ರಾಹುಲ್ ಗಾಂಧಿ,** ಕಾಂಗ್ರೆಸ್ ನಾಯಕ

## ಶಾಂತಿ–ಸಾಮರಸ್ಯ ಕಾಪಾಡಿ: ಸಿ.ಎಂ

**ಬೆಂಗಳೂರು:** ರಾಜ್ಯದಲ್ಲಿ ಶಾಂತಿ–ಸುವ್ಯವಸ್ಥೆ ಮತ್ತು ಸಾಮರಸ್ಯ ಕಾಪಾಡಲು ಎಲ್ಲರೂ ಸಹಕರಿಸಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮನವಿ ಮಾಡಿದ್ದಾರೆ.

ಕರ್ನಾಟಕದಲ್ಲಿ ಕೋಮು ಧ್ರುವೀಕರಣ ಆಗುತ್ತಿರುವ ಬಗ್ಗೆ ಉದ್ಯಮಿ ಕಿರಣ್ ಮಜುಂದಾರ್ ಷಾ ಅವರು ಟ್ವೀಟ್ ಮಾಡಿ ಆತಂಕ ವ್ಯಕ್ತಪಡಿಸಿದ ಬೆನ್ನಲ್ಲೇ ಬೊಮ್ಮಾಯಿ ಈ ಕರೆ ಕೊಟ್ಟಿದ್ದಾರೆ.

‘ಶಾಂತಿ ಮತ್ತು ಪ್ರಗತಿಗೆ ಕರ್ನಾಟಕ ಹೆಸರುವಾಸಿ. ಯಾರಿಗೂ ಯಾವುದೇ ರೀತಿಯ ತೊಂದರೆ ಆಗದಂತೆ ಎಲ್ಲರೂ ಸಂಯಮದಿಂದ ವರ್ತಿಸಬೇಕು. ಸಮವಸ್ತ್ರದ ವಿಷಯ ಈಗಾಗಲೇ ಹೈಕೋರ್ಟ್‌ನಲ್ಲಿ ಇತ್ಯರ್ಥವಾಗಿದೆ. ಬೇರೆ ಬೇರೆ ವಿಷಯಗಳ ಬಗ್ಗೆ ನಮ್ಮ ನಮ್ಮ ನಂಬಿಕೆಗಳ ಆಧಾರದ ಮೇಲೆ ನಾವೆಲ್ಲರೂ ಬದುಕು ನಡೆಸುತ್ತಿದ್ದೇವೆ’ ಎಂದರು.

ಸಾಮಾಜಿಕವಾಗಿ ಹಲವಾರು ಸಮಸ್ಯೆಗಳು ಉದ್ಭವವಾಗುವ ಸಂದರ್ಭದಲ್ಲಿ ಕುಳಿತು ಪರಸ್ಪರ ಚರ್ಚೆ ಮಾಡಿ ಬಗೆಹರಿಸಲು ಸಾಧ್ಯವಿದೆ ಎಂದೂ ಅವರು ಹೇಳಿದರು. ‘ರಾಜ್ಯ ಸರ್ಕಾರ ಸಮವಸ್ತ್ರ ವಿವಾದ ಸೇರಿದಂತೆ ಎಲ್ಲ ವಿಚಾರಗಳನ್ನು ಅತ್ಯಂತ ದಕ್ಷತೆಯಿಂದ ನಿಭಾಯಿಸಿದೆ. ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವುದು ನಮ್ಮ ಕರ್ತವ್ಯ. ಇದರಲ್ಲಿ ಗಂಡಸುತನದ ಪ್ರಶ್ನೆಯೇ ಇಲ್ಲ’ ಎಂದು ಬೊಮ್ಮಾಯಿ ಹೇಳಿದರು.

ಕುಮಾರಸ್ವಾಮಿ ಹೇಳಿಕೆಗೆ ತುಮಕೂರಿನಲ್ಲಿ ಪ್ರತಿಕ್ರಿಯಿಸಿದ ಬೊಮ್ಮಾಯಿ, ‘ಅವರು ಹೇಳಿದ್ದಕ್ಕೆ ಉತ್ತರ ಕೊಡೋಕೆ ಆಗಲ್ಲ. ರಾಜ್ಯದಲ್ಲಿ ಸಾಮರಸ್ಯ ಕಾಪಾಡುವ ಕೆಲಸವನ್ನು ಸಮರ್ಥವಾಗಿ ಮಾಡುತ್ತಿದ್ದೇವೆ’ ಎಂದರು.

### ಸಿ.ಎಂ ಬೊಮ್ಮಾಯಿ ಉಸ್ತುವಾರಿ ಕತೆ ಇದು

# ಬಿಬಿಎಂಪಿ ‘ಗುಪ್ತ’ ಬಜೆಟ್!

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಆರ್ಥಿಕ ವರ್ಷ ಮುಗಿಯುವವರೆಗೂ ಕಾಲಹರಣಮಾಡಿದ ಬಿಬಿಎಂಪಿ ಗುರುವಾರ ಮಧ್ಯರಾತ್ರಿ 11.30ಕ್ಕೆ 2022-23ನೇ ಸಾಲಿನ ಬಜೆಟ್ ಪ್ರತಿಯನ್ನು ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ.

ಕೋವಿಡ್ ತಾರಕದ ಕಾಲದಲ್ಲೂ ಬಿಬಿಎಂಪಿ ಬಜೆಟ್ ಮಂಡನೆಯನ್ನು ಕೈಬಿಟ್ಟಿರಲಿಲ್ಲ. ಆದರೆ ಈಗ ಬಜೆಟ್ ಮಂಡಿಸುವ ಪರಿಪಾಟಕ್ಕೆ ಇತಿಶ್ರೀ ಹಾಡಿದೆ. ತಡರಾತ್ರಿ ಬಜೆಟ್ ಪ್ರತಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿ ಮಾಹಿತಿಯನ್ನು ವಾಟ್ಸ್‌ಆ್ಯಪ್‌ನ ಬಿಬಿಎಂಪಿ ಮಾಧ್ಯಮ ಗ್ರೂಪ್‌ನಲ್ಲಿ ಹಾಕಲಾಗಿದೆ.

ಈ ವರ್ಷದಿಂದ ಬಿಬಿಎಂಪಿಯಲ್ಲೂ ವಿತ್ತೀಯ ಹೊಣೆಗಾರಿಕೆ ಕಾಯ್ದೆಯನ್ನು ಸರ್ಕಾರ ಜಾರಿಗೊಳಿಸಿದೆ. ಇದರ ಆಶಯದಂತೆ ನಾಲ್ಕು ವರ್ಷಗಳ ಸಂಯುಕ್ತ ವಾರ್ಷಿಕ ಅಭಿವೃದ್ಧಿ ದರದ ಆಧಾರದಲ್ಲಿ ಬಜೆಟ್ ಸಿದ್ಧಪಡಿಸಬೇಕಿತ್ತು. ಕಂದಾಯ ಸ್ವೀಕೃತಿಯ ವಾಸ್ತವಿಕ ಅಂಕಿ–ಅಂಶ ಹಾಗೂ ಬಂಡವಾಳ ವೆಚ್ಚ ಸೇರಿಸಿ ಬಜೆಟ್ ಗಾತ್ರವನ್ನು ನಿರ್ಧಾರ ಮಾಡಬೇಕಿತ್ತು. ಅದನ್ನೂ ಬಜೆಟ್ ನಲ್ಲಿ ಪಾಲಿಸಲಾಗಿಲ್ಲ.

ಬಜೆಟ್ ಗಾತ್ರ ಈ ವರ್ಷವೂ ₹10 ಸಾವಿರ ಕೋಟಿಯ ಗಡಿ ದಾಟಿದೆ. ₹10,484.28 ಕೋಟಿ ಗಾತ್ರದ ಬಜೆಟ್ ಸಿದ್ಧಪಡಿಸಲಾಗಿದೆ. ಮುಂದಿನ ಆರ್ಥಿಕ ವರ್ಷದಲ್ಲಿ ಒಟ್ಟು ₹10,480.93 ಕೋಟಿ ವೆಚ್ಚ ಮಾಡಲಾಗುತ್ತಿದೆ. ಬಜೆಟ್ ಪ್ರತಿಯಲ್ಲೂ ಎಲ್ಲೂ ಕಾರ್ಯಕ್ರಮಗಳ ವಿವರಗಳಿಲ್ಲ. ಕೇವಲ ಪಾವತಿಯ ವಿಭಾಗವಾರು ವಿವರಗಳನ್ನಷ್ಟೇ ಒದಗಿಸಲಾಗಿದೆ. ಯಾವುದೇ ಹೊಸ ಕಾರ್ಯಕ್ರಮಗಳನ್ನೂ ಪ್ರಕಟಿಸಿಲ್ಲ.

9B ನೇ ಪುಟ ನೋಡಿ

**ಬಿ ಖಾತಾ ಕ್ರಮಬದ್ಧ**

ಬಿ ಖಾತಾ ಕ್ರಮ ಬದ್ಧಗೊಳಿಸುವ ಬಗ್ಗೆ ಬಜೆಟ್‌ನಲ್ಲಿ ಉಲ್ಲೇಖಿಸಲಾಗಿದೆ. ಬಿ ಖಾತಾಗಳನ್ನು ಎ ಖಾತಾವನ್ನಾಗಿ ಪರಿವರ್ತಿಸುವುದಾಗಿ ರಾಜ್ಯ ಸರ್ಕಾರದ ಬಜೆಟ್‌ನಲ್ಲೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪ್ರಕಟಿಸಿದ್ದರು. ಇದರಿಂದ ₹1 ಸಾವಿರ ಕೋಟಿ ವರಮಾನ ನಿರೀಕ್ಷೆ ಮಾಡಲಾಗಿದೆ.

### ನೀರಿನ ಬಾಟಲ್ ಬೆಲೆ ವಿಚಾರಕ್ಕೆ ರಾಜ್ಯದ ಯಾತ್ರಾರ್ಥಿಗಳು, ಸ್ಥಳೀಯರ ಜಗಳ

# ಶ್ರೀಶೈಲದಲ್ಲಿ ಗಲಭೆ, ನಿಷೇಧಾಜ್ಞೆ

**ಬಾಗಲಕೋಟೆ:** ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆಯ ಪ್ರಸಿದ್ಧ ಯಾತ್ರಾ ಸ್ಥಳ ಶ್ರೀಶೈಲದಲ್ಲಿ ನೀರಿನ ಬಾಟಲ್ ಬೆಲೆ ವಿಚಾರವಾಗಿ, ಕರ್ನಾಟಕದಿಂದ ತೆರಳಿದ್ದ ಯಾತ್ರಾರ್ಥಿಗಳು ಮತ್ತು ಸ್ಥಳೀಯ ವ್ಯಾಪಾರಿಗಳು ಪರಸ್ಪರ ಹೊಡೆದಾಡಿಕೊಂಡಿದ್ದಾರೆ. ‘ಘಟನೆಯಲ್ಲಿ ಕರ್ನಾಟಕದ ಇಬ್ಬರಿಗೆ ಗಾಯಗಳಾಗಿವೆ’ ಎಂದು ಕರ್ನೂಲ್ ಪೊಲೀಸ್ ವರಿಷ್ಠಾಧಿಕಾರಿ ಸುಧೀರ್‌ಕುಮಾರ ರೆಡ್ಡಿ ಹೇಳಿದ್ದಾರೆ.

ಬುಧವಾರ ತಡರಾತ್ರಿ ವ್ಯಾಪಕ ಹಿಂಸಾಚಾರ ನಡೆದಿದೆ. ಗಲಭೆಯ ವೇಳೆ ಸ್ಥಳೀಯ ಅಂಗಡಿಗಳ ಮೇಲೂ ದಾಳಿ ನಡೆದಿದೆ. ಘರ್ಷಣೆಯಲ್ಲಿ ಕರ್ನಾಟಕ ನೋಂದಣಿಯ 200ಕ್ಕೂ ಹೆಚ್ಚು ವಾಹನಗಳನ್ನು ಜಖಂಗೊಳಿಸಲಾಗಿದೆ. ಪೊಲೀಸ್ ಬ್ಯಾರಿಕೇಡ್‌ಗೆ ಬೆಂಕಿ ಹಚ್ಚಲಾಗಿದೆ. ವಾಹನಗಳಿಗೆ ಕಟ್ಟಲಾಗಿದ್ದ ಕರ್ನಾಟಕದ ಧ್ವಜ ಕಿತ್ತು ಸುಟ್ಟುಹಾಕಿದ್ದಾರೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಗಲಾಟೆ ಆರಂಭವಾದಾಗ ಬೆರಳೆಣಿಕೆಯಷ್ಟು ಪೊಲೀಸರು, ಗೃಹ ರಕ್ಷಕದಳದವರು ಸ್ಥಳದಲ್ಲಿದ್ದರು. ನಂತರ ಹೆಚ್ಚಿನ ಪೊಲೀಸರನ್ನು ಕರೆಸಲಾಯಿತು. ಬೆಳಗಿನ ಜಾವದ ವೇಳೆಗೆ ಪರಿಸ್ಥಿತಿ ನಿಯಂತ್ರಣಕ್ಕೆ ಬಂದಿದೆ. 144 ಸೆಕ್ಷನ್ ಅಡಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ ಎಂದು ತಿಳಿದುಬಂದಿದೆ.



ಶ್ರೀಶೈಲದಲ್ಲಿ ಬುಧವಾರ ತಡ ರಾತ್ರಿ ನಡೆದ ಗಲಾಟೆಯಲ್ಲಿ ಜಖಂಗೊಂಡಿರುವ ಕರ್ನಾಟಕ ನೋಂದಣಿಯ ವಾಹನ

5 ನೇ ಪುಟ ನೋಡಿ

## ರಾಷ್ಟ್ರೀಯ ಹೆದ್ದಾರಿ ವಿಸ್ತರಣೆಗೆ ₹ 832 ಕೋಟಿ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಕರ್ನಾಟಕದಲ್ಲಿನ ಮೂರು ರಾಷ್ಟ್ರೀಯ ಹೆದ್ದಾರಿಗಳ ವಿಸ್ತರಣೆ ಕಾಮಗಾರಿ ಪೂರ್ಣಗೊಳಿಸಲು ₹ 832.30 ಕೋಟಿ ವೆಚ್ಚದ ಯೋಜನೆಗೆ ಕೇಂದ್ರದ ಹೆದ್ದಾರಿ ಮತ್ತು ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರು ಗುರುವಾರ ಅನುಮೋದನೆ ನೀಡಿದ್ದಾರೆ.

ಶಿವಮೊಗ್ಗ– ಮಂಗಳೂರು ವಿಭಾಗದಲ್ಲಿರುವ ರಾಷ್ಟ್ರೀಯ ಹೆದ್ದಾರಿ–169ರಲ್ಲಿ ಮಾಳ ಗೇಟ್ ನಿಂದ ಕಾರ್ಕಳದವರೆಗಿನ ದ್ವಿಪಥವನ್ನು ಚತುಷ್ಪಥವನ್ನಾಗಿ ವಿಸ್ತರಿಸಲು ₹ 177.94 ಕೋಟಿ ಅನುದಾನ ಒದಗಿಸಲಾಗುವುದು ಎಂದು ಅವರು ಟ್ವೀಟ್ ಮೂಲಕ ತಿಳಿಸಿದ್ದಾರೆ.

₹ 255.88 ಕೋಟಿ ವೆಚ್ಚದಲ್ಲಿ ಜೇವರ್ಗಿ– ಚಾಮ ರಾಜನಗರ ರಾಷ್ಟ್ರೀಯ ಹೆದ್ದಾರಿ– 150 ಎ ಮಾರ್ಗದ ಲಿಂಗಸುಗೂರಿನಿಂದ ಮೂಡ ಬಾಳ ಕ್ರಾಸ್ ಮತ್ತು ಮಸ್ಕಿ ನಗರ ದವರೆಗೆ ದ್ವಿಪಥವನ್ನು ಚತುಷ್ಪಥವನ್ನಾಗಿ ಅಭಿವೃದ್ಧಿಪಡಿಸಲು ನಿರ್ಧರಿಸಲಾಗಿದೆ. ಮಧುಗಿರಿ– ಚಿಕ್ಕಬಳ್ಳಾಪುರ ರಾಷ್ಟ್ರೀಯ ಹೆದ್ದಾರಿ–69ರಲ್ಲಿ (ಗೌರಿಬಿದನೂರು ಬೈಪಾಸ್ ಹೊರತುಪಡಿಸಿ) ದ್ವಿಪಥದಿಂದ ಚತುಷ್ಪಥವನ್ನಾಗಿ ಮೇಲ್ದರ್ಜೆಗೆ ಏರಿಸುವುದಲ್ಲದೆ, ಬಾಕಿ ಕಾಮಗಾರಿ ಪೂರ್ಣಗೊಳಿಸಲು ₹ 398.48 ಕೋಟಿ ಮಂಜೂರಾತಿಗೆ ಅನುಮೋದನೆ ನೀಡಲಾಗಿದೆ ಎಂದು ತಿಳಿಸಿದ್ದಾರೆ.




ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆ ವಿರೋಧಿಸಿ ಕೆಪಿಸಿಸಿ ಕಚೇರಿ ಎದುರು ಕಾಂಗ್ರೆಸ್ ಹಮ್ಮಿಕೊಂಡಿದ್ದ ಪ್ರತಿಭಟನೆ ವೇಳೆ ಸಿಲಿಂಡರ್ ಮತ್ತು ದ್ವಿಚಕ್ರ ವಾಹನಗಳಿಗೆ ಡಿ.ಕೆ. ಶಿವಕುಮಾರ್ ಮಂಗಳಾರತಿ ಮಾಡಿದರೆ, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ತಟ್ಟೆ ಬಾರಿಸಿದರು. ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ, ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಕೆ. ಗೋವಿಂದರಾಜು ಇದ್ದರು
ಪ್ರಜಾವಾಣಿ ಚಿತ್ರ/ ಎಂ.ಎಸ್. ಮಂಜುನಾಥ್

ಸುದ್ದಿ 9B

### ಸ್ಥಳೀಯ ಸಂಸ್ಥೆ: ಸರ್ವಪಕ್ಷಗಳ ಸಭೆಯಲ್ಲಿ ಒಮ್ಮತದ ತೀರ್ಮಾನ

# ಒಬಿಸಿ ಮೀಸಲಾತಿ: ಆಯೋಗ ರಚನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಹಿಂದುಳಿದವರಿಗೆ ಮೀಸಲಾತಿ ನಿಗದಿ ಮಾಡುವ ಉದ್ದೇಶದಿಂದ ಈ ಸಮುದಾಯಗಳ ರಾಜಕೀಯ ಹಿಂದುಳಿದಿರುವಿಕೆ ಗುರುತಿಸುವುದಕ್ಕಾಗಿ ಆಯೋಗವೊಂದನ್ನು ರಚಿಸಲು ರಾಜ್ಯ ಸರ್ಕಾರ ತೀರ್ಮಾನಿಸಿದೆ.

ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದವರಿಗೆ ಮೀಸಲಾತಿ ನೀಡುವ ವಿಚಾರದಲ್ಲಿ ವಿಧಾನಸಭೆಯ ಸಮ್ಮೇಳನ ಸಭಾಂಗಣದಲ್ಲಿ ಗುರುವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ನಡೆದ ಸರ್ವಪಕ್ಷಗಳ ಸಭೆಯ ಬಳಿಕ ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಸುದ್ದಿಗಾರರಿಗೆ ಈ ವಿಷಯ ಹೇಳಿದರು.

ರಾಜಕೀಯ ಹಿಂದುಳಿದಿರುವಿಕೆ ಖಚಿತಪಡಿಸಿಕೊಂಡು ಚುನಾವಣಾ ಮೀಸಲಾತಿ ನೀಡಬೇಕು ಎಂದು ಸುಪ್ರೀಂಕೋರ್ಟ್ ಹೇಳಿದೆ. ರಾಜಕೀಯವಾಗಿ ಹಿಂದುಳಿದಿರುವಿಕೆ ಗುರುತಿಸಲು ನಿಖರ ಮಾಹಿತಿಯ ಅಗತ್ಯವಿದೆ. ಅದಕ್ಕಾಗಿ ಆಯೋಗ ರಚಿಸಿ ಕಾಲಮಿತಿಯಲ್ಲಿ ಮಾಹಿತಿ ಸಂಗ್ರಹಿಸಿ ಬಳಿಕ ಸುಪ್ರೀಂಕೋರ್ಟ್‌ಗೆ ಪ್ರಮಾಣಪತ್ರವನ್ನು ಸಲ್ಲಿಸಲಾಗುವುದು. ಈ ವಿಚಾರವಾಗಿ ಸಭೆಯಲ್ಲಿ ಎಲ್ಲ ಪಕ್ಷಗಳೂ ಒಮ್ಮತದ ಅಭಿಪ್ರಾಯ ವ್ಯಕ್ತಪಡಿಸಿವೆ ಎಂದರು.

ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದವರಿಗೆ ಮೀಸಲಾತಿ ಎಷ್ಟು ನಿಗದಿ ಮಾಡಬೇಕು. ಹಾಗೆ ಮಾಡುವುದರಿಂದ ಆಗುವ ಸಾಧಕ ಬಾಧಕಗಳೇನು ಎಂಬ ಬಗ್ಗೆಯೂ ಸಭೆಯಲ್ಲಿ ಚರ್ಚಿಸಲಾಯಿತು

8 ನೇ ಪುಟ ನೋಡಿ

**‘ಮೀಸಲಾತಿ ನೀಡದೇ ಚುನಾವಣೆ ಇಲ್ಲ’**

ಹಿಂದುಳಿದವರಿಗೆ ಮೀಸಲಾತಿ ನೀಡದೇ ಚುನಾವಣೆ ನಡೆಸಲು ಸರ್ಕಾರಕ್ಕೆ ಮನಸ್ಸಿಲ್ಲ. ಚುನಾವಣಾ ಮೀಸಲಾತಿ ಕಲ್ಪಿಸಿಯೇ ಚುನಾವಣೆ ನಡೆಸುತ್ತೇವೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಸುದ್ದಿಗಾರರಿಗೆ ತಿಳಿಸಿದರು.

ಈ ಹಿಂದೆ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಅಧ್ಯಕ್ಷ ಕಾಂತರಾಜು ಅವರು ಆರ್ಥಿಕ ಮತ್ತು ಸಾಮಾಜಿಕ ಹಿಂದುಳಿದಿರುವಿಕೆ ಬಗ್ಗೆ ಮಾತ್ರ ವರದಿ ನೀಡಿದ್ದಾರೆ. ಅದರಲ್ಲಿ ರಾಜಕೀಯ ಹಿಂದುಳಿದಿರುವಿಕೆ ಮಾಹಿತಿ ಇಲ್ಲ. ಆದ್ದರಿಂದ ಆ ವರದಿ ಅಪ್ರಸ್ತುತ ಎಂಬ ತೀರ್ಮಾನಕ್ಕೆ ಬರಲಾಯಿತು ಎಂದರು.

**‘ಕಾನೂನಾತ್ಮಕ ಪರಿಶೀಲನೆ ಅಗತ್ಯ’**

ಸುಪ್ರೀಂಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಸೌಲಭ್ಯ ಕಗ್ಗಂಟಾಗಿದೆ. ಆದ್ದರಿಂದ ಮೀಸಲು ಸೌಲಭ್ಯ ಒದಗಿಸುವ ವಿಚಾರವನ್ನು ಕಾನೂನಾತ್ಮಕವಾಗಿ ಪರಿಶೀಲಿಸಬೇಕು ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸಭೆಯಲ್ಲಿ ಹೇಳಿದರು.

ಮೀಸಲು ಸೌಲಭ್ಯ ಒದಗಿಸುವುದಕ್ಕೆ ಮೊದಲು ಸಮೀಕ್ಷೆ ನಡೆಸಬೇಕು ಎಂದು ಸುಪ್ರೀಂಕೋರ್ಟ್ ಹೇಳಿದೆ. ಹಿಂದುಳಿದ ವರ್ಗಗಳ ಶಾಶ್ವತ ಆಯೋಗ ಈಗಾಗಲೇ ಆರ್ಥಿಕ, ಶೈಕ್ಷಣಿಕ ಸ್ಥಿತಿಗತಿ ಕುರಿತು ಸಮೀಕ್ಷೆ ನಡೆಸಿ ವರದಿ ಸಲ್ಲಿಸಿದೆ. ಆ ವರದಿಯನ್ನು ಪರಿಗಣಿಸುವ ಕುರಿತು ಪರಿಶೀಲನೆ ನಡೆಸಬೇಕು ಎಂದು ಅವರು ಮನವಿ ಮಾಡಿದರು. ಒಂದು ವೇಳೆ ಇದು ಸಾಧ್ಯವಾಗದಿದ್ದರೆ, ಮತ್ತೊಂದು ಆಯೋಗ ರಚನೆ ಮಾಡಿ ಸಮೀಕ್ಷೆ ನಡೆಸುವುದು ಸೂಕ್ತ. ಅಲ್ಲಿಯವರೆಗೆ ನಗರ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಬಾರದು. ನಡೆಸಿದರೆ ಹಿಂದುಳಿದ ವರ್ಗಗಳಿಗೆ ರಾಜಕೀಯ ಪ್ರಾತಿನಿಧ್ಯ ಕೈತಪ್ಪಲಿದೆ ಎಂದು ಹೇಳಿದರು.

**ಚಿನಕುರಳಿ**
ಪ್ರಕಾಶ್ ಶೆಟ್ಟಿ



## ಯುಪಿಎಸ್‌ಸಿ ಪರೀಕ್ಷೆ: ಮತ್ತೊಂದು ಅವಕಾಶ ನೀಡಲು ಪರಿಗಣಿಸಿ

ನವದೆಹಲಿ(ಪಿಟಿಐ): ಕೊರೊನಾ ಸೋಂಕಿಗೆ ತುತ್ತಾದ ಪರಿಣಾಮ ಕೇಂದ್ರ ಲೋಕಸೇವಾ ಆಯೋಗದ ಮುಖ್ಯ ಪರೀಕ್ಷೆಯಲ್ಲಿ ಭಾಗಿಯಾಗಲು ಸಾಧ್ಯವಾಗದ ಕೆಲವು ಆಕಾಂಕ್ಷಿಗಳು ಇದೀಗ ಪರೀಕ್ಷೆ ಬರೆಯಲು ಹೆಚ್ಚುವರಿ ಅವಕಾಶ ಬಯಸುತ್ತಿರುವುದನ್ನು ಪರಿಗಣಿಸಬೇಕು ಎಂದು ಸುಪ್ರೀಂ ಕೋರ್ಟ್ ಗುರುವಾರ ಕೇಂದ್ರ ಸರ್ಕಾರಕ್ಕೆ ಹೇಳಿದೆ.


ಕೊರೊನಾದ ಮೊದಲ ಹಾಗೂ 2ನೇ ಅಲೆಯ ವೇಳೆ ಕೋವಿಡ್ ಸೋಂಕಿಗೆ ತುತ್ತಾಗಿ ಹಲವು ಅಭ್ಯರ್ಥಿಗಳು ಯುಪಿಎಸ್‌ಸಿ ಪರೀಕ್ಷೆ ಬರೆಯಲು ಸಾಧ್ಯವಾಗಿರಲಿಲ್ಲ. ಹೀಗಾಗಿ ಎಲ್ಲಾ ಅಭ್ಯರ್ಥಿಗಳ ವಯೋಮಿತಿಯನ್ನು ಸಡಿಲಿಸುವ ಮೂಲಕ ಮತ್ತೊಂದು ಅವಕಾಶ ನೀಡಬೇಕೆಂಬ ಅಭ್ಯರ್ಥಿಗಳ ಕೋರಿಕೆಯನ್ನು ಸರ್ಕಾರ ಅನುಕಂಪದ ಆಧಾರದಲ್ಲಿ ಪರಿಗಣಿಸಬೇಕು ಎಂದು ಸಂಸದೀಯ ಸಮಿತಿಯೊಂದು ಸರ್ಕಾರಕ್ಕೆ ಶಿಫಾರಸು ಮಾಡಿತ್ತು.



### ಶ್ರೀರಾಮಸೇವಾ ಮಂಡಳಿಯ ರಾಮನವಮಿ ಉತ್ಸವ ಟ್ರಸ್ಟ್‌ನಿಂದ ಕಾರ್ಯಕ್ರಮ ಆಯೋಜನೆ

# ನಾಳೆಯಿಂದ ರಾಮನವಮಿ ಸಂಗೀತೋತ್ಸವ

ಪ್ರಜಾವಾಣಿ ವಾರ್ತೆ



ಬೆಂಗಳೂರು: ತಿಂಗಳು ಪೂರ್ತಿ ಸಂಗೀತದ ರಸದೌತಣ ಬಡಿಸಲು ಶ್ರೀರಾಮಸೇವಾ ಮಂಡಳಿಯ ರಾಮನವಮಿ ಉತ್ಸವ ಟ್ರಸ್ಟ್ ಸಿದ್ಧತೆ ಮಾಡಿಕೊಂಡಿದೆ.

ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಆವರಣದ ವಿಶೇಷ ಚಪ್ಪರದಲ್ಲಿ ಏಪ್ರಿಲ್ 2ರಿಂದ ಮೇ 2ರವರೆಗೆ ನಡೆಯಲಿರುವ 84ನೇ 'ಶ್ರೀ ರಾಮನವಮಿ ಮತ್ತು ಅಂತರರಾಷ್ಟ್ರೀಯ ಸಂಗೀತೋತ್ಸವ'ವನ್ನು 2ರಂದು ಸಂಜೆ 6 ಗಂಟೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸುವರು.

ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್, ಲೇಖಕಿ ಸುಧಾ ಮೂರ್ತಿ, ಮಂಡಳಿಯ ಮಹಾ ಪೋಷಕ ಸಿ.ಎಸ್.ಕೇದಾರ ಭಾಗವಹಿಸುವರು.

ಖ್ಯಾತ ಸಂಗೀತಗಾರರು ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸಲಿದ್ದಾರೆ. ಭೌತಿಕವಾಗಿ ಹಾಗೂ ಆನ್‌ಲೈನ್ ಎರಡನ್ನು ಒಳಗೊಂಡ ಹೈಬ್ರಿಡ್ ಮಾದರಿಯಲ್ಲಿ ಕಾರ್ಯಕ್ರಮಗಳ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿದೆ. ಹಿಂದೂಸ್ತಾನಿ, ಕರ್ನಾಟಕ ಶಾಸ್ತ್ರೀಯ ಸಂಗೀತಗಾರರು, ವಿದ್ವಾಂಸರು, ವೀಣೆ, ಪಿಟೀಲು, ಕೊಳಲು ವಾದಕರು ಸಂಗೀತ ಕಛೇರಿ ನಡೆಸಿಕೊಡಲಿದ್ದಾರೆ. ದೇಶದ 75ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಏ.10ರಂದು 'ಭಾರತ ಸ್ವತಂತ್ರ ಸಂಗೀತ ವೈಭವ' ಎನ್ನುವ ವಿಶೇಷ ಕಾರ್ಯಕ್ರಮ ನಡೆಯಲಿದೆ. ಡಾ.ಮೈಸೂರು ಮಂಜುನಾಥ್ ನೇತೃತ್ವದಲ್ಲಿ 75 ಸಂಗೀತಗಾರರು ಕಾರ್ಯಕ್ರಮ ನೀಡಲಿದ್ದಾರೆ.

ಪಿ.ಉನ್ನಿಕೃಷ್ಣನ್, ರಂಜನಿ ಗಾಯತ್ರಿ, ಲಾಲ್ಗುಡಿ ಕೃಷ್ಣನ್ ಮತ್ತು ವಿಜಯಲಕ್ಷ್ಮಿ, ಬೆಂಗಳೂರು ಎಸ್. ಶಂಕರ್, ಸ್ಕಿಲ್ ಗುರುಚರಣ್, ವಿಜಯ ಶಂಕರ್, ಪ್ರವೀಣ್ ಗೋಡ್ಖಿಂಡಿ, ಅಭಿಷೇಕ್ ರಘುರಾಮ್, ಗಾಯತ್ರಿ ವೆಂಕಟರಾಘವನ್, ಮೈಸೂರು ನಾಗರಾಜ್ ಮತ್ತು ಮೈಸೂರು ಮಂಜುನಾಥ್, ತ್ರಿಶೂರ್ ಸಹೋದರರು, ಕುಮರೇಶ್ ಮತ್ತು ಗಣೇಶ್, ವಿದ್ಯಾಭೂಷಣ, ಘಲ್ಘಾಟ್ ರಾಮಪ್ರಸಾದ್, ರಾಮಕೃಷ್ಣನ್ ಮೂರ್ತಿ, ಎಸ್. ಸಾಕೇತರಾಮನ್, ಮಲ್ಲಾಡಿ ಸಹೋದರರು, ಪಂಡಿತ್ ವೆಂಕಟೇಶ್ ಕುಮಾರ್ ಸೇರಿದಂತೆ ನಾಡಿನ–ದೇಶದ ಹಲವು ಸಂಗೀತ ವಿದ್ವಾಂಸರು ಸಂಗೀತೋತ್ಸವದಲ್ಲಿ ಕಛೇರಿ ನಡೆಸಿಕೊಡಲಿದ್ದಾರೆ.

www.ramanavamitickets.com ವೆಬ್‌ಸೈಟ್ ಮೂಲಕ ಟಿಕೆಟ್‌ಗಳನ್ನು ಕಾಯ್ದಿರಿಸಬಹುದು. ಮಾಹಿತಿಗೆ ಮಂಡಳಿಯ ಪ್ರಧಾನ ಕಾರ್ಯದರ್ಶಿ ಮತ್ತು ಮ್ಯಾನೇಜಿಂಗ್ ಟ್ರಸ್ಟಿ ಎಸ್.ಎನ್. ವರದರಾಜ್ (9448079079), ಕಾರ್ಯನಿರ್ವಾಹಕ ಅಧಿಕಾರಿ ಎಸ್ ಅಭಿಷೇಕ್ ವರದರಾಜ್ (9483518012) ಅಥವಾ ಕಚೇರಿಯನ್ನು (080-26604031) ದೂರವಾಣಿ ಮೂಲಕ ಸಂಪರ್ಕಿಸಬಹುದು. ಈ ಕಾರ್ಯಕ್ರಮಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಇನ್ಫೋಸಿಸ್ ಫೌಂಡೇಷನ್ ಸೇರಿದಂತೆ ವಿವಿಧ ಸಂಸ್ಥೆಗಳ ಸಹಯೋಗವಿದೆ ಎಂದು ಮಂಡಳಿ ತಿಳಿಸಿದೆ.

## 'ಡಿಸಿಸಿ ಬ್ಯಾಂಕ್‌ಗಳ ವಿಲೀನ ಬೇಡ'

ಬೆಂಗಳೂರು: 'ಅಪೆಕ್ಸ್ ಬ್ಯಾಂಕ್‌ಗಳ ಜತೆ ಜಿಲ್ಲಾ ಸಹಕಾರ ಕೇಂದ್ರ (ಡಿಸಿಸಿ) ಬ್ಯಾಂಕ್‌ಗಳನ್ನು ವಿಲೀನಗೊಳಿಸುವ ಕ್ರಮಕ್ಕೆ ಮುಂದಾಗಬಾರದು' ಎಂದು ರಾಜ್ಯ ಸಹಕಾರ ಮಹಾಮಂಡಳ ಅಧ್ಯಕ್ಷ ಮತ್ತು ಶಾಸಕ ಜಿ.ಟಿ. ದೇವೇಗೌಡ ಒತ್ತಾಯಿಸಿದರು.

'ಬ್ಯಾಂಕ್‌ಗಳ ವಿಲೀನದಿಂದ ಸಹಕಾರ ಕ್ಷೇತ್ರಕ್ಕೆ ದೊಡ್ಡ ಪೆಟ್ಟು ಬೀಳಲಿದೆ. ರೈತರ ಏಳಿಗೆಗೆ ಶ್ರಮಿಸುತ್ತಿರುವ ಈ ಬ್ಯಾಂಕ್‌ಗಳನ್ನು ಮತ್ತಷ್ಟು ಬಲಪಡಿಸುವ ಅಗತ್ಯವಿದೆ' ಎಂದರು.



# ಪುನೀತ್ ಮನೆಗೆ ರಾಹುಲ್ ಗಾಂಧಿ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಅವರು ಸದಾಶಿವನಗರದಲ್ಲಿರುವ ನಟ ದಿವಂಗತ ಪುನೀತ್ ರಾಜ್‌ಕುಮಾರ್ ಅವರ ನಿವಾಸಕ್ಕೆ ಗುರುವಾರ ರಾತ್ರಿ ಭೇಟಿ ನೀಡಿ, ಪುನೀತ್ ಅವರ ಪತ್ನಿ ಅಶ್ವಿನಿ ಪುನೀತ್‌ರಾಜ್‌ಕುಮಾರ್ ಅವರಿಗೆ ಸಾಂತ್ವನ ಹೇಳಿದರು.

ತುಮಕೂರಿನ ಸಿದ್ಧಗಂಗಾ ಮಠಕ್ಕೆ ಗುರುವಾರ ಸಂಜೆ ಭೇಟಿ ನೀಡಿ, ಶಿವಕುಮಾರ ಸ್ವಾಮೀಜಿಯವರ ಗದ್ದುಗೆ ದರ್ಶನ ಮಾಡಿದ ಬಳಿಕ ರಾಹುಲ್ ಗಾಂಧಿ ಅವರು ರಾತ್ರಿ ಬೆಂಗಳೂರಿಗೆ ಬಂದರು. ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸಮ್ಮುಖದಲ್ಲಿ ಪುನೀತ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದ ರಾಹುಲ್ ಗಾಂಧಿ ಅವರು ಅಶ್ವಿನಿ, ರಾಘವೇಂದ್ರ ರಾಜ್‌ಕುಮಾರ್ ಅವರ ಜೊತೆ ಮಾತುಕತೆ ನಡೆಸಿದರು. ಪ್ರಚಾರ ಸಮಿತಿಯ ಅಧ್ಯಕ್ಷ ಎಂ.ಬಿ. ಪಾಟೀಲ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್ ಇದ್ದರು.


ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ಪುನೀತ್ ರಾಜಕುಮಾರ್ ಅವರ ನಿವಾಸಕ್ಕೆ ಭೇಟಿ ನೀಡಿ ಅಶ್ವಿನಿ ಪುನೀತ್ ರಾಜಕುಮಾರ್ ಅವರನ್ನು ಸಂತೈಸಿದರು. ಡಿ.ಕೆ. ಶಿವಕುಮಾರ್ ಇದ್ದರು.

# ಸಗಟು ಕಸ– ಆವರಣದಲ್ಲೇ ಸಂಸ್ಕರಣೆಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಭಾರಿ ಪ್ರಮಾಣದಲ್ಲಿ ಕಸ ಉತ್ಪಾದಿಸುವವರು ಅದನ್ನು ತಮ್ಮ ಕಟ್ಟಡದ ಆವರಣದಲ್ಲಿಯೇ ಸಂಸ್ಕರಿಸುವುದಕ್ಕೆ ಸರ್ಕಾರ ಒಪ್ಪಿಗೆ ನೀಡಿದೆ.

100ಕ್ಕೂ ಹೆಚ್ಚು ಮನೆಗಳನ್ನು ಹೊಂದಿರುವ ಅಪಾರ್ಟ್‌ಮೆಂಟ್ ಸಮುಚ್ಚಯಗಳು, ನಿತ್ಯ 100 ಕೆ.ಜಿ.ಗೂ ಅಧಿಕ ಕಸ ಉತ್ಪಾದಿಸುವವರು, 5000 ಚ.ಮೀ.ಗೂ ಹೆಚ್ಚು ವಿಸ್ತೀರ್ಣದ ಮಾಲ್‌ಗಳು, ಪಂಚತಾರಾ ಹೋಟೆಲ್‌ಗಳು, ಐಟಿ–ಟೆಕ್ ಪಾರ್ಕ್‌ಗಳು, ಬಹು ರಾಷ್ಟ್ರೀಯ ಕಂಪನಿಗಳು, ಪ್ರವೇಶ ನಿಯಂತ್ರಿತ ಗೃಹಸಮುಚ್ಚಯ ಸಮುದಾಯಗಳು (ಗೇಟೆಡ್ ಕಮ್ಯುನಿಟಿ), ಕಲ್ಯಾಣ ಮಂಟಪಗಳು, ಸರ್ಕಾರಿ ಕಚೇರಿಗಳು ತಮ್ಮಲ್ಲಿ ಉತ್ಪತ್ತಿಯಾಗುವ ಕಸವನ್ನು ತಮ್ಮ ಆವರಣದಲ್ಲಿಯೇ ಸಂಸ್ಕರಿಸಿ ವಿಲೇವಾರಿ ಮಾಡಲು ಕ್ರಮವಹಿಸುವಂತೆ ಬಿಬಿಎಂಪಿ ಸೂಚಿಸಿದೆ.

ಮಾನ್ಯತೆ ಪಡೆದ ಸೇವಾದಾರರ ಮೂಲಕ ಕಟ್ಟಡದ ಆವರಣದಲ್ಲಿ ಲಭ್ಯ ಇರುವ ಸ್ಥಳವನ್ನು ಬಳಸಿಕೊಂಡು ಕಸವನ್ನು ಬಯೋಮೀಥನೈಜೇಷನ್ ಮಾಡಬಹುದು ಅಥವಾ ಸಂಸ್ಕರಿಸಿ ಸಾವಯವ ಗೊಬ್ಬರ ತಯಾರಿಸಬಹುದು.ನೈರ್ಮಲ್ಯ ತ್ಯಾಜ್ಯ ಸಂಗ್ರಹಿಸಿ, ಅದನ್ನು ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಮಾನ್ಯತೆ ಪಡೆದ ಸಂಸ್ಥೆಗೆ ನೀಡುವ ಮೂಲಕ ವಿಲೇವಾರಿ ಮಾಡಬಹುದು. ಒಣ ಕಸವನ್ನು ಪಾಲಿಕೆಯ ಒಣ ಕಸ ಸಂಗ್ರಹ ಕೇಂದ್ರಗಳಿಗೆ ಅಥವಾ ನೋಂದಾಯಿತ ಸಗಟು ಕಸ ಸೇವಾದಾರರಿಗೆ ನೀಡಬಹುದು ಎಂದು ಬಿಬಿಎಂಪಿ ಹೇಳಿದೆ.



## ನಗರದಲ್ಲಿ ಇಂದು

**ಪೂಜಾ ಕಾರ್ಯಕ್ರಮ ಹಾಗೂ ಅನ್ನದಾಸೋಹ:** ಶಿವಕುಮಾರ ಸ್ವಾಮೀಜಿ ಅವರ 115ನೇ ಜನ್ಮದಿನೋತ್ಸವದ ಪ್ರಯುಕ್ತ, ಸ್ಥಳ: ಸಿದ್ದಗಂಗಾ ಚಾರಿಟಬಲ್ ಕಮಿಟಿ, 29ನೇ ಮುಖ್ಯ ರಸ್ತೆ, ಪೂರ್ಣಪ್ರಜ್ಞಾ ಬಡಾವಣೆ, ಉತ್ತರಹಳ್ಳಿ, ಬೆಳಿಗ್ಗೆ 7.30


ಶಿವಕುಮಾರ ಸ್ವಾಮೀಜಿ

**ಶಿವಕುಮಾರ ಸ್ವಾಮೀಜಿ ಅವರ 115ನೇ ಜನ್ಮದಿನೋತ್ಸವ:** 'ಶಿವಯೋಗಿ' ಕೃತಿ ಲೋಕಾರ್ಪಣೆ, ಸಾನಿಧ್ಯ: ವೀರಭದ್ರ ಚನ್ನಮಲ್ಲ ಸ್ವಾಮೀಜಿ, ಪ್ರತಿಮೆಗೆ ಮಾಲಾರ್ಪಣೆ: ವಿ. ಸೋಮಣ್ಣ, ಕೃತಿ ಲೋಕಾರ್ಪಣೆ: ಟಿ.ಎಸ್. ನಾಗಾಭರಣ, ಮುಖ್ಯ ಅತಿಥಿ: ತೇಜಸ್ವಿನಿ ಅನಂತಕುಮಾರ್, ಉಪಸ್ಥಿತಿ: ಶೈಲಜಾ ಸೋಮಣ್ಣ, ಸಂತೋಷ ಹಾನಗಲ್, ಆಯೋಜನೆ: ವಿ. ಸೋಮಣ್ಣ ಪ್ರತಿಷ್ಠಾನ, ಸ್ಥಳ: ಜ್ಞಾನ ಸೌಧ (ವಿವೇಕಾನಂದ ಪಾರ್ಕ್ ಹತ್ತಿರ), 3ನೇ ಮುಖ್ಯರಸ್ತೆ, ಕಲ್ಯಾಣ ನಗರ, ಬಿಡಿಎ ಬಡಾವಣೆ, ಮೂಡಲಪಾಳ್ಯವಾರ್ಡ್, ಬೆಳಿಗ್ಗೆ 10

**ಖೇಲೋ ಇಂಡಿಯಾ ಯೂನಿವರ್ಸಿಟಿ ಗೇಮ್ಸ್:** ಲಾಂಛನ ಅನಾವರಣ: ರಾಜ್ಯಪಾಲ ಥಾವರಚಂದ್ ಗೆಹಲೋತ್, ಜೆರ್ಸಿ ಬಿಡುಗಡೆ: ಅನುರಾಗ್ ಸಿಂಗ್ ಠಾಕೂರ್, ಕ್ರೀಡಾ ಗೀತೆಗೆ ಚಾಲನೆ: ನಿಶಿತ್ ಪ್ರಮಾಣಿಕ್, ಕ್ರೀಡಾ ಸಾಧಕರ ಸಂಪುಟ ಬಿಡುಗಡೆ: ಕೆ.ಸಿ. ನಾರಾಯಣಗೌಡ, ಮೊಬೈಲ್ ಆ್ಯಪ್ ಚಾಲನೆ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಉಪಸ್ಥಿತಿ: ಪಿ.ಸಿ. ಮೋಹನ್, ಜಿ. ತಿರುವಸಗಮ್, ಆಯೋಜನೆ: ಕ್ರೀಡಾ ಮತ್ತು ಯುವಜನ ಸಚಿವಾಲಯ, ಸ್ಥಳ: ಕಂಠೀರವ ಒಳಾಂಗಣ ಕ್ರೀಡಾಂಗಣ, ಮಧ್ಯಾಹ್ನ 3

**ಸಹಕಾರ ಸಮ್ಮೇಳನ: ಉದ್ಘಾಟನೆ:** ಅಮಿತ್ ಶಾ, ಯಶಸ್ವಿನಿ ಯೋಜನೆಗೆ ಮರು ಚಾಲನೆ: ಬಸವರಾಜ ಬೊಮ್ಮಾಯಿ, ಕೆ.ಎಂ.ಎಫ್ ಮಳಿಗೆ ಉದ್ಘಾಟನೆ: ಪ್ರಹ್ಲಾದ ಜೋಶಿ, ಪ್ರಾಸ್ತಾವಿಕ ನುಡಿ: ಎಸ್.ಟಿ. ಸೋಮಶೇಖರ್, ಅಧ್ಯಕ್ಷತೆ: ಡಾ.ಸಿ. ಎನ್. ಅಶ್ವತ್ಥನಾರಾಯಣ, ಆಯೋಜನೆ: ಸಹಕಾರ ಇಲಾಖೆ, ಸ್ಥಳ: ಬೆಂಗಳೂರು ಅರಮನೆ, ವಸಂತನಗರ, ಮಧ್ಯಾಹ್ನ 3

**ಯುಗಾದಿ ಪ್ರಯುಕ್ತ 'ಶಕುಂತಲಾ ನಮನ':** ಗಾಯಕ ವಿದ್ಯಾಭೂಷಣ ಅವರಿಂದ 'ದಾಸವಾಣಿ', ಉಪಸ್ಥಿತಿ: ಭಾವನಾ ರಾಮಣ್ಣ, ಆಯೋಜನೆ ಹಾಗೂ ಸ್ಥಳ: ಹೂವು ಫೌಂಡೇಷನ್ ಫಾರ್ ಆರ್ಟ್ಸ್ ಸಂಸ್ಥೆ, ನಂದಿ, 1793/4, 4ನೇ ಬ್ಲಾಕ್, ಎಸ್‌ಎಂವಿ ಬಡಾವಣೆ, ಸಂಜೆ 6.30


ವಿದ್ಯಾಭೂಷಣ

ಶ್ರೀಶೈಲದಲ್ಲಿ ನಿಷೇದಾಜ್ಞೆ ಜಾರಿಯಲ್ಲಿದ್ದರೂ ಅಂಗಡಿ ಮುಂಗಟ್ಟು ತೆರೆದ ವ್ಯಾಪಾರಿಗಳು

# ಕರ್ನಾಟಕದ ಭಕ್ತರು ಸುರಕ್ಷಿತ: ಶ್ರೀಶೈಲ ಶ್ರೀ

ಪ್ರಜಾವಾಣಿ ವಾರ್ತೆ



ಚನ್ನಸಿದ್ಧರಾಮ ಶಿವಾಚಾರ್ಯ

**ರಾಯಚೂರು:** 'ಶ್ರೀಶೈಲದಲ್ಲಿ ಕರ್ನಾಟಕದ ಎಲ್ಲ ಭಕ್ತರು ಸುರಕ್ಷಿತವಾಗಿದ್ದಾರೆ. ಯಾರಿಗೂ ಜೀವಭಯವಾಗಲಿ, ತೊಂದರೆಯಾಗಲಿ ಇಲ್ಲ. ಪರಿಸ್ಥಿತಿ ಹತೋಟಿಯಲ್ಲಿದ್ದು, ಎಲ್ಲವೂ ಸುಲಲಿತವಾಗಿ ನಡೆಯುತ್ತಿವೆ' ಎಂದು ಶ್ರೀಶೈಲ ಪೀಠದ ಜಗದ್ಗುರು ಚನ್ನಸಿದ್ಧರಾಮ ಶಿವಾಚಾರ್ಯರು ತಿಳಿಸಿದ್ದಾರೆ.

ಗುರುವಾರ ಸಂಜೆ ವಿಡಿಯೊ ಸಂದೇಶ ನೀಡಿರುವ ಅವರು, 'ಬುಧವಾರ ರಾತ್ರಿ ಅಂಗಡಿಯೊಂದರಲ್ಲಿ ಇಬ್ಬರ ಮಧ್ಯೆ ಜಗಳ ನಡೆದಿದೆ. ಕರ್ನಾಟಕದ ಭಕ್ತನ ಮೇಲೆ ಹಲ್ಲೆಯಾಗಿದೆ. ಆದರೆ, ಕರ್ನಾಟಕದ ಭಕ್ತ ಮೃತಪಟ್ಟಿದ್ದಾನೆ ಎಂದು ಸುದ್ದಿ ಹರಡಿದ್ದರಿಂದ ಗಲಾಟೆ ತೀವ್ರ ಸ್ವರೂಪ ಪಡೆದುಕೊಂಡಿತ್ತು. ಪರಿಸ್ಥಿತಿ ಕೈಮೀರುವ ಹಂತದಲ್ಲಿ ಮಧ್ಯಪ್ರವೇಶಿಸಿ ಎಲ್ಲರಿಗೂ ಶಾಂತಿಯಿಂದ ಇರಲು ಹೇಳಲಾಗಿದೆ'ಎಂದಿದ್ದಾರೆ.

'ಶ್ರೀಶೈಲದಲ್ಲಿ ಕರ್ನಾಟಕದ ಭಕ್ತರು ಕಷ್ಟಕ್ಕೆ ಸಿಲುಕಿದ್ದಾರೆ ಎನ್ನುವುದು ವಸ್ತುಸ್ಥಿತಿಯಲ್ಲ. ಹಲ್ಲೆಗೊಳಗಾದ ವ್ಯಕ್ತಿಯ ತಲೆಗೆ ಪೆಟ್ಟಾಗಿದ್ದರಿಂದ ಮೊದಲು ಸುನ್ನಿಪೇಟೆ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಹೆಚ್ಚಿನ ಚಿಕಿತ್ಸೆಗಾಗಿ ಕರ್ನೂಲ್ ಆಸ್ಪತ್ರೆಗೆ ಗುರುವಾರ ಕಳುಹಿಸಲಾಗಿದೆ' ಎಂದಿದ್ದಾರೆ.

**ಹಲವು ಭಕ್ತರು ವಾಪಸ್:** 'ಶ್ರೀಶೈಲಕ್ಕೆ ಬರುವ ಭಕ್ತರು ಯುಗಾದಿ ದಿನ ನಡೆಯುವ ರಥೋತ್ಸವದ ವರೆಗೂ ಇರುವುದು ವಾಡಿಕೆ. ಹಲ್ಲೆಯಲ್ಲಿ ಯುವಕ ಮೃತಪಟ್ಟಿದ್ದಾನೆ ಎನ್ನುವ ಸುದ್ದಿ ಹರಡಿತ್ತು ಹಾಗೂ ವಾಹನಗಳಿಗೆ ಹಾನಿ ಮಾಡಿರುವುದನ್ನು ನೋಡಿದ ಹಲವು ಭಕ್ತರು ಆತಂಕದಿಂದ ರಾತ್ರೋರಾತ್ರಿ ತಮ್ಮ ಊರುಗಳಿಗೆ ಮರಳಿದ್ದಾರೆ' ಎಂದು ರಾಯಚೂರು ಜಿಲ್ಲೆ ಸಿರವಾರದ ಭಕ್ತ ಬಸವರಾಜಗೌಡ 'ಪ್ರಜಾವಾಣಿ'ಗೆ ತಿಳಿಸಿದರು.

'ಶ್ರೀಶೈಲದಲ್ಲಿ ನಿಷೇಧಾಜ್ಞೆ ಜಾರಿಯಲ್ಲಿದ್ದರೂ ಗುರುವಾರ ಸಂಜೆ ಹೊತ್ತಿಗೆ ಅಂಗಡಿಗಳು ತೆರೆದು ವಹಿವಾಟು ನಡೆಸಲಾಗುತ್ತಿದೆ. ಭಕ್ತರು ದರ್ಶನ ಪಡೆದುಕೊಳ್ಳುವುದಕ್ಕೆ ಯಾವುದೇ ತೊಂದರೆ ಇಲ್ಲ' ಎಂದು ತಿಳಿಸಿದರು.



ಆಂಧ್ರಪ್ರದೇಶ ರಾಜ್ಯದ ಕರ್ನೂಲ್ ಜಿಲ್ಲೆಯ ಶ್ರೀಶೈಲದಲ್ಲಿ ಬುಧವಾರ ತಡರಾತ್ರಿ ನಡೆದ ಗಲಾಟೆಯಿಂದ ಅಂಗಡಿಗಳ ಸಾಮಗ್ರಿಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು

## ಶ್ರೀಶೈಲದಲ್ಲಿ ರಾಜ್ಯದ 25 ಲಕ್ಷ ಭಕ್ತರು: ಸುಲಫಲ ಶ್ರೀ



ಸಾರಂಗಧರ ಶ್ರೀ

**ಕಲಬುರಗಿ:** 'ಶ್ರೀಶೈಲದಲ್ಲಿ ರಾಜ್ಯದ ಸುಮಾರು 25 ಲಕ್ಷ ಜನ ಭಕ್ತರು ಬೀಡುಬಿಟ್ಟಿದ್ದು, ಅವರನ್ನು ವಾಪಸ್ ಹೋಗು ಎಂದರೆ ತಕ್ಷಣಕ್ಕೆ ಹೋಗುವುದು ಅಸಾಧ್ಯ. ಸದ್ಯಕ್ಕೆ ಪರಿಸ್ಥಿತಿ ನಿಯಂತ್ರಣದಲ್ಲಿದೆ. ಕರ್ನಾಟಕ ಸರ್ಕಾರವು ಶ್ರೀಶೈಲದಲ್ಲಿಯ ರಾಜ್ಯದ ಭಕ್ತರಿಗೆ ರಕ್ಷಣೆ ನೀಡಲು ಅಗತ್ಯ ಕ್ರಮ ಕೈಗೊಳ್ಳಬೇಕು' ಎಂದು ಕಲಬುರಗಿ ಮತ್ತು ಶ್ರೀಶೈಲ ಸುಲಫಲ ಮಠದ ಡಾ.ಸಾರಂಗಧರ ದೇಶಿಕೇಂದ್ರ ಸ್ವಾಮೀಜಿ ಆಗ್ರಹಿಸಿದರು.

ಯುಗಾದಿ ಮಹೋತ್ಸವದ ಅಂಗವಾಗಿ ಶ್ರೀಶೈಲದ ತಮ್ಮ ಮಠದಲ್ಲಿ ನಡೆಯುತ್ತಿರುವ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ತೆರಳಿರುವ ಸ್ವಾಮೀಜಿ 'ಪ್ರಜಾವಾಣಿ'ಯೊಂದಿಗೆ ಮಾತನಾಡಿ, ಆಂಧ್ರ ಸರ್ಕಾರ ಅಗತ್ಯಬಿದ್ದರೆ ಭದ್ರತೆಗಾಗಿ ಸೇನೆಯನ್ನು ಕರೆಸಬೇಕು ಎಂದು ಒತ್ತಾಯಿಸಿದರು.

'ತಿಂಗಳಾನುಗಟ್ಟಲೇ ಕಾಲ್ನಡಿಗೆಯ ಮೂಲಕ ಶ್ರೀಶೈಲ ಮಲ್ಲಿಕಾರ್ಜುನನ ದರ್ಶನ ಪಡೆಯಲು ಬಂದಿರುವ ರಾಜ್ಯದ ಭಕ್ತರಿಗೆ ಈ ಘಟನೆ ಆತಂಕವನ್ನುಂಟು ಮಾಡಿದೆ. ರಾಜ್ಯದ ಭಕ್ತರಿಗೆ ನಮ್ಮ ಮಠದಲ್ಲಿ ಪ್ರಸಾದದ ವ್ಯವಸ್ಥೆ ಮಾಡಿದ್ದೇವೆ' ಎಂದರು. 'ಕರ್ನಾಟಕ ಸರ್ಕಾರವು ಬಜೆಟ್‌ನಲ್ಲಿ ಘೋಷಿಸಿದಂತೆ ಕರ್ನಾಟಕ ಭವನವನ್ನು ಶ್ರೀಶೈಲದಲ್ಲಿ ನಿರ್ಮಿಸಲು ಶೀಘ್ರ ಕ್ರಮ ಕೈಗೊಳ್ಳಬೇಕು. ಇದರಿಂದ ರಾಜ್ಯದ ಭಕ್ತರು ನೆಮ್ಮದಿಯಿಂದ ಉಳಿದು ದರ್ಶನ ಪಡೆಯಲು ಅನುಕೂಲವಾಗುತ್ತದೆ' ಎಂದು ಶ್ರೀಗಳು ಹೇಳಿದರು.

# ಶ್ರೀಶೈಲದಲ್ಲಿ ಗಲಭೆ, ನಿಷೇಧಾಜ್ಞೆ

**ಒಂದನೇ ಪುಟದಿಂದ...**

'ಕರ್ನಾಟಕದಿಂದ ತೆರಳಿದ್ದ ಪಾದಯಾತ್ರಿಗಳು ಹಾಗೂ ಸ್ಥಳೀಯರ ನಡುವೆ ಶ್ರೀಶೈಲದ ಪಾತಾಳಗಂಗೆಗೆ ಹೋಗುವ ರಸ್ತೆಯಲ್ಲಿರುವ ಪಾದಗಟ್ಟೆ ಬಳಿ ಘರ್ಷಣೆ ನಡೆದಿದೆ. ಎಂಆರ್‌ಪಿ ದರಕ್ಕಿಂತ ಹೆಚ್ಚಿನ ಬೆಲೆಗೆ ನೀರಿನ ಬಾಟಲ್ ಮಾರಾಟ ಮಾಡುತ್ತಿರುವುದನ್ನು, ಪಾದಯಾತ್ರೆಯಲ್ಲಿದ್ದ ಬಾಗಲಕೋಟೆ ಜಿಲ್ಲೆ ಬೀಳಗಿ ತಾಲ್ಲೂಕಿನ ಜಾನಮಟ್ಟಿ ನಿವಾಸಿ, ಕಾರು ಚಾಲಕ ಶ್ರೀಶೈಲ ವಾರಿಮಠ ಅವರು ಪ್ರಶ್ನಿಸಿದ್ದು ಗಲಾಟೆಗೆ ಕಾರಣವಾಗಿದೆ. ಈ ವೇಳೆ ಅಂಗಡಿಯವರು ಮಚ್ಚಿನಿಂದ ವಾರಿಮಠ ಮೇಲೆ ಹಲ್ಲೆ ಮಾಡಿದ್ದಾರೆ. ವಾರಿಮಠ ಅವರನ್ನು ಬಿಡಿಸಲು ಹೋದ ಹುನಗುಂದ ತಾಲ್ಲೂಕು ಅಮೀನಗಡದ ಪಾದಯಾತ್ರಿ ಗೋಪಾಲ ರುದ್ರಪ್ಪ ಅವರಿಗೂ ಏಟು ಬಿದ್ದಿದೆ. ಇದಕ್ಕೆ ಕರ್ನಾಟಕದ ಯಾತ್ರಿಕರು ಪ್ರತಿರೋಧ ತೋರಿದಾಗ ಇಡೀ ಪಟ್ಟಣಕ್ಕೆ ಗಲಭೆ ವ್ಯಾಪಿಸಿತು' ಎಂದು ಪ್ರತ್ಯಕ್ಷದರ್ಶಿ, ಬಾಗಲಕೋಟೆಯ ಅಕ್ಷಯ ಹೋಟೆಲ್ ವ್ಯವಸ್ಥಾಪಕ ದೇವೇಂದ್ರ ಬಸಾಕಳಿ ಮಾಹಿತಿ ನೀಡಿದ್ದಾರೆ.

'ದೇವಸ್ಥಾನದ ಸಮೀಪದ ವಾಸವಿ ಛತ್ರದಲ್ಲಿ ಕರ್ನಾಟಕದಿಂದ ಬಂದಿರುವ 400ಕ್ಕೂ ಹೆಚ್ಚು ಮಂದಿ ಆಶ್ರಯ ಪಡೆದಿದ್ದೇವೆ. ರಾತ್ರಿ ಬೆತ್ತ ಹಿಡಿದ ಗುಂಪುಗಳು ಕನ್ನಡದವರನ್ನು ಹುಡುಕಿ ಒದೆಯುತ್ತಿದ್ದರು. ಈ ವೇಳೆ ಛತ್ರದವರು ಮುಖ್ಯ ಬಾಗಿಲು ಬಂದ್ ಮಾಡಿ ನಮಗೆ ರಕ್ಷಣೆ ನೀಡಿದರು. ಊಟ, ತಿಂಡಿಗೆ ವ್ಯವಸ್ಥೆ ಮಾಡಿದ್ದಾರೆ. ಇಲ್ಲಿ ಆತಂಕದಲ್ಲೇ ಕಾಲ ಕಳೆಯುತ್ತಿದ್ದೇವೆ' ಎಂದು ಹುನಗುಂದ ತಾಲ್ಲೂಕಿನ ಚಿತ್ತವಾಡಗಿಯ ಯಾತ್ರಿ ಸಂಗಮೇಶ ಹೂಗಾರ ಅಳಲು ತೋಡಿಕೊಂಡಿದ್ದಾರೆ.

**ಹೈದರಾಬಾದ್ ವರದಿ:** ಪಾದಗಟ್ಟೆ ಬಳಿಯ ಅಂಗಡಿಯೊಂದರ ಬಳಿ ಯಾತ್ರಾರ್ಥಿಗಳು ನೀರಿನ ಬಾಟಲ್ ವಿಚಾರಕ್ಕೆ ಗಲಾಟೆ ಆರಂಭಿಸಿದರು. ನಂತರ ಅಂಗಡಿಯಾತನನ್ನು ಅವರೇ ಮೊದಲು ಥಳಿಸಿದ್ದಾರೆ. ನಂತರ ಗಲಭೆ ನಡೆದಿದೆ ಎಂದು ಸ್ಥಳೀಯರು ಹೇಳಿದ್ದಾರೆ.

## ಆಂಧ್ರ ಸಿ.ಎಂ ಜತೆ ಮಾತುಕತೆ: ಬೊಮ್ಮಾಯಿ

**ಬೆಂಗಳೂರು:** 'ಆಂಧ್ರದ ಶ್ರೀಶೈಲದಲ್ಲಿ ಕನ್ನಡಿಗರ ಮೇಲೆ ನಡೆದ ಹಲ್ಲೆಯ ಬಗ್ಗೆ ಆಂಧ್ರದ ಅಧಿಕಾರಿಗಳ ಜತೆ ಮಾತನಾಡಿ ಮಾಹಿತಿ ಪಡೆದಿದ್ದು, ಅಲ್ಲಿನ ಮುಖ್ಯ ಮಂತ್ರಿ ಜಗನ್‌ಮೋಹನ್ ರೆಡ್ಡಿ ಜತೆ ಈ ಕುರಿತು ಚರ್ಚೆ ನಡೆಸುತ್ತೇನೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ರಾಜ್ಯದಿಂದ ಹೋದ ಭಕ್ತರು ಮತ್ತು ಸ್ಥಳೀಯರ ಮಧ್ಯೆ ಸಣ್ಣ ಕಾರಣಕ್ಕೆ ಗಲಾಟೆ ನಡೆದು ಸಂಘರ್ಷವಾಗಿದೆ. ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಪರಿಸ್ಥಿತಿ ಸದ್ಯಕ್ಕೆ ನಿಯಂತ್ರಣದಲ್ಲಿದೆ ಎಂದು ಹೇಳಿದರು.

ಶ್ರೀಶೈಲಕ್ಕೆ ವಿವಿಧ ರಾಜ್ಯಗಳಿಂದ ಭಕ್ತರು ಬರುತ್ತಾರೆ. ಈ ರೀತಿಯ ಘಟನೆ ಮರುಕಳಿಸದಂತೆ ಎಚ್ಚರವಹಿಸಬೇಕು ಎಂದು ಬೊಮ್ಮಾಯಿ ತಿಳಿಸಿದರು.

ಶಾಸಕ ಬಸನಗೌಡ ಪಾಟೀಲ್ ಯತ್ನಾಳ ಕಿಡಿ

# 'ಲಿಂಗಾಯತರ ನಾಯಕನಾಗುವ ನೈತಿಕತೆ ವಿಜಯೇಂದ್ರಗೆ ಇದೆಯೇ?'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಬಿಜೆಪಿ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರಿಗೆ ಲಿಂಗಾಯತ ಸಮುದಾಯದ ನಾಯಕನಾಗುವ ನೈತಿಕತೆ ಇದೆಯೇ?' ಎಂದು ಶಾಸಕ ಹಾಗೂ ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ರಾಷ್ಟ್ರೀಯ ಸ್ವಾಗತ ಸಮಿತಿ ಅಧ್ಯಕ್ಷ ಬಸನಗೌಡ ಪಾಟೀಲ ಯತ್ನಾಳ್ ಕಿಡಿಕಾರಿದರು.

ಅಖಿಲ ಭಾರತ ಪಂಚಮಸಾಲಿ, ಗೌಡ–ಮಲೇಗೌಡ–ದೀಕ್ಷಾ ಲಿಂಗಾಯತ ಮೀಸಲಾತಿ ಕುರಿತು ನಡೆದ ಸಭೆಯಲ್ಲಿ ಮಾತನಾಡಿದ ಅವರು, 'ವಿಜಯೇಂದ್ರ ಈಗ ತುಮಕೂರು ಸಿದ್ಧಗಂಗಾ ಮಠದ ಮೂಲಕ ತಮ್ಮ ಅಸ್ತಿತ್ವ ಕಂಡುಕೊಳ್ಳಲು ಯತ್ನಿಸುತ್ತಿದ್ದಾರೆ. ಆದರೆ, ಸಚಿವರಾದ ಸೋಮಣ್ಣ ಕಳೆದ 30–40 ವರ್ಷಗಳಿಂದ ಸಿದ್ಧಗಂಗಾ ಮಠಕ್ಕೆ ದುಡಿದಿದ್ದಾರೆ. ಈಗ ಮಠದ ಕಾರ್ಯಕ್ರಮಗಳಲ್ಲಿ ಸೋಮಣ್ಣ ಅವರೇ ಕಾಣಿಸುತ್ತಿಲ್ಲ. ತುಮಕೂರು ಮಠದ ಬಳಿಕ ವಿಜಯೇಂದ್ರ ಸುತ್ತೂರು ಮಠಕ್ಕೆ ತೆರಳುತ್ತಾರೆ' ಎಂದು ವ್ಯಂಗ್ಯವಾಡಿದರು.

'ವಿಜಯೇಂದ್ರ ಈಗ ಸಮುಯದಾಯದ ನಾಯಕರಾಗಲು ಹೊರಟಿದ್ದಾರೆ. ವಂಶಪಾರಂಪರ್ಯ ರಾಜಕಾರಣವನ್ನು ಅವರು ಮುಂದುವರಿಸುತ್ತಿದ್ದಾರೆ. ಮೊದಲು ನಾನು, ನಂತರ ನನ್ನ ಮಗ, ಮೊಮ್ಮಗ. ಆದರೆ, ಪಕ್ಷದಲ್ಲಿ ಈ ಪದ್ಧತಿ ಕಡಿಮೆಯಾಗುತ್ತಿದೆ' ಎಂದರು.

'ಕಳೆದ ವರ್ಷ ಪಂಚಮಸಾಲಿ ಸಮುದಾಯ ಮೀಸಲಾತಿಗಾಗಿ ಹೋರಾಟ ನಡೆಸಿದ ಸಂದರ್ಭದಲ್ಲಿ ಅರಮನೆ ಮೈದಾನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮಕ್ಕೆ ಅಡ್ಡಿಪಡಿಸುವ ಯತ್ನಗಳು ನಡೆದವು. ಕಾರ್ಯಕ್ರಮಕ್ಕೆ ಅರಮನೆ ಮೈದಾನವನ್ನು ಉಚಿತವಾಗಿ ನೀಡುವವರಿದ್ದರು. ಅದಕ್ಕೂ ಅಡ್ಡಿಪಡಿಸಲಾಯಿತು. ಕೊನೆಗೆ ₹25 ಲಕ್ಷ ಪಾವತಿಸಿ ಅರಮನೆ ಮೈದಾನದಲ್ಲಿ ಕಾರ್ಯಕ್ರಮ ನಡೆಸಲಾಯಿತು' ಎಂದರು.

'ವಿಐಪಿ ಸ್ವಾಮೀಜಿಯೊಬ್ಬರು ತಮ್ಮ ಘನತೆಯನ್ನು ಮರೆತು ಒಬ್ಬರನ್ನು ಮುಖ್ಯಮಂತ್ರಿ ಮಾಡಲು ದೆಹಲಿಗೆ ಅಲೆದಾಡುತ್ತಿದ್ದಾರೆ. ಅವರಿಗೆ ಸಮುದಾಯದ ಬಗ್ಗೆ ಕಾಳಜಿ ಇಲ್ಲ' ಎಂದು ವಚನಾನಂದ ಶ್ರೀಗಳ ಹೆಸರು ಹೇಳದೆಯೇ ಕಿಡಿಕಾರಿದರು.

'ಪರಿಶಿಷ್ಟ ಪಂಗಡಕ್ಕೆ ಶೇ 7.5 ಮೀಸಲಾತಿ ಕಲ್ಪಿಸುವುದು ಸೇರಿದಂತೆ ಸಮಗ್ರವಾಗಿ ಮೀಸಲಾತಿ ಪರಿಷ್ಕರಿಸಿದರೆ ಪಂಚಮಸಾಲಿ ಸಮುದಾಯಕ್ಕೂ ಮೀಸಲಾತಿ ದೊರೆಯುತ್ತದೆ. ಮೀಸಲಾತಿ ಪಡೆಯುವ ವಿಷಯ ಈಗ ಕೊನೆಯ ಹಂತದಲ್ಲಿದೆ. ಎಲ್ಲ ಸಮಾಜಗಳಿಗೆ ಮೀಸಲಾತಿ ಕಲ್ಪಿಸಬೇಕು. 15 ದಿನಗಳ ಒಳಗೆ ಹಿಂದುಳಿದ ವರ್ಗಗಳ ಆಯೋಗದಿಂದ ವರದಿ ಪಡೆಯುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ. ಮೀಸಲಾತಿ ಕಲ್ಪಿಸದೆ ಇದ್ದರೆ ಮೇ ತಿಂಗಳಿಂದ ಮತ್ತೆ ಹೋರಾಟ ಆರಂಭವಾಗಲಿದೆ' ಎಂದರು.

**ಮುಖ್ಯಾಂಶಗಳು**

- ವಂಶ ಪಾರಂಪರ್ಯ ರಾಜಕಾರಣ ಮುಂದುವರಿಸಿದ ವಿಜಯೇಂದ್ರ: ಟೀಕೆ
- ವಚನಾನಂದ ಸ್ವಾಮೀಜಿ ವಿರುದ್ಧ ಪರೋಕ್ಷ ವಾಗ್ದಾಳಿ

## 'ಮೀಸಲಾತಿ ಘೋಷಿಸದಿದ್ದರೆ ಏಪ್ರಿಲ್ 21ರಿಂದ ಹೋರಾಟ'

'ರಾಜ್ಯ ಸರ್ಕಾರ ಏ. 14ರಂದು ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ಘೋಷಿಸದಿದ್ದರೆ ಏ.21ರಿಂದ ಕೂಡಲ ಸಂಗಮದಲ್ಲಿ ಅಂತಿಮ ಹೋರಾಟ ಆರಂಭಿಸಲಾಗುವುದು' ಎಂದು ಕೂಡಲ ಸಂಗಮ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ತಿಳಿಸಿದರು.

'ಹಿಂದುಳಿದ ವರ್ಗಗಳ ಆಯೋಗದ ವರದಿಯನ್ನು ಶೀಘ್ರದಲ್ಲಿ ಪಡೆದು ಏ.14ರ ಅಂಬೇಡ್ಕರ್ ಜಯಂತಿಯಂದು ಮೀಸಲಾತಿ ಘೋಷಿಸಬೇಕು. ಇದು ಸರ್ಕಾರಕ್ಕೆ ಅಂತಿಮ ಗಡುವು' ಎಂದು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.


'ಮುಖ್ಯಮಂತ್ರಿ ಅವರು ಮೀಸಲಾತಿ ಕಲ್ಪಿಸುವ ಬಗ್ಗೆ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಅವರು ಈಗ ಸ್ಪಷ್ಟ ನಿಲುವು ಹೊಂದಿದ್ದಾರೆ. ವಿವಿಧ ಸಮುದಾಯಗಳು ಸಹ ಮೀಸಲಾತಿ ಬಗ್ಗೆ ಬೇಡಿಕೆ ಮಂಡಿಸಿರುವುದರಿಂದ ಒಂದು ವಾರದಲ್ಲಿ ಮೀಸಲಾತಿಯನ್ನು ಸಮಗ್ರವಾಗಿ ಪರಿಷ್ಕರಿಸುವ ಭರವಸೆ ನೀಡಿದ್ದಾರೆ' ಎಂದು ತಿಳಿಸಿದರು.

'ಸರ್ಕಾರ ಹಾಗೂ ಸಮುದಾಯದ ನಡುವೆ ಸಮನ್ವಯ ಸಾಧಿಸುವ ನಿಟ್ಟಿನಲ್ಲಿ 12 ಜನರಿರುವ ಸಮಿತಿ ರಚಿಸಲಾಗಿದೆ' ಎಂದು ತಿಳಿಸಿದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



# ಅಭಿಮತ



### ಸುಭಾಷಿತ

ಮುಳ್ಳು ಎಲ್ಲಿದೆ ಎಂಬುದು ತಿಳಿದಿದ್ದರಷ್ಟೇ ನೀವು ಅದನ್ನು ಕಿತ್ತು ತೆಗೆಯಲು ಸಾಧ್ಯ.

-ರವೀಂದ್ರನಾಥ ಟ್ಯಾಗೋರ್

# ನಿಷ್ಪಕ್ಷಪಾತ ಧೋರಣೆಗೆ ಕುಂದು ಹುದ್ದೆಯ ಘನತೆ ಮರೆಯಬೇಡಿ

**ರಾಜ್ಯಪಾಲ** ಮತ್ತು ಸ್ಪೀಕರ್ ತರಹದ ಸಾಂವಿಧಾನಿಕ ಹುದ್ದೆಗಳು ತಮ್ಮ ಬಹುಪಾಲು ಮೌಲ್ಯ ಹಾಗೂ ವಿಶ್ವಾಸಾರ್ಹತೆಯನ್ನು ಕಳೆದುಕೊಂಡು ವರ್ಷಗಳೇ ಉರುಳಿವೆ. ಇದಕ್ಕೆ ಮುಖ್ಯ, ಬಹುಶಃ ಏಕೈಕ ಕಾರಣವೆಂದರೆ ಆ ಹುದ್ದೆಯನ್ನು ಅಲಂಕರಿಸಿದವರು ನಡೆದುಕೊಳ್ಳುವ ರೀತಿಯೇ ಆಗಿದೆ. ಇಂತಹ ಹುದ್ದೆಗಳು ರಾಜಕೀಯ ಮೇಲಾಟಗಳಿಗೆ ಅತೀತವಾದವು ಎಂದೇ ಪರಿಗಣಿತ. ಆದ್ದರಿಂದಲೇ ಈ ಹುದ್ದೆಯಲ್ಲಿ ಇರುವವರ ಮಾತು, ನಡತೆ ಪಕ್ಷಪಾತದಿಂದ ಕೂಡಿರಬಾರದು, ಅಂದರೆ ರಾಜಕೀಯ ಪಕ್ಷವೊಂದರ ಪರವಾಗಿ ಇರಬಾರದು ಎನ್ನುವುದು ಅಪೇಕ್ಷಣೀಯ. ಹುದ್ದೆಯಲ್ಲಿ ಇರುವಷ್ಟು ಕಾಲ ಅವರು ಶಾಸಕಾಂಗಕ್ಕೆ ಬದ್ಧರಾಗಿ ನಡೆದುಕೊಳ್ಳಬೇಕೇ ಹೊರತು ಯಾವುದೇ ಸೈದ್ಧಾಂತಿಕ ಸಂಘಟನೆಗೆ ಅಲ್ಲ. ಸಾಂವಿಧಾನಿಕ ಹುದ್ದೆಯಲ್ಲಿ ಇರುವವರಿಂದ ಈಗೀಗ ಇಂತಹ ನಡತೆಯನ್ನು ಕಾಣುವುದೇ ಅಪರೂಪವಾಗಿಬಿಟ್ಟಿದೆ. ಪಕ್ಷಪಾತ ಧೋರಣೆ, ಹುದ್ದೆಯ ಘನತೆಗೆ ತಕ್ಕುದಲ್ಲದ ಭಾಷೆಯ ಬಳಕೆ ಮತ್ತು ದೋಷಪೂರಿತ ನಡೆ ಸಾಮಾನ್ಯ ಎನ್ನುವಂತಾಗಿಬಿಟ್ಟಿವೆ. ರಾಜ್ಯ ವಿಧಾನಸಭೆಯ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಸದನದಲ್ಲಿ ಇತ್ತೀಚೆಗೆ 'ನಮ್ಮ ಆರ್‌ಎಸ್‌ಎಸ್' ಎಂದು ಹೇಳಿರುವುದು ಇದಕ್ಕೊಂದು ಜ್ವಲಂತ ನಿದರ್ಶನ. ಈ ರೀತಿ ಹೇಳಿಕೆ ನೀಡಿದ್ದಲ್ಲದೆ, ವಿರೋಧ ಪಕ್ಷದ ಸದಸ್ಯರು ಪ್ರಶ್ನೆ ಮಾಡಿದಾಗ ಅವರು ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಂಡರು ಕೂಡ.



**ಸ್ಪೀಕರ್ ಸ್ಥಾನದಲ್ಲಿ ಕುಳಿತವರ ಮಾತು ಆ ಸ್ಥಾನದ ಘನತೆ ಎತ್ತಿ ಹಿಡಿಯುವಂತೆ ಇರಬೇಕು**

ಸ್ಪೀಕರ್ ಆಗಿ ಆಯ್ಕೆಯಾಗುವ ವ್ಯಕ್ತಿಯೂ ರಾಜಕೀಯ ಪಕ್ಷವೊಂದರ ಅಭ್ಯರ್ಥಿಯಾಗಿಯೇ ಗೆದ್ದು ಬಂದಿರುತ್ತಾರಾದರೂ ಆ ಹುದ್ದೆಗೆ ಏರಿದ ಮೇಲೆ ಮತ್ತು ಆ ಹುದ್ದೆಯಲ್ಲಿ ಇರುವಷ್ಟು ಕಾಲ ಪಕ್ಷದೊಂದಿಗಿನ ಸಂಬಂಧವನ್ನು ಕಡಿದುಕೊಂಡಿರಬೇಕು. ಸದನದ ಅಧ್ಯಕ್ಷತೆ ವಹಿಸಿ, ಅದನ್ನು ನಿಯಂತ್ರಿಸುವ, ಮುಕ್ತ ಹಾಗೂ ನ್ಯಾಯಸಮ್ಮತವಾಗಿ ಚರ್ಚೆಗಳು ನಡೆಯುವಂತೆ ನೋಡಿಕೊಳ್ಳುವ ಹೊಣೆಗಾರಿಕೆ ಅವರ ಮೇಲಿರುತ್ತದೆ. ಕಲಾಪದ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ಯಾವುದೇ ಆದೇಶ ನೀಡುವ ಅಧಿಕಾರವೂ ಅವರಿಗಿರುತ್ತದೆ. ಹೀಗಾಗಿ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷದಿಂದ ಸಮಾನ ಅಂತರವನ್ನು ಕಾಪಾಡಿಕೊಂಡು, ನಿಷ್ಪಕ್ಷಪಾತದಿಂದ ನಡೆದುಕೊಳ್ಳಬೇಕು ಎನ್ನುವುದು ಅವರ ಮೇಲೆ ಸಂವಿಧಾನ ವಿಧಿಸಿರುವ ಕಟ್ಟುಪಾಡು. ಆ ಹುದ್ದೆಯಲ್ಲಿ ಇರುವವರು ಹಾಗೆ ನಡೆದುಕೊಳ್ಳಬೇಕಾದುದು ನೈತಿಕ ಹೊಣೆ ಕೂಡ. ಆದರೆ, ಕಾಗೇರಿಯವರು ಸದನದಲ್ಲಿ ಸ್ಪೀಕರ್ ಆಸನದಲ್ಲಿ ಕುಳಿತುಕೊಂಡು, ತಾವು ಆರ್‌ಎಸ್‌ಎಸ್‌ಗೆ ಸೇರಿದವರು ಎಂದು ಹೇಳಿಕೊಂಡಿದ್ದರಿಂದ ಹುದ್ದೆ ಹೊಂದಿರಬೇಕಿದ್ದ ನಿಷ್ಪಕ್ಷಪಾತ ಧೋರಣೆಗೆ ಕುಂದುಂಟಾಗಿದೆ. ಆರ್‌ಎಸ್‌ಎಸ್‌ನಿಂದಲೇ ಬಿಜೆಪಿ ಮಾರ್ಗದರ್ಶನ ಪಡೆಯುತ್ತದೆ ಮತ್ತು ಅದೇ ಬಿಜೆಪಿ ಈಗ ಆಡಳಿತ ಪಕ್ಷವಾಗಿದೆ. ಆರ್‌ಎಸ್‌ಎಸ್ ಜತೆ ಗುರುತಿಸಿಕೊಳ್ಳುವುದೆಂದರೆ ಬಿಜೆಪಿ ನೇತೃತ್ವದ ಸರ್ಕಾರದೊಂದಿಗೆ ಗುರುತಿಸಿಕೊಂಡಂತೆಯೇ ಹೊರತು ಬೇರೇನಲ್ಲ. ಅದಕ್ಕಿಂತ ಹೆಚ್ಚಾಗಿ ಆರ್‌ಎಸ್‌ಎಸ್‌ನ ಹಿಂದುತ್ವ ಸಿದ್ಧಾಂತ ಮತ್ತು ಅದರ ಹಿಂದೂ ರಾಷ್ಟ್ರ ಪರಿಕಲ್ಪನೆಯು ಸಂವಿಧಾನದ ಆಶಯಗಳಿಗೆ ಸಂಪೂರ್ಣ ವಿರುದ್ಧವಾದವು. ಸಂವಿಧಾನದ ಮೇಲೆ ಪ್ರಮಾಣವಚನ ಸ್ವೀಕರಿಸಿರುವ ಸ್ಪೀಕರ್ ಇದನ್ನೆಲ್ಲ ಮರೆಯಬಾರದಿತ್ತು.

ಪಕ್ಷಾಂತರ ವಿರೋಧಿ ಕಾಯ್ದೆಗೆ ಸಂಬಂಧಿಸಿದ ಪ್ರಕರಣಗಳು ಬಂದಾಗ ಹಲವು ಸ್ಪೀಕರ್‌ಗಳು ಆಡಳಿತ ಪಕ್ಷಕ್ಕೆ ಅನುಕೂಲಕರವಾಗಿ ನಡೆದುಕೊಂಡ ಉದಾಹರಣೆಗಳು ದೇಶದ ಬಹುತೇಕ ರಾಜ್ಯಗಳಲ್ಲಿ ಸಿಗುತ್ತವೆ. ತಮ್ಮ ದೋಷಪೂರಿತ ನಡತೆಯಿಂದ ಹುದ್ದೆಗೆ ಕೆಟ್ಟ ಹೆಸರು ತಂದ ಸ್ಪೀಕರ್‌ಗಳು ಸಹ ಹಲವರಿದ್ದಾರೆ. ನಿಯಮಾವಳಿಯನ್ನು ವ್ಯಾಖ್ಯಾನಿಸುವಾಗ, ಪ್ರಕ್ರಿಯೆಗಳನ್ನು ಪೂರೈಸುವಾಗ, ಕಲಾಪ ನಡೆಸುವಾಗ ಸ್ಪೀಕರ್‌ಗಳು ಆಡಳಿತ ಪಕ್ಷದ ಪರವಾಗಿ ನಡೆದುಕೊಂಡ ಉದಾಹರಣೆಗಳೂ ಬೇಕಾದಷ್ಟು ಸಿಗುತ್ತವೆ. ರಾಜ್ಯಗಳ ವಿಧಾನಸಭೆಗಳಲ್ಲಿ ಮಾತ್ರವಲ್ಲದೆ ಲೋಕಸಭೆಯಲ್ಲೂ ಸ್ಪೀಕರ್‌ಗಳು ಹೀಗೆ ಪಕ್ಷಪಾತಿಯಾಗಿ ನಡೆದುಕೊಂಡದ್ದಿದೆ. ಪ್ರತೀ ಸಲ ಸ್ಪೀಕರ್, ತಮ್ಮ ಹುದ್ದೆಗೆ ತಕ್ಕುದಲ್ಲದ ವರ್ತನೆ ತೋರಿದಾಗಲೂ ಸಂಸದೀಯ ಪ್ರಜಾಪ್ರಭುತ್ವ ಅಷ್ಟಷ್ಟೇ ಕುಸಿತ ಕಾಣುತ್ತದೆ. ಕಾಗೇರಿಯವರು ನೀಡಿದಂತಹ ಹೇಳಿಕೆಯು ಸಾಂವಿಧಾನಿಕ ಪ್ರಜಾಪ್ರಭುತ್ವವನ್ನು ಅಪಮೌಲ್ಯಗೊಳಿಸುತ್ತದೆ ಮತ್ತು ಅವಮಾನಿಸುತ್ತದೆ. ಸ್ಪೀಕರ್ ಸ್ಥಾನದಲ್ಲಿದ್ದರೂ ಅವರು ರಾಜಕೀಯ ವ್ಯಕ್ತಿಯಾಗಿಯೇ ಉಳಿದಿರುವುದನ್ನು ಮತ್ತು ಅದನ್ನು ಘೋಷಿಸಲು ಹಿಂದೇಟು ಹಾಕದಿರುವುದನ್ನು ಇಂತಹ ಪ್ರಸಂಗಗಳು ಎತ್ತಿ ತೋರುತ್ತವೆ. ನೈಜವಾದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸ್ಪೀಕರ್ ಹೇಳಿಕೆ ಯಾವ ಕಾರಣಕ್ಕೂ ಸ್ವೀಕಾರಾರ್ಹವಲ್ಲ.

## ದಿನದ ಟ್ವೀಟ್

### ದೊಡ್ಡ ನಗರಗಳೇ ಏಕೆ ಬೇಕು?



**ಭಾರತದ ಎರಡು ಮತ್ತು ಮೂರನೇ ಹಂತದ ನಗರಗಳಲ್ಲಿ ವಾಸಿಸುವುದಕ್ಕೆ ಇರುವ ಕೆಲವು ಪ್ರಮುಖ ಅನುಕೂಲಗಳು:**
**1. ಜೀವನ ನಿರ್ವಹಣಾ ವೆಚ್ಚ ಕಡಿಮೆ. 2. ಹೆಚ್ಚು ಪ್ರಶಾಂತತೆ.**
**3. ಹೊಸದಾಗಿ ಖರೀದಿಸುವ ಆಸ್ತಿಯ ಮೌಲ್ಯ ಹೆಚ್ಚಳ.**
**4. ಕಡಿಮೆ ಸಂಚಾರ ದಟ್ಟಣೆ. 5. ಚಿಕ್ಕ ಸರದಿ ಸಾಲುಗಳು.**
**6. ಕಡಿಮೆ ಕಳವಳಗಳು.**

**ಅಕ್ಷತ್ ಶ್ರೀವಾಸ್ತವ,** ಶಿಕ್ಷಕ, ಉದ್ಯಮಿ

## ಕಿಡಿನುಡಿ

**ಮುಸ್ಲಿಂ ಸಮುದಾಯದವರಿಂದ ಮಟನ್ ಖರೀದಿಸಬೇಡಿ ಎನ್ನುವವರು ದಲಿತ ಸಮುದಾಯದವರು ಮಟನ್ ಸ್ಟಾಲ್ ತೆರೆದರೆ ಖರೀದಿಸಲು ಬರುವರೇ? ಮೊದಲು ವ್ಯಾಪಾರ ವ್ಯವಹಾರದಲ್ಲಿ ಇರುವ ಜಾತಿ ತಾರತಮ್ಯ ತೊಲಗಬೇಕು, ನಂತರವಷ್ಟೇ ಧರ್ಮ ತಾರತಮ್ಯದ ಮಾತು. #ಜೈಭೀಮ್**



**ರಘೋತ್ತಮ ಹೊ.ಬ.,** ಬರಹಗಾರ

## 25 ವರ್ಷಗಳ ಹಿಂದೆ

ಮಂಗಳವಾರ, 1-4-1997

- **ಏ.11ಕ್ಕೆ ವಿಶ್ವಾಸಮತ ಯಾಚನೆ: ಗೌಡರಿಗೆ ಶರ್ಮಾ ಗಡುವು**

ನವದೆಹಲಿ, ಮಾ. 31– ಕಾಂಗ್ರೆಸ್ ಪಕ್ಷವು ತಾನು ಸರ್ಕಾರ ರಚಿಸಲು ಸಿದ್ಧವಾಗಿರುವುದಾಗಿ ರಾಷ್ಟ್ರಪತಿ ಡಾ. ಶಂಕರ್ ದಯಾಳ್ ಶರ್ಮಾ ಅವರಿಗೆ ಇಂದು ಅಧಿಕೃತವಾಗಿ ಪತ್ರ ಸಲ್ಲಿಸಿದ ಹಿನ್ನೆಲೆಯಲ್ಲಿ, ನಿನ್ನೆಯಿಂದ ಉಂಟಾಗಿರುವ ರಾಜಕೀಯ ಬಿಕ್ಕಟ್ಟಿಗೆ ಸಂವಿಧಾನಾತ್ಮಕ ಪರಿಹಾರ ನೀಡುವ ಪ್ರಕ್ರಿಯೆ ಆರಂಭಿಸಿದ ರಾಷ್ಟ್ರಪತಿ ಅವರು, ಏಪ್ರಿಲ್ 11ರಂದು ವಿಶ್ವಾಸಮತ ಕೋರಲು ಪ್ರಧಾನಿ ಎಚ್.ಡಿ. ದೇವೇಗೌಡರಿಗೆ ಸೂಚಿಸಿದ್ದಾರೆ. ಈ ಬೆಳವಣಿಗೆಯಿಂದಾಗಿ ಹತ್ತು ತಿಂಗಳ ಸಂಯುಕ್ತ ರಂಗ ಸರ್ಕಾರದ ಹಣೆಬರಹ ಲೋಕಸಭೆಯಲ್ಲಿ ತೀರ್ಮಾನವಾಗಲಿದೆ.

ಪ್ರಧಾನಿ ಎಚ್.ಡಿ. ದೇವೇಗೌಡ ಅವರು ತಕ್ಷಣ ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿರುವ ಕಾಂಗ್ರೆಸ್ ಅಧ್ಯಕ್ಷ ಸೀತಾರಾಂ ಕೇಸರಿ ಅವರು, ಸಂಯುಕ್ತರಂಗ ಘಟಕ ಪಕ್ಷಗಳ ನೆರವಿನೊಂದಿಗೆ ಕೇಂದ್ರದಲ್ಲಿ ಸಮ್ಮಿಶ್ರ ಸರ್ಕಾರ ನಡೆಸಲು ತಮ್ಮ ಪಕ್ಷ ಸಿದ್ಧವಿದೆ ಎಂದು ಇಂದು ಇಲ್ಲಿ ಪ್ರಕಟಿಸಿದರು.

ಪ್ರಸಕ್ತ ರಾಜಕೀಯ ವಿದ್ಯಮಾನಗಳ ಹಿನ್ನೆಲೆಯಲ್ಲಿ ತಮ್ಮ ಪಕ್ಷ ಕೇಂದ್ರದಲ್ಲಿ ಸರ್ಕಾರ ರಚನೆಯ ಅವಕಾಶವನ್ನು ಕೋರುವುದಿಲ್ಲ. ಆದರೆ ಕಾಂಗ್ರೆಸ್(ಐ) ಪಕ್ಷವನ್ನು ಸರ್ಕಾರ ರಚನೆಗೆ ಆಹ್ವಾನಿಸುವ ಮೊದಲು ಅದರ ಬಲವನ್ನು ಪರೀಕ್ಷಿಸಬೇಕೆಂದು ರಾಷ್ಟ್ರಪತಿಯನ್ನು ಕೋರಿರುವುದಾಗಿ ಬಿಜೆಪಿ ಮುಖಂಡರಾದ ಅಟಲ್ ಬಿಹಾರಿ ವಾಜಪೇಯಿ ಮತ್ತು ಎಲ್.ಕೆ. ಅಡ್ವಾಣಿ ಹೇಳಿದ್ದಾರೆ.

## 50 ವರ್ಷಗಳ ಹಿಂದೆ

ಶನಿವಾರ, 1-4-1972

- **ಗ್ರಾಮಾಂತರ ನಿರಾಶ್ರಿತ ವೃದ್ಧರ ವಿಶ್ರಾಂತಿ ವೇತನ ಪಾವತಿಗೆ ಹೊಸ ವ್ಯವಸ್ಥೆ**

ಬೆಂಗಳೂರು, ಮಾ. 31– ಹಳ್ಳಿಗಳಲ್ಲಿರುವ ನಿರಾಶ್ರಿತ ವೃದ್ಧರು ಸರ್ಕಾರಕ್ಕೆ ವಿಶ್ರಾಂತಿ ವೇತನಕ್ಕಾಗಿ ಅರ್ಜಿ ಹಾಕಬೇಕಾಗಿಲ್ಲ. ಸರ್ಕಾರವೇ ಅಂಥವರನ್ನು ಹುಡುಕಿ ವಿಶ್ರಾಂತಿ ವೇತನ ಕೊಡಲಿದೆ.

ಈ ಹೊಸ ಮಾರ್ಗವನ್ನು ಅನುಸರಿಸುವ ಉದ್ದೇಶವನ್ನು ಇಂದು ಇಲ್ಲಿ ಪ್ರಕಟಿಸಿದ ಕಂದಾಯ ಸಚಿವ ಎನ್. ಹುಚ್ಚಮಾಸ್ತಿಗೌಡ ಅವರು, 'ಕಷ್ಟದಲ್ಲಿರುವವರನ್ನು ನಾವು ಹುಡುಕಿಕೊಂಡು ಹೋಗಬೇಕು' ಎಂದರು.

- **ಮೀನಾಕುಮಾರಿ ನಿಧನ**

ಮುಂಬೈ, ಮಾ. 31– ಲಕ್ಷಾಂತರ ಭಾರತೀಯ ಚಲನಚಿತ್ರ ಪ್ರೇಮಿಗಳ ನೆಚ್ಚಿನ ತಾರೆ ಮೀನಾಕುಮಾರಿ (40) ಅವರು ಇಂದು ಮಧ್ಯಾಹ್ನ ಇಲ್ಲಿನ ಆಸ್ಪತ್ರೆಯಲ್ಲಿ ನಿಧನರಾದರು.

- **ವರ್ಷದೊಳಗೆ ರೈತರ ಜಮೀನು ಹಕ್ಕು ದಾಖಲೆ ಪಟ್ಟಾಕಾರ್ಯ ಪೂರ್ಣ**

ನವದೆಹಲಿ, ಮಾ. 31– ಇನ್ನಾರು ತಿಂಗಳಿನಿಂದ ಒಂದು ವರ್ಷದೊಳಗೆ ರಾಜ್ಯದಲ್ಲಿ ರೈತರ ಜಮೀನು ಹಕ್ಕುಗಳ ದಾಖಲೆ ಕಾರ್ಯ ಪೂರ್ಣ, ಪಟ್ಟಾ ಹಾಗೂ ಹಾಲಿ ಇರುವ ಸರ್ಕಾರಿ ಜಮೀನು ಹಂಚಿಕೆ ಹಾಗೂ ಭೂ ಸ್ವಾಧೀನ ಪ್ರಕರಣಗಳನ್ನು ತ್ವರಿತಗೊಳಿಸುವ ಭಾರಿ ಉದ್ದೇಶಗಳಿಂದ ಕಂದಾಯ ಸಚಿವ ಎನ್. ಹುಚ್ಚಮಾಸ್ತಿಗೌಡ ಅವರು ತಮ್ಮ ಕಾರ್ಯವನ್ನು ಆರಂಭಿಸಿದ್ದಾರೆ.

ಸರ್ಕಾರದ ಬಳಿ ಇರುವ ಜಮೀನನ್ನು ಭೂಹೀನರಿಗೆ ಹಂಚಲು ಖಾಸಗಿ ಸದಸ್ಯರನ್ನೊಳಗೊಂಡ ಭೂ ಹಂಚಿಕೆ ಸಮಿತಿಗಳನ್ನು ಮತ್ತೆ ಅಸ್ತಿತ್ವಕ್ಕೆ ಸರ್ಕಾರ ತರಲಿದೆ.

### ದ್ವೇಷ! ವಿಷ! ವಿಷಯಾಂತರ! 'ನವಭಾರತಕ್ಕಾಗಿ ನವಕರ್ನಾಟಕ' ಎಂದರೆ ಇದೇನಾ?

# ಹಳೆಯ ಕರ್ನಾಟಕವನ್ನೇ ಉಳಿಯಗೊಡಿ, ಸಾಕು



**ಅನುರಣನ**

ನಾರಾಯಣ ಎ.

**'ನವಭಾರತಕ್ಕಾಗಿ** ನವಕರ್ನಾಟಕ' ಎನ್ನುವುದು ರಾಜ್ಯ ಸರ್ಕಾರ ಈ ವರ್ಷದ ಬಜೆಟ್‌ನಲ್ಲಿ ಮಾಡಿರುವ ಘೋಷಣೆ. ಯಾವ ರೀತಿಯ 'ನವಭಾರತ'ಕ್ಕಾಗಿ ಯಾವ ರೀತಿಯ 'ನವಕರ್ನಾಟಕ' ಸಿದ್ಧವಾಗುತ್ತಿದೆ ಎಂಬುದು ನಮ್ಮ ಮುಂದಿರುವ ಪ್ರಶ್ನೆ.

'ನವ' ಎಂದರೆ ಹೊಸತು. ಕರ್ನಾಟಕದಲ್ಲಿ ಇತ್ತೀಚೆಗೆ ಹೊಸತು ಏನಾದರೂ ಕಾಣಿಸಿಕೊಂಡಿದ್ದರೆ ಅದರ ಹೆಸರು ದ್ವೇಷ ಅಂತ. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ ಅದರ ಹೆಸರು ಮುಸ್ಲಿಂ ದ್ವೇಷ ಅಂತ. ಶತಶತಮಾನಗಳಿಂದ ಈ ನೆಲದಲ್ಲಿ ಬೀಡುಬಿಟ್ಟಿದ್ದ ಸಾಮಾಜಿಕ ಸೌಹಾರ್ದ ಶಿಥಿಲವಾಗುತ್ತಿರುವುದು ಹೊಸ ಬೆಳವಣಿಗೆ. ಬಸವಾದಿ ಶರಣರು ತಮ್ಮ ಪ್ರಾಣವನ್ನೇ ಪಣವಾಗಿಟ್ಟು ಕಟ್ಟಿದ್ದ 'ಅನ್ಯರಿಗೆ ಅಸಹ್ಯ ಪಡಬೇಡ' ಎನ್ನುವ ಪ್ರಬುದ್ಧ ಪರಂಪರೆಯನ್ನು ಶತಾಯಗತಾಯ ಅಂತ್ಯಗೊಳಿಸುವ ಯಜ್ಞಕ್ಕೆ ರಾಜ್ಯ ಸರ್ಕಾರವೇ ಪೌರೋಹಿತ್ಯ ವಹಿಸಿರುವುದಂತೂ ಕರ್ನಾಟಕದ ಮಟ್ಟಿಗೆ ಹೊಚ್ಚ ಹೊಸದು. ನವಕರ್ನಾಟಕ ಎಂದರೆ ಇದುವೇ ಇರಬಹುದು.


ಆಳುವ ಬಿಜೆಪಿಯ ಹತಾಶೆಯನ್ನು ಅರ್ಥ ಮಾಡಿಕೊಳ್ಳಬಹುದು. ಅದಕ್ಕೆ ರಾಜ್ಯದಲ್ಲಿ ಈ ತನಕ ಒಮ್ಮೆಯೂ ಕನಿಷ್ಠ ಬಹುಮತವನ್ನೂ ಪಡೆಯಲಾಗಿಲ್ಲ. ಎರಡು ಬಾರಿಯೂ ಸರ್ಕಾರ ರಚಿಸಲು ಬೇಕಾದ ಸಂಖ್ಯಾಬಲವನ್ನು ಅದು ಖರೀದಿಸಿ ಗಳಿಸಿದ್ದು. ಹಾಗಾಗಿ 2023ರ ಚುನಾವಣೆಯಲ್ಲಾದರೂ ಸ್ಪಷ್ಟ ಬಹುಮತದಿಂದ ಗೆದ್ದು ಅಧಿಕಾರ ಉಳಿಸಿಕೊಳ್ಳಬೇಕು ಎಂದು ಅದು ಬಯಸುತ್ತದೆ. ಇದರಲ್ಲಿ ತಪ್ಪೇನಿಲ್ಲ. ಆದರೆ, ಈ ಗುರಿ ತಲುಪಲು ಆ ಪಕ್ಷ ಈಗ ಬಳಸಿಕೊಳ್ಳುತ್ತಿರುವ ದ್ವೇಷಕೇಂದ್ರಿತ ರಾಜಕೀಯದ ಮಾರ್ಗ ಇದೆಯಲ್ಲ ಅದು ಮನುಷ್ಯ ಮಾರ್ಗವಲ್ಲ. ಮನುಷ್ಯತ್ವ ಎನ್ನುವುದನ್ನು ದೇಹದ ಒಂದೇ ಒಂದು ಕಣದಲ್ಲಾದರೂ ಒಂದಿನಿತು ಉಳಿಸಿಕೊಂಡಿರುವ ಯಾವೊಬ್ಬನೂ ಯೋಚಿಸದ ರೀತಿಯಲ್ಲಿ ಯೋಚಿಸುವ ಕ್ರೂರ ಶಕ್ತಿಯೊಂದು ಕರ್ನಾಟಕದಲ್ಲಿ ಆಳುವ ಪಕ್ಷದ ರಾಜಕಾರಣವನ್ನು ಆವರಿಸಿಕೊಂಡಂತೆ ಕಾಣುತ್ತಿದೆ. ದ್ವೇಷದ ಕಡಲಲ್ಲಿ ತಾನು ವಿಕೃತಾನಂದದಿಂದ ಮಿಂದೇಳುವುದು ಮಾತ್ರವಲ್ಲದೆ ಇಡೀ ರಾಜ್ಯವನ್ನೇ ಮುಳುಗಿಸುವುದು ಅದರ ಮೂಲಮಂತ್ರ ಮತ್ತು ಚುನಾವಣಾ ತಂತ್ರ ಎರಡೂ ಆಗಿರುವಂತಿದೆ.

ಒಮ್ಮೆ ಸ್ಫೋಟಿಸಿದ ಅಣುಬಾಂಬ್ ಮುಂದೆ ಹುಟ್ಟಲಿರುವ ಹಲವಾರು ತಲೆಮಾರುಗಳ ಜೀವಕಣಗಳನ್ನೂ ವಿಕಾರಗೊಳಿಸುವ ಹಾಗೆ, ಈಗ ಆಳುವ ಪಕ್ಷ ಆಯ್ದುಕೊಂಡಿರುವ ಚುನಾವಣಾ ರಾಜಕೀಯದ ಮಾರ್ಗ ಈ ಸಮಾಜದ ಸ್ವಾಸ್ಥ್ಯಕ್ಕೆ ತಲೆತಲಾಂತರಗಳ ಕಾಲ ಕೆಡುಕು ಉಂಟುಮಾಡಲಿದೆ. ಮಿದುಳಿನಲ್ಲಿ ನಂಜು ಆವರಿಸಿಕೊಂಡು ವಿವೇಚನಾ ಸಾಮರ್ಥ್ಯವನ್ನು ಸಂಪೂರ್ಣವಾಗಿ ಕಳೆದುಕೊಂಡಿರುವ ವ್ಯಕ್ತಿ ಅಥವಾ ಶಕ್ತಿಗಳಿಗೆ ಮಾತ್ರ ಇಂತಹ ಮಾರ್ಗಗಳನ್ನು ಆವಿಷ್ಕರಿಸಲು ಸಾಧ್ಯ. ಇದೀಗ 'ನವಕರ್ನಾಟಕ'ದ ಮಾದರಿ ಬೆಳೆಯುತ್ತಿದೆ. ಇದನ್ನು 'ನವಭಾರತ' ಮಾತ್ರವಲ್ಲ ಸಮಸ್ತ ಜಗತ್ತು ಆತಂಕದಿಂದ ಗಮನಿಸುತ್ತಿದೆ.

ಇಷ್ಟೇ ಅಲ್ಲ. ರಾಜ್ಯ ಸರ್ಕಾರ ತನ್ನ ಸಾರ್ವಭೌಮ ಅಧಿಕಾರ ಬಳಸಿ ಮಾಡಬೇಕಿರುವ ಆಡಳಿತ ಕಾರ್ಯಗಳನ್ನೆಲ್ಲಾ ಹೊರಗುತ್ತಿಗೆ ನೀಡಿ ಅಧಿಕಾರ ಚಲಾಯಿಸುತ್ತಿದೆಯೇನೋ ಎನ್ನುವಂತಹ ಬೆಳವಣಿಗೆಗಳು ಕರ್ನಾಟಕದಲ್ಲಿ ಆಗುತ್ತಿವೆ. ಹಿಂದೂಗಳ ಹೆಸರು ಹೇಳಿಕೊಂಡು ಯಾವುದೋ ಕೆಲ ಸಂಘಟನೆಗಳ ಮಂದಿ, 'ಮುಸ್ಲಿಂ ಧರ್ಮಕ್ಕೆ ಸೇರಿದವರು ಜಾತ್ರೆಗಳಲ್ಲಿ ವ್ಯಾಪಾರ ಮಾಡಬಾರದು' ಎಂದು ನಿರ್ಬಂಧ ಹೇರುತ್ತಿರುವ ವಿಚಾರವನ್ನೇ ಗಮನಿಸಿ. ಯಾವುದೇ ದೇಶದಲ್ಲಿ, ಅದು ಪ್ರಪಂಚದ ಕ್ರೂರಾತಿಕ್ರೂರ ಸರ್ವಾಧಿಕಾರಿಯ ಆಡಳಿತವಿರುವ ದೇಶವೇ ಆಗಿದ್ದರೂ ಸರಿ, ಸಾರ್ವಜನಿಕ ವ್ಯವಹಾರಗಳಿಗೆ ಸಂಬಂಧಿಸಿದಂತೆ ಯಾರಿಗಾದರೂ ನಿರ್ಬಂಧ ವಿಧಿಸುವ ಅಧಿಕಾರ ಇರುವುದು ಸರ್ಕಾರಕ್ಕೆ ಮಾತ್ರ. ಸರ್ಕಾರ ಬಿಟ್ಟು ಇನ್ಯಾವುದೇ ಸಂಘಟನೆ ಅದನ್ನು ಮಾಡಿದರೆ ಸರ್ಕಾರ ಇದ್ದೂ ಸತ್ತಂತೆ.

ಯಾವುದೋ ಸಂಘಟನೆಗೆ ಸೇರಿದ ಕೆಲವರು 'ಅವರು ಅಲ್ಲಿ ಹಾಗೆ ಮಾಡುವ ಹಾಗಿಲ್ಲ, ಇವರು ಇಲ್ಲಿ ಹೀಗೆ ಮಾಡುವ ಹಾಗಿಲ್ಲ. ಇವರು ಅಲ್ಲಿ ಅವರಿಂದ ಖರೀದಿಸುವ ಹಾಗಿಲ್ಲ, ಅವರು ಇನ್ನೆಲ್ಲಿಯೋ ಬೇರೆ ಯಾರ ಜತೆಗೋ ಓಡಾಡುವಂತಿಲ್ಲ...' ಎನ್ನುತ್ತಾ ತುಘಲಕ್ ದರ್ಬಾರ್ ನಡೆಸುತ್ತಿದ್ದರೆ, ಆಳುವ ಸರ್ಕಾರದ ಮಂದಿ ನಾಟಕ ನೋಡುವ ಹಾಗೆ ನೋಡುತ್ತಿದ್ದಾರೆ. ಯಾವುದೋ ಹಳೆಯ ಆದೇಶವೊಂದನ್ನು ತೋರಿಸಿ, ಮುಸ್ಲಿಮರಿಗೆ ಹಾಕಿದ ವ್ಯಾಪಾರ ಬಹಿಷ್ಕಾರವನ್ನು ಸಮರ್ಥಿಸುವ ಕೆಲಸವನ್ನು ಮುಖ್ಯಮಂತ್ರಿ ಮತ್ತು ಕಾನೂನು ಮಂತ್ರಿ ಮಾಡಿದ್ದು ವರದಿಯಾಗಿದೆ. ಮೊದಲನೆಯದಾಗಿ, ಆ ಆದೇಶಕ್ಕೂ ಈಗ ನಡೆಯುತ್ತಿರುವ ಘಟನೆಗಳಿಗೂ ಯಾವುದೇ ಸಂಬಂಧ ಇಲ್ಲ. ಇದೆ ಎಂದು ಒಂದು ವೇಳೆ ತರ್ಕಕ್ಕಾಗಿ ಭಾವಿಸಿದರೂ ಆದೇಶದ ಪ್ರಕಾರ ನಿರ್ಬಂಧ ವಿಧಿಸಬೇಕಿರುವುದು ಸರ್ಕಾರವೇ ವಿನಾ ಯಾವುದೇ ಸಂಘಟನೆಗಳಲ್ಲ. ಆಡಳಿತ ನಡೆಯಬೇಕಿರುವುದು ಕಾನೂನಿನ ಮೂಲಕ, ಸಾಮಾಜಿಕ ಸನ್ನಿಯ ಬಲ ಪ್ರದರ್ಶನದ ಮೂಲಕವಲ್ಲ.

ಮುಸ್ಲಿಂ ಹೆಣ್ಣು ಮಕ್ಕಳ ಶಿರವಸ್ತ್ರ ಪ್ರಕರಣಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ನೀಡಿದ ತೀರ್ಪಿನಿಂದ ಮನನೊಂದು ಕೆಲವು ಮುಸ್ಲಿಂ ವರ್ತಕರು ಒಂದು ದಿನ ವ್ಯಾಪಾರ ಸ್ಥಗಿತಗೊಳಿಸಿದ್ದಕ್ಕೆ ಈ ಬಹಿಷ್ಕಾರ ಅಂತ 'ವಿರೋಧ ಪಕ್ಷಗಳ ವಿರೋಧ ಪಕ್ಷ'ಗಳಂತೆ ನಡೆದುಕೊಳ್ಳುತ್ತಿರುವ ಕೆಲ ಮಾಧ್ಯಮಗಳ ಮಂದಿ ಡಂಗುರ ಹೊಡೆಯುತ್ತಿದ್ದಾರೆ. ಹಾಗೊಂದು ನ್ಯಾಯಾಂಗ ನಿಂದನೆ ನಡೆದೇ ಇದ್ದರೆ ಅದರ ವಿರುದ್ಧ ಸರ್ಕಾರವಾಗಲೀ ನ್ಯಾಯಾಲಯಗಳಾಗಲೀ ಕ್ರಮ ಕೈಗೊಳ್ಳಬೇಕಲ್ಲವೇ? ಆದರೆ ಆ ಕೆಲಸವನ್ನು ಯಾವುದೋ ಅಂಚಿನ ಸಂಘಟನೆಗಳಿಗೆ ಮತ್ತು ಅತ್ತ ಧರ್ಮವೂ ಗೊತ್ತಿಲ್ಲದ, ಇತ್ತ ಸಂವಿಧಾನವನ್ನೂ ತಿಳಿದುಕೊಳ್ಳದ ಕೆಲ ಮಠಾಧೀಶರುಗಳಿಗೆ ಹೊರಗುತ್ತಿಗೆ ನೀಡಿದ್ದು ಯಾರು? ಯಾವ ಕಾನೂನಿನ ಅಡಿಯಲ್ಲಿ?




ಶಬರಿಮಲೆ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ತೀರ್ಪಿನ ವಿರುದ್ಧ ಅಸಭ್ಯವಾಗಿಯೂ ಹಿಂಸಾತ್ಮಕವಾಗಿಯೂ ಪ್ರತಿಭಟನೆ ನಡೆದಿತ್ತಲ್ಲ. ಆಗ ನ್ಯಾಯಾಂಗವಾಗಲೀ ಆಳುವ ಸರ್ಕಾರಗಳಾಗಲೀ ಕೈಗೊಳ್ಳಬೇಕಾದ ಕ್ರಮ ಕೈಗೊಂಡಿದ್ದರೆ ಆ ನಂತರ ಯಾರೂ ಹಾಗೆ ಮಾಡುವ ಪ್ರಶ್ನೆಯೇ ಇರಲಿಲ್ಲವಲ್ಲ. ಈ ಪ್ರಶ್ನೆಗಳೆಲ್ಲಾ ನವಕರ್ನಾಟಕದಲ್ಲಿ ಪ್ರಸ್ತುತವೇ ಅಲ್ಲ. ಇಲ್ಲಿರುವುದು ಅರ್ಧ ಚುನಾಯಿತ, ಅರ್ಧ ಖರೀದಿಸಲ್ಪಟ್ಟ ಒಂದು ಸರ್ಕಾರ. ಇಲ್ಲಿ ಮೆರೆಯುತ್ತಿರುವುದು ಇನ್ನೊಂದು ಬಡತಾಯಿ ಮಗನ ಹೆಣ ಯಾವಾಗ ಉರುಳೀತು ಎನ್ನುವ ರಣಹದ್ದು ನಿರೀಕ್ಷೆಯ ಸುತ್ತ ಹೆಣೆಯಲಾಗುವ ರಾಜಕೀಯ ತಂತ್ರ. ಇಲ್ಲಿ ಕೊಂದವರ್ಯಾರು ಎನ್ನುವುದರ ಮೇಲೆ ಕೊಲೆಯ ಕ್ರೌರ್ಯ ನಿರ್ಣಯಿಸಲ್ಪಡುತ್ತದೆ, ಜಾತಿಯ ಆಧಾರದ ಮೇಲೆ ಸಾವಿನ ದಾರುಣತೆ ನಿರ್ಧಾರವಾಗುತ್ತದೆ, ಸಂತ್ರಸ್ತನ ಧರ್ಮದ ಆಧಾರದ ಮೇಲೆ ಪರಿಹಾರ ಘೋಷಣೆ ಆಗುತ್ತದೆ. ಆಳುವ ಪಕ್ಷಕ್ಕೆ ಅನುಕೂಲವಾಗಬಹುದಾದರೆ ಘೋರಾಪರಾಧಗಳೂ ನವಕರ್ನಾಟಕದಲ್ಲಿ ದೇಶಸೇವೆ, ಧರ್ಮರಕ್ಷಣೆಯ ಕೈಂಕರ್ಯಗಳಾಗಿಬಿಡುತ್ತವೆ.

ದ್ವೇಷವನ್ನು ಬಿತ್ತಿ ರಾಜಕೀಯದ ಬೆಳೆ ತೆಗೆಯಲು ಉತ್ತರಭಾರತದಲ್ಲೆಲ್ಲೋ ರೂಪುಗೊಂಡ ರಾಜಕೀಯ ಮಾದರಿಗೆ ಕರ್ನಾಟಕವನ್ನು ದಕ್ಷಿಣದ ವಸಾಹತನ್ನಾಗಿ ರೂಪಿಸುವ ಹುನ್ನಾರವಿದು. ಜನತೆಗೆ ಧರ್ಮದ್ವೇಷದ ಅಮಲೇರಿಸಿ ಅವರು ಏನನ್ನೂ ಪ್ರಶ್ನಿಸದಂತೆ ಮಾಡುವ ವಿಷ ಮತ್ತು ವಿಷಯಾಂತರ ರಾಜಕಾರಣದ ಕರ್ನಾಟಕ ಅವತರಣಿಕೆ ಇದು. ಕನ್ನಡಿಗರಿಗೆ ಬೇಕಾಗಿರುವ ನವಕರ್ನಾಟಕ ಇದಲ್ಲ. ಕನ್ನಡಿಗರಿಗೆ ಬೇಕಾಗಿರುವುದು ಬಸವಾದಿ ಶರಣರು ಕಟ್ಟಿದ ಕರ್ನಾಟಕ, ಕನಕದಾಸರಂತಹ ದಾಸವರೇಣ್ಯರು ಕಟ್ಟಿದ ಕರ್ನಾಟಕ, ವೀರ ಕಲ್ಕುಡ-ಜಕಣಾಚಾರಿಯಂತಹವರ ಶ್ರಮಿಕ- ಕೌಶಲದ ಮೌಲ್ಯಗಳನ್ನು ಸಾರುವ ಕರ್ನಾಟಕ, ಧರ್ಮಗಳಿಗೆ ಧರ್ಮ ಬೋಧಿಸಿದ ಮಹಾ ಮಾನವತಾವಾದಿ ಕುವೆಂಪು ರೂಪಿಸಿದ ಕರ್ನಾಟಕ, ಸಂವಿಧಾನಕ್ಕೆ ಮೊದಲೇ ಸಾಮಾಜಿಕ ನ್ಯಾಯಕ್ಕೆ ಮುನ್ನುಡಿ ಬರೆದ ನಾಲ್ವಡಿ ಕೃಷ್ಣರಾಜ ಒಡೆಯರು ಕಟ್ಟಿದ ಕರ್ನಾಟಕ, 'ಸತ್ಯಕ್ಕೆ ಎದೆಯಲ್ಲಿ ಹಾದಿ ಕೊಟ್ಟೇವು' ಅಂತ ಹೋರಾಡಿ ಮರೆಯಿಂದ ತೂರಿಬಂದ ಬಾಣಕ್ಕೆ ಬಲಿಯಾದ ಕೋಟಿ ಚೆನ್ನಯರ ಐತಿಹ್ಯದ ನೆರಳಲ್ಲಿ ನಿರ್ಮಾಣವಾದ ಕರ್ನಾಟಕ. ಹಾಗೆಯೇ, ಉಳಿದ ಆಪಾದನೆಗಳೆಲ್ಲಾ ಏನೇ ಇದ್ದರೂ ಮುತ್ಸದ್ದಿಗಳಾಗಿ ಮೆರೆದು ರಾಷ್ಟ್ರದ ಗಮನ ಸೆಳೆದ ನಿಜಲಿಂಗಪ್ಪ, ದೇವರಾಜ ಅರಸು, ರಾಮಕೃಷ್ಣ ಹೆಗಡೆಯಂತಹವರು ದೇಣಿಗೆ ನೀಡಿದ ಕರ್ನಾಟಕ.

ಇಂತಹ ಜೀವಪರ ಪರಂಪರೆಗಳಲ್ಲಿ ರೂಪುಗೊಂಡ ಉದಾತ್ತವೂ ಮಾನವೀಯವೂ ಆದ ಕರ್ನಾಟಕತ್ವವು ಎರವಲು ತಂದ ರಾಜಕೀಯದ ಎಂಜಲು ಮಾದರಿಯೊಂದರ ಕುತಂತ್ರದಿಂದಾಗಿ ಕೊನೆಗೊಳ್ಳುತ್ತಿದೆ...

## ಚುರುಮುರಿ



### 'ಕಟ್'ಕಥೆ!

• ಬಿ.ಎನ್.ಮಲ್ಲೇಶ್

**ಹರಟೆಕಟ್ಟೇಲಿ** ತೆಪರೇಸಿ ಹೇರ್‌ಕಟ್, ಡೈ ಮಾಡಿಸ್ಕಂಡು ಲಕಲಕ ಅಂತಿದ್ದ. ಗುಡ್ಡೆಗೆ ನಗು. 'ಏನೋ ತೆಪರಾ, ಹತ್ತು ವರ್ಷ ಸಣ್ಣೋನಾಗಿ ಕಾಣ್ತಿದೀಯಲ್ಲೋ... ಹೇರ್‌ಕಟ್ ಚೆನ್ನಾಗಾಗೇತಿ, ಮಿಲಿಟ್ರಿ ಕಟ್ಟೋ ಮಶ್ರೂಮ್ ಕಟ್ಟೋ' ಎಂದ.

'ನೀನೊಳ್ಳೆ, ಯಾವ ಕಟ್ಟಾದ್ರೆ ಏನಲೆ, ತಲಿ ಮ್ಯಾಗಿನ ಕೂದ್ಲು ಹೋದ್ರೆ ಆತಪ...' ದುಬ್ಬೀರ ನಕ್ಕ.

'ಈಗ ಅದೆಲ್ಲ ನಡೆಯಲ್ಲ. ಟೀವಿ ನೋಡಿಲ್ವ? ಎಲ್ಲ ಕಡಿ ಈಗ 'ಕಟ್'ದೇ ಸುದ್ದಿ. ಕುರಿ, ಕೋಳಿನ ಹೆಂಗ್ ಕಟ್ ಮಾಡ್ತಾರೆ, ಹೆಂಗ್ ಮಾಡ್ಬೇಕು ಅನ್ನೋದೇ ದೊಡ್ಡ ಚರ್ಚೆ...' ಕೊಟ್ರೇಶಿ ವಾದಿಸಿದ.

'ಲೇಯ್ ಕುರಿ, ಕೋಳಿನ ಹೆಂಗಾದ್ರೂ ಕಟ್ ಮಾಡ್ಲಿ, ನಮ್ಗೆ ಮಾಂಸ ಮುಖ್ಯ ತಾನೆ?' ಗುಡ್ಡೆ ಪ್ರಶ್ನೆ.

'ಇಲ್ಲ ಗುರು, ನಮ್ ಮನಿ ದೇವ್ರು ಸಿಟ್ಟಾಗ್ತವು...' ಕೊಟ್ರೇಶಿ ಒಪ್ಪಲಿಲ್ಲ.

'ಆತು ಬಿಡಪ, ಈಗ ಕೋಳಿನ ನೀನೇ ಮನಿಗೆ ತಗಂಡ್ ಹೋಗಿ ನಿಂಗೆ ಹೆಂಗ್ ಬೇಕೋ ಹಂಗೆ ಕಟ್ ಮಾಡ್ಕಂಡ್ರೆ ಮುಗೀತು, ಜಗಳ ಯಾಕೆ?' ಗುಡ್ಡೆ ತಿಪ್ಪೆ ಸಾರಿಸಿದ.

'ಅಲ್ಲ, ಈ ಹಲಾಲ್ ಕಟ್, ಜಟ್ಕಾ ಕಟ್ ಅಂದ್ರೆ ಏನ್ರಲೆ?' ದುಬ್ಬೀರನಿಗೆ ಕುತೂಹಲ.

'ನೋಡಲೆ, ನಿನ್ ಕೋಳಿನ ನೀನೇ ಕಟ್ ಮಾಡ್ಕಂಡ್ರೆ ಜಟ್ಕಾ ಕಟ್. ಬೇರೆಯವರು ಕಟ್ ಮಾಡಿದ್ರೆ ಹಲಾಲ್ ಕಟ್, ಅಷ್ಟೇ ವ್ಯತ್ಯಾಸ' ತೆಪರೇಸಿ ಬಿಡಿಸಿ ಹೇಳಿದ.

'ಎರಡೇ ಕಟ್ ಇರೋದಾ?'

'ಎರಡಲ್ಲ, ಬಾಳದಾವು. ಆಫೀಸಲ್ಲಿ ಬಾಸ್ ಮಾತು ಕೇಳದಿದ್ರೆ ಪ್ರಮೋಶನ್ ಕಟ್, ಮನೇಲಿ ಹೆಂಡ್ತಿ ಮಾತು ಕೇಳದಿದ್ರೆ ಊಟ ಕಟ್, ತಿಂಗಳ ಕೊನೀಗೆ ಬಾರಲ್ಲಿ ಉದ್ರಿ ಕಟ್, ವಿಧಾನಸೌಧದಿಂದ ಪರಪ್ಪನ ಅಗ್ರಹಾರಕ್ಕೆ ಶಾರ್ಟ್ ಕಟ್... ಇತ್ಯಾದಿ ಇತ್ಯಾದಿ...' ಕೊಟ್ರ ಪಟ್ಟಿ ಬಿಚ್ಚಿಟ್ಟ.

'ತೆಪರ ಮನೇಲಿ ಜಾಸ್ತಿ ಎಗರಾಡಿದ್ರೆ?'

'ಬಾಲ ಕಟ್!'

ಗುಡ್ಡೆ ಮಾತಿಗೆ ಎಲ್ಲರೂ ಗೊಳ್ಳಂತ ನಕ್ಕರು.

## ಸಂಗತ

# ಮೀಥೇನ್ ಮಾಲಿನ್ಯ ಮರೆಯುವಂತಿಲ್ಲ

### ಇನ್ನು ಐವತ್ತು ವರ್ಷಗಳಲ್ಲಿ ಕಾರ್ಬನ್‌ಮುಕ್ತ ದೇಶವಾಗಲು ಇಂಗಾಲದ ಜೊತೆ ಮೀಥೇನ್ ಅನ್ನೂ ನಿಯಂತ್ರಿಸಬೇಕು

• ಶ್ರೀಗುರು

ಭೂಮಿಕ್ಷೇಮದ ಕುರಿತು ಕಳೆದ ವರ್ಷದ ಕೊನೆಯಲ್ಲಿ ಜರುಗಿದ ಗ್ಲಾಸ್ಗೊ ಶೃಂಗಸಭೆ ಯಾವುದೇ ತುರ್ತು ಸಕಾರಾತ್ಮಕ ನಿರ್ಣಯಗಳಿಲ್ಲದೆ ವೈಫಲ್ಯ ಕಂಡಿತಾದರೂ ಮೀಥೇನ್ ಹೊರಸೂಸುವಿಕೆಯ ಬಗ್ಗೆ 105 ದೇಶಗಳು ಕೈಗೊಂಡ ಸ್ವಯಂನಿರ್ಧಾರ ಮತ್ತು ಮಾಡಿದ ಪ್ರತಿಜ್ಞೆಯು ಭೂಮಿ ಬಿಸಿ ನಿಯಂತ್ರಣಕ್ಕೆ ವರವಾಗಿ ಪರಿಣಮಿಸಲಿವೆ.


ಈ ಹಿಂದೆ ನಡೆದ ವಾಯುಗುಣ ವೈಪರೀತ್ಯ ನಿಯಂತ್ರಣದ ವಿಶ್ವಸಭೆಗಳಲ್ಲೆಲ್ಲ ಇಂಗಾಲದ ಹೊರಸೂಸುವಿಕೆಯ ನಿಯಂತ್ರಣದ ಕುರಿತು ಚರ್ಚೆಯಾಗುತ್ತಿತ್ತು. ಅಚ್ಚರಿ ಎಂಬಂತೆ, ಗ್ಲಾಸ್ಗೊ ಸಭೆಯಲ್ಲಿ ಪ್ರಥಮ ಬಾರಿಗೆ ಮೀಥೇನ್ ಹೊರಸೂಸುವಿಕೆ ಕುರಿತು ಚರ್ಚೆಗಳಾಗಿವೆ. ನೂರಕ್ಕೂ ಹೆಚ್ಚು ದೇಶಗಳು 2030ರ ವೇಳೆಗೆ ಮೀಥೇನ್ ಹೊರಸೂಸುವಿಕೆಯ ಪ್ರಮಾಣವನ್ನು ಶೇ 30ರಷ್ಟು ಕಡಿಮೆ ಮಾಡುವುದಾಗಿ ಸ್ವಯಂಪ್ರೇರಿತವಾಗಿ ಪ್ರತಿಜ್ಞೆ ಮಾಡಿವೆ. ಇನ್ನು ಐವತ್ತು ವರ್ಷಗಳಲ್ಲಿ ಇಂಗಾಲ ಹೊರಸೂಸುವಿಕೆಯ ಪ್ರಮಾಣವನ್ನು ಶೂನ್ಯಕ್ಕೆ ಇಳಿಸುತ್ತೇವೆ ಎಂಬ ಒಪ್ಪಂದಕ್ಕೆ ಸಹಿ ಹಾಕಿರುವ ದೇಶಗಳು ಅದಕ್ಕಿಂತ ಮುಂಚೆ, ಶೀಘ್ರವಾಗಿ ಮಾಡಬಹುದಾದ ಕೆಲಸಗಳಲ್ಲಿ ಮೀಥೇನ್ ನಿಯಂತ್ರಣ ಅತ್ಯಂತ ಮುಖ್ಯವಾದುದು ಎಂದಿವೆ ಮತ್ತು ನಿಯಂತ್ರಿಸುವ ಆತ್ಮವಿಶ್ವಾಸವನ್ನು ಪ್ರದರ್ಶಿಸಿವೆ.

ಮೀಥೇನ್ ಅನಿಲವನ್ನು 'ಶಾರ್ಟ್‌ಲಿವ್ಡ್ ಪೊಲ್ಯೂಟೆಂಟ್' ಎಂದು ತಜ್ಞರು ಕರೆದಿದ್ದಾರೆ. ನೈಸರ್ಗಿಕವಾಗಿ ತರಿಭೂಮಿ, ಕೆರೆ ಕುಂಟೆ, ಜೊಂಡು ತುಂಬಿದ ಹೊಂಡ, ಹಸಿರು ಮೇಯುವ ಪ್ರಾಣಿ ಹಾಗೂ ಗೆದ್ದಲುಗಳಿಂದ, ತೈಲ- ಅನಿಲ ಬಾವಿ, ಕೃಷಿ ಮೂಲಗಳಿಂದ ಮೀಥೇನ್ ಹೊಮ್ಮುತ್ತದೆ. ವಾತಾವರಣದಲ್ಲಿರುವ ಮೀಥೇನ್‌ನ ಆಯಸ್ಸು ಕೇವಲ 12 ವರ್ಷ. ಇಂಗಾಲದ ಡೈ ಆಕ್ಸೈಡ್ (ಇಂಡೈ) 200 ವರ್ಷಗಳವರೆಗೂ ನಮ್ಮ ನಡುವೆಯೇ ಇದ್ದು ತೊಂದರೆ ಕೊಡುತ್ತದೆ. ಇಂಡೈಗಿಂತ ಮೀಥೇನ್ 84 ಪಟ್ಟು ಹೆಚ್ಚು ಭೂಮಿ ಬಿಸಿಯನ್ನು ಹಿಡಿದಿಡುವುದರಿಂದ ಅದನ್ನು 'ಸೂಪರ್ ವಾರ್ಮರ್' ಎಂದು ಕರೆಯುತ್ತಾರೆ.

ಕೈಗಾರಿಕಾ ಕ್ರಾಂತಿಯ ನಂತರ ಹೆಚ್ಚಿರುವ ಭೂಮಿ ಬಿಸಿಯಲ್ಲಿ ಮೀಥೇನ್‌ನ ಪಾತ್ರ ಕಾಲು ಭಾಗಕ್ಕಿಂತ ಹೆಚ್ಚು. ಮೀಥೇನ್‌ನ ನಿಯಂತ್ರಣವಾದರೆ ಮುಂದಿನ 25 ವರ್ಷಗಳ ಕಾಲ ವಾಯುಗುಣ ವೈಪರೀತ್ಯಗಳು ಹತೋಟಿಯಲ್ಲಿರಲಿವೆ ಎಂದಿದ್ದಾರೆ ಯುಎನ್‌ಇಪಿ (ಯುನೈಟೆಡ್ ನೇಷನ್ಸ್ ಎನ್ವಿರಾನ್‌ಮೆಂಟ್ ಪ್ರೋಗ್ರಾಂ) ಕಾರ್ಯಕಾರಿ ನಿರ್ದೇಶಕ ಇಂಗರ್ ಆ್ಯಂಡರ್ಸನ್.

ನಿಯಂತ್ರಣಕ್ಕೆ ಮನಸ್ಸು ಮಾಡಿರುವ ದೇಶಗಳು ಯೋಜಿಸಿದಂತೆ ಕೆಲಸ ಮಾಡಿದರೆ 2050ರ ವೇಳೆಗೆ, ಮೀಥೇನ್‌ನಿಂದಾಗಿ ಏರುತ್ತಿರುವ ಗೋಳದ ಬಿಸಿಯನ್ನು 0.2 ಡಿಗ್ರಿ ಸೆಲ್ಸಿಯಸ್‌ನಷ್ಟು ಕಡಿಮೆ ಮಾಡಬಹುದು. ಉಷ್ಣತೆಯನ್ನು 1.5 ಡಿಗ್ರಿ ಸೆಲ್ಸಿಯಸ್‌ನಷ್ಟು ಅಥವಾ ಅದರ ಕೆಳಗಿರುವಂತೆ ತಡೆಯಲು ಮೀಥೇನ್ ವಾತಾವರಣ ಸೇರುವುದನ್ನು ತಡೆಯಲೇಬೇಕು ಎಂದಿದ್ದಾರೆ ಯುರೋಪಿನ ತಜ್ಞರು.

ಈಗ ಹೆಚ್ಚು ಮೀಥೇನ್ ಅನ್ನು ವಾತಾವರಣಕ್ಕೆ ಚೆಲ್ಲುವ ಬ್ರೆಜಿಲ್, ನೈಜೀರಿಯ, ಕೆನಡಾ ಮತ್ತು ಆಫ್ರಿಕಾದ ಅರ್ಧದಷ್ಟು ದೇಶಗಳು, ನಿಯಂತ್ರಣ ಒಪ್ಪಂದಕ್ಕೆ ಸಹಿ ಮಾಡಿವೆ. ಆದರೆ ವಿಶ್ವದ ಒಟ್ಟು ಮೀಥೇನ್‌ನಲ್ಲಿ ಶೇ 35ರಷ್ಟನ್ನು ಹೊಮ್ಮಿಸುತ್ತಿರುವ ಭಾರತ, ಚೀನಾ ಮತ್ತು ರಷ್ಯಾ ಒಪ್ಪಂದಕ್ಕೆ ಸಹಿ ಹಾಕಿಲ್ಲ. ಶುದ್ಧ ಗಾಳಿ ಮತ್ತು ವಾತಾವರಣಕ್ಕಾಗಿ 2012ರಲ್ಲೇ ಪ್ರತ್ಯೇಕ ಒಕ್ಕೂಟ ಸ್ಥಾಪಿಸಿಕೊಂಡಿರುವ ಅಮೆರಿಕ, ಮೆಕ್ಸಿಕೊ, ಘಾನಾ, ಕೆನಡಾ, ಬಾಂಗ್ಲಾದೇಶ ಮತ್ತು ಸ್ವೀಡನ್ ಈ ದೇಶಗಳು ಯುಎನ್‌ಇಪಿ ಜೊತೆಗೂಡಿ ಮಾಡಿರುವ ಅಧ್ಯಯನದಂತೆ, ಮಾನವ ಚಟುವಟಿಕೆಯಿಂದ ಹೊರಸೂಸುವ ಮೀಥೇನ್ ಅನ್ನು ಶೇ 45ರಷ್ಟು ನಿಯಂತ್ರಿಸಿದರೆ, ಭೂಮಿಬಿಸಿಯ ಏರಿಕೆಯನ್ನು ನಿಗದಿ ಮಾಡಿಕೊಂಡ ಸಂಖ್ಯೆಯ ಕೆಳಗೇ ಇರಿಸಬಹುದು. ಯುಎನ್‌ಇಪಿಯ 'ವರ್ಲ್ಡ್ ಮೀಥೇನ್ ಅಸೆಸ್ಮೆಂಟ್' ಪ್ರಕಾರ, ಕಲ್ಲಿದ್ದಲು ಗಣಿ, ತೈಲ ಮತ್ತು ಅನಿಲ ಬಾವಿಗಳಿಂದ ಸೋರುವ ಮೀಥೇನ್ ಅನ್ನು ಹಿಡಿದಿಟ್ಟುಕೊಂಡರೆ ಭಾರಿ ಪ್ರಮಾಣದ ಮೀಥೇನ್ ಮಾಲಿನ್ಯವನ್ನು ತಡೆಯಬಹುದು.



ರೈತರು ಅನುಸರಿಸುತ್ತಿರುವ ವ್ಯವಸಾಯ ಪದ್ಧತಿಗಳಿಂದ ಭೂಮಿ ಮತ್ತಷ್ಟು ಬಿಸಿಯಾಗುತ್ತಿದೆ ಮತ್ತು ದೇಶಗಳು ಸುಸ್ಥಿರ ಕೃಷಿಯಿಂದ ದೂರ ಸಾಗುತ್ತಿವೆ. ಕೃಷಿ, ಡೇರಿ ಮತ್ತು ಜಾನುವಾರು ಮಾಂಸದ ಘಟಕಗಳಿಂದ ವಾರ್ಷಿಕ ಶೇ 26ರಷ್ಟು ಶಾಖವರ್ಧಕ ಅನಿಲಗಳು ವಾತಾವರಣ ಸೇರುತ್ತಿವೆ. ಕೃಷಿಯಿಂದ ಹೊಮ್ಮುವ ಶಾಖವರ್ಧಕ ಅನಿಲಗಳನ್ನು ನಿಯಂತ್ರಿಸಿ ನೈಸರ್ಗಿಕ ಪ್ರದೇಶಗಳನ್ನು ಕಾಪಾಡಲು ವಿಶ್ವದಾದ್ಯಂತ ಇರುವ ರೈತರ ನೆರವಿಗೆ ನಿಲ್ಲಲೇಬೇಕಾದ ಅನಿವಾರ್ಯ ಇದೆ.

1992ರ ರಿಯೊ ಶೃಂಗಸಭೆಯಲ್ಲಿ ನೀತಿ ನಿರೂಪಕರೆಲ್ಲ, ಮುಂದುವರಿದ ರಾಷ್ಟ್ರಗಳು ತಮ್ಮ ಕಾರ್ಬನ್ ಹೊರಸೂಸುವಿಕೆ ಕಡಿತ ಮಾಡಿ, ಅಭಿವೃದ್ಧಿ ಬಯಸುತ್ತಿರುವ ದೇಶಗಳಿಗೆ ಅನುವು ಮಾಡಿಕೊಡಬೇಕು ಎಂದು ಸರ್ವಾನುಮತದಿಂದ ತೀರ್ಮಾನಿಸಿದರು. ಅಭಿವೃದ್ಧಿ ಸಾಧಿಸುತ್ತಲೇ ಭೂಮಿ ಬಿಸಿ ನಿಯಂತ್ರಿಸುವ ತಂತ್ರಜ್ಞಾನವನ್ನು ಮತ್ತು ಅದಕ್ಕೆ ಬೇಕಾದ ಬಂಡವಾಳವನ್ನೂ ಒದಗಿಸಬೇಕೆಂದು ನಿಕ್ಕಿಯಾಯಿತು. ಆದರೆ ಬೇಕಾದ ತಂತ್ರಜ್ಞಾನವಾಗಲೀ ಬಂಡವಾಳವಾಗಲೀ ನಮ್ಮಂಥ ದೇಶಗಳಿಗೆ ಸಿಗಲೇ ಇಲ್ಲ. ಇನ್ನು ಐವತ್ತು ವರ್ಷಗಳಲ್ಲಿ ಕಾರ್ಬನ್‌ಮುಕ್ತ ದೇಶವಾಗಲು ಇಂಗಾಲದ ಜೊತೆ ಮೀಥೇನ್ ಅನ್ನೂ ನಿಯಂತ್ರಿಸಬೇಕು.

## ವಾಚಕರ ವಾಣಿ

### ಅಂಕ ಕಡಿತ: ಒತ್ತಡಕ್ಕೆ ಮಣಿಯದಿರಿ

ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಗೆ ಕರ್ನಾಟಕ ಲೋಕಸೇವಾ ಆಯೋಗ ನಡೆಸುವ ಪರೀಕ್ಷೆಯಲ್ಲಿ ಸಂದರ್ಶನದ ಅಂಕಗಳನ್ನು ಕಡಿತಗೊಳಿಸಿರುವುದಕ್ಕೆ ವಿಧಾನಮಂಡಲದ ಕಲಾಪದಲ್ಲಿ ಕೆಲವು ಸದಸ್ಯರು ಆಕ್ಷೇಪ ವ್ಯಕ್ತಪಡಿಸಿರುವುದು ಸರಿಯಲ್ಲ. ಸರ್ಕಾರದ ಈ ಕ್ರಮದಿಂದ ಗ್ರಾಮೀಣ ಮತ್ತು ದುರ್ಬಲ ವರ್ಗಗಳ ಅಭ್ಯರ್ಥಿಗಳಿಗೆ ತೊಂದರೆ ಆಗಲಿದೆ, ಹೀಗಾಗಿ ಈ ನಿರ್ಧಾರವನ್ನು ಕೈಬಿಡಬೇಕು ಎಂದು ಸದಸ್ಯರು ಒತ್ತಾಯಿಸಿದ್ದಾರೆ. ಈ ವಾದದಲ್ಲಿ ಹುರುಳಿಲ್ಲ. ಆಯೋಗವು ನಡೆಸುವ ಸಂದರ್ಶನಗಳಲ್ಲಿ ಯಾವ ಮಟ್ಟದ ಭ್ರಷ್ಟಾಚಾರ, ಅಕ್ರಮಗಳು ನಡೆಯುತ್ತವೆ ಎಂಬುದು ಗುಟ್ಟಾದ ವಿಷಯವೇನೂ ಅಲ್ಲ. ಸಂದರ್ಶನಕ್ಕೆ ಹೆಚ್ಚು ಅಂಕಗಳು ನಿಗದಿಯಾದರೆ ಭ್ರಷ್ಟಾಚಾರ, ಅಕ್ರಮಗಳಿಗೆ ಹೆಚ್ಚಿನ ಅವಕಾಶ ಮಾಡಿಕೊಟ್ಟಂತೆ ಆಗುತ್ತದೆ. ಜೊತೆಗೆ ಹಣಬಲ ಮತ್ತು ರಾಜಕೀಯ ಪ್ರಭಾವವಿರುವ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಯ್ಕೆಯಾಗುವ ಸಂಭವ ಇರುತ್ತದೆ.

ಸಂದರ್ಶನಕ್ಕೆ ಹೆಚ್ಚಿನ ಅಂಕಗಳು ನಿಗದಿಯಾದರೆ ಪ್ರತಿಭಾವಂತ ಗ್ರಾಮೀಣ ಮತ್ತು ಮೆರಿಟ್ ವಿದ್ಯಾರ್ಥಿಗಳ ಆಯ್ಕೆಗೆ ಮಾರಕವಾಗುತ್ತದೆ. ಆದ್ದರಿಂದ ರಾಜ್ಯ ಸರ್ಕಾರವು ಯಾವುದೇ ರೀತಿಯ ಸ್ಥಾಪಿತ ಹಿತಾಸಕ್ತಿಗಳ ಒತ್ತಡಕ್ಕೆ ಮಣಿಯದೆ, ಪ್ರಸ್ತುತ ಅಧಿಸೂಚನೆಯಲ್ಲಿ ಹೊರಡಿಸಿರುವ ತಿದ್ದುಪಡಿ ಅಂಶಗಳನ್ನು ಮುಂದಿನ ನೇಮಕಾತಿಯಲ್ಲಿ ಅಳವಡಿಸಿಕೊಳ್ಳಬೇಕು.

**ಮಾರುತಿ, ಬಸವರಾಜು, ವಿವೇಕ, ಅಮಿತ್, ಸತೀಶ,** ವಿಜಯಪುರ

### ಮುಖ್ಯಮಂತ್ರಿ ಮತ್ತು ಗಮ್ಮತ್ತು

'ಹಲಾಲ್ ಮಾಂಸಕ್ಕೆ ಕೆಲವರು ವ್ಯಕ್ತಪಡಿಸುತ್ತಿರುವ ವಿರೋಧದ ಬಗ್ಗೆ ಸರ್ಕಾರದ ನಿಲುವೇನು' ಎಂಬ ಪ್ರಶ್ನೆಗೆ ಮುಖ್ಯಮಂತ್ರಿ ನೇರವಾಗಿ ಉತ್ತರಿಸಿಲ್ಲ. ದೀರ್ಘವಾಗಿಯಂತೂ ಮಾತನಾಡಿದ್ದಾರೆ. ವರದಿಗಾರರು ಸಿದ್ದರಾಮಯ್ಯ ಅವರಿಗೆ ಈ ಪ್ರಶ್ನೆ ಕೇಳಿದ್ದರೆ, 'ಮರಿ ಕಡೀದಕ್ಕೂ ಸರ್ಕಾರಿ ಆದೇಸವಾ, ಹೋಗ್‌ಹೋಗ್ರಿ' ಎಂದೋ, ಜೆ.ಎಚ್.ಪಟೇಲರಾಗಿದ್ದರೆ, 'ಮಾರಿ ಗುಡಿಗೆ ಮರಿ ತರ್ರಿ, ಆಮೇಲೆ ನೋಡ್ಕೊಳ್ಳೋಣ' ಎಂದೋ, ದೇವರಾಜ ಅರಸು ಅವರಾಗಿದ್ದರೆ, 'ಮರಿ ಕಡಿಯೋದು ನಮಗೆ ನೀವೇನು ಹೇಳ್ಕೊಡ್ತೀರಿ, ಸುಮ್ನೆ ಕೂತ್ಕೊಳ್ರಿ' ಎಂದೋ, ರಾಮಕೃಷ್ಣ ಹೆಗಡೆ ಅವರಾಗಿದ್ದರೆ, ಎಂದಿನಂತೆ ಮುಗುಳ್ನಗೆ ಬೀರಿ ಮುನ್ನಡೆಯುವ ಮೂಲಕವೋ ಪ್ರತಿಕ್ರಿಯಿಸುತ್ತಿದ್ದರೇನೋ!

ಈಗಿನ ಸ್ಥಿತಿಯಲ್ಲಿ, ಮುಖ್ಯಮಂತ್ರಿ ತಮ್ಮ ಜುಟ್ಟು ಯಾರದೋ ಕೈಲಿದೆ ಎಂದು ಭಾವಿಸಿರುವಂತೆ ವರ್ತಿಸುವುದೇಕೆ? ಅವರು ಏರಿರುವುದು ರಣ ತುರಗವಲ್ಲ; ಆಟದ pony ಎಂಬುದು ಗೊತ್ತೇ ಗೊತ್ತು; ಆದರದು ಪದೇ ಪದೇ ಜಾಹೀರುಗೊಳ್ಳುವಂತೆ, ಮಾಧ್ಯಮಗಳ ಬಾಯಿಗೆ ನಾಲಗೆಯಾಗಬೇಕಾದ ಅಗತ್ಯವಾದರೂ ಏನು?

**ಆರ್.ಕೆ.ದಿವಾಕರ,** ಬೆಂಗಳೂರು

### ಯೋಚಿಸಬೇಕಾದುದು...

ಮಾಂಸ ಕೆ.ಜಿ.ಗೆ 600ರಿಂದ 700 ರೂಪಾಯಿ ಆಗಿರುವಾಗ ಜನಸಾಮಾನ್ಯರಿಗೆ ಮಾಂಸ ಕೊಂಡು ತಿನ್ನುವ ಶಕ್ತಿಯಿದೆಯೇ ಎನ್ನುವುದ ಯೋಚಿಸಿ, ನಂತರ ಜಟ್ಕಾನೋ, ಹಲಾಲ್ ಎಂದೋ ಚರ್ಚೆ ಮಾಡಿರಿ!

**ಜೆ.ಬಿ.ಮಂಜುನಾಥ,** ಪಾಂಡವಪುರ

### ಸಭಾಧ್ಯಕ್ಷರು ಯಾರಿಗೆ ಕರೆ ಕೊಟ್ಟಿದ್ದಾರೆ?

ಚುನಾವಣಾ ವ್ಯವಸ್ಥೆ ಕುರಿತು ವಿಧಾನಸಭೆಯಲ್ಲಿ ಬುಧವಾರ ನಡೆದ ಚರ್ಚೆಯಲ್ಲಿ ವಿರೋಧ ಪಕ್ಷದ ಪ್ರಮುಖರು ವ್ಯಕ್ತಪಡಿಸಿದ ಅಭಿಪ್ರಾಯಗಳು ಹೊಸವೇನೂ ಅಲ್ಲ. ಲ್ಯೂಸಿಡ್ ಇಂಟರ್ವಲ್ ಎಂಬುದಿದೆ. ಇದರ ಅರ್ಥ, ಈ ಬಿಡುವು ಹುಚ್ಚಿನ ಆವೇಶಗಳ ನಡುವೆ ಬುದ್ಧಿಸ್ಥಿಮಿತ ಹೊಂದಿರುವ ಕಾಲ ಎಂದು. ರಾಜಕೀಯ ಕೂಡ ಹುಚ್ಚೇ ಎನ್ನುವುದನ್ನು ಒಪ್ಪಿಕೊಂಡರೆ ಮತ್ತು ಸಾಮಾನ್ಯವಾಗಿ ಚುನಾವಣಾ ಸಮಯದಲ್ಲಂತೂ ರಾಜಕೀಯ ವ್ಯಕ್ತಿಗಳ ಮಾತು ಮತ್ತು ನಡವಳಿಕೆಗಳು ರಾಜಕೀಯ ಉನ್ಮಾದದ ಲಕ್ಷಣಗಳನ್ನು ಸ್ಪಷ್ಟಪಡಿಸುತ್ತವೆ ಎನ್ನುವುದನ್ನೂ ಒಪ್ಪುವುದಾದರೆ, ಎರಡು ಚುನಾವಣೆಗಳ ನಡುವಿನ ಕಾಲದಲ್ಲಿ ಉನ್ಮಾದ ಕ್ಷೀಣಗೊಂಡು ವಾಸ್ತವದ ಅರಿವಿನ ಕ್ಷಣಗಳು ತಲೆ ಎತ್ತುತ್ತವೆ ಎನ್ನುವುದು ಗೊತ್ತಾಗುತ್ತದೆ.

ಚರ್ಚೆಯಲ್ಲಿ ಭಾಗವಹಿಸಿದ್ದ ಎಲ್ಲರೂ ಹೇಳುವುದು, ನಮ್ಮ ಚುನಾವಣಾ ವ್ಯವಸ್ಥೆ ಹದಗೆಟ್ಟಿದೆ, ದುರಸ್ತಿ ಅಗತ್ಯ ಎಂದು. ಚುನಾವಣಾ ಕಾನೂನು ಮತ್ತು ನಿಯಮಗಳು ಪರಿಪೂರ್ಣವಾಗಿವೆ ಎಂದು ಹೇಳಲು ಸಾಧ್ಯವಿಲ್ಲದಿದ್ದರೂ ಅವು ನಮ್ಮ ಈ ನಾಯಕರು ಹೇಳುವ ದುರಂತ ಸ್ಥಿತಿಗೆ ಕಾರಣ ಅಂತೂ ಖಂಡಿತ ಅಲ್ಲ. ಹಾಗಾದರೆ ದುರಸ್ತಿ ಆಗಬೇಕಾದುದು ಎಲ್ಲಿ? ಯಾರಿಂದ ಪ್ರಾರಂಭ? ಚುನಾವಣೆಗಳು ತೆರೆದು ತೋರುವ ಚಿತ್ರಣ ಇದು: ಅಭ್ಯರ್ಥಿಯಾಗುವವನು ಜನರನ್ನು ಪ್ರತಿನಿಧಿಸಲು ದಿಟವಾಗಿಯೂ ಅನರ್ಹ; ಆದರೆ ಅವನು ಗೆಲ್ಲುವ ಕುದುರೆ. ಗೆಲ್ಲಲು ಅವನ ಬಳಿ ಹಣ ಇದೆ, ತೋಳ್ಬಲ ಇರುವ ಬೆಂಬಲಿಗರು ಇದ್ದಾರೆ, ದುಷ್ಟನಾದರೂ ಪ್ರಭಾವಶಾಲಿ ಎಂಬ ಕಾರಣದಿಂದಾಗಿ ಆತ ಅರ್ಹನಾಗುತ್ತಾನೆ. ಜನರಿಗಾಗಿ ಅಲ್ಲದಿದ್ದರೂ ಅವನಿಲ್ಲದಿದ್ದರೆ ಪಕ್ಷ ಬಡವಾಗುತ್ತದೆ. ಇಂತಹ ಸ್ಥಿತಿಯಲ್ಲಿ 'ಹಣಬಲದಲ್ಲಿ ಚುನಾವಣೆಗೆ ಸ್ಪರ್ಧಿಸುವವರನ್ನು ಬಹಿಷ್ಕರಿಸಿ' ಎಂದು ಸಭಾಧ್ಯಕ್ಷರು ಯಾರಿಗೆ ಕರೆ ಕೊಟ್ಟಿದ್ದಾರೋ? ರಾಜಕೀಯ ಪಕ್ಷಗಳ ನಾಯಕರಿಗೆ ಹೀಗೆ ಇಂಥವರನ್ನು ಕಡೆಗಣಿಸುವ ನೈತಿಕ ಸ್ಥೈರ್ಯವಿದ್ದರೆ ಇದು ಸಾಧ್ಯವಾದೀತು.

ನಮ್ಮಲ್ಲಿ ಚುನಾವಣೆಗಳ ವರಸೆಯೇ ಹೀಗಿರುವಾಗ, ಅದು ತೀರಾ ದುಷ್ಟ ಹಾಗೂ ದುರವಸ್ಥೆಯದು ಎಂಬುದನ್ನು ಎಲ್ಲಾ ಪಕ್ಷಗಳ ನಾಯಕರು ಚುನಾವಣಾ ರಾಜಕೀಯೋನ್ಮಾದ ಇಲ್ಲದ ಅರಿವಿನ ವೇಳೆಯಲ್ಲಿ ಅರಿಯುವಾಗ, ದುರಸ್ತಿ ಕಾರ್ಯ ಅವರಿಂದಲೇ ಶುರುವಾಗಬೇಕು ತಾನೇ? ಈ ಮುಂಚೆ ಇಂಥ ಅರಿವಿನ ವೇಳೆ ಎಷ್ಟೋಬಾರಿ ಬಂದು ಹೋಗಿದೆ. ಆದರೇನು, ಚುನಾವಣೆಯಿಂದ ಚುನಾವಣೆಗೆ ಸಕಾರಾತ್ಮಕ ಬದಲಾವಣೆಗಳು ಆಗಿರುವುದನ್ನು ಯಾರು ಕಂಡಿರುವರು? ರಾಜಕೀಯ ನೇತಾರರಿಗೆ ಅರಿವು ಮೂಡಿದರಷ್ಟೇ ಸಾಲದು, ಅದು ಸಾಕಾರಗೊಳ್ಳುವುದು ತಮ್ಮ ಪ್ರಾಮಾಣಿಕ ಪ್ರಯತ್ನಗಳಿಂದ ಮಾತ್ರ ಎನ್ನುವ ಪ್ರಾಮಾಣಿಕ ಅರಿವೂ ಅಗತ್ಯ!

**ಸಾಮಗ ದತ್ತಾತ್ರಿ,** ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers ( Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. 

# ಪಾಕಿಸ್ತಾನ ಬಿಕ್ಕಟ್ಟಿನ ಹಲವು ಮುಖಗಳು

ಪಾಕಿಸ್ತಾನದ ಒಬ್ಬ ಪ್ರಧಾನಿಯೂ ಐದು ವರ್ಷಗಳ ಅಧಿಕಾರದ ಅವಧಿಯನ್ನು ಪೂರ್ಣಗೊಳಿಸಿದ ಇತಿಹಾಸವಿಲ್ಲ. ಹಾಲಿ ಪ್ರಧಾನಿ ಇಮ್ರಾನ್ ಖಾನ್ ಅವರ ವಿಷಯದಲ್ಲೂ ಇದೇ ಪುನರಾವರ್ತನೆಯಾಗುವುದು ನಿಚ್ಚಳವಾಗಿದೆ. ಪಾಕಿಸ್ತಾನದಲ್ಲಿ ಈವರೆಗೆ ಪ್ರಧಾನಿಯಾಗಿದ್ದವರಲ್ಲಿ ಬಹುತೇಕ ಎಲ್ಲರೂ, ಐದು ವರ್ಷಕ್ಕಿಂತ ಮೊದಲೇ ಅಧಿಕಾರ ತೊರೆದಿದ್ದಾರೆ ಅಥವಾ ಅವರು ಅಧಿಕಾರ ತೊರೆಯುವಂತೆ ಮಾಡಲಾಗಿದೆ.

ಕೆಲವು ಪ್ರಧಾನಿಗಳು ಅಧಿಕಾರದಲ್ಲಿ ಇದ್ದಾಗಲೇ ಹತ್ಯೆಯಾಗಿದ್ದಾರೆ. ಕೆಲವರನ್ನು ಪಾಕಿಸ್ತಾನದ ಸೇನೆ ಬೆಂಬಲಿತ ಅಧ್ಯಕ್ಷರು ವಜಾ ಮಾಡಿದ್ದಾರೆ. ಕೆಲವರು ಭ್ರಷ್ಟಾಚಾರದ ಆರೋಪ ಹೊತ್ತು ಅಧಿಕಾರದಿಂದ ಇಳಿದಿದ್ದಾರೆ. ಇನ್ನೂ ಕೆಲವರು ನ್ಯಾಯಾಲಯದಿಂದ ಶಿಕ್ಷೆಗೆ ಗುರಿಯಾಗಿ ಅಧಿಕಾರ ಕಳೆದುಕೊಂಡಿದ್ದಾರೆ. ಈ ಹಿಂದಿನ ಪ್ರಧಾನಿ ನವಾಜ್ ಷರೀಫ್ ಅವರು ಭ್ರಷ್ಟಾಚಾರ ಮತ್ತು ಹಣ ಅಕ್ರಮ ವರ್ಗಾವಣೆ ಆರೋಪಕ್ಕೆ ಗುರಿಯಾಗಿ ಅಧಿಕಾರ ಕಳೆದುಕೊಂಡಿದ್ದರು.

ಐದು ವರ್ಷಕ್ಕಿಂತ ಮೊದಲೇ ಅಧಿಕಾರ ಕಳೆದುಕೊಳ್ಳುತ್ತಿದ್ದರೂ, ಇಮ್ರಾನ್ ಖಾನ್ ಅವರು ಈ ಯಾವ ಸಾಲಿಗೂ ಸೇರುತ್ತಿಲ್ಲ. ಈಗಾಗಲೇ ಬಹುಮತ ಕಳೆದುಕೊಂಡಿರುವ ಇಮ್ರಾನ್ ಖಾನ್ ಅವರ ಸರ್ಕಾರದ ವಿರುದ್ಧ ವಿರೋಧ ಪಕ್ಷಗಳು ಅವಿಶ್ವಾಸ ಗೊತ್ತುವಳಿ ಮಂಡಿಸಿವೆ. ಈ ಗೊತ್ತುವಳಿಯನ್ನು ಇದೇ ಸೋಮವಾರ ಮತಕ್ಕೆ ಹಾಕಲಾಗುತ್ತಿದೆ.

ಇಮ್ರಾನ್ ಖಾನ್ ಅವರು ವಿಶ್ವಾಸ ಸಾಬೀತು ಮಾಡದೇ ಇದ್ದರೆ, ಅವರ ಸರ್ಕಾರ ಪತನವಾಗಲಿದೆ. ಆದರೆ ಇದ್ಯಾವುದಕ್ಕೂ ಇಮ್ರಾನ್ ಅವಕಾಶ ನೀಡುವುದಿಲ್ಲ ಎಂದು ಅವರ ಆಪ್ತರು ಹೇಳುತ್ತಿದ್ದಾರೆ. ಜತೆಗೆ ಪಾಕಿಸ್ತಾನ ಸಂಸತ್ತಿನ ಕೆಳಮನೆಯನ್ನು ವಿಸರ್ಜಿಸುವಂತೆ ಶಿಫಾರಸು ಮಾಡಿ, ಅವಧಿಗೂ ಮುನ್ನವೇ ಚುನಾವಣೆಗೆ ಹೋಗುವ ಆಯ್ಕೆಯನ್ನೂ ಮುಕ್ತವಾಗಿ ಇರಿಸಿಕೊಂಡಿದ್ದಾರೆ ಎಂದು ಅವರ ಆಪ್ತರು ಮಾಹಿತಿ ನೀಡಿದ್ದಾರೆ. ಆದರೆ, ಬಹುಮತ ಸಾಬೀತು ಮಾಡುವ ಮುನ್ನವೇ ಇಮ್ರಾನ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವುದಿಲ್ಲ. ವಿಶ್ವಾಸಮತ ನಿರ್ಣಯವನ್ನು ಸಂಸತ್ತಿನಲ್ಲಿ ಎದುರಿಸುತ್ತೇನೆ ಎಂದು ಇಮ್ರಾನ್ ಹೇಳಿದ್ದಾರೆ. ಈ ಮೂರರಲ್ಲಿ ಏನು ಸಂಭವಿಸಿದರೂ, ಹೊಸ ರೀತಿಯಲ್ಲಿ ಅಧಿಕಾರ ಕಳೆದುಕೊಂಡ ಪ್ರಧಾನಿಯ ಸಾಲಿಗೆ ಇಮ್ರಾನ್ ಖಾನ್ ಸೇರಲಿದ್ದಾರೆ.



ಇಮ್ರಾನ್ ಖಾನ್ ಬೆಂಬಲಿಗರು ವಿರೋಧ ಪಕ್ಷಗಳ ವಿರುದ್ಧ ಪ್ರತಿಭಟನೆ ನಡೆಸಿದರು –ಎಎಫ್‌ಪಿ ಚಿತ್ರ

## ‘ಆರ್ಥಿಕ ಬಿಕ್ಕಟ್ಟು ನೆಪ ಮಾತ್ರ’

ಆರ್ಥಿಕ ಬಿಕ್ಕಟ್ಟನ್ನು ನಿಯಂತ್ರಿಸಲು ವಿಫಲವಾಗಿದ್ದೇ ಇಮ್ರಾನ್ ಖಾನ್ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯ ಮಂಡನೆಗೆ ಪ್ರಮುಖ ಕಾರಣ ಎಂದು ವಿರೋಧ ಪಕ್ಷಗಳು ಹೇಳುತ್ತಿವೆ. ಆದರೆ, ಕಾರಣ ಇಷ್ಟು ಸರಳವಾಗಿಲ್ಲ ಎಂದು ತಜ್ಞರು ವಿಶ್ಲೇಷಿಸಿದ್ದಾರೆ.


ಪಾಕಿಸ್ತಾನವನ್ನು ಅಥವಾ ಪಾಕಿಸ್ತಾನದ ಸರ್ಕಾರವನ್ನು ಮುನ್ನಡೆಸುವವರು ಯಾರು ಎಂಬುದು, ಪ್ರತಿ ಸರ್ಕಾರ ಬದಲಾವಣೆಯಾದಾಗಲೆಲ್ಲಾ ಬದಲಾಗುತ್ತದೆ. ಒಮ್ಮೆ ಪ್ರಧಾನಿ ಇವೆಲ್ಲವನ್ನೂ ನಿಯಂತ್ರಿಸಿದರೆ, ಮತ್ತೊಂದು ಅವಧಿಯಲ್ಲಿ ದೇಶದ ಅಧ್ಯಕ್ಷರು ಇಡೀ ಸರ್ಕಾರವನ್ನು ನಿಯಂತ್ರಿಸುತ್ತಾರೆ. ಈ ಎರಡೂ ಹುದ್ದೆಗಳ ಮಧ್ಯೆ ಅಧಿಕಾರ ಕೇಂದ್ರವು ಅನಧಿಕೃತವಾಗಿ ಅದಲುಬದಲಾಗುತ್ತಿರುತ್ತದೆ. ಆದರೆ ಈ ಎರಡೂ ಹುದ್ದೆಯಲ್ಲಿ ಇರುವವರನ್ನು ನಿಯಂತ್ರಿಸುವುದು ಪಾಕಿಸ್ತಾನ ಸೇನೆ ಎಂಬುದು ಮಾತ್ರ ನಿಶ್ಚಿತ. ಸೇನೆಯೊಂದಿಗೆ ವಿಶ್ವಾಸ ಉಳಿಸಿಕೊಂಡವರು ಮಾತ್ರ ಅಧಿಕಾರದಲ್ಲಿ ಉಳಿಯುತ್ತಾರೆ.

ಪ್ರಜಾಸತ್ತಾತ್ಮಕವಾಗಿ ಚುನಾವಣೆ ಎದುರಿಸಿ, ಆರಿಸಿ ಬಂದ ಇಮ್ರಾನ್ ಖಾನ್ ಅವರು ಈಚಿನವರೆಗೂ ಸರ್ಕಾರದ ಚುಕ್ಕಾಣಿಯನ್ನು ತಮ್ಮ ಬಳಿಯೇ ಭದ್ರವಾಗಿ ಇರಿಸಿಕೊಂಡಿದ್ದರು. ಅವರು ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಪಾಕಿಸ್ತಾನವು ತೀವ್ರ ಆರ್ಥಿಕ ಬಿಕ್ಕಟ್ಟಿನಲ್ಲಿ ಇತ್ತು. ಸಂಪತ್ತು ಕ್ರೋಡೀಕರಣಕ್ಕಾಗಿ ಅವರು ಆಸ್ತಿ ನಗದೀಕರಣದ ಮೊರೆ ಹೋಗಿದ್ದರು. ಪ್ರಧಾನಿ ಕಚೇರಿಯಲ್ಲಿ ಅನುಪಯುಕ್ತವಾಗಿ ಇದ್ದ ಹತ್ತಾರು ಐಷಾರಾಮಿ ಕಾರುಗಳನ್ನು ಹರಾಜಿಗಿಟ್ಟರು. ಹರಾಜಿನಲ್ಲಿ ಬಂದ ಮೊತ್ತವನ್ನು, ದೇಶದ ಬೊಕ್ಕಸಕ್ಕೆ ಜಮೆ ಮಾಡಿದರು. ‘ಇಮ್ರಾನ್ ಅವರು ಆಡಳಿತದಲ್ಲಿ ಆರ್ಥಿಕ ಶಿಸ್ತು ತರಲಿದ್ದಾರೆ ಎಂದು ನಿರೀಕ್ಷಿಸಲಾಗಿತ್ತು. ಆದರೆ ಅವರ ಆಡಳಿತದಲ್ಲಿ ದೇಶದ ಆರ್ಥಿಕ ಸ್ಥಿತಿ ಮತ್ತಷ್ಟು ಹದಗೆಟ್ಟಿತು. ಹೀಗಾಗಿ ಅವರ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲಾಗಿದೆ’ ಎಂದು ಪ್ರಮುಖ ವಿರೋಧ ಪಕ್ಷ ಪಾಕಿಸ್ತಾನ್ ಪೀಪಲ್ಸ್ ಪಾರ್ಟಿ (ಪಿಪಿಪಿ) ಹೇಳಿದೆ.

‘ಇದೆಲ್ಲಕ್ಕಿಂತ ಮುಖ್ಯವಾಗಿ ಸೇನೆಯ ಜತೆಗೆ ಉತ್ತಮ ಸಂಬಂಧ ಕಾಯ್ದುಕೊಳ್ಳದೇ ಇದ್ದದ್ದೇ ಇಮ್ರಾನ್ ಅವರ ಇಂದಿನ ಬಿಕ್ಕಟ್ಟಿಗೆ ಕಾರಣ’ ಎಂದು ತಜ್ಞರು ವಿಶ್ಲೇಷಿಸಿದ್ದಾರೆ. ಪಾಕಿಸ್ತಾನದ ಆಡಳಿತವನ್ನು ಅಲ್ಲಿನ ಸೇನೆ ನಿಯಂತ್ರಿಸುತ್ತದೆ. ಸರ್ಕಾರದ ಯಾವುದೇ ನೀತಿಗಳಲ್ಲಿ ಆಗುವ ಬದಲಾವಣೆಯು, ಸೇನೆಯ ಬಲವನ್ನೂ ಬದಲಿಸುತ್ತದೆ. ಪಾಕಿಸ್ತಾನದ ಆರ್ಥಿಕತೆಯನ್ನು ಜಾಗತಿಕ ಮಾರುಕಟ್ಟೆಗೆ ಮುಕ್ತವಾಗಿಸುವ ನೀತಿಯು ಸೇನೆಯ ಹಿಡಿತವನ್ನು ಕಡಿಮೆ ಮಾಡುತ್ತದೆ ಎಂದು ಭಾವಿಸಲಾಗಿತ್ತು. ಆದರೆ ಆರ್ಥಿಕತೆಯನ್ನು ಬಲಪಡಿಸಲೇಬೇಕು ಎಂಬ ಇಮ್ರಾನ್ ಖಾನ್ ಅವರ ಹಠ, ಸೇನೆಯು ಅವರ ಮೇಲಿನ ವಿಶ್ವಾಸ ಕಳೆದುಕೊಳ್ಳುವಂತೆ ಮಾಡಿತು.

‘ಪ್ರಧಾನಿ ಇಮ್ರಾನ್ ಹೇಳಿದಂತೆಯೇ ಸೇನೆ ನಡೆದುಕೊಳ್ಳುತ್ತದೆ’ ಎಂದು ಸೇನಾ ಮುಖ್ಯಸ್ಥ ಕಮರ್ ಜಾವೇದ್ ಬಾಜ್ವಾ ಈಚೆಗೆ ಹೇಳಿದ್ದರು. ಆದರೆ ಈಗಿನ ಸ್ಥಿತಿ ಸಂಪೂರ್ಣ ಭಿನ್ನವಾಗಿದೆ. ಅವಿಶ್ವಾಸ ನಿರ್ಣಯ ಮಂಡನೆಯ ನಂತರ ಇಮ್ರಾನ್ ಖಾನ್, ಎರಡು ಬಾರಿ ಸೇನಾ ಮುಖ್ಯಸ್ಥರನ್ನು ತಾವೇ ಹೋಗಿ ಭೇಟಿ ಮಾಡಿದ್ದಾರೆ. ಮಂಗಳವಾರ ಸಂಜೆ ಇಮ್ರಾನ್ ಖಾನ್ ಅವರು ದೇಶದ ಜನರನ್ನು ಉದ್ದೇಶಿಸಿ ಭಾಷಣ ಮಾಡಲು ಸಿದ್ಧತೆ ನಡೆಸಿದ್ದರು. ಆದರೆ, ಭಾಷಣ ಮಾಡುವ ಅವಶ್ಯಕತೆ ಇಲ್ಲ ಎಂದು ಕೊನೆಯ ಕ್ಷಣದಲ್ಲಿ ಸೇನೆಯಿಂದ ಸೂಚನೆ ಬಂದಿತು. ಜನರಿಂದ ಚುನಾಯಿತರಾದ ಪ್ರಧಾನಿ ಇಮ್ರಾನ್ ಅವರು, ಸೇನೆಯ ಈ ಸೂಚನೆಯನ್ನು ಚಾಚೂತಪ್ಪದೇ ಪಾಲಿಸಿದರು. ಪಾಕಿಸ್ತಾನದಲ್ಲಿ ಚುನಾಯಿತ ಸರ್ಕಾರಕ್ಕಿಂತ, ಸೇನೆಯೇ ಹೆಚ್ಚು ಪ್ರಬಲ ಎಂಬುದು ಮತ್ತೊಮ್ಮೆ ಸಾಬೀತಾಯಿತು

## ಇಮ್ರಾನ್ ಖಾನ್‌ಗೆ ಮುಳುವಾದ ಆರ್ಥಿಕತೆ



ದೇಶದ ಆರ್ಥಿಕ ಪರಿಸ್ಥಿತಿಯು ಪಾಕಿಸ್ತಾನ ಸರ್ಕಾರವನ್ನು ಪತನದ ಅಂಚಿಗೆ ತಂದು ನಿಲ್ಲಿಸಿದೆ. 2018ರಲ್ಲಿ ‘ನಯಾ ಪಾಕಿಸ್ತಾನ’ದ ಭರವಸೆ ನೀಡಿ ಅಧಿಕಾರಕ್ಕೆ ಬಂದ ಮಾಜಿ ಕ್ರಿಕೆಟಿಗ ಇಮ್ರಾನ್ ಖಾನ್ ನೇತೃತ್ವದ ಸರ್ಕಾರವು ನಾಲ್ಕು ವರ್ಷ ಕಳೆಯುವಷ್ಟರಲ್ಲಿ ಅಲ್ಲಿನ ಜನರಿಗೆ ಹೊರೆ ಎನಿಸಿದೆ. ಜನರು ಪ್ರಮುಖವಾಗಿ ಬೇಡಿಕೆಯಿಟ್ಟಿದ್ದ, ಬೆಲೆಗಳನ್ನು ನಿಯಂತ್ರಿಸುವಲ್ಲಿ ಸರ್ಕಾರ ವಿಫಲವಾಯಿತು.

ಪ್ರಸಕ್ತ ಆರ್ಥಿಕ ವರ್ಷದ ನವೆಂಬರ್–ಫೆಬ್ರುವರಿ ಅವಧಿಯಲ್ಲಿ ಪಾಕಿಸ್ತಾನದ ಹಣದುಬ್ಬರವು ದಾಖಲೆಯ ಶೇ 12.2ಕ್ಕೆ ಏರಿಕೆಯಾಯಿತು. ದೇಶದ ಹದಗೆಟ್ಟಿರುವ ಹಣಕಾಸು ಪರಿಸ್ಥಿತಿಗೆ ಇದು ನಿದರ್ಶನ. ಹಣದುಬ್ಬರ ವಿಪರೀತ ಏರಿದ್ದರಿಂದ ದೇಶದಲ್ಲಿ ಆಹಾರ ಪದಾರ್ಥಗಳು ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ತೀವ್ರವಾಗಿ ಏರಿಕೆಯಾಯಿತು. ಇದರ ಅತ್ಯಂತ ಕೆಟ್ಟ ಪರಿಣಾಮ ಎದುರಿಸಿದ್ದು ದೇಶದ ಬಡಜನರು.

ಕಳೆದ ಜುಲೈ–ಅಕ್ಟೋಬರ್ ಅವಧಿಯಲ್ಲಿ ಶೇ 8.7ರಷ್ಟಿದ್ದ ಹಣದುಬ್ಬರವು ಈ ಪ್ರಮಾಣದಲ್ಲಿ ಏರಿಕೆಯಾಗಲು ತೈಲಬೆಲೆ, ಆಹಾರ, ಅಗತ್ಯ ವಸ್ತುಗಳ ಬೆಲೆ ಏರಿಕೆಯಂತಹ ಅಂತರರಾಷ್ಟ್ರೀಯ ವಿದ್ಯಮಾನಗಳು ಕಾರಣವಾಗಿವೆ. ಈಗ ಉದ್ಭವವಾಗಿರುವ ರಾಜಕೀಯ ಅನಿಶ್ಚಿತತೆಯು ಇನ್ನಷ್ಟು ಬೆಲೆ ಏರಿಕೆಗೆ ಕಾರಣವಾಗಲಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಸರಕು ಮತ್ತು ಸೇವೆಗಳ ರಫ್ತು ಪ್ರಮಾಣವು ಜನವರಿಯಲ್ಲಿ ನಿರೀಕ್ಷೆಗಿಂತ ಕಡಿಮೆ ಮಟ್ಟಕ್ಕೆ ಕುಸಿದಿತ್ತು. ಹಣಕಾಸು ವರ್ಷದ ಏಳು ತಿಂಗಳಲ್ಲಿ ಅನುದಾನಗಳು, ಸಬ್ಸಿಡಿ ಮೇಲಿನ ವೆಚ್ಚ ಏರಿಕೆಯಾಗಿದ್ದು, ಸಾರ್ವಜನಿಕ ವಲಯದ ಅಭಿವೃದ್ಧಿ ಕಾರ್ಯಕ್ರಮಗಳಿಗೂ ಅಧಿಕ ಹಣವನ್ನು ವಿನಿಯೋಗಿಸಲಾಗಿದೆ.

ದೇಶದ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸುವ ಉದ್ದೇಶದಿಂದ ಇಮ್ರಾನ್ ಖಾನ್ ಕೆಲವು ಅಚ್ಚರಿಯ ಕ್ರಮಗಳನ್ನು ತೆಗೆದುಕೊಂಡು ಕೈಸುಟ್ಟುಕೊಂಡರು. ಈ ನಾಲ್ಕು ವರ್ಷಗಳಲ್ಲಿ ಇಮ್ರಾನ್ ಅವರು ನಾಲ್ಕು ಹಣಕಾಸು ಸಚಿವರನ್ನು, 10ಕ್ಕೂ ಹೆಚ್ಚು ಹಣಕಾಸು ಕಾರ್ಯದರ್ಶಿಗಳನ್ನು ನೇಮಿಸಿಕೊಂಡಿದ್ದಾರೆ. ತೆರಿಗೆ ಮುಖ್ಯಸ್ಥರನ್ನು ಆಗಾಗ್ಗೆ ಬದಲಾಯಿಸಿ ಸುದ್ದಿಯಾಗಿದ್ದರು.

**ಸಿಗದ ನೆರವು:** ದೇಶದ ಆರ್ಥಿಕತೆಗೆ ಚೈತನ್ಯ ತುಂಬಲ ಉದ್ದೇಶಿಸಿದ್ದ ಇಮ್ರಾನ್, 2019ರಲ್ಲಿ ಅಂತರರಾಷ್ಟ್ರೀಯ ಹಣಕಾಸು ನಿಧಿಯಿಂದ (ಐಎಂಎಫ್) ಹಣಕಾಸು ನೆರವು ಕೋರಿದ್ದರು. ಐಎಂಎಫ್ ಷರತ್ತುಗಳನ್ನು ಪೂರೈಸಲು ವಿಫಲವಾಗಿದ್ದರಿಂದ ನೆರವು ಸಿಗಲಿಲ್ಲ.

ಕಳೆದ ವರ್ಷ, ತೈಲದರ, ವಿದ್ಯುತ್ ದರಗಳನ್ನು ಏರಿಸುವ ಮೂಲಕ ಇಮ್ರಾನ್ ಖಾನ್ ಅವರು ಬೊಕ್ಕಸ ತುಂಬಿಸಲು ಕೆಲವು ಕಠಿಣ ಕ್ರಮಗಳನ್ನು ಕೈಗೊಂಡಿದ್ದರು. ಇದರಿಂದ, ಜೀವನ ನಡೆಸುವುದೇ ಕಷ್ಟವಾಗಿ, ಜನರ ಆಕ್ರೋಶ ಸ್ಫೋಟಗೊಂಡಿತು. ಹೀಗಾಗಿ ಏರಿಸಿದ್ದ ಬೆಲೆಗಳನ್ನು ಸರ್ಕಾರ ಇಳಿಸಬೇಕಾಯಿತು.

ತಕ್ಷಣಕ್ಕೆ ಅತ್ಯಗತ್ಯವಾಗಿ ಬೇಕಿರುವ 1 ಲಕ್ಷ ಕೋಟಿ ರೂಪಾಯಿ (600 ಕೋಟಿ ಡಾಲರ್) ಆರ್ಥಿಕ ನೆರವು (ಬೇಲ್‌ಔಟ್ ಪ್ಯಾಕೇಜ್) ನೀಡುವಂತೆ ಐಎಂಎಫ್ ಜೊತೆ ಮಾತುಕತೆಯನ್ನು ಸರ್ಕಾರ ಈಗಲೂ ಮುಂದುವರಿಸಿದೆ. ಈ ನೆರವಿನ ಭರವಸೆ ಸಿಗುವ ಮೊದಲೇ ಸರ್ಕಾರವು ಪತನದ ಅಂಚಿಗೆ ಬಂದು ನಿಂತಿದ್ದು, ಐಎಂಎಫ್ ನೆರವು ಡೋಲಾಯಮಾನವಾಗಿದೆ.

### ಮುಂದಿನ ಪ್ರಧಾನಿ ಯಾರು?

2018ರ ಚುನಾವಣೆಯಲ್ಲಿ, 342 ಸದಸ್ಯಬಲದ ಪಾಕಿಸ್ತಾನದ ಕೆಳಮನೆಯಲ್ಲಿ ಇಮ್ರಾನ್ ಖಾನ್ ನೇತೃತ್ವದ ಪಿಟಿಐ ಪಕ್ಷ (ಪಾಕಿಸ್ತಾನ್ ತೆಹ್ರಿಕ್–ಎ–ಇನ್ಸಾಫ್) 155 ಸ್ಥಾನಗಳನ್ನು ಗಳಿಸಿತ್ತು. ಆದರೆ ಬಹುಮತಕ್ಕೆ 172 ಸ್ಥಾನಗಳು ಬೇಕಿದ್ದವು. ಇತರ 6 ಪಕ್ಷಗಳ 23 ಸದಸ್ಯರ ಬೆಂಬಲದೊಂದಿಗೆ ಸರಳ ಬಹುಮತದ ಮೈತ್ರಿ ಸರ್ಕಾರ ಅಸ್ತಿತ್ವಕ್ಕೆ ಬಂದಿತು.

ಆರ್ಥಿಕ ಪರಿಸ್ಥಿತಿ, ಹಣದುಬ್ಬರ, ಬೆಲೆ ಏರಿಕೆ ಮೊದಲಾದ ವಿಚಾರಗಳು ಇಮ್ರಾನ್ ಸರ್ಕಾರವನ್ನು ಇಕ್ಕಟ್ಟಿಗೆ ತಳ್ಳಿದವು. ಈ ಕಾರಣಗಳನ್ನು ಇಟ್ಟುಕೊಂಡು ಇಮ್ರಾನ್ ಖಾನ್ ಪಕ್ಷದ 20ಕ್ಕೂ ಹೆಚ್ಚು ಸದಸ್ಯರು ಸರ್ಕಾರದ ವಿರುದ್ಧ ಬಂಡಾಯ ಎದ್ದರು. ಮೈತ್ರಿಕೂಟದ ಇತರ ಪಕ್ಷಗಳೂ ಸರ್ಕಾರಕ್ಕೆ ನೀಡಿರುವ ಬೆಂಬಲವನ್ನು ವಾಪಸ್ ಪಡೆಯಲು ಮುಂದಾಗಿವೆ. ಈ ಪರಿಸ್ಥಿತಿಯ ಲಾಭ ಪಡೆಯಲು ಮುಂದಾಗಿರುವ ಪಾಕಿಸ್ತಾನದ ಪ್ರತಿಪಕ್ಷಗಳು ಸರ್ಕಾರದ ವಿರುದ್ಧ ಅವಿಶ್ವಾಸ ಗೊತ್ತುವಳಿ ಮಂಡಿಸಿವೆ. ಪಕ್ಷದ ಭಿನ್ನಮತೀಯರು, ಮೈತ್ರಿಪಕ್ಷಗಳು ಹಾಗೂ ಪ್ರತಿಪಕ್ಷಗಳ ಸದಸ್ಯರು ಸೇರಿದಂತೆ 172 ಸಂಸದರು ಇಮ್ರಾನ್ ವಿರುದ್ಧ ಮಂಡಿಸಿರುವ ಅವಿಶ್ವಾಸ ಗೊತ್ತುವಳಿಯನ್ನು ಬೆಂಬಲಿಸಿದರೆ, ಸರ್ಕಾರ ಪತನವಾಗುವುದು ಖಚಿತ.

ದೇಶದ ಪ್ರಬಲ ಸೇನೆಯ ಜೊತೆಗೆ ಇಮ್ರಾನ್ ಖಾನ್ ಅವರ ಹಳಸಿರುವ ಸಂಬಂಧ ಹಾಗೂ ಐಎಸ್‌ಐ ಮುಖ್ಯಸ್ಥರ ನೇಮಕಾತಿ ಕುರಿತ ಅಸಮಾಧಾನಗಳೂ ಅವಿಶ್ವಾಸ ಗೊತ್ತುವಳಿ ಮಂಡನೆಗೆ ಕಾರಣಗಳಾಗಿವೆ.

ಪ್ರತಿಪಕ್ಷ ಪಿಎಂಎಲ್–ಎನ್ ಮುಖ್ಯಸ್ಥ ಶಹಬಾಜ್ ಷರೀಫ್ ಹಾಗೂ ಪಿಪಿಪಿಯ ಬಿಲಾವರ್ ಭುಟ್ಟೊ ಅವರು ಅವಿಶ್ವಾಸ ನಿರ್ಣಯ ಮಂಡನೆಯಲ್ಲಿ ಕೈಜೋಡಿಸಿದ್ದಾರೆ. ಈ ಎರಡೂ ಪಕ್ಷಗಳ ಮೈತ್ರಿ ಸರ್ಕಾರ ಅಧಿಕಾರಕ್ಕೆ ಬರುವ ಸಾಧ್ಯತೆ ಇದೆ. ಶಹಬಾಜ್ ಅವರು ಮಾಜಿ ಪ್ರಧಾನಿ ನವಾಜ್ ಷರೀಫ್ ಅವರ ಸಹೋದರ. ಬಿಲಾವಲ್ ಅವರು ಮಾಜಿ ಪ್ರಧಾನಿ ಬೆನಜೀರ್ ಭುಟ್ಟೋ ಅವರ ಮಗ. ಶಹಬಾಜ್ ಹಾಗೂ ಬಿಲಾವಲ್ ಅವರು ಪ್ರಧಾನಿ ಹುದ್ದೆಯ ಸ್ಪರ್ಧೆಯಲ್ಲಿ ಮುಂಚೂಣಿಯಲ್ಲಿದ್ದಾರೆ.

ಆಧಾರ: ಬಿಬಿಸಿ, ರಾಯಿಟರ್ಸ್, ಪಿಟಿಐ, ಎಎಫ್‌ಪಿ, ಪಾಕಿಸ್ತಾನ ಸಂಸತ್ ಜಾಲತಾಣ

## ವೇದವ್ಯಾಸರ ಶಿವಪುರಾಣಸಾರ





ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 83

### ಶಿವನ ಎಡಪಾರ್ಶ್ವದಲ್ಲಿ ಹುಟ್ಟಿದ ವಿಷ್ಣು

ಶಿವನ ಎಡಪಾರ್ಶ್ವದಿಂದ ಸೃಷ್ಟಿಯಾದ ಪುರುಷನ ಸೌಂದರ್ಯವನ್ನು ನಾರದನಿಗೆ ಬ್ರಹ್ಮ ಹೀಗೆ ವರ್ಣಿಸುತ್ತಾನೆ. ‘ಯಾರಿಗೂ ಸಾಟಿಯಾಗದ ಶ್ಯಾಮಲವಾದ ಶರೀರ. ಕಮಲದಂತಹ ನಯನ. ವಸ್ತ್ರಗಳು ಚಿನ್ನದ ಎಳೆಗಳ ಕುಸುರಿ ಕೆಲಸದಿಂದ ಶೋಭಿಸುತ್ತಿದ್ದವು. ಆತನ ನೀಳವಾದ ತೋಳುಗಳು ಬಹು ಬಲಿಷ್ಠವಾಗಿದ್ದವು.’

ಆ ಸುಂದರಪುರುಷ ಶಿವನಿಗೆ ನಮಸ್ಕರಿಸಿ ‘ಎಲೈ ಸ್ವಾಮಿಯೇ! ನನ್ನ ಹೆಸರು ಏನು? ನಾನು ಮಾಡಬೇಕಾದ ಕೆಲಸ ಯಾವುದು?’ ಅಂತ ಕೇಳಿದ. ಆಗ ಶಂಕರ ‘ನೀನು ಎಲ್ಲಾ ಕಡೆಯಲ್ಲೂ ವ್ಯಾಪಿಸಿರುವುದರಿಂದ ವಿಷ್ಣು ಎಂಬುದಾಗಿ ನಿನ್ನ ಹೆಸರು ಪ್ರಸಿದ್ಧವಾಗುವುದು. ಭಕ್ತರಿಗೆ ಸೌಖ್ಯಗಳನ್ನುಂಟುಮಾಡುವಂಥ ಇನ್ನೂ ಅನೇಕ ಹೆಸರುಗಳು ನಿನಗೆ ಉಂಟಾಗುವುವು. ನೀನು ದೃಢವಾದ ಮನಸ್ಸಿನಿಂದ ಪರಮಸಾಧಕವಾದಂಥ ತಪಸ್ಸನ್ನಾಚರಿಸು’ ಎಂದು ಹೇಳಿ, ತನ್ನ ಶ್ವಾಸಮಾರ್ಗದಿಂದ ವೇದಗಳನ್ನು ವಿಷ್ಣುವಿಗೆ ಉಪದೇಶವಿತ್ತ. ಜ್ಯೋತಿರ್ಮಯನಾಗಿ ಪ್ರಕಾಶಿಸುತ್ತಿದ್ದ ಆ ಪರಮೇಶ್ವರನು ಶಕ್ತಿಯೊಡನೆ ಅಂತರ್ಧಾನವನ್ನು ಹೊಂದಿದ. ಹನ್ನೆರಡು ಸಹಸ್ರ ದೇವವರ್ಷಗಳ ಕಾಲ ತಪಸ್ಸು ಮಾಡಿದರೂ ವಿಷ್ಣುವು ತನಗೆ ಅಪೇಕ್ಷಿತವಾದ ಎಲ್ಲ ಇಷ್ಟಾರ್ಥಗಳನ್ನೂ ಕೊಡುವ ಶಿವನ ದರ್ಶನವನ್ನು ಪಡೆಯಲಾಗಲಿಲ್ಲ. ಇದರಿಂದ ವಿಷ್ಣುವಿನ ಮನಸ್ಸು ಚಿಂತೆಯಲ್ಲಿ ಬೇಯುತ್ತಾ, ಶಿವನನ್ನು ನೆನೆಯುತ್ತಾ ನಾನೀಗ ಏನು ಮಾಡಬೇಕು ಎಂದು ಯೋಚಿಸುತ್ತಿತ್ತು. ಅಷ್ಟರಲ್ಲಿಯೇ, ಈ ಸಂಶಯ ನಿವಾರಣೆಗಾಗಿ ಮರಳಿ ತಪಸ್ಸನ್ನಾಚರಿಸಬೇಕು – ಎಂಬ ಶುಭಕರವಾದ ಮಾತು ಶಿವನಿಂದ ಕೇಳಿಸಿತು.

ಆ ಮಾತನ್ನು ಕೇಳಿದ ವಿಷ್ಣುವು ಪರಬ್ರಹ್ಮಮೂರ್ತಿಯಲ್ಲೇ ನೆಟ್ಟ ಮನಸ್ಸುಳ್ಳವನಾಗಿ ಧ್ಯಾನಿಸುತ್ತಾ, ಬಹಳ ಕಾಲ ಘೋರವಾದ ತಪಸ್ಸನ್ನು ಆಚರಿಸಿದ. ಶಿವನಿಂದ ಸೃಷ್ಟಿಸಲ್ಪಟ್ಟ ಪುರುಷನಾದ ವಿಷ್ಣು ಧ್ಯಾನದಿಂದ ಎಚ್ಚೆತ್ತು ಪ್ರಸನ್ನವಾದ ಮನಸ್ಸಿನಿಂದ, ‘ಅಬ್ಬಾ! ಆ ತತ್ವವೆಂತಹದು’ ಎಂದು ವಿಸ್ಮಯಪಟ್ಟ. ಹೀಗೆ ಬಹುಕಾಲ ತಪಸ್ಸುಮಾಡಿ, ಬಳಲಿ ಬೆಂಡಾಗಿಹೋದ ಆ ವಿಷ್ಣುವಿನ ಅವಯವಗಳಿಂದ ಬಹುವಿಧವಾದ ನೀರು ಧಾರಾಕಾರವಾಗಿ ಶಿವನ ಮಾಯೆಯಿಂದ ಹರಿಯತೊಡಗಿತು. ಆ ನೀರು ಸುತ್ತಲ ಪ್ರದೇಶವನ್ನೆಲ್ಲಾ ವ್ಯಾಪಿಸಿತು. ಮುಟ್ಟಿದೊಡನೆಯೇ ಪಾಪಗಳೆಲ್ಲವನ್ನೂ ಸಂಹರಿಸುವಂತಹ ಆ ನೀರು ಬ್ರಹ್ಮರೂಪವೆನಿಸಿತು. ಆಗ ವಿಷ್ಣುವೆಂಬ ಹೆಸರುಳ್ಳ ಆ ಪುರುಷನು ತುಂಬಾ ಬಳಲಿದವನಾಗಿ ಬಹಳ ಕಾಲ ಶಿವಮಾಯೆಯಿಂದ ಮೈಮರೆತು ಆ ನೀರಿನ ಮೇಲೆಯೇ ಮಲಗಿಬಿಟ್ಟ. ಆಗಲೇ ಆತನಿಗೆ ವೇದಪ್ರತಿವಾದಿತವಾದ ‘ನಾರಾಯಣ’ನೆಂಬ ಹೆಸರು ಉಂಟಾಯಿತು. (ನರನಿಂದ ಅಂದರೆ ಪುರುಷನಿಂದ ಹುಟ್ಟಿದ ನೀರು, ನಾರವೆನಿಸಿತು. ಆ ನಾರವೇ ಅಯನವಾಗಿ ಎಂದರೆ; ಮಾರ್ಗವಾಗಿ ಉಳ್ಳವನು ನಾರಾಯಣ). ಅಂದರೆ ಶಿವನ ಶಕ್ತಿಯಿಂದ ಹುಟ್ಟಿದ ನಾರಾಯಣ ಎಂದರ್ಥ.’

‘ಈ ನಡುವೆ, ಮಹಾತ್ಮನಾದ ಆ ಪ್ರಾಕೃತಪುರುಷನ ದೆಸೆಯಿಂದ ಇಪ್ಪತ್ತನಾಲ್ಕು ತತ್ವಗಳು ಹುಟ್ಟಿದವು. ಪ್ರಕೃತಿಯಿಂದ ಮಹತ್ತೆಂಬುದು ಹುಟ್ಟಿತು. ಆ ಮಹತ್ತಿನಿಂದ ಸತ್ವ, ರಜಸ್ಸು, ತಪಸ್ಸುಗಳೆಂಬ ಗುಣಗಳು ಹುಟ್ಟಿದವು. ಈ ಗುಣತ್ರಯದಿಂದ, ಸಾತ್ವಿಕಾಹಂಕಾರ, ರಾಜಸಾಹಂಕಾರ, ತಾಮಸಾಹಂಕಾರ ಎಂಬ ಮೂರು ಬಗೆಯ ಅಹಂಕಾರಗಳು ಹುಟ್ಟಿದವು. ಆ ಅಹಂಕಾರದಿಂದ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ಐದು ತನ್ಮಾತ್ರಗಳೂ; ಈ ತನ್ಮಾತ್ರಗಳಿಂದ ಆಕಾಶ, ವಾಯು, ತೇಜಸ್ಸು, ಜಲ, ಭೂಮಿ ಎಂಬ ಪಂಚಭೂತಗಳೂ ಹುಟ್ಟಿದವು. ಆಗಲೇ, ಪಂಚಭೌತಿಕಗಳಾದ ಶ್ರೋತ್ರ, ತ್ವಕ್, ಚಕ್ಷುಸ್ಸು, ಜಿಹ್ವಾ, ಘ್ರಾಣಗಳೆಂಬ ಐದು ಜ್ಞಾನೇಂದ್ರಿಯಗಳು ಹುಟ್ಟಿದವು. ಪ್ರಕೃತಿ, ಮಹತ್ತು, ಗುಣಗಳು, ಅಹಂಕಾರ ಮತ್ತು ತನ್ಮಾತ್ರಗಳೈದು, ಪಂಚಭೂತಗಳೈದು, ಜ್ಞಾನೇಂದ್ರಿಯಗಳೈದು, ಕರ್ಮೇಂದ್ರಿಯಗಳೈದು ಸೇರಿ ಇಪ್ಪತ್ತನಾಲ್ಕು ತತ್ವಗಳು. ಪುರುಷನೊಬ್ಬನ ಹೊರತು, ಪ್ರಕೃತಿ ಮೊದಲುಗೊಂಡು ಉಳಿದುದೆಲ್ಲವೂ ಜಡವಾಗಿವೆ ಅಂತ ತಿಳಿಯಬೇಕು. ಶಿವನ ಇಚ್ಛೆಯಿಂದ ನಾರಾಯಣನು ಇವೆಲ್ಲವನ್ನೂ ತೆಗೆದುಕೊಂಡು ಬ್ರಹ್ಮರೂಪದ ಆ ನೀರಿನ ಮೇಲೆ ಮಲಗಿದ್ದನು’ ಎಂದು ಬ್ರಹ್ಮ ಹೇಳುವಲ್ಲಿಗೆ ವಿಷ್ಣುವಿನ ಉತ್ಪತ್ತಿ ವರ್ಣನವೆಂಬ ಆರನೆಯ ಅಧ್ಯಾಯ ಮುಗಿಯಿತು.

## ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಇರುವ 29 ನಿಮಿಷಗಳ ವಿಡಿಯೊವೊಂದು ವೈರಲ್ ಆಗಿದೆ. ಆದಿತ್ಯನಾಥ ಅವರು ಬೂದಿಯನ್ನು ತಮ್ಮ ಹಣೆಗೆ ಹಚ್ಚಿಕೊಳ್ಳುವುದು ಮತ್ತು ಇತರರ ಹಣೆಗೆ ಹಚ್ಚುವುದು ವಿಡಿಯೊದಲ್ಲಿ ಸೆರೆ ಆಗಿದೆ. ಉತ್ತರ ಪ್ರದೇಶದ ಯೋಧರೊಬ್ಬರು ಹುತಾತ್ಮರಾದರು. ಯೋಧನನ್ನು ಸಂಸ್ಕಾರ ಮಾಡಿದ ಬೂದಿಯನ್ನು ಹಣೆಗೆ ಹಚ್ಚಿಕೊಳ್ಳುವ ಮೂಲಕ ಯೋಧನಿಗೆ ಅವರು ಗೌರವ ತೋರಿದ್ದಾರೆ. ಯೋಗಿ ಅವರು ಬಹುದೊಡ್ಡ ಸಂತರು ಎಂಬ ಮಾಹಿತಿ ಜೊತೆಗೆ ಈ ವಿಡಿಯೋವನ್ನು ಹಂಚಿಕೊಳ್ಳಲಾಗಿದೆ.




ವಿಡಿಯೊ ಜೊತೆ ಹಂಚಿಕೊಳ್ಳುತ್ತಿರುವ ಮಾಹಿತಿಯು ಸುಳ್ಳು ಎಂದು ದಿ ಲಾಜಿಕಲ್ ಇಂಡಿಯನ್ ವೇದಿಕೆ ವರದಿ ಮಾಡಿದೆ. ಈ ವಿಡಿಯೊವನ್ನು ಪ್ರಾಚಿ ಸಾಧ್ವಿ ಅವರು ಟ್ವೀಟ್ ಮಾಡಿದ್ದಾರೆ. ‘ನಮ್ಮ ಸನಾತನ ಧರ್ಮದಲ್ಲಿ ಹೋಲಿಕಾ ದಹನದ ಬೂದಿಯನ್ನು ಹಣೆಗೆ ಹಚ್ಚಿದರೆ ದೇಹ ತಂಪಾಗುತ್ತದೆ’ ಎಂದು ಅವರು ವಿಡಿಯೊಗೆ ಅಡಿ ಬರಹ ನೀಡಿದ್ದಾರೆ. ಯೋಗಿ ಅವರು ಗೋರಖಪುರದಲ್ಲಿ ನರಸಿಂಹ ಉತ್ಸವದಲ್ಲಿ ಪಾಲ್ಗೊಂಡು ಬಳಿಕ ಹೋಲಿಕಾ ಬೂದಿಯನ್ನು ಹಣೆಗೆ ಹಚ್ಚಿಕೊಂಡಿದ್ದು ಪ್ರಮುಖ ಸುದ್ದಿ ವಾಹಿನಿಗಳಲ್ಲಿ 2022ರ ಮಾರ್ಚ್ 19ರಂದು ವರದಿ ಆಗಿದೆ.

## ಗುಂಡಣ್ಣ




## ಬೆರಗಿನ ಬೆಳಕು

ಗುರುರಾಜ ಕರಜಗಿ



### ಯತ್ನ-ದೈವಗಳ ಅನ್ಯೋನ್ಯತೆ

**ಬಿತ್ತ ಮಳೆಗಳವೋಲು ಯತ್ನ ದೈವಿಕ ನಮಗೆ |**
**ಯುಕ್ತದೊಳಗೆರಡುಮನುವಾಗೆ ಬೆಳೆ ಹುಲುಸು ||**
**ಯತ್ನ ಬಿಟ್ಟರೆ ಲೋಪ, ದೈವ ತಾಂ ಬಿಡೆ ತಾಪ |**
**ಗೊತ್ತಿಲ್ಲ ಫಲದ ಬಗೆ- ಮಂಕುತಿಮ್ಮ || 597 ||**

**ಪದ-ಅರ್ಥ:** ಬಿತ್ತ = ಬಿತ್ತನೆ, ಮಳೆಗಳವೋಲು = -ಮಳೆಗಳಂತೆ, ಯತ್ನ = ಪ್ರಯತ್ನ, ದೈವಿಕ = ದೈವ, ಯುಕ್ತದೊಳಗೆರಡುಮನುವಾಗೆ = ಯುಕ್ತದೊಳಗೆ (ಸರಿಯಾದ ರೀತಿಯಲ್ಲಿ) + ಎರಡುಮ್(ಎರಡೂ-) + ಅನುವಾಗೆ(ಹೊಂದಿದರೆ), ಲೋಪ = ದೋಷ

**ವಾಚ್ಯಾರ್ಥ:** ಸರಿಯಾದ ಬೀಜಗಳನ್ನು ಬಿತ್ತಿದಾಗ, ಸರಿಯಾದ ಪ್ರಮಾಣದಲ್ಲಿ ಮಳೆಯಾದರೆ ಹೇಗೆ ಬೆಳೆ ಹುಲಸಾಗಿ ಬರುತ್ತದೋ ಹಾಗೆ ನಮಗೆ ಪ್ರಯತ್ನ ಮತ್ತು ದೈವಗಳು ಸರಿಯಾಗಿ ಕೂಡಿ ಬರಬೇಕು. ಪ್ರಯತ್ನ ಮಾಡುವುದನ್ನು ಬಿಟ್ಟರೆ ದೋಷ. ದೈವ ಅನುಕೂಲಿಸದೆ ಹೋದರೆ ದುಃಖ. ಫಲದ ರೀತಿ ಹೀಗೇ ಎಂದು ಹೇಳಲಾಗದು.

ವಿವರಣೆ: ಬೆಳೆ ಬರುವುದು ಸುಲಭದ ಕಾರ್ಯವಲ್ಲ. ಮೊದಲು ಉತ್ತಮವಾದ ಬೀಜಗಳನ್ನು ಆರಿಸಬೇಕು. ನೆಲ ಹದವಾಗಬೇಕು. ಅದಕ್ಕೆ ತಕ್ಕಷ್ಟು ಗೊಬ್ಬರ ಹಾಕಿರಬೇಕು. ನೆಲದಲ್ಲಿ ಬೀಜಗಳನ್ನು ಬಿತ್ತುವುದು ಪುರುಷ ಪ್ರಯತ್ನ. ಅದರಲ್ಲಿ ಸ್ವಲ್ಪವೂ ಕೊರತೆಯಾಗಬಾರದು. ಮುಂದೆ ಸಕಾಲದಲ್ಲಿ, ಸಾಕಷ್ಟು ಪ್ರಮಾಣದಲ್ಲಿ ಮಳೆ ಬರುವುದು ದೈವಕೃಪೆ. ಕೆಲವೊಮ್ಮೆ ಮಳೆ ಸರಿಯಾಗಿ ಆಗದೆ, ಹಾಕಿದ ಬೀಜ ಕೂಡ ಸುಟ್ಟು ಹೋಗುತ್ತದೆ. ಮತ್ತೆ ಕೆಲವು ಬಾರಿ ವಿಪರೀತ ಮಳೆಯಾಗಿ ಬೀಜ ನೆಲದಲ್ಲೇ ಕೊಳೆತು ಹೋಗುತ್ತದೆ. ಅದು ನಮ್ಮ ಕೈಯಲ್ಲಿಲ್ಲ. ಹೀಗೆ ಮನುಷ್ಯ ಪ್ರಯತ್ನ ಮತ್ತು ದೈವಕೃಪೆ ಒಂದಕ್ಕೊಂದು ಅನುಕೂಲವಾಗಿ ಬಂದರೆ ಹುಲುಸಾದ ಬೆಳೆ ಬರುತ್ತದೆ, ರೈತನ ಹೊಟ್ಟೆ ತುಂಬುತ್ತದೆ.

ನಮ್ಮ ಬದುಕಿನಲ್ಲೂ ಹಾಗೆಯೇ ದೈವ ಮತ್ತು ಪ್ರಯತ್ನಗಳು ಅನ್ಯೋನ್ಯವಾಗಿ ಬಂದರೆ ಜೀವನವೊಂದು ಯಶಸ್ಸಿನ ಗಾಥೆಯಾಗುತ್ತದೆ. ಯಾವುದಾದರೂ ಒಂದರ ಕೊರತೆಯಾದರೂ ಸಫಲತೆ ಮರೀಚಿಕೆಯೇ. ಒಂದು ಮನೆಯಲ್ಲಿ ಯಜಮಾನರಿಗೋ ಪುಟ್ಟ ಮಗುವಿಗೋ ಪ್ರಬಲವಾದ ಕಾಯಿಲೆಯಾಗಿದೆ ಎಂದಿಟ್ಟುಕೊಳ್ಳಿ. ಮನೆಯಾಕೆಗೆ ದೈವದ ಮೇಲೆ ಅತೀವ ನಂಬಿಕೆ. ಅದಕ್ಕೆ ಸರಿಯಾಗಿ ಯಾರೋ ಒಬ್ಬರು ಇಂಥ ತೀರ್ಥಕ್ಷೇತ್ರಕ್ಕೆ ಹೋಗಿ, ಹರಕೆ ಹೊತ್ತರೆ ಗುಣವಾಗುತ್ತದೆ ಎಂದು ಹೇಳುತ್ತಾರೆ. ಆಗ ಆಕೆ ರೋಗಿಯ ಬಳಿ ಇರದೆ ಪೂಜೆ, ಹರಕೆ ಮಾಡಿದರೆ ಅದು ಸರಿಯಾದ ಕರ್ತವ್ಯವಾಗುತ್ತದೆಯೇ?. ‘ಅವರು ಹೇಳಿದರೆಂದು ಹೀಗೆ ಮಾಡಿದೆ’, ‘ಭಗವಂತನ ಮೇಲೆ ಭಾರ ಹಾಕಿ ಹೋಗಿಬಿಟ್ಟೆ’ ಎಂದು ವಾದಿಸಿ ತನ್ನ ಸ್ವಂತದ ಉತ್ತರದಾಯಿತ್ವವನ್ನು ತಪ್ಪಿಸಿಕೊಳ್ಳುವುದು ಸರಿಯಲ್ಲ.

ದೇವರು ಫಲ ಕೊಟ್ಟಾನು ಆದರೆ ಪ್ರಯತ್ನ ಮಾಡುವವನು ಮನುಷ್ಯ. ತನ್ನ ಕೆಲಸವನ್ನು ಸರಿಯಾಗಿ ಮಾಡದೆ ಎಲ್ಲವನ್ನೂ ದೈವದ ಮೇಲೆ ಹಾಕುವುದು ಸಾಧುವಲ್ಲ. ಅಂತೆಯೇ ತಾನು ಪರಿಪೂರ್ಣ, ದೈವದ ಸಹಾಯ ನನಗೇಕೆ ಎಂದು ಅಹಂಕಾರದಿಂದ ಮೆರೆಯುವುದೂ ಸರಿಯಾದ ದಾರಿಯಲ್ಲ. ಅದಕ್ಕೇ ಭಗವದ್ಗೀತೆಯಲ್ಲಿ ಕೃಷ್ಣ, ‘ಎಲ್ಲ ಧರ್ಮಗಳನ್ನು ತೊರೆದುಬಿಟ್ಟು ನನ್ನಲ್ಲೇ ಶರಣಾಗಿ ಬಿಡು’ ಎಂದು ಹೇಳುತ್ತಲೇ ‘ತಸ್ಮಾತ್ ಯುದ್ಧಸ್ವ’ ಯುದ್ಧಕ್ಕೆ ಸಿದ್ಧನಾಗು ಎನ್ನುತ್ತಾನೆ. ಯುದ್ಧ ಮಾಡುವುದು ಪ್ರಯತ್ನ, ಅದಕ್ಕೆ ದೈವ ಸಮ್ಮತಿ ನೀಡಿದರೆ ಯಶ. ಪ್ರಯತ್ನ ಮಾಡದಿದ್ದರೆ ದೋಷ. ದೈವ ಬೆಂಬಲವಾಗಿ ನಿಲ್ಲದಿದ್ದರೆ ತಾಪ. ಅದನ್ನೇ ಕಗ್ಗ ‘ಫಲದ ಬಗೆ ತಿಳಿದಿಲ್ಲ’ ಎನ್ನುತ್ತದೆ. ಹಾಗೆಂದರೆ ಯತ್ನ ಮತ್ತು ದೈವಗಳ ಅನುಕೂಲವೇ ಫಲಕ್ಕೆ ಕಾರಣ. ಎರಡೂ ಬೇಕು.

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಏಪ್ರಿಲ್ 1, 2022

**ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ –ಶಿಶಿರ ಋತು ಮೀನ ಮಾಸದ 18 ನೇ ದಿನ ತಿಥಿ:** (ಫಾಲ್ಗುಣ ಕೃಷ್ಣ) ಅಮಾವಾಸ್ಯೆ ಗಂ. 11-54 ನಕ್ಷತ್ರ: ಉತ್ತರಾಭಾದ್ರಾ ಗಂ. 10-40 ಯೋಗ: ಬ್ರಹ್ಮ ಗಂ. 09-36, ಕರಣ: ನಾಗವಾನ್ ಗಂ. 11-54. ರಾಹುಕಾಲ : ಬೆಳಿಗ್ಗೆ 10:30–12:00 ಸೂರ್ಯೋದಯ : 06-30 ಸೂರ್ಯಾಸ್ತ : 06-39 ಮುಸ್ಲಿಂ ದಿನಾಂಕ : 28 ಶಬನ್ ಅದೃಷ್ಟ ಸಂಖ್ಯೆ: 3, 6

**ಮೇಷ:** ಆತುರದಲ್ಲಿ ತಪ್ಪು ನಿರ್ಧಾರಗಳನ್ನು ತೆಗೆದುಕೊಳ್ಳದಂತೆ ಮಗನಿಗೆ ತಿಳಿಸುವುದು ಉತ್ತಮ. ಸಂಸಾರ ನಿರ್ವಹಣೆಗಾಗಿ ಅಧಿಕ ಹಣ ವ್ಯಯಿಸುವಿರಿ. ಗೃಹ ಕೈಗಾರಿಕೆ ಕೆಲಸಗಳಲ್ಲಿ ಮನೆಯವರ ಪರಿಶ್ರಮ ಸಾರ್ಥಕವೆನಿಸುವುದು.

**ವೃಷಭ:** ಹಣಕಾಸಿನ ಪರಿಸ್ಥಿತಿಯು ನಿಮ್ಮ ಆಲೋಚನೆಗಿಂತಲೂ ಮಿಗಿಲಾಗಿ ನಿಯಂತ್ರಣ ತಪ್ಪಿಹೋಗುವುದು. ಕೆಲಸ ಕಾರ್ಯಗಳಿಗೆ ಬೇಕಾದ ಸೂಕ್ತ ವ್ಯಕ್ತಿಯನ್ನು ಹುಡುಕುವಲ್ಲಿ ವಿಫಲರಾಗುವ ಮುನ್ಸೂಚನೆ ಸಿಗುವುದು.

**ಮಿಥುನ:** ಸಹೋದರರಲ್ಲಿ ಸಂಬಂಧಗಳು ಗಟ್ಟಿಗೊಂಡು ಸುರಕ್ಷತೆಯ ಭಾವ ಉಂಟಾಗುವುದು. ಉದ್ಯಮಿಗಳಿಗೆ ಅನುಕೂಲಕರ ಸನ್ನಿವೇಷ ನಿರ್ಮಾಣವಾಗಲಿದೆ. ಭೂ ಸಂಬಂಧಿತ ಕೆಲಸದಲ್ಲಿ ವ್ಯವಹಾರಗಳಿಂದ ಹೆಚ್ಚಿನ ಲಾಭ.

**ಕರ್ಕಾಟಕ:** ರಫ್ತು ವ್ಯಾಪಾರಗಳಲ್ಲಿ ಹೇರಳ ಲಾಭ ಮತ್ತು ತಲೆಬಿಸಿಯ ವಾತಾವರಣಗಳೆರಡೂ ಇರುವುದು. ತಿಳಿ ಮನಸ್ಸಿನಿಂದ ಸಮಸ್ಯೆಗಳಿಗೆ ಉತ್ತರ ಸಿಗುವುದು. ಅನಿರೀಕ್ಷಿತ ಪ್ರಯಾಣ ಬದುಕಿನ ಹೊಸ ದಾರಿಗೆ ಕಾರಣವಾಗಲಿದೆ.

**ಸಿಂಹ:** ಆತುರದಲ್ಲಿ ತೆಗೆದುಕೊಳ್ಳುವ ನಿರ್ಧಾರಗಳಿಂದ ಪಶ್ಚಾತ್ತಾಪ ಪಡಬೇಕಾಗುವುದು. ರಾಜಕೀಯ ವಲಯದ ಕಾರ್ಯಕರ್ತರಿಗೆ ಮುನ್ನಡೆಯುವ ಅವಕಾಶಗಳು ಕೈತಪ್ಪುವ ಸಾಧ್ಯತೆ.

**ಕನ್ಯಾ:** ಹಿಂದಿನ ಸೋಲು ನಿಮ್ಮನ್ನು ಬಾಧಿಸುತ್ತಿದ್ದರೂ ಈ ದಿನ ಮರಳಿ ಪ್ರಯತ್ನ ಮಾಡುವುದರಿಂದ ಜಯಶಾಲಿಯಾಗಬಹುದು. ಹೆಂಡತಿಯ ಆರೋಗ್ಯದಲ್ಲಿ ವ್ಯತ್ಯಾಸಗಳಾಗಬಹುದು. ಹಣದ ಅಡಚಣೆ ಇರುವುದಿಲ್ಲ.

**ತುಲಾ:** ಎಲ್ಲವನ್ನು ಮಾಡಬಲ್ಲೆನೆಂಬ ಹುಮ್ಮಸ್ಸು ನಿಮ್ಮಲ್ಲಿ ಬಂದಿದೆ. ಇದರಿಂದಾಗಿ ಸುಲಭವಾಗಿ ಕೆಲಸ ಪೂರೈಸುವಿರಿ. ತಂದೆಯ ಅಭಿಪ್ರಾಯಗಳಿಗೆ ಬೆಲೆ ಕೊಡಿ. ಆಂಜನೇಯನ ಸೇವೆ ಮಾಡುವುದರಿಂದ ಗೊಂದಲ ನಿವಾರಣೆ.

**ವೃಶ್ಚಿಕ:** ನಿಮಗೆ ಹೂಡಿಕೆಯಿಂದ ಅಧಿಕ ಲಾಭ ಬಂದಿರುವ ಸುದ್ದಿ ತಿಳಿದು ಅತೀವ ಸಂತಸ. ಹವ್ಯಾಸಿ ಛಾಯಾಗ್ರಾಹಕರಿಗೆ ಪ್ರಶಸ್ತಿ ಅಥವಾ ಸಮಾಜದಲ್ಲಿ ಹೆಸರು ಲಭಿಸಲಿದೆ. ವೈದ್ಯರು ನೀಡಿದ ಸಲಹೆಯನ್ನು ಚಾಚೂ ತಪ್ಪದೆ ಆಚರಿಸಿ.

**ಧನು:** ಪರಿಶ್ರಮಕ್ಕೆ ತಕ್ಕಂಥಹ ಆದಾಯವಿಲ್ಲದೆ ಸೊರಗಿರುವ ನಿಮಗೆ ಹಲವಾರು ಕನಸುಗಳು ಈಡೇರುವ ಅವಕಾಶವನ್ನು ಅಪರಿಚಿತ ವ್ಯಕ್ತಿ ತೋರುವರು. ಮಹಿಳೆಯರಿಗೆ ಋಣಾತ್ಮಕ ಚಿಂತನೆಯಿಂದ ಆರೋಗ್ಯ ಹಾಳು.

**ಮಕರ:** ಪಾಲಕರಾಗುವ ಸುದ್ದಿ ತಿಳಿದು ಅತೀವ ಸಂತಸ. ರಾಸಾಯನಿಕ ಔಷಧಿಗಳ ಬಳಕೆಗಿಂತ ತೈಲಗಳ ಲೇಪನದಂತಹ ಚಿಕಿತ್ಸೆ ಮಾಡಿಕೊಳ್ಳುವುದರಿಂದ ಕಾಲು ನೋವು ನಿವಾರಣೆ. ವ್ಯಾಪಾರಿಗಳಿಗೆ ಸಾಧಾರಣ ಲಾಭ.

**ಕುಂಭ:** ವೃತ್ತಿಯಲ್ಲಿ ಅನುಭವ ಹೊಂದಿದವರಿಂದ ಬೈಗುಳ. ಸ್ಪರ್ಧಾತ್ಮಕ ಪರೀಕ್ಷೆಯನ್ನು ಎದುರಿಸಲು ಅಧ್ಯಯನ ಅಗತ್ಯ. ಆತ್ಮೀಯ ಸ್ನೇಹಿತರ ಸಂಪರ್ಕದಿಂದ ಜೀವನ ನಡೆಸಲು ಬೇಕಾದ ಉಪಾಯವನ್ನು ಹೊಂದುವಿರಿ.

**ಮೀನ:** ಔಷಧಿ, ರಸಗೊಬ್ಬರ ಮತ್ತು ಕೀಟನಾಶಕಗಳಂತಹ ರಾಸಾಯನಿಕ ವಸ್ತುಗಳನ್ನು ವ್ಯಾಪಾರ ಮಾಡುವವರಿಗೆ ಲಾಭದ ಜೊತೆ ಆಯಾಸವೂ ಕಾಡಲಿದೆ. ಆರೋಗ್ಯ ಮತ್ತು ಧನವ್ಯಯದಲ್ಲಿ ಗಮನವಿರಲಿ.

## ಪದಬಂಧ 4915


– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**

1.ಪ್ರತಿಕೂಲವಾದದ್ದು ಇದು (3)
4.ಕರುವಿನಲ್ಲಿ ಅಶ್ರು ಕಾಣುತ್ತಿದೆಯೇ? (3)
6.ನೀರಿನಿಂದಾದ ಅನಿಲ (5)
7. ಬುನಾದಿಯಿಲ್ಲಿ ಉಲ್ಟಾ ಪಲ್ಟಾ ಆಗಿದೆ (2)
9.ಮಾತುಲನಾಡಿದ ನುಡಿ (2)
10.ನಾರೀಕೇಳದ ಹತ್ತಿರವಿರುವ ಕೊಳವೆ (2)
11.ಜನನಿ ನುಡಿದ ಸತ್ಯ (2)
13.ವ್ಯಾಕರಣದಲ್ಲಿ ವ್ಯಕ್ತಿಯ ಗುಣವನ್ನು ತಿಳಿಸುವ ಪದ (5)
16.ಸೀಸೆಯ ಮುಚ್ಚಳವಿಲ್ಲಿ ಉಲ್ಟಾ ಆಗಿದೆ (3)
17.ರಕ್ತವನ್ನು ಹೀಗೆನ್ನಿ (3)

**ಮೇಲಿಂದ ಕೆಳಕ್ಕೆ**

1.ನಿಯಮದಂತೆ ಕನ್ನಡಿಗನು ಮಾಡಿದ ಎಕ್ಸ್‌ಚೇಂಜ್! (4)
2. ನಿಜವಾಗಿಯೂ ಖನಿಯಲ್ಲಿ ಸಿಕ್ಕಿದುದು (3)
3.ಸ್ವಭಾವ ಸಿದ್ಧವಾದುದು (3)
4.ನಿಂದೆ ಹೀಗೆ ಬಂದಿದೆ (3)
5.ದೃಢಪಡಿಸುವ ಸಾಧನ (4)
8.ಭೂಮಿಯ ಕೆಳಗಿನ ಲೋಕಗಳಲ್ಲಿ ಇದು ಒಂದು (3)
9.ಈಕೆ ಹೆಂಗಸು (3)
10.ಶ್ವಾನದ ಹತ್ತಿರ ಬೆಳೆದ ಅಣಬೆ (4)
12.ವಾರದ ಕೊನೆಗೆ ಧರಿಸಿದ ಯಜ್ಞೋಪವೀತ (4)
13.ಮುಳ್ಳುಗಳ ನಡುವೆ ಅರಳುವ ಹೂ (3)
14.ಮುಪ್ಪು ಹೀಗೆ ಬಂದಿದೆ (3)
15.ಬೆನ್ನೆಲುಬಿರುವ ಪ್ರಾಣಿ (3)



### 4914ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
3.ಮನೋಗತ 5.ರೂಪಾಂತರ
6.ಅಡಿ 7.ಗಡಿಯಾರ
10.ಪಾಕಶಾಲೆ 12.ವ್ಯಥೆ
14.ಸಂಚಾಲಕ 15.ತಾರುಮಾರು

**ಮೇಲಿಂದ ಕೆಳಕ್ಕೆ**
1.ಜರೂರು 2.ಅಂತರಂಗ
3.ಮನ್ವಂತರ 4.ತಕ್ಕಡಿ
6.ಅಬ್ಧಿ 8.ಯಾಚಕ
9.ಕಥೆ 10.ಪಾಪಭೀರು
11.ಲೆಕ್ಕಾಚಾರ 12.ವ್ಯಲತಾ
13.ಸೌಕರ್ಯ

## ಸುಡೊಕು 5301

| | | | | | | | | |
|---|---|---|---|---|---|---|---|---|
| | | | | 9 | | | | 8 |
| | 1 | 2 | | 3 | | | 6 | |
| | | 7 | 4 | | | 3 | | 9 |
| 2 | 9 | | | | | 6 | | |
| 1 | 4 | | | | | | | 2 |
| | | | 1 | | | | 9 | 4 |
| 3 | | 9 | | | 5 | | 7 | |
| | 8 | | | 1 | | 9 | | 3 |
| 4 | | 1 | 3 | | 9 | | 8 | |

### ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 5300 ಸುಡೊಕು

| | | | | | | | | |
|---|---|---|---|---|---|---|---|---|
| 3 | 4 | 8 | 2 | 7 | 9 | 6 | 5 | 1 |
| 9 | 6 | 1 | 5 | 8 | 3 | 2 | 7 | 4 |
| 5 | 7 | 2 | 1 | 6 | 4 | 3 | 9 | 8 |
| 6 | 9 | 4 | 7 | 3 | 5 | 1 | 8 | 2 |
| 2 | 8 | 5 | 6 | 9 | 1 | 7 | 4 | 3 |
| 1 | 3 | 7 | 4 | 2 | 8 | 9 | 6 | 5 |
| 8 | 5 | 9 | 3 | 1 | 6 | 4 | 2 | 7 |
| 7 | 1 | 6 | 8 | 4 | 2 | 5 | 3 | 9 |
| 4 | 2 | 3 | 9 | 5 | 7 | 8 | 1 | 6 |

ಇಟಲಿ ಮಧ್ಯಸ್ಥಿಕೆಯಲ್ಲಿ ಶಾಂತಿ ಒಪ್ಪಂದ ಏರ್ಪಡುವ ನಿರೀಕ್ಷೆ; ರಷ್ಯಾ ದಾಳಿ ಇನ್ನೂ ನಿಂತಿಲ್ಲ– ನ್ಯಾಟೊ ಆರೋಪ

# ರಷ್ಯಾ– ಉಕ್ರೇನ್ ಇಂದು ಮತ್ತೆ ಮಾತುಕತೆ

**ಇಸ್ತಾಂಬುಲ್/ ಕೀವ್ (ಎಪಿ):** ಸಂಭವನೀಯ ಶಾಂತಿ ಒಪ್ಪಂದಕ್ಕಾಗಿ ಉಕ್ರೇನ್ ಮತ್ತು ರಷ್ಯಾ ನಡುವೆ ಮಾತುಕತೆ ಶುಕ್ರವಾರ ವಿಡಿಯೊ ಮೂಲಕ ಪುನರಾರಂಭವಾಗಲಿದೆ ಎಂದು ಉಕ್ರೇನ್ ನಿಯೋಗದ ಮುಖ್ಯಸ್ಥ ಡೇವಿಡ್ ಅರಾಖಮಿಯಾ ತಿಳಿಸಿದರು.

‘ವಿಡಿಯೊ ಮೂಲಕ ನಡೆದ ಸಭೆಯ ಫಲವಾಗಿ ಎರಡು ವಾರಗಳ ನಂತರ ಮಂಗಳವಾರ ಟರ್ಕಿಯ ಇಸ್ತಾಂಬುಲ್‌ನಲ್ಲಿ ಉಭಯ ರಾಷ್ಟ್ರಗಳ ನಿಯೋಗಗಳು ಖುದ್ದು ಭೇಟಿಯಾದವು. ಸಂಘರ್ಷ ಕೊನೆಗೊಳಿಸಿ ಶಾಂತಿ ಒಪ್ಪಂದಕ್ಕೆ ಬರುವ ಸಾಧ್ಯತೆಗಳು ಗೋಚರಿಸುತ್ತಿವೆ’ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ರಷ್ಯಾದ ಬಹು ವರ್ಷಗಳ ಬೇಡಿಕೆಯಂತೆ, ನ್ಯಾಟೊ ಸೇರುವುದನ್ನು ಉಕ್ರೇನ್ ಕೈಬಿಡಲಿದೆ. ಅಲ್ಲದೇ, ಇತರ ರಾಷ್ಟ್ರಗಳಿಂದ ಭದ್ರತಾ ಖಾತ್ರಿ ಸಿಕ್ಕಿದರೆ ತಟಸ್ಥ ರಾಷ್ಟ್ರವಾಗಿ ಉಳಿಯಲೂ ಸಿದ್ಧವಿದೆ ಎಂದು ಉಕ್ರೇನ್ ನಿಯೋಗ ಸಭೆಯಲ್ಲಿ ವಿಷಯ ಪ್ರಸ್ತಾಪಿಸಿತು. ಈ ಪ್ರಸ್ತಾಪಕ್ಕೆ ರಷ್ಯಾದ ರಾಜತಾಂತ್ರಿಕರು ಸಕಾರಾತ್ಮಕವಾಗಿ ಸ್ಪಂದಿಸಿದರು ಎಂದು ಅವರು ಹೇಳಿದರು.

**ನಾಗರಿಕರ ಸ್ಥಳಾಂತರಕ್ಕೆ ರೆಡ್‌ಕ್ರಾಸ್ ನೇತೃತ್ವ:** ರಷ್ಯಾ ಪಡೆಗಳು ಮುತ್ತಿಗೆಹಾಕಿರುವ ಬಂದರು ನಗರ ಮರಿಯುಪೋಲ್‌ನಲ್ಲಿ ಸಿಲುಕಿರುವ ನಾಗರಿಕರ ಸ್ಥಳಾಂತರಕ್ಕೆ ರೆಡ್‌ಕ್ರಾಸ್ ಸಂಸ್ಥೆಯ ಬೆಂಗಾವಲು ಪಡೆಗಳು ಗುರುವಾರ ಮರಿಯುಪೋಲ್‌ಗೆ ತೆರಳಿವೆ.

ಆದರೆ, ಉಕ್ರೇನ್‌ನ ಹಲವು ಭಾಗಗಳಲ್ಲಿ ದಾಳಿ ಅಂತ್ಯಗೊಳಿಸಲು ರಷ್ಯಾ ಮತ್ತೊಂದು ಸುತ್ತಿನ ಮಾತುಕತೆಯ ಫಲಿತಾಂಶವನ್ನು ಎದುರು ನೋಡುತ್ತಿದೆ.

ಈ ಪ್ರದೇಶದಲ್ಲಿ ಸೀಮಿತ ಕದನ ವಿರಾಮಕ್ಕೆ ರಷ್ಯಾ ಒಪ್ಪಿಕೊಂಡ ನಂತರ, ರೆಡ್‌ಕ್ರಾಸ್ ಮಾನವೀಯ ಪರಿಹಾರ ಮತ್ತು ವೈದ್ಯಕೀಯ ಸಾಮಗ್ರಿಗಳೊಂದಿಗೆ ತನ್ನ ತಂಡಗಳನ್ನು ಮರಿಯುಪೋಲ್‌ಗೆ ಕಳುಹಿಸಿದೆ. ಯುದ್ಧಪೀಡಿತ ನಗರದಿಂದ ನಾಗರಿಕರನ್ನು ಶುಕ್ರವಾರ ಸ್ಥಳಾಂತರಿಸಲು ರೆಡ್‌ಕ್ರಾಸ್ ನೇತೃತ್ವ ವಹಿಸಲಿದೆ.

ನಾಗರಿಕರನ್ನು ಕರೆತರಲು 45 ಬಸ್‌ಗಳನ್ನು ಕಳುಹಿಸಲಾಗುತ್ತಿದೆ ಎಂದು ಉಕ್ರೇನ್ ಉಪಪ್ರಧಾನಿ ಇರಿನಾ ವೆರೆಶ್‌ಚುಕ್ ಹೇಳಿದರು.

ಮರಿಯುಪೋಲ್‌ನಿಂದ ಉಕ್ರೇನ್ ಹಿಡಿತದ ಝುಪೊರಿಝಿಯಾ ಮಾರ್ಗದವರೆಗೂ ಗುರುವಾರ ಬೆಳಿಗ್ಗೆಯಿಂದಲೇ ಕದನ ವಿರಾಮಕ್ಕೆ ಬದ್ಧವಿರುವುದಾಗಿ ರಷ್ಯಾ ಸೇನೆ ಹೇಳಿದೆ.



ಡೆನ್ಮಾರ್ಕ್‌ನ ಕರಾವಳಿಯಲ್ಲಿನ ಸೂಪರ್ ಟ್ಯಾಂಕರ್ ಪರ್ತಮಿನಾ ಪ್ರೈಮ್ ಎದುರಿನಲ್ಲಿ ಈಜಾಡುತ್ತಾ ಯುದ್ಧಕ್ಕೆ ಉದ್ದೀಪನಗೊಳಿಸುವುದನ್ನು ನಿಲ್ಲಿಸಬೇಕೆಂಬ ಭಿತ್ತಿಪತ್ರವನ್ನು ಗ್ರೀನ್‌ಪೀಸ್ ಕಾರ್ಯಕರ್ತರೊಬ್ಬರು ಪ್ರದರ್ಶಿಸಿದರು –ಎಎಫ್‌ಪಿ ಚಿತ್ರ

## ಪುಟಿನ್‌ಗೆ ತಪ್ಪು ಮಾಹಿತಿ: ಅಲ್ಲಗಳೆದ ಕ್ರೆಮ್ಲಿನ್

**ಮಾಸ್ಕೊ (ಎಪಿ):** ಉಕ್ರೇನ್‌ನಲ್ಲಿ ರಷ್ಯಾ ಸೇನೆಯ ಕಾರ್ಯಕ್ಷಮತೆಯ ಬಗ್ಗೆ ಪುಟಿನ್ ಅವರಿಗೆ ಅವರ ಸಲಹೆಗಾರರು ತಪ್ಪು ಮಾಹಿತಿ ನೀಡುತ್ತಿದ್ದಾರೆ ಎಂದು ಅಮೆರಿಕ ಗುಪ್ತಚರ ಅಧಿಕಾರಿಗಳು ನೀಡಿರುವ ವರದಿಯನ್ನು ಪುಟಿನ್ ಆಡಳಿತ ಕಚೇರಿ ಕ್ರೆಮ್ಲಿನ್ ಗುರುವಾರ ತಳ್ಳಿ ಹಾಕಿದೆ.

ಪುಟಿನ್ ಅವರ ವಕ್ತಾರ ಡಿಮಿಟ್ರಿ ಪೆಸ್ಕೊವ್, ‘ಕ್ರೆಮ್ಲಿನ್‌ನಲ್ಲಿ ಏನು ನಡೆಯುತ್ತಿದೆ ಎಂಬುದು ಅವರಿಗೆ ಅರ್ಥವಾಗುತ್ತಿಲ್ಲ. ಅವರು ಅಧ್ಯಕ್ಷ ಪುಟಿನ್ ಅವರನ್ನೂ ಅರ್ಥಮಾಡಿಕೊಳ್ಳುವುದಿಲ್ಲ’ ಎಂದು ಸುದ್ದಿಗಾರರಿಗೆ ತಿಳಿಸಿದರು.

‘ಇದು ಕೇವಲ ವಿಷಾದಪಡುವಂತದ್ದಲ್ಲ, ಇದು ಕಳವಳಕಾರಿಯೂ ಆಗಿದೆ. ಏಕೆಂದರೆ, ಸಂಪೂರ್ಣ ತಿಳಿವಳಿಕೆಯ ಈ ಕೊರತೆಯು ತಪ್ಪು ನಿರ್ಧಾರಗಳಿಗೆ ಕಾರಣವಾಗುತ್ತದೆ. ಅದರಿಂದ ದುರಂತ ಸಂಭವಿಸುತ್ತದೆ’ ಎಂದರು.

ಶ್ವೇತಭವನದ ಸಂವಹನ ನಿರ್ದೇಶಕಿ ಕೇಟ್ ಬೆಡಿಂಗ್‌ಫೀಲ್ಡ್, ‘ಉಕ್ರೇನಿನಲ್ಲಿ ರಷ್ಯಾ ಸೇನೆಯ ವೈಫಲ್ಯದ ಬಗ್ಗೆ ಮಾತ್ರವಲ್ಲದೆ ರಷ್ಯಾದ ಆರ್ಥಿಕತೆಯು ನಿರ್ಬಂಧಗಳಿಂದ ಹೇಗೆ ದುರ್ಬಲಗೊಳ್ಳುತ್ತಿದೆ ಎನ್ನುವ ಸತ್ಯವನ್ನು ಪುಟಿನ್‌ಗೆ ತಿಳಿಸಲು ಅವರ ಸಲಹೆಗಾರರು ಹೆದರುತ್ತಿದ್ದಾರೆ’ ಎಂದು ಹೇಳಿದ್ದರು.

## ರಷ್ಯಾದಿಂದ ನಿಲ್ಲದ ಶೆಲ್, ಕ್ಷಿಪಣಿ ದಾಳಿ

**ಕೀವ್ (ಎಪಿ):** ಇಸ್ತಾಂಬುಲ್ ಶಾಂತಿಮಾತುಕತೆಯ ಫಲವಾಗಿ ರಷ್ಯಾ ಕೀವ್ ಮತ್ತು ಚೆರ್ನಿವ್ ನಗರಗಳಿಂದ ಸೇನಾ ಕಾರ್ಯಾಚರಣೆಯನ್ನು ಗಣನೀಯವಾಗಿ ತಗ್ಗಿಸಲು ಒಪ್ಪಿಕೊಂಡಿತ್ತು. ಆದರೆ, ಇತ್ತೀಚೆಗೆ ಉಕ್ರೇನ್ ಹಿಡಿತಕ್ಕೆ ಮರಳಿ ಸಿಕ್ಕಿರುವ ರಾಜಧಾನಿಯ ಉಪನಗರಗಳ ಮೇಲೆ ರಷ್ಯಾ ಪಡೆಗಳು ಶೆಲ್ ದಾಳಿಯನ್ನು ಮುಂದುವರಿಸಿವೆ ಎಂದು ಪ್ರಾದೇಶಿಕ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕೀವ್ ನಗರದ ಹೊರ ವಲಯ, ಈಶಾನ್ಯ ನಗರ ಹಾರ್ಕಿವ್ ಹಾಗೂ ಚೆರ್ನಿವ್ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬುಧವಾರ ರಾತ್ರಿ ರಷ್ಯಾ ಪಡೆಗಳಿಂದ ಶೆಲ್ ಮತ್ತು ಫಿರಂಗಿ ದಾಳಿ ನಡೆಯಿತು.

ಇರ್ಪಿನ್, ಮಕರಿವ್ ಹಾಗೂ ಹಾಸ್ಟೊಮಲ್ ಸುತ್ತಲೂ ದಾಳಿ ಮುಂದುವರಿದಿದೆ. ಬ್ರೋವರಿ ಉಪನಗರದಿಂದ ರಷ್ಯಾ ಒಂದಿಷ್ಟು ಪಡೆ ಹಿಂಪಡೆದಿದ್ದರೂ ದಾಳಿ ಮಾತ್ರ ನಿಲ್ಲಿಸಿಲ್ಲ. ಉಕ್ರೇನ್ ಪಡೆಗಳು ಪ್ರತಿದಾಳಿ ನಡೆಸುತ್ತಿವೆ ಎಂದು ಪ್ರಾದೇಶಿಕ ಗವರ್ನರ್ ಒಲೆಕ್ಸಾಂಡರ್ ಪಲ್ವಿಯುಕ್ ತಿಳಿಸಿದ್ದಾರೆ.

ಬುಧವಾರ ತಡರಾತ್ರಿ ಉಕ್ರೇನಿನ ಇಂಧನ ಸಂಗ್ರಹಾಗಾರಗಳ ಮೇಲೆ ಹೊಸ ದಾಳಿ ನಡೆಸಿರುವುದಾಗಿ ರಷ್ಯಾದ ರಕ್ಷಣಾ ಸಚಿವಾಲಯ ಹೇಳಿದೆ.

ಗುರುವಾರ ಚೆರ್ನಿವ್ ಸುತ್ತಲೂ ರಷ್ಯಾದ ಶೆಲ್ ದಾಳಿ ಮತ್ತು ಕ್ಷಿಪಣಿ ದಾಳಿ ನಡೆದಿರುವುದನ್ನು ದೃಢಪಡಿಸಿರುವ ಬ್ರಿಟನ್‌ನ ರಕ್ಷಣಾ ಸಚಿವಾಲಯ, ಸೀಮಿತ ಸಂಖ್ಯೆಯಲ್ಲಿ ಸೇನೆ ಹಿಂತೆಗೆದುಕೊಂಡರೂ ರಷ್ಯಾ ಪಡೆಗಳು, ಕೀವ್‌ನ ಪೂರ್ವ ಮತ್ತು ಪಶ್ಚಿಮದಲ್ಲಿ ಹಿಡಿತ ಬಿಟ್ಟಿಲ್ಲ. ಮುಂದಿನ ದಿನಗಳಲ್ಲಿ ಉಪನಗರಗಳಲ್ಲಿ ಭಾರೀ ಹೋರಾಟ ನಡೆಯುವ ಸಾಧ್ಯತೆ ಇದೆ ಎಂದು ಹೇಳಿದೆ.

## ಉಕ್ರೇನಿನಲ್ಲಿ 40ರಿಂದ 50 ಭಾರತೀಯರು

**ನವದೆಹಲಿ (ಪಿಟಿಐ):** ಯುದ್ಧ ಪೀಡಿತ ಉಕ್ರೇನ್‌ನಲ್ಲಿ ಇನ್ನೂ 40ರಿಂದ 50 ಭಾರತೀಯರು ಇದ್ದಾರೆ. ಅವರಲ್ಲಿ ಕೆಲವರು ಮಾತ್ರ ದೇಶಕ್ಕೆ ಹಿಂತಿರುಗಲು ಸಿದ್ಧರಿದ್ದಾರೆ ಎಂದು ಕೇಂದ್ರ ಸರ್ಕಾರ ಗುರುವಾರ ರಾಜ್ಯಸಭೆಗೆ ಮಾಹಿತಿ ನೀಡಿದೆ.

ಉಕ್ರೇನ್‌ನಿಂದ ಸುಮಾರು 22,500 ಭಾರತೀಯರು ಫೆಬ್ರುವರಿಯಿಂದ ಭಾರತಕ್ಕೆ ಮರಳಿ ಬಂದಿದ್ದಾರೆ. ಉಕ್ರೇನಿನಲ್ಲಿ ಉಳಿದಿರುವ ಮಾರು 40-50 ಭಾರತೀಯರಲ್ಲಿ ಭಾರತಕ್ಕೆ ಮರಳಲು ಸಿದ್ಧರಿರುವವರ ವಾಪಸಾತಿಗೆ ರಾಯಭಾರ ಕಚೇರಿ ಅಗತ್ಯ ನೆರವು ನೀಡುತ್ತಿದೆ’ ಎಂದು ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವೆ ಮೀನಾಕ್ಷಿ ಲೇಖಿ ತಿಳಿಸಿದರು.

ಈವರೆಗೆ ಉಕ್ರೇನಿನಿಂದ ಎಷ್ಟು ಭಾರತೀಯರನ್ನು ಸ್ಥಳಾಂತರಿಸಲಾಗಿದೆ ಎಂದು ಸದಸ್ಯರು ಕೇಳಿದ ಪ್ರಶ್ನೆಗೆ ಲೇಖಿ ಈ ಉತ್ತರ ನೀಡಿದರು.

## 36ನೇ ದಿನದ ಬೆಳವಣಿಗೆಗಳು

- ಫೆಬ್ರುವರಿ 24 ರಂದು ಚೆರ್ನೊಬಿಲ್ ಅಣು ವಿದ್ಯುತ್ ಸ್ಥಾವರ ವಶಪಡಿಸಿಕೊಂಡಿದ್ದ ರಷ್ಯಾ ಪಡೆಗಳು, ಗುರುವಾರದಿಂದ ಸ್ಥಾವರ ತೊರೆಯಲು ಪ್ರಾರಂಭಿಸಿವೆ– ಉಕ್ರೇನ್ ಪರಮಾಣು ಕಂಪನಿ ಎನರ್‌ಗೋಟಮ್ ಹೇಳಿದೆ
- ಉಕ್ರೇನ್‌ನಲ್ಲಿ ರಷ್ಯಾದ ಸೈನಿಕರು ತಮ್ಮ ದೇಶದ ಆದೇಶ ಧಿಕ್ಕರಿಸುತ್ತಿದ್ದಾರೆ, ತಾವಾಗೇ ತಮ್ಮ ಶಸ್ತ್ರಾಸ್ತ್ರಗಳನ್ನು ಧ್ವಂಸಗೊಳಿಸಿಕೊಳ್ಳುತ್ತಿದ್ದಾರೆ – ಬ್ರಿಟನ್ ಗೂಢಚಾರಿಕೆ ಮುಖ್ಯಸ್ಥರ ಹೇಳಿಕೆ
- ರಷ್ಯಾ ಹಿಮ್ಮೆಟ್ಟಿಸಲು ಮತ್ತಷ್ಟು ಯುದ್ಧೋಪಕರಣಗಳ ನೆರವು ನೀಡುವಂತೆ ಪಶ್ಚಿಮದ ರಾಷ್ಟ್ರಗಳಿಗೆ ಝೆಲೆನ್‌ಸ್ಕಿ ಮನವಿ
- ಮೈಕೊಲೈವ್‌ನಲ್ಲಿರುವ ಪ್ರಾದೇಶಿಕ ಸರ್ಕಾರಿ ಪ್ರಧಾನ ಕಚೇರಿಯ ಮೇಲೆ ಮಂಗಳವಾರ ರಷ್ಯಾ ನಡೆಸಿದ್ದ ಕ್ಷಿಪಣಿ ದಾಳಿಯಲ್ಲಿ ಈವರೆಗೆ ಮೃತಪಟ್ಟವರ ಸಂಖ್ಯೆ 20ಕ್ಕೆ ಏರಿದೆ– ಉಕ್ರೇನ್ ತುರ್ತು ಸೇವೆಗಳ ಸಚಿವಾಲಯ ಮಾಹಿತಿ
- ಉಕ್ರೇನಿನ ಬಹುತೇಕ ರಕ್ಷಣಾ ಕ್ಷೇತ್ರದ ಉದ್ದಿಮೆಗಳನ್ನು ರಷ್ಯಾ ಪಡೆಗಳು ನಾಶಪಡಿಸಿವೆ– ಉಕ್ರೇನ್ ಅಧ್ಯಕ್ಷೀಯ ಸಲಹೆಗಾರ ಒಲೆಕ್ಸಿ ಅರೆಸ್ಟೊವಿಕ್

## ಕೀವ್‌ನಲ್ಲಿ ಉಲ್ಬಣಿಸಿದ ಸಂಘರ್ಷ

**ಕೀವ್ (ಎಪಿ):** ಉಕ್ರೇನ್‌ನಲ್ಲಿ ವಿಶೇಷ ಸೇನಾ ಕಾರ್ಯಾಚರಣೆ ನಡೆಸುತ್ತಿರುವ ರಷ್ಯಾ ಸಂಘರ್ಷ ಶಮನದ ಮಾತುಕತೆ ಪ್ರಕ್ರಿಯೆಯನ್ನು ಸೇನೆಯ ಮರು ಸಂಯೋಜನೆ ಮತ್ತು ಮರು ನಿಯೋಜನೆಗೆ ಬಳಸುತ್ತಿರುವ ಸೂಚನೆ ಪುಷ್ಟೀಕರಿಸುವಂತೆ ಕೀವ್ ಮತ್ತು ಇತರ ನಗರಗಳ ಹೊರವಲಯದಲ್ಲಿ ಉಭಯ ರಾಷ್ಟ್ರಗಳ ಸೇನೆಗಳ ನಡುವೆ ಗುರುವಾರ ಭಾರೀ ಹೋರಾಟ ನಡೆದಿದೆ.

ಗುರುವಾರ ನಸುಕಿನಲ್ಲಿ ವಿಡಿಯೊ ಭಾಷಣ ಮಾಡಿದ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ, ‘ಡಾನ್‌ಬಾಸ್‌ನಲ್ಲಿ ಹೊಸ ದಾಳಿ ನಡೆಸಲು ರಷ್ಯಾ ಪಡೆಗಳು ಒಗ್ಗೂಡುತ್ತಿವೆ. ಇದನ್ನು ನಾವು ಎದುರಿಸುತ್ತೇವೆ’ ಎಂದರು.



# ಇಬ್ರಾಹಿಂ ನೇತೃತ್ವದಲ್ಲಿ ಚುನಾವಣೆ– ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಕಾಂಗ್ರೆಸ್ ತ್ಯಜಿಸಿ ಬಂದಿರುವ ಸಿ.ಎಂ. ಇಬ್ರಾಹಿಂ ನೇತೃತ್ವದಲ್ಲಿ 2023ರ ವಿಧಾನಸಭೆ ಚುನಾವಣೆ ಎದುರಿಸುತ್ತೇವೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಘೋಷಿಸಿದರು.

ವಿಧಾನ ಪರಿಷತ್ ಸದಸ್ಯ ಸ್ಥಾನಕ್ಕೆ ಗುರುವಾರ ರಾಜೀನಾಮೆ ನೀಡಿದ ಇಬ್ರಾಹಿಂ ಅವರನ್ನು ಅವರ ಮನೆಯಲ್ಲಿ ಕುಮಾರಸ್ವಾಮಿ ಭೇಟಿ ಮಾಡಿ ಕೆಲಹೊತ್ತು ಮಾತುಕತೆ ನಡೆಸಿದರು.

ಈ ವೇಳೆ, ‘ಇಬ್ರಾಹಿಂಗೆ ರಾಜ್ಯ ಅಧ್ಯಕ್ಷ ಸ್ಥಾನ ಕೊಡುತ್ತೀರಾ’ ಎಂದು ಕೇಳಿದಾಗ, ‘ಅವರ ನೇತೃತ್ವದಲ್ಲೇ ಚುನಾವಣೆ ಎದುರಿಸುತ್ತೇವೆ. ಅವರ ನಾಯಕತ್ವದಲ್ಲೇ ಚುನಾವಣೆ ಅಂದರೆ ಅರ್ಥ ಏನು’ ಎಂದು ಕುಮಾರಸ್ವಾಮಿ ಮರುಪ್ರಶ್ನೆ ಕೇಳಿದರು.

‘ಇಬ್ರಾಹಿಂಗೆ ಯಾವ ಸ್ಥಾನಮಾನ ಕೊಡಬೇಕೆಂದು ಚರ್ಚಿಸಿ, ನಿರ್ಧರಿಸುತ್ತೇವೆ. ರಂಜಾನ್ ಮುಗಿದ ಕೂಡಲೇ ಹೈದರಾಬಾದ್ –ಕರ್ನಾಟಕದ ಬಸವನಬಾಗೇವಾಡಿಯಿಂದ ಚುನಾವಣಾ ಪ್ರಚಾರ ಆರಂಭಿಸುತ್ತೇವೆ’ ಎಂದರು.

ನಾನು ಸ್ಪರ್ಧಿಸುವುದಿಲ್ಲ– ಇಬ್ರಾಹಿಂ: ‘1994ರಲ್ಲಿ ಇದೇ ಮನೆಯಲ್ಲಿ ದೇವೇಗೌಡರು ಪಕ್ಷಕ್ಕೆ ಸೇರ್ಪಡೆ ಮಾಡಿಕೊಂಡಿದ್ದರು. ಈಗ ಅವರ ಪುತ್ರನ ನೇತೃತ್ವದಲ್ಲಿ ಸೇರ್ಪಡೆ ಆಗಿದ್ದೇನೆ. ಕರ್ನಾಟಕದಲ್ಲಿ ಮುಸ್ಲಿಂಮರು ಜೆಡಿಎಸ್ ಜೊತೆಗಿದ್ದಾರೆ. ಏಕಾಂಗಿಯಾಗಿ ನಾವು 100 ಸೀಟು ಮೇಲೆ ದಾಟುತ್ತೇವೆ. ನಾನು ಸ್ಪರ್ಧಿಸುವುದಿಲ್ಲ. ಪಕ್ಷ ಅಧಿಕಾರಕ್ಕೆ ಬರಬೇಕು, ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿ ಮಾಡಬೇಕು ಅಷ್ಟೇ ಕೆಲಸ’ ಎಂದು ಇಬ್ರಾಹಿಂ ಹೇಳಿದರು.


ಅದಕ್ಕೂ ಮೊದಲು ಸಭಾಪತಿ ಬಸವರಾಜ ಹೊರಟ್ಟಿಗೆ ರಾಜೀನಾಮೆ ಪತ್ರ ಸಲ್ಲಿಸಿದ ಮಾತನಾಡಿದ ಇಬ್ರಾಹಿಂ, ‘ನನ್ನ ಮೇಲಿದ್ದ ಹೊರೆಯನ್ನು ಕಳಚಿಕೊಂಡಿದ್ದೇನೆ. ಮುಂದಿನ ನಡೆಯನ್ನು ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡರ ಪಾಲಿಗೆ ಬಿಟ್ಟಿದ್ದೇನೆ’ ಎಂದರು.


‘ಜೆಡಿಎಸ್ ನನ್ನ ಮನೆ. ನನ್ನ ಮನೆಗೆ ಷರತ್ತು ಹಾಕಿ ಹೋಗ್ತೀನಾ? ಬಾಗಿಲು, ಕಿಟಕಿ, ಅಡುಗೆ ಮನೆ ಎಲ್ಲಿದೆ ಎನ್ನುವುದು ನನಗೆ ಗೊತ್ತಿಲ್ಲವೇ? ನನ್ನ ಮನೆಗೆ ದಾರಿ ತೋರಿಸುವ ಅವಶ್ಯಕತೆ ಇಲ್ಲ’ ಎಂದರು.

‘ಯುಗಾದಿ ಬಳಿಕ ಜೆಡಿಎಸ್‌ಗೆ ದೊಡ್ಡ ಪ್ರವಾಹದಂತೆ ಅನೇಕರು ಬರಲಿದ್ದಾರೆ. ನಾನು ಹೇಳಿದ್ದು ಎಂದೂ ಸುಳ್ಳಾಗಿಲ್ಲ. ಉತ್ತರಪ್ರದೇಶ ಚುನಾವಣೆಯ ಫಲಿತಾಂಶ ಲೆಕ್ಕ ಹಾಕಿ ನೋಡಿದರೆ, ಕರ್ನಾಟಕದಲ್ಲಿ ಧರ್ಮಾಧರಿತ ಮತ ಇಲ್ಲ, ಜಾತಿ ಸಮೀಕರಣವಿದೆ. ಒಕ್ಕಲಿಗ, ಲಿಂಗಾಯತ, ಹಿಂದುಳಿದವರು, ಪರಿಶಿಷ್ಟರು, ಸಾಬ್ರು ಈ ಪಂಚಭೂತಗಳು ಎಲ್ಲೆಲ್ಲಿ ಹೋಗುತ್ತವೆ ಅದರ ಮೇಲೆ ಎಲ್ಲ ಫಲಿತಾಂಶ ನಿರ್ಧಾರ ಆಗಲಿದೆ’ ಎಂದು ವಿಶ್ಲೇಷಿಸಿದರು.

10 ಲೇಖಕರಿಗೆ ‘ಸಾಹಿತ್ಯಶ್ರೀ ಪ್ರಶಸ್ತಿ’ ● ರಾಯಚೂರಿನಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ

# ದೇಸಾಯಿ, ಮೊಗಸಾಲೆ ಸೇರಿ ಐವರಿಗೆ ಅಕಾಡೆಮಿ ಪ್ರಶಸ್ತಿ


ಜಿನದತ್ತ ದೇಸಾಯಿ


ನಾ.ಮೊಗಸಾಲೆ


ಬಸವರಾಜ ಕಲ್ಗುಡಿ


ಸರಸ್ವತಿ ಚಿಮ್ಮಲಗಿ


ಯಲ್ಲಪ್ಪ ಕೆ.ಕೆ.

**ಬೆಂಗಳೂರು:** ಕರ್ನಾಟಕ ಸಾಹಿತ್ಯ ಅಕಾಡೆಮಿ ನೀಡುವ 2021ನೇ ಸಾಲಿನ ‘ವಾರ್ಷಿಕ ಗೌರವ ಪ್ರಶಸ್ತಿ’ಗೆ ಜಿನದತ್ತ ದೇಸಾಯಿ, ನಾ.ಮೊಗಸಾಲೆ ಸೇರಿದಂತೆ ಐವರು ಆಯ್ಕೆಯಾಗಿದ್ದಾರೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಕಾಡೆಮಿಯ ಅಧ್ಯಕ್ಷ ಬಿ.ವಿ. ವಸಂತಕುಮಾರ್, ‘ಕನ್ನಡ ಸಾಹಿತ್ಯಕ್ಕೆ ನೀಡಿದ ಗಮನಾರ್ಹ ಕೊಡುಗೆ ಪರಿಗಣಿಸಿ ಸರಸ್ವತಿ ಚಿಮ್ಮಲಗಿ, ಪ್ರೊ. ಬಸವರಾಜ ಕಲ್ಗುಡಿ ಹಾಗೂ ಯಲ್ಲಪ್ಪ ಕೆ.ಕೆ. ಪುರ ಅವರನ್ನೂ ‘ವಾರ್ಷಿಕ ಗೌರವ ಪ್ರಶಸ್ತಿ’ಗೆ ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯು ತಲಾ ₹ 50 ಸಾವಿರ ನಗದು ಒಳಗೊಂಡಿದೆ’ ಎಂದರು.

‘ಸಾಹಿತ್ಯ ಕೃಷಿಯನ್ನು ಪರಿಗಣಿಸಿ 10 ಸಾಹಿತಿಗಳನ್ನು 2021ನೇ ಸಾಲಿನ ‘ಸಾಹಿತ್ಯಶ್ರೀ ಪ್ರಶಸ್ತಿ’ಗೆ ಆಯ್ಕೆ ಮಾಡಲಾಗಿದೆ. ಸೃಜನಶೀಲ ಸಾಹಿತ್ಯ ಕ್ಷೇತ್ರದಲ್ಲಿ ಐದು, ಸೃಜನೇತರ ಸಾಹಿತ್ಯ ಕ್ಷೇತ್ರದಲ್ಲಿ ಮೂರು, ಸಾಹಿತ್ಯ ಪಾರಿಚಾರಿಕೆಗೆ ಒಂದು ಹಾಗೂ ಹೊರನಾಡ ಸಾಧನೆಗೆ ಒಂದು ಪ್ರಶಸ್ತಿ ನೀಡಲಾಗುತ್ತಿದೆ. ಚಂದ್ರಕಲಾ ಬಿದರಿ, ಪ್ರೊ.ಎಂ.ಎನ್. ವೆಂಕಟೇಶ್, ಚನ್ನಬಸವಯ್ಯ ಹಿರೇಮಠ, ಮ. ರಾಮಕೃಷ್ಣ, ಅಬ್ದುಲ್ ರಶೀದ್, ವೈ.ಎಂ. ಭಜಂತ್ರಿ, ಜೋಗಿ (ಗಿರೀಶರಾವ್ ಹತ್ವಾರ್), ಮೈಸೂರು ಕೃಷ್ಣಮೂರ್ತಿ, ಗಣೇಶ ಅಮೀನಗಡ ಹಾಗೂ ಆಲೂರು ದೊಡ್ಡನಿಂಗಪ್ಪ ಅವರು ‘ಸಾಹಿತ್ಯಶ್ರೀ ಪ್ರಶಸ್ತಿ’ಗೆ ಭಾಜನರಾಗಿದ್ದಾರೆ. ಈ ಪ್ರಶಸ್ತಿಯು ತಲಾ ₹ 25 ಸಾವಿರ ಒಳಗೊಂಡಿದೆ’ ಎಂದರು.

ರಾಯಚೂರಿನಲ್ಲಿ ಸಮಾರಂಭ: ‘ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ 2020ರಲ್ಲಿ ಪ್ರಕಟವಾದ ಕೃತಿಗಳಲ್ಲಿ ವಿಮರ್ಶಕರ ಅಭಿಪ್ರಾಯಗಳನ್ನು ಆಧರಿಸಿ 19 ಕೃತಿಗಳನ್ನು ಪುಸ್ತಕ ಬಹುಮಾನಕ್ಕೆ ಆಯ್ಕೆ ಮಾಡಲಾಗಿದೆ. ಈ ಬಹುಮಾನವು ತಲಾ ₹ 25 ಸಾವಿರ ನಗದು ಒಳಗೊಂಡಿದೆ. ಪ್ರಶಸ್ತಿ ಪ್ರದಾನ ಸಮಾರಂಭವು ರಾಯಚೂರಿನಲ್ಲಿ ಏಪ್ರಿಲ್ ಕೊನೆಯ ಅಥವಾ ಮೇ ಮೊದಲ ವಾರ ನಡೆಯಲಿದೆ’ ಎಂದು ವಿವರಿಸಿದರು.

**2020ರ ದತ್ತಿ ಬಹುಮಾನ ಪುರಸ್ಕೃತರು**

| ಪ್ರಕಾರ | ಕೃತಿಯ ಹೆಸರು | ಲೇಖಕರು |
|---|---|---|
| ಅನುವಾದ–1 (ಎಲ್.ಗುಂಡಪ್ಪ ಮತ್ತು ಶಾರದಮ್ಮ ದತ್ತಿನಿಧಿ ಬಹುಮಾನ) | ಸೀತಾ | ಪದ್ಮರಾಜ ದಂಡಾವತಿ |
| ಕಾವ್ಯ–ಹಸ್ತಪ್ರತಿ (ಚಿ.ಶ್ರೀನಿವಾಸರಾಜು ದತ್ತಿನಿಧಿ ಬಹುಮಾನ) | ಬೆಳದಿಂಗಳ ಚೆಲುವು | ಪದ್ಮಜಾ ಜಯತೀರ್ಥ ಉಮರ್ಜಿ |
| ಕಾದಂಬರಿ (ಚದುರಂಗ ದತ್ತಿನಿಧಿ ಬಹುಮಾನ) | ದೊಡ್ಡತಾಯಿ | ಎಂ.ಎಸ್. ವೇದಾ |
| ಲಲಿತ ಪ್ರಬಂಧ (ವಿ. ಸೀತಾರಾಮಯ್ಯ ಸೋದರಿ ಇಂದಿರಾ ದತ್ತಿನಿಧಿ ಬಹುಮಾನ) | ವಠಾರ ಮೀಮಾಂಸೆ | ಆರತಿ ಘಟಕಾರ್ |
| ಜೀವನಚರಿತ್ರೆ (ಸಿಂಪಿ ಲಿಂಗಣ್ಣ ದತ್ತಿನಿಧಿ ಬಹುಮಾನ) | ಕಾಗೆ ಮುಟ್ಟಿದ ನೀರು | ಪುರುಷೋತ್ತಮ ಬಿಳಿಮಲೆ |
| ಸಾಹಿತ್ಯ ವಿಮರ್ಶೆ (ಪಿ. ಶ್ರೀನಿವಾಸರಾವ್ ದತ್ತಿನಿಧಿ ಬಹುಮಾನ) | ಕುವೆಂಪು ಸ್ತ್ರೀ ಸಂವೇದನೆ | ತಾರಿಣಿ ಶುಭದಾಯಿನಿ |
| ಲೇಖಕರ ಮೊದಲ ಸ್ವತಂತ್ರ ಕೃತಿ (ಮಧುರಚೆನ್ನ ದತ್ತಿನಿಧಿ ಬಹುಮಾನ) | ಕೂರ್ಗ್ ರೆಜಿಮೆಂಟ್ | ಕುಶ್ವಂತ್ ಕೋಳಿಬೈಲು |
| ಕನ್ನಡದಿಂದ ಇಂಗ್ಲಿಷಿಗೆ ಅನುವಾದ (ಅಮೆರಿಕ ಕನ್ನಡ ದತ್ತಿನಿಧಿ ಬಹುಮಾನ) | ದಿ ಬ್ರೈಡ್ ಇನ್ ದಿ ರೈನಿ ಮೌಂಟೆನ್ಸ್ | ಕೆ.ಎಂ. ಶ್ರೀನಿವಾಸಗೌಡ, ಜಿ.ಕೆ. ಶ್ರೀಕಂಠ ಮೂರ್ತಿ |
| ವೈಚಾರಿಕ/ಅಂಕಣ ಬರಹ (ಬಿ.ವಿ. ವೀರಭದ್ರಪ್ಪ ದತ್ತಿನಿಧಿ ಬಹುಮಾನ) | ಸಮರಸದ ದಾಂಪತ್ಯ | ನಡಹಳ್ಳಿ ವಸಂತ |
| ದಾಸ ಸಾಹಿತ್ಯ (ಜಲಜಾ ಶ್ರೀಪತಿ ಆಚಾರ್ಯ ಗಂಗೂರ್ ದತ್ತಿನಿಧಿ ಬಹುಮಾನ) | ಪುರಂದರದಾಸರ ಬಂಡಾಯ ಪ್ರಜ್ಞೆ | ಶ್ರೀನಿವಾಸ ಸಿರನೂರಕರ್ |

**2020ರ ಪುಸ್ತಕ ಬಹುಮಾನ ಪುರಸ್ಕೃತರು**

| ಪ್ರಕಾರ | ಕೃತಿಯ ಹೆಸರು | ಲೇಖಕರು |
|---|---|---|
| ಕಾವ್ಯ | ಕಾರುಣ್ಯದ ಮೋಹಕ ನವಿಲುಗಳೆ | ಆರನಕಟ್ಟೆ ರಂಗನಾಥ |
| ನವಕವಿಗಳ ಪ್ರಥಮ ಸಂಕಲನ | ಗಾಯಗೊಂಡವರಿಗೆ | ಮಂಜುಳಾ ಹಿರೇಮಠ |
| ಕಾದಂಬರಿ | ಬಯಲೆಂಬೊ ಬಯಲು | ಎಚ್.ಟಿ. ಪೋತೆ |
| ಸಣ್ಣಕತೆ | ಬಂಡಲ್ ಕತೆಗಳು | ಎಸ್. ಸುರೇಂದ್ರನಾಥ್ |
| ನಾಟಕ | ಆರೋಹಿ | ಮಂಗಳ ಟಿ.ಎಸ್. |
| ಲಲಿತ ಪ್ರಬಂಧ | ನಿದ್ರಾಂಗನೆಯ ಸೆಳವಿನಲ್ಲಿ | ಎನ್. ರಾಮನಾಥ್ |
| ಪ್ರವಾಸ ಸಾಹಿತ್ಯ | ನಕ್ಷತ್ರಗಳ ಸುಟ್ಟ ನಾಡಿನಲ್ಲಿ | ಭಾರತಿ ಬಿ.ವಿ. |
| ಜೀವನಚರಿತ್ರೆ/ಆತ್ಮಕಥೆ | ‘ಗ್ರಾಮ ಸ್ವರಾಜ್ಯ’ ಸಾಕಾರಗೊಳಿಸಿದ ರಾಮಪ್ಪ ಬಾಲಪ್ಪ ಬಿದರಿ | ಕೃಷ್ಣ ಕೊಲ್ಹಾರ ಕುಲಕರ್ಣಿ |
| ಸಾಹಿತ್ಯ ವಿಮರ್ಶೆ | ಹೈದ್ರಾಬಾದ್ ಕರ್ನಾಟಕದ ಆಧುನಿಕ ಸಾಹಿತ್ಯ ಮೀಮಾಂಸೆ | ಬಸವರಾಜ ಸಬರದ |
| ಗ್ರಂಥ ಸಂಪಾದನೆ | ಲಿಂಗಣ್ಣ ಕವಿಯ ವರರಮ್ಯ ರತ್ನಾಕರ | ಕೆ. ರವೀಂದ್ರನಾಥ |
| ಮಕ್ಕಳ ಸಾಹಿತ್ಯ | ಮತ್ತೆ ಹೊಸ ಗೆಳೆಯರು | ವೈ.ಜಿ. ಭಗವತಿ |
| ವಿಜ್ಞಾನ ಸಾಹಿತ್ಯ | ಆಧ್ಯಾತ್ಮಿಕ ಆರೋಗ್ಯ ದರ್ಶನ | ಎಸ್.ಪಿ. ಯೋಗಣ್ಣ |
| ಮಾನವಿಕ | ಗಾಂಧೀಯ ಅರ್ಥಶಾಸ್ತ್ರ | ಎಂ.ಎಂ. ಗುಪ್ತ |
| ಸಂಶೋಧನೆ | ಮ್ಯಾಸಬೇಡರ ಮೌಖಿಕ ಕಥನಗಳು | ಪಿ. ತಿಪ್ಪೇಸ್ವಾಮಿ ಚಳ್ಳಕೆರೆ |
| ಅನುವಾದ–1 (ಭಾರತೀಯ ಭಾಷೆಯಿಂದ ಕನ್ನಡಕ್ಕೆ) | ದೈವಿಕ ಹೂವಿನ ಸುಗಂಧ | ಕೇಶವ ಮಳಗಿ |
| ಅನುವಾದ–2 (ಕನ್ನಡದಿಂದ ಭಾರತೀಯ ಭಾಷೆಗೆ) | ಶಿವಂಡೆ ಕಡುಂತುಡಿ | ಸುಧಾಕರನ್ ರಾಮಂತಳಿ |
| ಅಂಕಣ ಬರಹ/ವೈಚಾರಿಕ ಬರಹ | ಪದಸೋಪಾನ | ನರಹಳ್ಳಿ ಬಾಲಸುಬ್ರಹ್ಮಣ್ಯ |
| ಸಂಕೀರ್ಣ | ಸುವರ್ಣಮುಖಿ | ಸಿದ್ಧಗಂಗಯ್ಯ ಹೊಲತಾಳು |
| ಲೇಖಕರ ಮೊದಲ ಸ್ವತಂತ್ರಕೃತಿ | ಭಾರತದ ರಾಷ್ಟ್ರಧ್ವಜ: ವಿಕಾಸ ಹಾಗೂ ಸಂಹಿತೆ | ಎಸ್.ಬಿ. ಬಸೆಟ್ಟಿ |

# ‘ಕೆಇಆರ್‌ಸಿ: ಆಯ್ಕೆ ಸಮಿತಿಯಲ್ಲಿಲ್ಲ ಸಿ.ಎಸ್’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ) ಅಧ್ಯಕ್ಷರ ಆಯ್ಕೆ ಸಮಿತಿಯಿಂದ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ಅವರು ಹೊರಗುಳಿದಿದ್ದಾರೆ’ ಎಂದು ಇಂಧನ ಇಲಾಖೆ ಹೇಳಿದೆ.

‘ಹಿತಾಸಕ್ತಿ ಸಂಘರ್ಷದಲ್ಲಿ ಸಿ.ಎಸ್’ ಕುರಿತ ಸುದ್ದಿಗೆ ಇಂಧನ ಇಲಾಖೆ ಹೆಚ್ಚುವರಿ ಮುಖ್ಯಕಾರ್ಯದರ್ಶಿ ಸ್ಪಷ್ಟನೆ ನೀಡಿದ್ದಾರೆ. ‘ಆಯ್ಕೆ ಸಮಿತಿಯಲ್ಲಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಅಧ್ಯಕ್ಷರಾಗಿರುತ್ತಾರೆ. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕೇಂದ್ರ ವಿದ್ಯುತ್ ಪ್ರಾಧಿಕಾರದ ಅಧ್ಯಕ್ಷರು ಅಥವಾ ಕೇಂದ್ರ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಅಧ್ಯಕ್ಷರು ಸದಸ್ಯರಾಗಿರುತ್ತಾರೆ. ಅಧ್ಯಕ್ಷರ ಅವಧಿ ಮುಗಿದ ಮೂರು ತಿಂಗಳ ಒಳಗಾಗಿ ಹೊಸ ಅಧ್ಯಕ್ಷ ಹಾಗೂ ಸದಸ್ಯರ ಆಯ್ಕೆ ಪ್ರಕ್ರಿಯೆ ನಡೆಸಬೇಕು ಎಂದು ವಿದ್ಯುಚ್ಛಕ್ತಿ ಕಾಯ್ದೆ–2003ರ ಹೇಳಿದೆ. ಕೆಇಆರ್‌ಸಿ ಅಧ್ಯಕ್ಷರ ಆಯ್ಕೆ ಸಮಿತಿಯ ಸಭೆಯಲ್ಲಿ ಹಾಜರಿದ್ದ ಮುಖ್ಯ ಕಾರ್ಯದರ್ಶಿಯ ಹಾಜರಿದ್ದರು. ಅಧ್ಯಕ್ಷರ ಸ್ಥಾನಕ್ಕೆ ಅರ್ಜಿ ಸಲ್ಲಿಸಲು ಬೇಕಾದ ಅರ್ಹತೆಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿತ್ತು’ ಎಂದು ಹೇಳಿದ್ದಾರೆ.

‘ಆ ಬಳಿಕ, ಕೆಇಆರ್‌ಸಿ ಅಧ್ಯಕ್ಷಸ್ಥಾನಕ್ಕೆ ಅರ್ಜಿ ಸಲ್ಲಿಸಲು ಬಯಸಿದ ಮುಖ್ಯಕಾರ್ಯದರ್ಶಿ, ಅರ್ಜಿ ಸಲ್ಲಿಸಿದ ಬಳಿಕ ಆಯ್ಕೆ ಸಮಿತಿಯ ಸಭೆಯಲ್ಲಿ ಭಾಗವಹಿಸುವುದಿಲ್ಲ ಎಂದು ಹೇಳಿದ್ದರು. ಅವರನ್ನು ಬಿಟ್ಟು, ಸಮಿತಿಯು ಮುಂದಿನ ಕಾರ್ಯಗಳು ನಡೆಸುತ್ತಿದೆ. ಹೀಗಾಗಿ, ಇದರಲ್ಲಿ ಹಿತಾಸಕ್ತಿ ಸಂಘರ್ಷ ಇಲ್ಲ’ ಎಂದು ಅವರು ಹೇಳಿದ್ದಾರೆ.

## ಅರಣ್ಯ ಪಡೆ ಮುಖ್ಯಸ್ಥರಾಗಿ ರಾಜ್ ಕಿಶೋರ್ ಸಿಂಗ್

**ಬೆಂಗಳೂರು:** ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯನ್ನಾಗಿ (ಅರಣ್ಯ ಪಡೆ ಮುಖ್ಯಸ್ಥ) ರಾಜ್ ಕಿಶೋರ್ ಸಿಂಗ್ ಅವರನ್ನು ನೇಮಕ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಪಿಸಿಸಿಎಫ್ ಆಗಿದ್ದ ಸಂಜಯ್ ಮೋಹನ್ ಗುರುವಾರ ನಿವೃತ್ತಿಯಾಗಿದ್ದು, ಅವರ ಸ್ಥಾನಕ್ಕೆ ರಾಜ್ ಕಿಶೋರ್ ಸಿಂಗ್ ಅವರನ್ನು ನೇಮಕ ಮಾಡಲಾಗಿದೆ.

## ಪಾಕ್: ಸೋಂಕು ನಿಗ್ರಹ ಸಂಸ್ಥೆ ಬಂದ್

**ಇಸ್ಲಾಮಾಬಾದ್(ಪಿಟಿಐ):** ಕೊರೊನಾ ಸೋಂಕು ನಿಯಂತ್ರಣಕ್ಕೆ ಸ್ಥಾಪಿಸಲಾಗಿದ್ದ ರಾಷ್ಟ್ರೀಯ ಕೊರೊನಾ ವೈರಸ್ ನಿಗ್ರಹ ಸಂಸ್ಥೆಯನ್ನು ಮುಚ್ಚುವುದಾಗಿ ಪಾಕಿಸ್ತಾನ ಗುರುವಾರ ಘೋಷಣೆ ಮಾಡಿದೆ. ದೇಶದಲ್ಲಿ ಕೊರೊನಾ ಪ್ರಕರಣಗಳು ಗಣನೀಯ ಪ್ರಮಾಣದಲ್ಲಿ ಇಳಿಕೆಯಾಗಿರುವ ಹಿನ್ನೆಲೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಹೇಳಿದೆ.

ಗುರುವಾರ ಟ್ವೀಟ್ ಮಾಡಿದ ಪಾಕಿಸ್ತಾನ ಪ್ರಧಾನಿ ಇಮ್ರಾನ್ ಖಾನ್ ಅವರು, ಗುರುವಾರ ‘ನ್ಯಾಷನಲ್ ಕಮಾಂಡ್ ಅಂಡ್ ಆಪರೇಷನ್ ಸೆಂಟರ್’(ಎನ್‌ಸಿಒಸಿ) ಮುಚ್ಚಲಾಗುತ್ತಿದೆ. ನಾವು ಕೋವಿಡ್ ನಿಯಂತ್ರಣ ಮಾಡಿದ್ದು, ಅಂತರರಾಷ್ಟ್ರೀಯ ಮಟ್ಟದ ಏಜೆನ್ಸಿಗಳು ಗುರುತಿಸಿದ್ದವು.

## ಶಾ ಜತೆ ಪ್ರಮುಖರ ಸಭೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಶುಕ್ರವಾರ ರಾತ್ರಿ ದೆಹಲಿಗೆ ತೆರಳುವ ಮುನ್ನ ಬಿಜೆಪಿ ಪ್ರಮುಖ ನಾಯಕರ (ಕೋರ್ ಕಮಿಟಿ) ಸಭೆ ನಡೆಸಲಿದ್ದಾರೆ.

ಈ ಸಭೆಯಲ್ಲಿ 2023 ರ ವಿಧಾನ ಸಭೆ ಚುನಾವಣೆಗೆ ಸಿದ್ಧತೆ ನಡೆಸುವ ಕುರಿತು ವಿಸ್ತೃತ ಮಾತುಕತೆ ನಡೆಸಲಿದ್ದಾರೆ. ಬಿಜೆಪಿ ನಾಲ್ಕು ರಾಜ್ಯಗಳಲ್ಲಿ ಗೆಲುವು ಸಾಧಿಸಿದ ಬೆನ್ನಲ್ಲೇ, ರಾಜ್ಯದಲ್ಲಿ ಚುನಾವಣೆ ಕಾರ್ಯತಂತ್ರ ರೂಪಿಸಲು ಶಾ ಮುಂದಾಗಿದ್ದು, ಇದು ಪೂರ್ವಭಾವಿ ಸಭೆ ಎಂದು ಮೂಲಗಳು ತಿಳಿಸಿವೆ.

ಈ ಸಭೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಸಿ.ಟಿ. ರವಿ ಮುಂತಾದವರು ಭಾಗವಹಿಸುವರಯ. ಈ ಸಂದರ್ಭದಲ್ಲಿ ಸರ್ಕಾರ ಮತ್ತು ಚುನಾವಣೆಗೆ ಸಂಬಂಧಿಸಿದಂತೆ ಸಲಹೆ ಸೂಚನೆಗಳನ್ನು ನೀಡಲಿದ್ದಾರೆ. ಪಕ್ಷದ ಸಂಘಟನೆಗೂ ಚುರುಕು ಮುಟ್ಟಿಸಲಿದ್ದಾರೆ.

ಚುನಾವಣೆ ಉದ್ದೇಶದಿಂದ ಸಂಘಟನೆ ಮತ್ತು ಕೋರ್ ಕಮಿಟಿಯಲ್ಲಿ ಆದಷ್ಟು ಬೇಗನೇ ಬದಲಾವಣೆಗಳು ಆಗಬಹುದು. ಇದಕ್ಕೆ ಅಗತ್ಯ ಮಾಹಿತಿಯನ್ನು ಅಮಿತ್ ಶಾ ಪಡೆಯಲಿದ್ದಾರೆ ಎಂದು ಮೂಲಗಳು ಹೇಳಿವೆ.

ಶುಕ್ರವಾರ ಬೆಳಿಗ್ಗೆ ಅವರು ತುಮಕೂರು ಸಿದ್ದಗಂಗಾ ಹಿರಿಯ ಶ್ರೀಗಳ ಜಯಂತ್ಯುತ್ಸವದಲ್ಲಿ ಪಾಲ್ಗೊಳ್ಳುವರು. ಬಳಿಕ ಚಿಕ್ಕಬಳ್ಳಾಪುರ ಜಿಲ್ಲೆಯ ಮುದ್ದೇನಹಳ್ಳಿಯಲ್ಲಿ ನೂತನ ವೈದ್ಯಕೀಯ ಕಾಲೇಜಿನ ಶಿಲಾನ್ಯಾಸ ನೆರವೇರಿಸುವರು. ಸಂಜೆ ಬೆಂಗಳೂರಿನ ಅರಮನೆ ಮೈದಾನದಲ್ಲಿ ಸಹಕಾರ ಕ್ಷೇತ್ರದ ಕಾರ್ಯಕ್ರಮಗಳಲ್ಲಿ ಭಾಗವಹಿಸುವರು.

## ನೇಪಾಳದ ಪ್ರಧಾನಿ ಇಂದು ಭಾರತಕ್ಕೆ

**ಕಠ್ಮಂಡು(ಪಿಟಿಐ):** ನೇಪಾಳದ ಪ್ರಧಾನಿ ಶೇರ್ ಬಹಾದ್ದೂರ್ ದೇವುಬಾ ಅವರು ಶುಕ್ರವಾರ 50 ಮಂದಿ ಪ್ರತಿನಿಧಿಗಳ ನಿಯೋಗದ ಜತೆ ಭಾರತದ ಪ್ರವಾಸ ಕೈಗೊಳ್ಳಲಿದ್ದಾರೆ.

ಭಾರತ ಮತ್ತು ನೇಪಾಳದ ಬಾಂಧವ್ಯವನ್ನು ಮತ್ತಷ್ಟು ವೃದ್ಧಿಸುವ ನಿಟ್ಟಿನಲ್ಲಿ ಈ ಪ್ರವಾಸ ಕೈಗೊಂಡಿದ್ದಾರೆ. ಕಳೆದ ವರ್ಷದ ಜುಲೈನಲ್ಲಿ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡ ಬಳಿಕ ಮೊದಲ ವಿದೇಶಿ ಪ್ರಯಾಣ ಇದಾಗಿದೆ.

ಈ ನಿಯೋಗ ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಹಾಗೂ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಬಾಲ್ ಅವರನ್ನು ಭೇಟಿ ಮಾಡಲಿದೆ. ಈ ನಿಯೋಗದಲ್ಲಿ ವಿದೇಶಾಂಗ, ಜಲ ಸಂಪನ್ಮೂಲ, ಆರೋಗ್ಯ ಮತ್ತು ನಾಗರಿಕ, ಕೃಷಿ ಇಲಾಖೆಗಳ ಕಾರ್ಯದರ್ಶಿಗಳು ಇರಲಿದ್ದಾರೆ.

ಅವಿಶ್ವಾಸ ನಿರ್ಣಯ: ಅಧಿವೇಶನ ಭಾನುವಾರಕ್ಕೆ ಮುಂದೂಡಿಕೆ

# ರಾಜೀನಾಮೆ ಕೊಡಲ್ಲ: ಪಾಕ್ ಪ್ರಧಾನಿ

**ಇಸ್ಲಾಮಾಬಾದ್(ಪಿಟಿಐ):** ‘ಯಾವುದೇ ಕಾರಣಕ್ಕೂ ಪ್ರಧಾನಿ ಸ್ಥಾನಕ್ಕೆ ರಾಜೀನಾಮೆ ನೀಡುವುದಿಲ್ಲ. ಅವಿಶ್ವಾಸ ನಿರ್ಣಯವನ್ನು ಎದುರಿಸುತ್ತೇನೆ. ಸೋಲನ್ನು ಒಪ್ಪಿಕೊಳ್ಳದೆ ಕೊನೆಯವರೆಗೂ ಹೋರಾಡುತ್ತೇನೆ’ ಎಂದು ಪಾಕಿಸ್ತಾನದ ಪ್ರಧಾನಿ ಇಮ್ರಾನ್ ಖಾನ್ ಹೇಳಿದ್ದಾರೆ.

ಯಾರೆಲ್ಲಾ ನಾಯಕರು ತಮ್ಮನ್ನು ಮಾರಿಕೊಳ್ಳುತ್ತಾರೆ ಎಂಬುದನ್ನು ಕಾದು ನೋಡುತ್ತೇನೆ ಎಂದು ತಮ್ಮ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿದ ಪ್ರತಿಪಕ್ಷಗಳ ವಿರುದ್ಧ ಪರೋಕ್ಷ ಕಿಡಿಕಾರಿದ್ದಾರೆ.

ಈ ಸಂಬಂಧ ಗುರುವಾರ ರಾಷ್ಟ್ರವನ್ನುದ್ದೇಶಿಸಿ ಮಾತನಾಡಿದ ಅವರು, 'ನಾವು ಭಯ ಮತ್ತು ಹಣವನ್ನು ಆರಾಧಿಸುತ್ತಿದ್ದೇವೆ. ಮಾನವರಾದ ನಾವು ಇರುವೆಯಂತೆ ವರ್ತಿಸುತ್ತಿದ್ದೇವೆ. ಪಾಕಿಸ್ತಾನದ ಏಳುಬೀಳುಗಳನ್ನು ಕಂಡಿದ್ದೇನೆ. ನಾನು ಶಾಲಾ ವಿದ್ಯಾರ್ಥಿಯಾಗಿದ್ದಾಗ, ಪಾಕಿಸ್ತಾನ ಹೇಗಿರಬೇಕೆಂಬ ಉದಾಹರಣೆಯನ್ನು ಇತರೆ ದೇಶಗಳಿಗೆ ನೀಡಿತ್ತು. ಪಾಕಿಸ್ತಾನದ ಸಂಸ್ಥಾಪಕರು ಕನಸುಗಳನ್ನು ನನಸು ಮಾಡಲು ನಾನು ರಾಜಕೀಯಕ್ಕೆ ಬಂದಿದ್ದೇನೆ. ಪಾಕಿಸ್ತಾನವು ನನಗಿಂತ 5 ವರ್ಷವಷ್ಟೇ ಹಿರಿದು' ಎಂದು ಹೇಳಿದರು.

'ನನಗೆ ಭಾರತ ಮತ್ತು ಅಮೆರಿಕದಲ್ಲಿ ಹಲವು ಜನರು ಸ್ನೇಹಿತರಿದ್ದಾರೆ. ಆ ದೇಶಗಳ ಬಗ್ಗೆ ನನಗೇನು ತೊಂದರೆಯಿಲ್ಲ. ಆದರೆ ಅವರ ನೀತಿಗಳನ್ನು ಖಂಡಿಸುತ್ತೇನೆ' ಎಂದಿದ್ದಾರೆ.

**‘ಬಾಯ್ತುಪ್ಪಿ ಹೇಳಿಕೆ’:** ತಮ್ಮನ್ನು ಪದಚ್ಯುತಗೊಳಿಸಬೇಕು ಎಂದು ಅಂತರರಾಷ್ಟ್ರೀಯ ಮಟ್ಟದಲ್ಲಿ ಸಂಚು ನಡೆಯುತ್ತಿದೆ. ಇದಕ್ಕೆ ಸಂಬಂಧಿಸಿದಂತೆ ತಮಗೆ ಬಂದಿರುವ ಬೆದರಿಕೆ ಪತ್ರದ ಹಿಂದೆ ಅಮೆರಿಕ ಇದೆ ಎಂದು ಇಮ್ರಾನ್ ಹೇಳಿದ್ದರು. ತಾವು ಈ ಹೇಳಿಕೆಯನ್ನು ಬಾಯ್ತುಪ್ಪಿ ನೀಡಿರುವುದಾಗಿ ಇಮ್ರಾನ್ ಖಾನ್ ಗುರುವಾರ ಸ್ಪಷ್ಟನೆ ನೀಡಿದ್ದಾರೆ.

ವಿದೇಶವೊಂದರ ಪಾಕಿಸ್ತಾನದ ರಾಯಭಾರ ಕಚೇರಿಗೆ ಬೆದರಿಕೆ ಪತ್ರ ಬಂದಿತ್ತು. ‘ಇಮ್ರಾನ್ ಖಾನ್ ಅಧಿಕಾರದಲ್ಲಿ ಮುಂದುವರೆದರೆ ಪಾಕಿಸ್ತಾನ ಸಂಕಷ್ಟ ಎದುರಿಸಬೇಕಾಗುತ್ತದೆ ಎಂದು ಪತ್ರದಲ್ಲಿ ಹೇಳಲಾಗಿದೆ. ತಮ್ಮ ಸರ್ಕಾರವನ್ನು ಬೀಳಿಸಲು ಅಂತರರಾಷ್ಟ್ರೀಯ ಮಟ್ಟದಲ್ಲಿ ಸಂಚು ನಡೆಯುತ್ತಿದೆ. ವಿರೋಧ ಪಕ್ಷಗಳು ಅವರ ಜೊತೆ ಗೂಡಿದ್ದಾರೆ’ ಎಂದು ಇಮ್ರಾನ್ ಖಾನ್ ಬಹಿರಂಗ ಸಭೆಯಲ್ಲಿ ಆರೋಪಿಸಿದ್ದರು.

ಒಟ್ಟು 342 ಸದಸ್ಯ ಬಲದ ಪಾಕಿಸ್ತಾನದ ಸಂಸತ್ತಿನಲ್ಲಿ ಇಮ್ರಾನ್ ವಿಶ್ವಾಸ ಮತ ಗೆಲ್ಲಲು 172 ಸದಸ್ಯರ ಬೆಂಬಲ ಬೇಕಿದೆ. ಆದರೆ ತಮಗೆ 175 ಸಂಸದರ ಬೆಂಬಲವಿದೆ ಎಂದು ಹೇಳುತ್ತಿರುವ ಪ್ರತಿಪಕ್ಷವು, ತಕ್ಷಣವೇ ಇಮ್ರಾನ್ ಅವರು ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸುತ್ತಿದೆ.

**ಅಧಿವೇಶನ ಮುಂದಕ್ಕೆ:** ಇಮ್ರಾನ್ ಖಾನ್ ವಿರುದ್ಧದ ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆಗೆ ಗುರುವಾರ ಪಾಕಿಸ್ತಾನದ ನ್ಯಾಷನಲ್ ಅಸೆಂಬ್ಲಿ ಅಧಿವೇಶನ ಸೇರಿತ್ತು. ಇಮ್ರಾನ್ ವಿರುದ್ಧ ಮಂಡಿಸಿರುವ ಅವಿಶ್ವಾಸ ನಿರ್ಣಯವನ್ನು ತಕ್ಷಣವೇ ಮತಕ್ಕೆ ಹಾಕುವಂತೆ ವಿರೋಧ ಪಕ್ಷಗಳ ಸದಸ್ಯರು ಒತ್ತಾಯಿಸಿದರು. ಕಲಾಪವನ್ನು ದಿಢೀರ್ ಭಾನುವಾರಕ್ಕೆ ಮುಂದೂಡಲಾಗಿದೆ.

## ಆರೋಪ ತಳ್ಳಿಹಾಕಿದ ಅಮೆರಿಕ

ಪಾಕಿಸ್ತಾನ ಪ್ರಧಾನಿ ಇಮ್ರಾನ್‌ಖಾನ್ ನೇತೃತ್ವದ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯ ಮಂಡನೆಯಾಗಿರುವ ವಿಷಯದಲ್ಲಿ ತನ್ನ ಪಾತ್ರ ಇದೆ ಎಂಬ ಆರೋಪಗಳನ್ನು ಅಮೆರಿಕ ತಳ್ಳಿಹಾಕಿದೆ.

‘ದೇಶದಲ್ಲಿನ ಪ್ರಸಕ್ತ ರಾಜಕೀಯ ಬೆಳವಣಿಗೆಗೆ ಸಂಬಂಧಿಸಿ ಪಾಕಿಸ್ತಾನ ವಿದೇಶಾಂಗ ಸಚಿವಾಲಯಕ್ಕೆ ಪತ್ರ ಬರೆದಿಲ್ಲ ಎಂಬುದಾಗಿಯೂ ಅಮೆರಿಕ ಹೇಳಿದೆ’ ಎಂದು ಡಾನ್ ಪತ್ರಿಕೆ ವರದಿ ಮಾಡಿದೆ.

**ಚೀನಾ ಸಲಹೆ:** ಇಮ್ರಾನ್ ಖಾನ್ ಪದಚ್ಯುತಿಗೆ ಅವಿಶ್ವಾಸ ನಿರ್ಣಯ ಮಂಡನೆಯಾಗಿರುವ ಬೆನ್ನಲ್ಲೇ, ದೇಶದ ಅಭಿವೃದ್ಧಿ ಮತ್ತು ಸ್ಥಿರತೆಗಾಗಿ ಪಾಕಿಸ್ತಾನದ ಎಲ್ಲಾ ಪಕ್ಷಗಳು ಒಗ್ಗೂಡಬೇಕು ಎಂದು ಚೀನಾ ಸಲಹೆ ನೀಡಿದೆ.

ಪಾಕಿಸ್ತಾನದ ಎಲ್ಲಾ ಕಾಲದ ಆತ್ಮೀಯ ಸ್ನೇಹಿತ ಎಂಬ ಖ್ಯಾತಿಯ ಚೀನಾ, ‘ಯಾವುದೇ ದೇಶದ ಆಂತರಿಕ ವಿಚಾರಗಳಲ್ಲಿ ಹಸ್ತಕ್ಷೇಪ ಮಾಡದೇ ಇರುವುದಕ್ಕೆ ನಾವು ಬದ್ಧರಾಗಿದ್ದೇವೆ’ ಎಂದು ಹೇಳಿದೆ.

## ಒಬಿಸಿ ಮೀಸಲಾತಿ: ಆಯೋಗ ರಚನೆ

ಒಂದನೇ ಪುಟದಿಂದ...

ಆಯೋಗಕ್ಕೆ ಯಾರನ್ನೆಲ್ಲ ನೇಮಿಸಬೇಕು. ಎಷ್ಟು ಕಾಲಾವಕಾಶ ನೀಡಿ ವರದಿ ಪಡೆಯಬೇಕು ಮುಂತಾದ ವಿಷಯಗಳ ಬಗ್ಗೆ ಶೀಘ್ರವೇ ನಿರ್ಣಯ ತೆಗೆದುಕೊಳ್ಳಲಾಗುವುದು ಎಂದರು.

ಸುಪ್ರೀಂಕೋರ್ಟ್ ತೀರ್ಪಿನ ಪ್ರಕಾರ ಯಾವುದೇ ರೀತಿಯ ಮೀಸಲಾತಿ ಶೇ 50 ಮೀರಬಾರದು. ಈ ಹಿಂದೆ ಮಹಾರಾಷ್ಟ್ರದಲ್ಲಿ ಮೀಸಲಾತಿ ಪ್ರಮಾಣ ಶೇ 50 ಮೀರಿ ಚುನಾವಣೆ ನಡೆಸಿದಾಗ, ನ್ಯಾಯಾಲಯ ಅದನ್ನು ರದ್ದು ಮಾಡಿತ್ತು. ತಮಿಳುನಾಡಿ ನಲ್ಲೂ ಮೀಸಲಾತಿ ಪ್ರಮಾಣ ಹೆಚ್ಚಿಸಿ ಚುನಾ ವಣೆ ನಡೆಸಿದ ವಿಚಾರ ನ್ಯಾಯಾಲಯದಲ್ಲಿ ಬಾಕಿ ಇದೆ. ಇಂದಿರಾ ಸಹಾನಿ ಪ್ರಕರ ಣದಲ್ಲಿ ಮೀಸಲಾತಿ ಪ್ರಮಾಣ ಶೇ 50 ಮೀರಬಾರದು ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಈ ಮಧ್ಯೆ ಮೀಸಲಾತಿ ನಿಗದಿ ಮಾಡುವ ಅಧಿಕಾರವನ್ನು ಕೇಂದ್ರ ಸರ್ಕಾರ ರಾಜ್ಯಗಳಿಗೆ ನೀಡಿದೆ ಎಂದು ಹೇಳಿದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್, ಜೆಡಿಎಸ್ ಉಪನಾಯಕ ಬಂಡೆಪ್ಪ ಕಾಶೆಂಪೂರ, ಅಡ್ವೋಕೇಟ್ ಜನರಲ್ ಪ್ರಭುಲಿಂಗ ನಾವದಗಿ ಮುಂತಾದವರು ಇದ್ದರು.

ರಾಹುಲ್ ಗಾಂಧಿ ನೇತೃತ್ವದಲ್ಲಿ 'ಬೆಲೆಏರಿಕೆ ಮುಕ್ತ ಭಾರತ' ಆಂದೋಲನ

# ಬೆಲೆ ಏರಿಕೆ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಇಂಧನ ಮತ್ತು ಅಡುಗೆ ಅನಿಲ ಸಿಲಿಂಡರ್ ಬೆಲೆ ಏರಿಕೆ ವಿರೋಧಿಸಿ ನವದೆಹಲಿಯಲ್ಲಿ ಗುರುವಾರ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ನೇತೃತ್ವದಲ್ಲಿ 'ಬೆಲೆಏರಿಕೆ ಮುಕ್ತ ಭಾರತ' (ಮೆಹಂಗಾಯಿ ಮುಕ್ತ್ ಭಾರತ್) ಆಂದೋಲನದ ಅಂಗವಾಗಿ ಪ್ರತಿಭಟನೆ ನಡೆಸಲಾಯಿತು.

ಇಂಧನ ಮತ್ತು ಎಲ್‌ಪಿಜಿ ಬೆಲೆ ಏರಿಕೆ ವಿರುದ್ಧ ಗುರುವಾರ ಕಾಂಗ್ರೆಸ್ ಪಕ್ಷವು ರಾಷ್ಟ್ರವ್ಯಾಪಿ ಪ್ರತಿಭಟನೆ ಹಮ್ಮಿಕೊಂಡಿತ್ತು.

ಬೆಳಿಗ್ಗೆ ಸಂಸತ್ತಿನ ಬಳಿಯ ವಿಜಯ್ ಚೌಕದಲ್ಲಿ ಲೋಕಸಭೆ ಮತ್ತು ರಾಜ್ಯಸಭೆಯ ಕಾಂಗ್ರೆಸ್ ಸದಸ್ಯರು ಭಿತ್ತಿಪತ್ರಗಳನ್ನು ಹಿಡಿದು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ಪ್ರತಿಭಟನೆಯಲ್ಲಿ ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆಯ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

ಮಧ್ಯಾಹ್ನ 1.30ರ ವೇಳೆಗೆ ಕಾಂಗ್ರೆಸ್‌ನ ಮಹಿಳಾ ಕಾರ್ಯಕರ್ತೆಯರು ಸಂಸತ್ತಿನ ಗೇಟಿನ ಬಳಿ ಬಂದು ಘೋಷಣೆಗಳನ್ನು ಕೂಗಿದರು. ತಕ್ಷಣವೇ ಅವರನ್ನು ಭದ್ರತಾ ಪಡೆಗಳು ಸುತ್ತುವರಿದವು. ಬಳಿಕ ದೆಹಲಿ ಪೊಲೀಸರು ಪ್ರತಿಭಟನನಿರತರನ್ನು ಬಂಧಿಸಿದರು. ಈ ಸಂದರ್ಭದಲ್ಲಿ ಕೆಲಸಮಯದವರೆಗೆ ಸಂಸತ್ತಿನ ದ್ವಾರಗಳನ್ನು ಮುಚ್ಚಲಾಯಿತು.

ಮಾಧ್ಯಮಗಳನ್ನು ಉದ್ದೇಶಿಸಿ ಮಾತನಾಡಿದ ರಾಹುಲ್ ಗಾಂಧಿ, ಹಿಂದೆಂದಿಗಿಂತಲೂ ಅಡುಗೆ ಅನಿಲ ಮತ್ತು ಇಂಧನ ಬೆಲೆಯಲ್ಲಿ ಭಾರಿ ಏರಿಕೆಯಾಗಿದೆ. ಸರ್ಕಾರ ಕೂಡಲೇ ಬೆಲೆ ಏರಿಕೆಯನ್ನು ತಡೆಗಟ್ಟಬೇಕೆಂದು ಆಗ್ರಹಿಸಿದರು.

'ಸರ್ಕಾರವು ಬೆಲೆಏರಿಕೆ ನಿಯಂತ್ರಿಸಬೇಕು. ಪೆಟ್ರೋಲ್, ಡೀಸೆಲ್‌ನ ಬೆಲೆ ಹೆಚ್ಚಿಸುವುದನ್ನು ನಿಲ್ಲಿಸಬೇಕು ಎಂಬುದು ನಮ್ಮ ಬೇಡಿಕೆಯಾಗಿದೆ. ಬೆಲೆ ಏರಿಕೆಯಿಂದಾಗಿ ಬಡ ಮತ್ತು ಮಧ್ಯಮವರ್ಗದ ಜನರು ಹೆಚ್ಚು ತೊಂದರೆಗೀಡಾಗಿದ್ದಾರೆ' ಎಂದು ಅವರು ಹೇಳಿದರು.

ವಿವಿಧ ದೇಶಗಳ ಪೆಟ್ರೋಲ್ ದರವನ್ನು ರಾಹುಲ್ ತಮ್ಮ ಟ್ವಿಟರ್ ಖಾತೆಯಲ್ಲಿ ಹಂಚಿಕೊಂಡಿದ್ದಾರೆ. 'ಅಫ್ಗಾನಿಸ್ತಾನ– ₹ 66.99, ಪಾಕಿಸ್ತಾನ– ₹ 62.38, ಶ್ರೀಲಂಕಾ– ₹ 72.96, ಬಾಂಗ್ಲಾದೇಶ– ₹ 78.53, ಭೂತಾನ್– ₹ 86.28, ನೇಪಾಳ– ₹ 97.05 ಮತ್ತು ಭಾರತದಲ್ಲಿ ಪೆಟ್ರೋಲ್ ದರ ₹101.81 ಇದೆ.



ಬೆಲೆ ಏರಿಕೆ ವಿರೋಧಿಸಿ ಗುರುವಾರ ನವದೆಹಲಿಯ ಸಂಸತ್ ಭವನದ ಹೊರಗೆ ಪ್ರತಿಭಟನೆ ನಡೆಸುತ್ತಿದ್ದ ಮಹಿಳಾ ಕಾಂಗ್ರೆಸ್ ಸದಸ್ಯರನ್ನು ಪೊಲೀಸರು ವಶಕ್ಕೆ ಪಡೆದರು –ಪಿಟಿಐ ಚಿತ್ರ

## ಲೋಕಸಭೆಯಲ್ಲಿ ಸಭಾತ್ಯಾಗ

ನವದೆಹಲಿ (ಪಿಟಿಐ): ಇಂಧನ ಬೆಲೆಯ ನಿರಂತರ ಏರಿಕೆಯನ್ನು ವಿರೋಧಿಸಿ ಲೋಕಸಭೆಯಲ್ಲಿ ಗುರುವಾರ ಕಾಂಗ್ರೆಸ್, ತೃಣಮೂಲ ಕಾಂಗ್ರೆಸ್ (ಟಿಎಂಸಿ) ಸೇರಿದಂತೆ ವಿವಿಧ ಪ್ರತಿಪಕ್ಷಗಳ ಸದಸ್ಯರು ಪ್ರತಿಭಟನೆ ನಡೆಸಿ, ಕಲಾಪ ಬಹಿಷ್ಕರಿಸಿದರು.

ಕಲಾಪ ಆರಂಭವಾಗುತ್ತಿದ್ದಂತೆಯೇ ಇಂಧನ ಬೆಲೆ ಏರಿಕೆ ವಿರೋಧಿಸಿ ಧರಣಿ ಆರಂಭಿಸಿದ ಪ್ರತಿಪಕ್ಷಗಳ ಸದಸ್ಯರು ಬೆಲೆ ಏರಿಕೆ ಹಿಂಪಡೆಯಬೇಕು ಎಂದು ಒತ್ತಾಯಿಸಿದರು.

ಸ್ಪೀಕರ್ ಓಂ ಬಿರ್ಲಾ ಅವರು, 'ಈ ವಿಷಯವನ್ನು ಪ್ರಸ್ತಾಪಿಸಲು ಈ ಅಧಿವೇಶನದಲ್ಲಿ ಈ ಹಿಂದೆ ನಾಲ್ಕು ಸಂದರ್ಭಗಳಲ್ಲಿ ಅವಕಾಶ ನೀಡಲಾಗಿದೆ. ಹಾಗಾಗಿ, ಸದಸ್ಯರು ತಮ್ಮ ಸ್ಥಾನಗಳಿಗೆ ತೆರಳಿ ಕಲಾಪದಲ್ಲಿ ಭಾಗವಹಿಸಬೇಕು' ಎಂದರು. ಆದರೆ, ಸ್ಪೀಕರ್ ಅವರ ಮನವಿ ನಿರ್ಲಕ್ಷಿಸಿದ ಪ್ರತಿಪಕ್ಷದ ಸದಸ್ಯರು ಧರಣಿ ಮುಂದುವರಿಸಿದರು. ಸುಮಾರು 30 ನಿಮಿಷಗಳ ಧರಣಿಯ ಬಳಿಕ ಪ್ರತಿಭಟನಾನಿರತರು ಕಲಾಪ ಬಹಿಷ್ಕರಿಸಿ ಹೊರನಡೆದರು.

# 'ದೇಶಕ್ಕಾಗಿ ಪ್ರಾಣ ತ್ಯಾಗಕ್ಕೆ ಸಿದ್ಧ'

ನವದೆಹಲಿ(ಪಿಟಿಐ): 'ದೇಶಕ್ಕಾಗಿ ನಾನು ಪ್ರಾಣ ತ್ಯಾಗಕ್ಕೂ ಸಿದ್ಧ' ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಗುರುವಾರ ಹೇಳಿದ್ದಾರೆ.

ಬಿಜೆಪಿಯ ಯುವ ಘಟಕ ಭಾರತೀಯ ಜನತಾ ಯುವ ಮೋರ್ಚಾ ಸದಸ್ಯರು ತಮ್ಮ ನಿವಾಸದ ಹೊರಗೆ ದಾಳಿ ನಡೆಸಿ, ಆಸ್ತಿ ಧ್ವಂಸಗೊಳಿಸಿದ ಮತ್ತು ಎಎಪಿಯ ರಾಷ್ಟ್ರೀಯ ಸಂಚಾಲಕನ ಹತ್ಯೆಗೆ ಪಿತೂರಿ ನಡೆದಿದೆ ಎಂದು ಎಎಪಿ ಆರೋಪಿಸಿದ ಮರುದಿನವೇ ಕೇಜ್ರಿವಾಲ್ ಈ ಹೇಳಿಕೆ ನೀಡಿದ್ದಾರೆ.

ಇಲ್ಲಿನ ಐಪಿ ಡಿಪೋದಲ್ಲಿ ಇ-ಬಸ್‌ಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, 'ಕೇಂದ್ರದಲ್ಲಿ ಅಧಿಕಾರದಲ್ಲಿರುವ ಪಕ್ಷದ ಇಂತಹ ಗೂಂಡಾಗಿರಿ ರಾಷ್ಟ್ರದ ಪ್ರಗತಿಗೆ ನೆರವಾಗುವುದಿಲ್ಲ. ಇದರಿಂದ ಜನರಿಗೆ ತಪ್ಪು ಸಂದೇಶವಷ್ಟೇ ರವಾನೆಯಾಗುತ್ತದೆ' ಎಂದು, ಬಿಜೆಪಿಯ ಹೆಸರು ಉಲ್ಲೇಖಿಸದೆ ಟೀಕಿಸಿದರು.

'ಅರವಿಂದ ಕೇಜ್ರಿವಾಲ್ ಮುಖ್ಯವಲ್ಲ. ಆದರೆ, ರಾಷ್ಟ್ರ ಮುಖ್ಯ. ನಾನೊಬ್ಬ ಚಿಕ್ಕ ಮತ್ತು ಸಾಮಾನ್ಯ ಮನುಷ್ಯ. ದೇಶಕ್ಕಾಗಿ ನಾನು ನನ್ನ ಪ್ರಾಣ ಕೊಡಬಲ್ಲೆ. ಇಂತಹ ಗೂಂಡಾಗಿರಿಯಿಂದ ದೇಶ ಎಂದಿಗೂ ಪ್ರಗತಿ ಸಾಧಿಸುವುದಿಲ್ಲ' ಎಂದರು.

ಆಮ್ ಆದ್ಮಿ ಪಕ್ಷವನ್ನು ಸೋಲಿಸಲು ಸಾಧ್ಯವಾಗದಿದ್ದಕ್ಕೆ ಕೇಸರಿ ಪಕ್ಷವು ಕೇಜ್ರಿವಾಲ್ ಅವರ ಹತ್ಯೆಗೆ ಸಂಚು ಮಾಡಿದೆ ಎಂದು ದೆಹಲಿ ಉಪಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಅವರು ಬುಧವಾರ ಬಿಜೆಪಿ ವಿರುದ್ಧ ಗಂಭೀರ ಆರೋಪ ಮಾಡಿದ್ದರು.

'ದಿ ಕಾಶ್ಮೀರ್ ಫೈಲ್ಸ್' ಸಿನಿಮಾ ಕುರಿತು ಕೇಜ್ರಿವಾಲ್ ಅವರು ನೀಡಿದ್ದ ಹೇಳಿಕೆ ಖಂಡಿಸಿ, ದೆಹಲಿಯಲ್ಲಿ ಬಿಜೆಪಿಯ ಯುವ ಮೋರ್ಚಾದ (ಬಿಜೆವೈಎಂ) ರಾಷ್ಟ್ರೀಯ ಅಧ್ಯಕ್ಷ, ಸಂಸದ ತೇಜಸ್ವಿ ಸೂರ್ಯ ನೇತೃತ್ವದಲ್ಲಿ ಸುಮಾರು 200 ಕಾರ್ಯಕರ್ತರು, ಪೊಲೀಸ್ ಬ್ಯಾರಿಕೇಡ್‌ಗಳನ್ನು ಭೇದಿಸಿ ಕೇಜ್ರಿವಾಲ್ ಅವರ ಮನೆ ಹೊರಗೆ ಪ್ರತಿಭಟನೆ, ಆಸ್ತಿ ಹಾನಿಗೊಳಿಸಿದ್ದರು.

**ಎಎಪಿಯಿಂದ ಸಿದ್ಧ ನಾಟಕ:** ನಿರಂತರ ಕಾಶ್ಮೀರಿ ಪಂಡಿತರನ್ನು ಅಪಹಾಸ್ಯ ಮಾಡಿದ ಕೇಜ್ರಿವಾಲ್ ಅವರ ಹೇಳಿಕೆಗಳ ವಿರುದ್ಧ ಸಾರ್ವಜನಿಕರಿಂದ ಆಕ್ರೋಶ ವ್ಯಕ್ತವಾಗಿದ್ದು, ಅದಕ್ಕಾಗಿ ಎಎಪಿಯಿಂದ ಇಂತಹ ಸಿದ್ಧ ನಾಟಕ ನಡೆಯುತ್ತಿದೆ ಎಂದು ಬಿಜೆಪಿ ಆರೋಪಿಸಿದೆ.

'ಈ ವಿಚಾರದಲ್ಲಿ ಬಲಿಪಶುಗಳು ಕಾಶ್ಮೀರಿ ಹಿಂದೂಗಳೇ ಹೊರತು ಎಎಪಿ ಮತ್ತು ಕೇಜ್ರಿವಾಲ್ ಅಲ್ಲ. ಇದು ನಗರ ನಕ್ಸಲರ ಸಮಯಸಾಧಕ ತಂತ್ರ, ನಮ್ಮ ಪ್ರತಿಭಟನೆಯು ಯಾವುದೇ ಪಕ್ಷದ ವಿರುದ್ಧವಲ್ಲ ಮತ್ತು ಇದು ಕೇವಲ 'ದಿ ಕಾಶ್ಮೀರ್ ಫೈಲ್ಸ್'ಗೆ ಸಂಬಂಧಿಸಿದ್ದು. ಕಾಶ್ಮೀರದಲ್ಲಿ ಹಿಂದೂ ಸಮುದಾಯದ ನರಮೇಧ ನಡೆದಿರುವುದನ್ನು ಅಲ್ಲಗಳೆದಿರುವ ಕೇಜ್ರಿವಾಲ್ ಅವರ ಅಮಾನವೀಯ ಮನಸ್ಥಿತಿಯ ವಿರುದ್ಧವಷ್ಟೇ' ಎಂದು ತೇಜಸ್ವಿ ಸೂರ್ಯ ಹೇಳಿದರು.

## ಎಸ್‌ಐಟಿ ರಚಿಸುವಂತೆ ದೆಹಲಿ ಹೈಕೋರ್ಟ್‌ಗೆ ಎಎಪಿ ಮೊರೆ

ನವದೆಹಲಿ(ಪಿಟಿಐ): ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರ ನಿವಾಸದ ಹೊರಗೆ ನಡೆದಿರುವ ದಾಂದಲೆ ಬಗ್ಗೆ ನಿಷ್ಪಕ್ಷಪಾತ ಮತ್ತು ಕಾಲಮಿತಿಯ ತನಿಖೆಗೆ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸುವಂತೆ ಕೋರಿ ಎಎಪಿ ಶಾಸಕ ಸೌರಭ್ ಭಾರದ್ವಾಜ್ ಗುರುವಾರ ದೆಹಲಿ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ಮುಖ್ಯಮಂತ್ರಿ ಮತ್ತು ಅವರ ನಿವಾಸದ ಭದ್ರತೆ ಖಾತ್ರಿಪಡಿಸಿಕೊಳ್ಳಲು ದೆಹಲಿ ಪೊಲೀಸರು ಮತ್ತು ಗೃಹ ಸಚಿವಾಲಯಕ್ಕೆ ನಿರ್ದೇಶನ ನೀಡುವಂತೆ ಕೋರಿರುವ ಈ ಅರ್ಜಿ ಶುಕ್ರವಾರ ವಿಚಾರಣೆಗೆ ಬರುವ ನಿರೀಕ್ಷೆ ಇದೆ.

'ದಿ ಕಾಶ್ಮೀರ್ ಫೈಲ್ಸ್' ಸಿನಿಮಾ ಕುರಿತು ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ನೀಡಿದ್ದ ಹೇಳಿಕೆ ಖಂಡಿಸಿ ಬಿಜೆಪಿ ಯುವ ಘಟಕದ ಸದಸ್ಯರು, ಎಎಪಿ ಸಂಚಾಲಕರೂ ಆದ ಕೇಜ್ರಿವಾಲ್ ಅವರ ನಿವಾಸದ ಹೊರಗೆ ಆಸ್ತಿ ಧ್ವಂಸಗೊಳಿಸಿದ್ದಾರೆ ಎಂದು ಎಎಪಿ ಆರೋಪಿಸಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದೆಹಲಿ ಪೊಲೀಸರು ಅಪರಿಚಿತರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿಕೊಂಡಿದ್ದು ಎಂಟು ಮಂದಿಯನ್ನು ಬಂಧಿಸಿದ್ದಾರೆ.

# ಬಿಜೆಪಿಗೆ ಶಿವಪಾಲ್?

ಪ್ರಜಾವಾಣಿ ವಾರ್ತೆ

ಲಖನೌ: ಉತ್ತರ ಪ್ರದೇಶ ವಿಧಾನಸಭಾ ಚುನಾವಣಾ ಫಲಿತಾಂಶದ ಬಳಿಕ ಎಸ್‌ಪಿ ಮುಖ್ಯಸ್ಥ ಅಖಿಲೇಶ್ ಯಾದವ್ ಹಾಗೂ ಅವರ ಚಿಕ್ಕಪ್ಪ ಶಿವಪಾಲ್ ಯಾದವ್ ನಡುವೆ ಮತ್ತೆ ಒಡಕು ಮೂಡಿದ್ದು, ಶಿವಪಾಲ್ ಅವರು ಬಿಜೆಪಿ ಜೊತೆ ಕೈಜೋಡಿಸುವ ಸಾಧ್ಯತೆಯಿದೆ ಎನ್ನಲಾಗಿದೆ.

ಶಿವಪಾಲ್ ಅವರು ಮುಖ್ಯಮಂತ್ರಿ ಆದಿತ್ಯನಾಥ ಅವರನ್ನು ಬುಧವಾರ ಭೇಟಿ ಮಾಡಿ ಅರ್ಧತಾಸು ಚರ್ಚಿಸಿರುವುದು ಈ ಊಹಾಪೋಹಕ್ಕೆ ಕಾರಣ. ವಿಧಾನಸಭೆಯಲ್ಲಿ ಎಸ್‌ಪಿ ಶಾಸಕಾಂಗ ಪಕ್ಷದ ನಾಯಕರಾಗಿ ಅಖಿಲೇಶ್ ಅವರನ್ನು ಆಯ್ಕೆ ಮಾಡಲಾದ ಸಭೆಗೆ ಶಿವಪಾಲ್ ಅವರಿಗೆ ಆಹ್ವಾನವಿರಲಿಲ್ಲ. ಈ ಬಗ್ಗೆ ಎಸ್‌ಪಿ ವರಿಷ್ಠ ಮುಲಾಯಂ ಸಿಂಗ್ ಅವರಿಗೆ ದೂರು ನೀಡಿದ್ದ ಶಿವಪಾಲ್, ದೆಹಲಿಯಲ್ಲಿ ಬಿಜೆಪಿ ಹಿರಿಯ ಮುಖಂಡರನ್ನು ಭೇಟಿ ಮಾಡಿದ್ದರು ಎಂದು ಮೂಲಗಳು ತಿಳಿಸಿವೆ.

ಬಿಜೆಪಿ ಸೇರುವ ಕುರಿತು ಕೇಳಿದ ಪ್ರಶ್ನೆಗೆ ನೇರವಾಗಿ ಉತ್ತರಿಸದ ಶಿವಪಾಲ್, ಸದ್ಯದಲ್ಲೇ ತಮ್ಮ ನಿರ್ಧಾರ ಪ್ರಕಟಿಸುವುದಾಗಿ ತಿಳಿಸಿದರು.

ಜಸ್ವಂತ್ ನಗರ ಕ್ಷೇತ್ರದಿಂದ ವಿಧಾನ ಸಭೆಗೆ ಆಯ್ಕೆಯಾಗಿರುವ ಶಿವಪಾಲ್ ಅವರನ್ನು ಬಿಜೆಪಿ ರಾಜ್ಯಸಭೆಗೆ ಕಳುಹಿಸುವ ಸಾಧ್ಯತೆಯಿದ್ದು, ಅವರ ಪುತ್ರ ಆದಿತ್ಯ ಯಾದವ್ ಅವರನ್ನು ಜಸ್ವಂತ್ ನಗರ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿಸುವ ಸಾಧ್ಯತೆಯಿದೆ.

## ಎನ್‌ಡಿಎಯಿಂದ ಹೊರಬಂದ ಪಕ್ಷಗಳ ಒಗ್ಗಟ್ಟು ಅಗತ್ಯ: ರಾವುತ್

ಪ್ರಜಾವಾಣಿ ವಾರ್ತೆ

ಮುಂಬೈ: ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದಿಂದ ಹೊರಬಂದಿರುವ ಪಕ್ಷಗಳು ಒಟ್ಟುಗೂಡಿ, ಮುಂದಿನ ಯೋಜನೆಗಳ ಬಗ್ಗೆ ಚರ್ಚಿಸಬೇಕು ಎಂದು ಶಿವಸೇನಾ ವಕ್ತಾರ ಸಂಜಯ್ ರಾವುತ್ ಅಭಿಪ್ರಾಯಪಟ್ಟಿದ್ದಾರೆ. ಕಾಂಗ್ರೆಸ್ ಸಹ ಯುಪಿಎ ಮೈತ್ರಿಕೂಟಕ್ಕೆ ಮರುಜೀವ ಕೊಡಲು ಯತ್ನಿಸಬೇಕು ಎಂದೂ ಅವರು ಸಲಹೆ ನೀಡಿದ್ದಾರೆ.

ಈ ಸಂಬಂಧ ಪಕ್ಷದ ಮುಖ್ಯಸ್ಥ ಹಾಗೂ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರ ಜೊತೆ ಮಾತನಾಡುತ್ತೇನೆ ಎಂದಿದ್ದಾರೆ. 'ಎನ್‌ಡಿಎ ಈಗ ಎಲ್ಲಿದೆ? ಅದರ ಅಸ್ತಿತ್ವ ಈಗ ಉಳಿದಿಲ್ಲ. ಶಿವಸೇನಾ ಅದರಿಂದ ಹೊರಬಂದಿದೆ. ಅಕಾಲಿ ದಳವೂ ಹೊರಬಂದಿದೆ. ಬಿಜೆಪಿಗೆ ಬಹುಮತ ಇಲ್ಲದ ಕಾಲದಲ್ಲಿ ಎನ್‌ಡಿಎ ಉದಯವಾಯಿತು. ಈಗ ಬಿಜೆಪಿಯ ಸಂಸದರೇ 300ಕ್ಕೂ ಹೆಚ್ಚು ಮಂದಿ ಇದ್ದಾರೆ. ಹೀಗಿರುವಾಗ ಎನ್‌ಡಿಎ ಪ್ರಶ್ನೆಯ ಉದ್ಭವಿಸುವುದಿಲ್ಲ' ಎಂದು ರಾವುತ್ ವಿವರಿಸಿದ್ದಾರೆ.

ಕಾಂಗ್ರೆಸ್‌ನ ಭಿನ್ನಮತೀಯ (ಗ್ರೂಪ್–23) ತಂಡದ ಪ್ರಮುಖ ನಾಯಕ ಗುಲಾಂ ನಬಿ ಆಜಾದ್ ಅವರು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರನ್ನು ಭೇಟಿ ಮಾಡಿದ ಹಿನ್ನೆಲೆಯಲ್ಲಿ ರಾವುತ್ ಅವರ ಈ ಹೇಳಿಕೆಗೆ ಮಹತ್ವ ಬಂದಿದೆ.

'ಬಿಜೆಪಿ ಎದುರಿಸಲು ಪ್ರತಿಪಕ್ಷಗಳ ಒಗ್ಗಟ್ಟು ಅತಿಮುಖ್ಯ. ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್, ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ, ಟಿಆರ್‌ಎಸ್ ಮುಖ್ಯಸ್ಥ ಕೆ. ಚಂದ್ರಶೇಖರರಾವ್ ಅವರು ಪ್ರತಿಪಕ್ಷಗಳನ್ನು ಒಗ್ಗೂಡಿಸುವ ಯತ್ನದಲ್ಲಿದ್ದಾರೆ' ಎಂದರು.

# ಮೇಕೆದಾಟು ಯೋಜನೆಗೆ ಒಪ್ಪಿಗೆ ನೀಡಬೇಡಿ: ಸ್ಟಾಲಿನ್

ಚೆನ್ನೈ: ಬೆಂಗಳೂರು ಸೇರಿದಂತೆ ಇನ್ನಿತರ ರಾಜ್ಯಗಳಿಗೆ ಕುಡಿಯುವ ನೀರು ಒದಗಿಸುವ ಕರ್ನಾಟಕ ಸರ್ಕಾರದ 'ಮೇಕೆದಾಟು' ಯೋಜನೆಗೆ ಅನುಮೋದನೆ ನೀಡಬಾರದು ಎಂದು ಕೇಂದ್ರ ಸರ್ಕಾರಕ್ಕೆ ತಮಿಳುನಾಡು ಸರ್ಕಾರ ಒತ್ತಾಯಿಸಿದೆ.

ದೆಹಲಿ ಪ್ರವಾಸದಲ್ಲಿರುವ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ ಸ್ಟಾಲಿನ್ ಅವರು ಗುರುವಾರ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿ, ಕುಡಿಯುವ ನೀರಿನ ಹೆಸರಿನಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ನಿರ್ಮಿಸಲು ಮುಂದಾಗಿರುವ ಕರ್ನಾಟಕ ಸರ್ಕಾರದ ಮೇಕೆದಾಟು ಯೋಜನೆಯು 2018ರ ಸುಪ್ರೀಂ ಕೋರ್ಟ್ ತೀರ್ಪಿನ ಉಲ್ಲಂಘನೆಯಾಗಿದೆ. ಹೀಗಾಗಿ ಮೇಕೆದಾಟು ಯೋಜನೆ ಜಾರಿಯು ತಮಿಳುನಾಡು ರೈತ ಸಮುದಾಯದ ಹಿತಾಸಕ್ತಿ ಮೇಲೆ ಪರಿಣಾಮ ಬೀರಲಿದೆ ಎಂದು ಹೇಳಿದರು.

ಅಲ್ಲದೆ ವರ್ಷದಲ್ಲಿ ಉತ್ತಮ ಮಳೆಯಾಗಲಿ ಅಥವಾ ಸಾಮಾನ್ಯ ಮಳೆಯೇ ಆಗಲಿ, ತನ್ನ ಪಾಲಿನ ನೀರನ್ನು ಕರ್ನಾಟಕ ಸರ್ಕಾರ ಬಿಡುಗಡೆ ಮಾಡುವುದಿಲ್ಲ ಎಂದು ದೂರಿದ ಅವರು, ಮೇಕೆದಾಟು ಸೇರಿದಂತೆ ಕಾವೇರಿ ಜಲಾನಯನ ಪ್ರದೇಶದಲ್ಲಿ ಕರ್ನಾಟಕದ ಯಾವುದೇ ಯೋಜನೆಗಳಿಗೆ ಅನುಮೋದನೆ ನೀಡದಂತೆ ಕೇಂದ್ರ ಜಲಶಕ್ತಿ ಇಲಾಖೆಗೆ ನಿರ್ದೇಶನ ನೀಡುವಂತೆ ಪ್ರಧಾನಿ ಮೋದಿ ಅವರಿಗೆ ಮನವಿ ಮಾಡಿದ್ದಾರೆ.

ಜೊತೆಗೆ ಮೇಕೆದಾಟು ಯೋಜನೆಗೆ ಅನುಮೋದನೆ ನೀಡಬಾರದು ಎಂದು ಕಾವೇರಿ ನಿರ್ವಹಣೆ ಪ್ರಾಧಿಕಾರಕ್ಕೂ ಸೂಚನೆ ನೀಡಬೇಕು. ತಮಿಳುನಾಡು ಸರ್ಕಾರದ ಅನುಮತಿಯಿಲ್ಲದೆ ಕಾವೇರಿ ಜಲಾನಯನ ಪ್ರದೇಶದಲ್ಲಿ ಕರ್ನಾಟಕ ಸರ್ಕಾರ ಯಾವುದೇ ಯೋಜನೆ ಕೈಗೊಳ್ಳಬಾರದು ಎಂದು ಅವರು ಒತ್ತಾಯಿಸಿದರು.

# 'ಅವಿವಾಹಿತ ಮಗಳು ತನ್ನ ಮದುವೆ ವೆಚ್ಚ ಪಡೆಯಬಹುದು'

ರಾಯಪುರ(ಪಿಟಿಐ): 'ಹಿಂದೂ ದತ್ತು ಸ್ವೀಕಾರ ಮತ್ತು ಜೀವನಾಂಶ ಕಾಯ್ದೆ-1956'ರ ಅಡಿ ಅವಿವಾಹಿತ ಪುತ್ರಿಯು ತನ್ನ ಪೋಷಕರಿಂದ ತನ್ನ ಮದುವೆ ಖರ್ಚನ್ನು ಪಡೆಯಲು ಅವಕಾಶವಿದೆ ಎಂದು ಛತ್ತೀಸಗಡ ಹೈಕೋರ್ಟ್ ಪ್ರತಿಪಾದಿಸಿದೆ.

ಛತ್ತೀಸಗಡದ ದುರ್ಗ ಜಿಲ್ಲೆಯ 35 ವರ್ಷದ ರಾಜೇಶ್ವರಿ ಎಂಬ ಮಹಿಳೆ ಸಲ್ಲಿಸಿದ ಅರ್ಜಿಯನ್ನು ಹೈಕೋರ್ಟ್‌ನ ಬಿಲಾಸ್‌ಪುರ ವಿಭಾಗೀಯ ಪೀಠ ವಿಚಾರಣೆ ನಡೆಸಿತು. ಈ ವೇಳೆ ಪೀಠದಲ್ಲಿದ್ದ ನ್ಯಾಯಮೂರ್ತಿಗಳಾದ ಭದೂರಿ ಹಾಗೂ ಸಂಜಯ್ ಎಸ್. ಅಗರ್‌ವಾಲ್ ಅವರಿದ್ದ ಪೀಠವು, '1956ರ ಹಿಂದೂ ದತ್ತು ಸ್ವೀಕಾರ ಮತ್ತು ಜೀವನಾಂಶ ಕಾಯ್ದೆ' ಪ್ರಕಾರ ಅವಿವಾಹಿತ ಯುವತಿ ತನ್ನ ಪೋಷಕರಿಂದ ಮದುವೆಯ ಖರ್ಚು ಪಡೆಯಲು ಅವಕಾಶವಿದೆ ಎಂಬ ವಕೀಲರ ವಾದವನ್ನು ಪುಷ್ಟೀಕರಿಸಿತು.

ಈ ಮೂಲಕ 2016ರ ಏಪ್ರಿಲ್ 22ರಂದು ದುರ್ಗ ಕೌಟುಂಬಿಕ ನ್ಯಾಯಾಲಯದ ನ್ಯಾಯಾಧೀಶರು ನೀಡಿದ್ದ ಆದೇಶವನ್ನು ಹೈಕೋರ್ಟ್ ತಳ್ಳಿಹಾಕಿದೆ.

**ಏನಿದು ಪ್ರಕರಣ?:** ಭಿಲಾಯ್ ಉಕ್ಕು ಘಟಕದ ಉದ್ಯೋಗಿಯಾದ ಭಾನುರಾಮ್ ಅವರ ಪುತ್ರಿಯಾದ ರಾಜೇಶ್ವರಿ ಅವರು ತನಗೆ ಮದುವೆ ಖರ್ಚು ನೀಡಬೇಕು ಎಂದು ಕೋರಿ 2016ರಲ್ಲಿ ಕೌಟುಂಬಿಕ ನ್ಯಾಯಾಲಯದ ಮೊರೆ ಹೋಗಿದ್ದರು. ಈ ಅರ್ಜಿಯಲ್ಲಿ ತಮ್ಮ ತಂದೆ ಭಾನುರಾಮ್ ಅವರು ನಿವೃತ್ತಿಯಾಗುವ ವೇಳೆ ₹55 ಲಕ್ಷ ಪಡೆಯಲಿದ್ದಾರೆ. ಇದರಲ್ಲಿ ತನ್ನ ಮದುವೆ ಖರ್ಚಿಗಾಗಿ ₹20 ಲಕ್ಷ ನೀಡಬೇಕು ಎಂದು ಸೂಚಿಸಬೇಕು ಎಂದು ರಾಜೇಶ್ವರಿ ಅವರು ಉಲ್ಲೇಖಿಸಿದ್ದರು. ಆದರೆ ಕೌಟುಂಬಿಕ ನ್ಯಾಯಾಲಯ ಈ ಅರ್ಜಿಯನ್ನು ತಿರಸ್ಕರಿಸಿತ್ತು. ಆದರೆ, ಇದರ ವಿರುದ್ಧ ರಾಜೇಶ್ವರಿ ಅವರು ಹೈಕೋರ್ಟ್ ಮೊರೆ ಹೋಗಿದ್ದರು.

ಸೋನಿಯಾ ಆರೋಪ ಸತ್ಯಕ್ಕೆ ದೂರ: ಸಚಿವ ಠಾಕೂರ್

# ನರೇಗಾ: ಅನುದಾನ ಕಡಿತಕ್ಕೆ ಆಕ್ಷೇಪ

ನವದೆಹಲಿ(ಪಿಟಿಐ): ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ (ಎಂಜಿನರೇಗಾ) ಯೋಜನೆಗೆ ಕೇಂದ್ರವು ಬಜೆಟ್‌ನಲ್ಲಿ ಅನುದಾನ ಕಡಿತ ಮಾಡಿದೆ. ಇದರಿಂದಾಗಿ ಹಲವು ರಾಜ್ಯ ಸರ್ಕಾರಗಳು ಕೆಲಸಗಾರರಿಗೆ ₹ 5000 ಕೋಟಿ ಬಾಕಿ ಉಳಿಸಿಕೊಂಡಿವೆ ಎಂದು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಕಳವಳ ವ್ಯಕ್ತಪಡಿಸಿದರು.

ಲೋಕಸಭೆಯಲ್ಲಿ ಗುರುವಾರ ಶೂನ್ಯವೇಳೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಅವರು, 'ಕೊರೊನಾ ಬಿಕ್ಕಟ್ಟಿನ ಅವಧಿಯಲ್ಲಿ ನರೇಗಾ ಯೋಜನೆಯಿಂದ ಅನುಕೂಲವಾಗಿದೆ. ಈ ಯೋಜನೆಗೆ ಅಗತ್ಯವಿರುವಷ್ಟು ಹಣವನ್ನು ನೀಡಬೇಕು. ಕೂಲಿಕಾರರಿಗೆ 15 ದಿನಗಳಲ್ಲಿ ವೇತನ ಪಾವತಿಯಾಗುವಂತೆ ನೋಡಿಕೊಳ್ಳಬೇಕು' ಎಂದು ಅವರು ಸರ್ಕಾರವನ್ನು ಒತ್ತಾಯಿಸಿದರು.

ಸೋನಿಯಾ ಅವರು ಈ ವಿಚಾರದಲ್ಲಿ ರಾಜಕೀಯ ಮಾಡುತ್ತಿದ್ದಾರೆ. ಅವರ ಹೇಳಿಕೆಗಳು ಸತ್ಯಕ್ಕೆ ದೂರವಾಗಿವೆ ಎಂದು ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ಗಿರಿರಾಜ್ ಸಿಂಗ್ ಹಾಗೂ ಮಾಹಿತಿ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್ ಹೇಳಿದರು.

ನರೇಗಾ ಯೋಜನೆಗೆ 2013-14ರಲ್ಲಿ ಯುಪಿಎ ಸರ್ಕಾರ ₹33,000 ಕೋಟಿ ಅನುದಾನ ನೀಡಿತ್ತು. ಆದರೆ, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಇದನ್ನು ₹1.12 ಲಕ್ಷ ಕೋಟಿಗೆ ಏರಿಸಿದೆ. ನಮಗೆ ಕನ್ನಡಿ ತೋರಿಸುವ ಅಗತ್ಯವಿಲ್ಲ ಎಂದು ಗಿರಿರಾಜ್ ಸಿಂಗ್ ಅವರು ಸೋನಿಯಾ ವಿರುದ್ಧ ವಾಗ್ದಾಳಿ ನಡೆಸಿದರು.

# ವನ್ನಿಯರ್ ಮೀಸಲಾತಿ ರದ್ದು: 'ಸುಪ್ರೀಂ'

ನವದೆಹಲಿ (ಪಿಟಿಐ): ತಮಿಳುನಾಡಿನ ಅತ್ಯಂತ ಹಿಂದುಳಿದ ವನ್ನಿಯರ್ ಸಮುದಾಯದವರಿಗೆ ನೀಡಲಾಗಿದ್ದ ಮೀಸಲಾತಿಯನ್ನು ಸುಪ್ರೀಂ ಕೋರ್ಟ್ ಗುರುವಾರ ರದ್ದುಪಡಿಸಿದ್ದು, ಮದ್ರಾಸ್ ಹೈಕೋರ್ಟ್ ತೀರ್ಪನ್ನು ಎತ್ತಿಹಿಡಿದಿದೆ.

ತಮಿಳುನಾಡಿನ ಸರ್ಕಾರಿ ಉದ್ಯೋಗ ಮತ್ತು ಶೈಕ್ಷಣಿಕ ಸಂಸ್ಥೆಗಳ ಪ್ರವೇಶದಲ್ಲಿ ಶೇ 10.5ರಷ್ಟು ಮೀಸಲಾತಿಯನ್ನು ವನ್ನಿಯರ್ ಸಮುದಾಯದವರಿಗೆ ನೀಡಲಾಗಿತ್ತು. ನ್ಯಾಯಮೂರ್ತಿಗಳಾದ ನಾಗೇಶ್ವರ ರಾವ್ ಮತ್ತು ಬಿ.ಆರ್. ಗವಾಯಿ ಅವರಿದ್ದ ಪೀಠವು, ಮೀಸಲಾತಿಯನ್ನು ರದ್ದುಪಡಿಸಿದ್ದ ಮದ್ರಾಸ್ ಹೈಕೋರ್ಟ್ ತೀರ್ಪನ್ನು ಎತ್ತಿ ಹಿಡಿದಿದೆ.

### ಹೋರಾಟದ ಎಚ್ಚರಿಕೆ ನೀಡಿದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌ಡಿ. ಕುಮಾರಸ್ವಾಮಿ

# ‘ಸಮಾಜದ ನಿರ್ನಾಮಕ್ಕೆ ಸರ್ಕಾರ ಕುಮ್ಮಕ್ಕು’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಹಿಂದೂ ಪರ ಸಂಘಟನೆಗಳು ಶಾಂತಿ, ಸೌಹಾರ್ದ ಹದಗೆಡಿಸುವ ಕೆಲಸ ಮಾಡುತ್ತಿವೆ. ಸರ್ಕಾರದ ಮೌನವು ಈ ಎಲ್ಲ ಚಟುವಟಿಕೆಗಳಿಗೆ ಸಮ್ಮತಿ ನೀಡಿದೆ. ಸಮಾಜದ ನಿರ್ನಾಮಕ್ಕೆ ಅವಕಾಶ ಕೊಡುತ್ತಿರುವ ಸರ್ಕಾರದ ವಿರುದ್ಧ ಹೋರಾಟ ನಡೆಸಲು ನಿರ್ಧರಿಸಿದ್ದೇನೆ’ ಎಂದು ಜೆ.ಡಿ.ಎಸ್. ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಎಚ್ಚರಿಸಿದರು.

ಲೋಕನಾಯಕ ಜೆ.ಪಿ. ವಿಚಾರ ವೇದಿಕೆ ನಗರದಲ್ಲಿ ಗುರುವಾರ ಆಯೋಜಿಸಿದ ‘ಸರ್ವ ಜನಾಂಗದ ಶಾಂತಿಯ ತೋಟ: ಒಂದು ಭಾವೈಕ್ಯದ ಚರ್ಚೆ’ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

‘ಕುವೆಂಪು ಅವರ ವಿಶ್ವಮಾನವ ಪರಿಕಲ್ಪನೆಯನ್ನು ಭಜರಂಗದಳ ಹಾಗೂ ಬಿಜೆಪಿಯವರು ಧೂಳಿಪಟ ಮಾಡಲು ಹೊರಟಿದ್ದಾರೆ. ಶಾಂತಿ, ಸೌಹಾರ್ದ ಕೆಡಿಸುವ ಸಂದೇಶಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹರಿಬಿಡುವವರ ವಿರುದ್ಧ ಸರ್ಕಾರ ಯಾವುದೇ ಕ್ರಮಕೈಗೊಳ್ಳುತ್ತಿಲ್ಲ. ಸರ್ವಜನಾಂಗದ ಶಾಂತಿಯ ತೋಟ ಪುನಃ ಪ್ರತಿಷ್ಠಾಪನೆಗೊಳ್ಳಲು ಸರ್ಕಾರಕ್ಕೆ ಒಂದು ತಿಂಗಳ ಗಡುವು ನೀಡಲಾಗುವುದು. ಇಲ್ಲವಾದರೆ ರಾಜ್ಯದಾದ್ಯಂತ ಪಾದಯಾತ್ರೆ ಕೈಗೊಳ್ಳುತ್ತೇನೆ’ ಎಂದರು.

> **ರಾಜ್ಯದ ಇಂದಿನ ಭಯಂಕರ ಪರಿಸ್ಥಿತಿಗೆ ವಿಶ್ವ ಹಿಂದೂ ಪರಿಷತ್, ಭಜರಂಗದಳ ಕಾರಣ. ಅಮಾಯಕರು, ಹಿಂದುಳಿದವರ ದಿಕ್ಕು ತಪ್ಪಿಸಿ, ಸಮಾಜವನ್ನು ಹಾಳು ಮಾಡಲು ಹೊರಟಿವೆ**
> **ಎಚ್‌.ಡಿ. ಕುಮಾರಸ್ವಾಮಿ,** ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

> **ಮಾನವನ ಸಂಕಷ್ಟ ಪರಿಹಾರಕ್ಕೆ ಜಗತ್ತಿನಲ್ಲಿ ಧರ್ಮಗಳು ಹುಟ್ಟಿವೆ. ದಮನಕ್ಕೆ ಒಳಗಾದವರ ಧ್ವನಿಯೇ ಧರ್ಮ. ಹಾಗಾಗಿ, ಧರ್ಮವನ್ನು ವಿರೋಧಿಸಬೇಕಾಗಿಲ್ಲ. ಧರ್ಮ ಮೂಲಭೂತವಾದ ಆಗಬಾರದು**
> **ಎಚ್‌.ಎನ್. ನಾಗಮೋಹನ್ ದಾಸ್,** ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ

‘ರಾಮನ ಹೆಸರಿನಲ್ಲಿ ಏನನ್ನು ಬೇಕಾದರೂ ಹೊಡೆಯಿರಿ. ಆದರೆ, ಜನರ ಬದುಕನ್ನು ಹಾಳು ಮಾಡಬೇಡಿ. ಕೋವಿಡ್ ಕಾಣಿಸಿಕೊಂಡ ಬಳಿಕ ಕರ್ನಾಟಕದಲ್ಲಿ 800 ಕಾರ್ಖಾನೆಗಳು ಮುಚ್ಚಿವೆ. 48 ಸಾವಿರ ಮಂದಿ ಕೆಲಸ ಕಳೆದುಕೊಂಡಿದ್ದಾರೆ. ಅವರ ಬದುಕನ್ನು ಸರ್ಕಾರ ಹೇಗೆ ಕಟ್ಟಿಕೊಡುತ್ತದೆ’ ಎಂದು ಪ್ರಶ್ನಿಸಿದರು.

**ತಾಲಿಬಾನ್ ಸಂಸ್ಕೃತಿ:** ಸಾಹಿತಿ ಕುಂ. ವೀರಭದ್ರಪ್ಪ, ‘ನಮ್ಮಲ್ಲಿ ನಾಥೂರಾಮ್ ಗೋಡ್ಸೆ, ಹೆಡಗೆವಾರ್ ಸೇರಿದಂತೆ ಅನೇಕ ತರಹದ ದೆವ್ವಗಳಿವೆ. ಕೆಲವರು ದೆವ್ವಗಳು ಹೊಕ್ಕಾಗ ಮಾತ್ರ ಬಾಯಿಗೆ ಬಂದಂತೆ ಮಾತನಾಡುತ್ತಾರೆ. ರೇಣುಕಾಚಾರ್ಯ, ತೇಜಸ್ವಿ ಸೂರ್ಯ, ಬಸನಗೌಡ ಯತ್ನಾಳ್ ಇವರೆಲ್ಲರೂ ದೆವ್ವಗಳು ಹೊಕ್ಕಾಗ ಮುಸ್ಲಿಂ ವಿರೋಧಿಗಳಾಗುತ್ತಾರೆ. ಹಿಜಾಬ್ ತಲೆ ಮೇಲಿನ ಒಂದು ವಸ್ತ್ರ. ಹಲಾಲ್ ಕಟ್ ಎನ್ನುವುದು ಖಾದ್ಯಕ್ಕೆ ಮಾಂಸ ಸಿದ್ಧಪಡಿಸುವ ಒಂದು ವಿಧಾನ. ಹಲಾಲ್ ಕಟ್ ಮತ್ತು ಹಿಜಾಬ್ ಇವೆರಡೂ ಈಗ ಭಯಂಕರ ವಿದ್ಯಮಾನವಾಗಿ ಬೆಳೆದು ನಿಂತಿದೆ. ಇದು ಜಾತೀಯತೆ, ಸರ್ವಾಧಿಕಾರದ ಮೊದಲ ಹೆಜ್ಜೆ. ರಾಜ್ಯದಲ್ಲಿ ತಾಲಿಬಾನ್ ಸಂಸ್ಕೃತಿ ಬರುತ್ತಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

ಹೈಕೋರ್ಟ್ ವಿಶ್ರಾಂತ ನ್ಯಾಯಮೂರ್ತಿ ಎಚ್‌.ಎನ್. ನಾಗಮೋಹನ್ ದಾಸ್, ‘ನಿರುದ್ಯೋಗ, ಭ್ರಷ್ಟಾಚಾರ, ಕೋಮುವಾದ ಸೇರಿದಂತೆ ವಿವಿಧ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕು. ಜನರ ದಿಕ್ಕು ತಪ್ಪಿಸುವ ಕೆಲಸ ನಡೆಯುತ್ತಿದೆ. ಬದುಕಿನ ವಿಷಯ ಎತ್ತಿಕೊಳ್ಳಬೇಕು. ಆಗ ಭಾವನಾತ್ಮಕ ವಿಷಯ ಹಿಂದೆ ಸರಿಯುತ್ತದೆ’ ಎಂದು ಹೇಳಿದರು.

ಆದಿ ಚುಂಚನಗಿರಿ ಶಾಖಾ ಮಠದ ಸೌಮ್ಯಾನಂದನಾಥ ಸ್ವಾಮೀಜಿ, ಆರ್ಚ್ ಡಯಾಸಿಸ್ ಕಮ್ಯೂನಿಕೇಶನ್ ಸೆಂಟರ್‌ನ ನಿರ್ದೇಶಕ ಫಾದರ್ ಸಿರಿಲ್ ವಿಕ್ಟರ್ ಹಾಗೂ ಇಮಾಮ್ ಮತ್ತು ಇಸ್ಲಾಂ ಧಾರ್ಮಿಕ ವಿದ್ವಾಂಸ ಮುಫ್ತಿ ಮಹಮ್ಮದ್ ಅಲಿ ಮಿಸ್ಬಾಹಿ ಜಮಾಲಿ ನೂರಿ ಅವರು ಶಾಂತಿ ಸೌಹಾರ್ದದ ಸಂದೇಶ ಸಾರಿದರು. ಪತ್ರಕರ್ತ ಬಿ.ಎಂ. ಹನೀಫ್ ಇದ್ದರು.



ಎಚ್‌.ಡಿ. ಕುಮಾರಸ್ವಾಮಿ ಮತ್ತು ಎಚ್‌.ಎನ್. ನಾಗಮೋಹನ್ ದಾಸ್ ಚರ್ಚಿಸಿದರು. (ಎಡದಿಂದ) ಫಾದರ್ ಸಿರಿಲ್ ವಿಕ್ಟರ್, ಮುಫ್ತಿ ಮಹಮ್ಮದ್ ಅಲಿ ಮಿಸ್ಬಾಹಿ ಜಮಾಲಿ ನೂರಿ, ಸೌಮ್ಯಾನಂದನಾಥ ಸ್ವಾಮೀಜಿ ಹಾಗೂ ಕುಂ. ವೀರಭದ್ರಪ್ಪ ಇದ್ದರು – ಪ್ರಜಾವಾಣಿ ಚಿತ್ರ

### ನಾನು ಹಿಂದೂ ಅಲ್ಲ: ಕುಂ.ವೀ

‘ಹಿಂದೂ ಎನ್ನುವುದು 1824ರಲ್ಲಿ ಬಳಕೆಗೆ ಬಂದ ಅತ್ಯಂತ ಅಪಾಯಕಾರಿ ಶಬ್ದ. ನಾನು ಹಿಂದೂ ಅಲ್ಲ. ಭಾರತ ವೈವಿಧ್ಯಮಯವಾದ ದೇಶ. ನಾವೆಲ್ಲ ಹಿಂದೂ ಎಂದು ಹೇಳುವುದು ಸರಿಯಲ್ಲ. ಲಿಂಗಾಯತನಾಗಿರುವ ನಾನು, ಬಸವಣ್ಣನ ಅನುಯಾಯಿ. ಹಿಂದೂ ಅಲ್ಲ ಎಂಬ ನನ್ನ ಹೇಳಿಕೆ ಮೇಲೆ ಪ್ರಕರಣ ದಾಖಲಿಸಿದರೂ ನಮ್ಮ ಪರವಾಗಿ ಹೋರಾಡಲು ನ್ಯಾಯಾಧೀಶರಿದ್ದಾರೆ. ಇತ್ತೀಚೆಗೆ ಬಂದಿರುವ ಹಿಂದೂ ಪದ ಅತ್ಯಂತ ಅಪಾಯಕಾರಿ’ ಎಂದು ಸಾಹಿತಿ ಕುಂ. ವೀರಭದ್ರಪ್ಪ ತಿಳಿಸಿದರು.

## ಸುದ್ದಿ 2 ನಿಮಿಷ

### ಸರ್ಕಾರವೇ ಸಾಮರಸ್ಯ ಕಾಪಾಡಬೇಕು: ಎಚ್.ವಿಶ್ವನಾಥ್


**ನವದೆಹಲಿ:** ‘ಕರ್ನಾಟಕದಲ್ಲಿ ಆರ್‌ಎಸ್‌ಎಸ್, ಬಜರಂಗದಳ ಅಥವಾ ವಿಶ್ವ ಹಿಂದೂ ಪರಿಷತ್ ನೇತೃತ್ವದ ಸರ್ಕಾರವಿಲ್ಲ. ಬಿಜೆಪಿ ಸರ್ಕಾರ ಇದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಯಾರ ಮಾತನ್ನೂ ಕೇಳದೇ ರಾಜ್ಯದಲ್ಲಿ ಸಾಮರಸ್ಯ ಕಾಪಾಡಲು ಕ್ರಮ ಕೈಗೊಳ್ಳಬೇಕು’ ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಸಲಹೆ ನೀಡಿದರು.

ಗುರುವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಿಜಾಬ್, ಹಲಾಲ್, ಟಿಪ್ಪು ಸುಲ್ತಾನ್ ಮತ್ತಿತರ ಸೂಕ್ಷ್ಮ ವಿಷಯಗಳ ಕುರಿತು ಜನರನ್ನು ಇಬ್ಭಾಗ ಮಾಡದೇ ಎಲ್ಲರನ್ನೂ ಒಂದುಗೂಡಿಸುವತ್ತ ಸರ್ಕಾರ ಮುಂದಾಗಬೇಕಿದೆ ಎಂದು ಅವರು ಅಭಿಪ್ರಾಯಪಟ್ಟರು.

ಬಿ.ಎಸ್. ಯಡಿಯೂರಪ್ಪ ಅವರ ಆಡಳಿತದಲ್ಲಿ ಈ ರೀತಿಯ ಒಡೆದಾಳುವ ನೀತಿಯನ್ನು ಅನುಸರಿಸಿರಲಿಲ್ಲ. ಬೊಮ್ಮಾಯಿ ಆಡಳಿತ ವೈಖರಿಯು ಸರ್ಕಾರದ ಹೆಸರು ಕೆಡಿಸುತ್ತಿದೆ. ಯಡಿಯೂರಪ್ಪ ಅವರು ಕೂಡಲೇ ಮಧ್ಯಪ್ರವೇಶಿಸುವ ಮೂಲಕ ಪರಿಸ್ಥಿತಿ ಸರಿಪಡಿಸಬೇಕು ಎಂದು ಅವರು ಮನವಿ ಮಾಡಿದರು.

ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರ ಪಠ್ಯ ಪುಸ್ತಕ ಪರಿಷ್ಕರಣೆ ಸಮಿತಿಗೆ ರೋಹಿತ್ ಚಕ್ರತೀರ್ಥ ಅವರನ್ನು ನೇಮಿಸಿದೆ. ಅವರ ಅರ್ಹತೆ ಏನು ಎಂಬುದನ್ನು ಶಿಕ್ಷಣ ಸಚಿವರು ಸ್ಪಷ್ಟಪಡಿಸಬೇಕು ಎಂದೂ ಅವರು ಆಗ್ರಹಿಸಿದರು.

ಟಿಪ್ಪು, ಸ್ವಾತಂತ್ರ್ಯ ಹೋರಾಟಗಾರ ಎಂಬುದರಲ್ಲಿ ಸಂಶಯವಿಲ್ಲ. ‘ಹಲಾಲ್ ಮಾಂಸ ನಿಷೇಧ ಮತ್ತು ದೇವಸ್ಥಾನಗಳ ಎದುರು ಮುಸ್ಲಿಂ ವ್ಯಾಪಾರಿಗಳಿಗೆ ಅವಕಾಶ ನಿರಾಕರಿಸಿರುವ ನಿರ್ಧಾರ ಸರ್ಕಾರದ್ದಲ್ಲ. ಆದರೂ ಈ ಬಗ್ಗೆ ಸರ್ಕಾರ ಮೌನ ವಹಿಸದೇ ಸೂಕ್ತ ನಿಲುವು ಪ್ರಕಟಿಸಬೇಕು ಎಂದರು.



### ಹಿಜಾಬ್: ಇಬ್ಬರು ಶಿಕ್ಷಕರ ಅಮಾನತು

**ಕಲಬುರಗಿ:** ಮಾರ್ಚ್ 28ರಂದು ನಡೆದ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಹಿಜಾಬ್ ಧರಿಸಿದ ವಿದ್ಯಾರ್ಥಿನಿಗೆ ಪರೀಕ್ಷೆ ಬರೆಯಲು ಅವಕಾಶ ನೀಡಿದ ಆರೋಪದ ಮೇರೆಗೆ ಜೇವರ್ಗಿ ತಾಲ್ಲೂಕಿನ ಇಬ್ಬರು ಶಿಕ್ಷಕರನ್ನು ಅಮಾನತು ಮಾಡಲಾಗಿದೆ.

ಜೇವರ್ಗಿ ತಾಲ್ಲೂಕಿನ ಇಜೇರಿ ಗ್ರಾಮದ ಪರೀಕ್ಷಾ ಕೇಂದ್ರದಲ್ಲಿ ಹಿಜಾಬ್ ಧರಿಸಿ ಪರೀಕ್ಷೆ ಬರೆದ ಬಗ್ಗೆ ಶ್ರೀರಾಮಸೇನೆಯ ಜೇವರ್ಗಿ ತಾಲ್ಲೂಕು ಘಟಕದ ಅಧ್ಯಕ್ಷ ನಿಂಗಣ್ಣಗೌಡ ಮಾಲಿಪಾಟೀಲ ಅವರು ಡಿಡಿಪಿಐ ಅವರಿಗೆ ದೂರು ನೀಡಿದ್ದರು. ಈ ದೂರನ್ನು ಆಧರಿಸಿ ಪರೀಕ್ಷೆಯ ಅಧೀಕ್ಷಕರಿಗೆ ಶೋಕಾಸ್ ನೋಟಿಸ್ ನೀಡಲಾಗಿತ್ತು.

ಅಧೀಕ್ಷಕರ ವರದಿ ಆಧರಿಸಿ ಪರೀಕ್ಷಾ ಮೇಲ್ವಿಚಾರಕರಾಗಿದ್ದ ಆಲೂರು ಸರ್ಕಾರಿ ಪ್ರೌಢಶಾಲೆಯ ಸಹ ಶಿಕ್ಷಕ ಹಯಾದ್ ಬಾಗವಾನ ಅವರನ್ನು ಡಿಡಿಪಿಐ ಅಶೋಕ ಭಜಂತ್ರಿ ಹಾಗೂ ಕೊಡಚಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕ ಮಂಜುನಾಥ್ ಅವರನ್ನು ಜೇವರ್ಗಿ ಕ್ಷೇತ್ರ ಶಿಕ್ಷಣಾಧಿಕಾರಿ ವೆಂಕಯ್ಯ ಇನಾಮದಾರ ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ.

## ಚನ್ನಕೇಶವಸ್ವಾಮಿ ದೇವಸ್ಥಾನ ಆವರಣದಲ್ಲಿ ಮಳಿಗೆ ಇಟ್ಟಿರುವ ರಾಹಿಲ್ ವ್ಯಾಪಾರ ನಡೆಸದಂತೆ ಮುಸ್ಲಿಂ ವ್ಯಾಪಾರಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

**ಬೇಲೂರು:** ಇಲ್ಲಿನ ಚನ್ನಕೇಶವಸ್ವಾಮಿ ದೇವಸ್ಥಾನ ಮುಂಭಾಗದ ವಾಣಿಜ್ಯ ಮಳಿಗೆಯಲ್ಲಿ ಆಟಿಕೆ ಅಂಗಡಿ ಇಟ್ಟಿರುವ ಮುಸ್ಲಿಂ ವ್ಯಾಪಾರಿ ರಾಹಿಲ್ ಎಂಬುವವರಿಗೆ ವ್ಯಾಪಾರ ನಡೆಸದಂತೆ ದೇವಸ್ಥಾನದ ಕಾರ್ಯನಿರ್ವಹಣಾಧಿಕಾರಿ ವಿದ್ಯುಲ್ಲತಾ ಮಾರ್ಚ್ 28ರಂದು ನೋಟಿಸ್ ನೀಡಿದ್ದಾರೆ.

ದೇಗುಲದ ಆವರಣದಲ್ಲಿ ಕೊಳಲು, ಪಿಟೀಲು ವ್ಯಾಪಾರ ಮಾಡುತ್ತಿದ್ದ ಬೀದಿ ಬದಿಯ ಹಿಂದೂಗಳಲ್ಲದವರಿಗೂ ‘ವ್ಯಾಪಾರ ನಡೆಸಬೇಡಿ’ ಎಂದು ಕಾರ್ಯನಿರ್ವಹಣಾಧಿಕಾರಿ ಮೌಖಿಕವಾಗಿ ಸೂಚಿಸಿದ್ದಾರೆ. ‘ವ್ಯಾಪಾರಕ್ಕೆ ಅನುವು ಮಾಡಬೇಕು’ ಎಂದು ಈ ವ್ಯಾಪಾರಿಗಳು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟಿಸಿದ್ದರು.

‘40 ವರ್ಷಗಳಿಂದ ವ್ಯಾಪಾರ ನಡೆಸುತ್ತಿದ್ದೇನೆ. ಆಟಿಕೆ ವ್ಯಾಪಾರವೇ ಜೀವನಕ್ಕೆ ಆಧಾರ. ಹೀಗಾಗಿ, ವ್ಯಾಪಾರ ನಡೆಸಲು ಅವಕಾಶ ನೀಡಬೇಕು’ ಎಂದು ರಾಹಿಲ್ ಉತ್ತರಿಸಿದ್ದಾರೆ.

‘ಧಾರ್ಮಿಕ ದತ್ತಿ ಇಲಾಖೆ ಆಯುಕ್ತರ ಆದೇಶದ ಮೇರೆಗೆ ನೋಟಿಸ್ ನೀಡಿದ್ದು, ವಿವಾದ ತಣ್ಣಗಾಗುವವರೆಗೂ ವ್ಯಾಪಾರಮಾಡಬಾರದು ಎಂದು ಸೂಚಿಸಲಾಗಿದೆ’ ಎಂದು ವಿದ್ಯುಲ್ಲತಾ ತಿಳಿಸಿದರು.

‘ಚನ್ನಕೇಶವಸ್ವಾಮಿ ಜಾತ್ರಾ ಮಹೋತ್ಸವದಲ್ಲಿ ಅನ್ಯಧರ್ಮೀಯರಿಗೆ ಅವಕಾಶ ನೀಡಬಾರದು’ ಎಂದು ತಾಲ್ಲೂಕಿನ ಹಿಂದೂಪರ ಸಂಘಟನೆಗಳ ಕಾರ್ಯಕರ್ತರು ತಹಶೀಲ್ದಾರ್ ಮೋಹನ್ ಕುಮಾರ್ ಅವರಿಗೆ ಇತ್ತೀಚೆಗೆ ಮನವಿ ಸಲ್ಲಿಸಿದ್ದರು.

### ಸಿಎಂಗೆ ಪತ್ರ ಬರೆದವರು ಬುದ್ಧಿಜೀವಿಗಳೇ ಅಲ್ಲ: ಗೃಹ ಸಚಿವ ಆರಗ ಜ್ಞಾನೇಂದ್ರ

**ಕೊಪ್ಪಳ:** ‘ಜಾತ್ಯತೀತರಾದ ಹಿಂದೂಗಳಿಗೆ ಬುದ್ಧಿಜೀವಿಗಳು ಬುದ್ಧಿ ಹೇಳುತ್ತಿರುವುದು ವಿಷಾದನೀಯ. ಬೇಕೆಂದಾಗ ಮಾತನಾಡುವುದು, ಬೇಡವಾದಾಗ ಮೌನವಾಗಿರುವುದು ಅವರ ಚಾಳಿ. ಮೂಲಭೂತವಾದಿಗಳಿಗೆ ಕೋಮುವಾದವನ್ನು, ಕೆಲವರಿಗೆ ಜಾತ್ಯತೀತವಾದವನ್ನು ಬೋಧನೆ ಮಾಡುತ್ತಾ ಎಡಬಿಡಂಗಿಗಳಂತೆ ಮಾತನಾಡುವುದೇ ಅವರ ಕೆಲಸ’ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಲೇವಡಿ ಮಾಡಿದರು.

ತಾಲ್ಲೂಕಿನ ಮುನಿರಾಬಾದ್‌ನಲ್ಲಿ ಗುರುವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ‘ಬುದ್ಧಿಜೀವಿಗಳು ಎನಿಸಿಕೊಂಡ 60 ಜನರು ಮುಖ್ಯಮಂತ್ರಿ ಅವರಿಗೆ ಪತ್ರ ಬರೆದಿದ್ದಾರಂತೆ. ಬುದ್ಧಿ ಇಲ್ಲದವರಿಗೆ ಬುದ್ಧಿ ಹೇಳಬೇಕು. ಹಿಜಾಬ್ ವಿಷಯದಲ್ಲಿ ನ್ಯಾಯಾಲಯದ ಆದೇಶ ಪಾಲಿಸದವರಿಗೆ ಬುದ್ಧಿ ಹೇಳುವುದನ್ನು ಬಿಟ್ಟು ಈಗ ಅನವಶ್ಯಕ ಪ್ರಚಾರಕ್ಕೆ ಇಳಿದಿದ್ದಾರೆ’ ಎಂದು ಟೀಕಿಸಿದರು. 'ಹಲಾಲ್, ಜಟ್ಕಾ ಕಾನೂನು ಸುವ್ಯವಸ್ಥೆಯ ಸಮಸ್ಯೆ ಅಲ್ಲ. ಅದು ಧರ್ಮ ಮತ್ತು ಜನರ ಧಾರ್ಮಿಕ ನಂಬಿಕೆಯ ಪ್ರಶ್ನೆ. ಇದರಲ್ಲಿ ಸರ್ಕಾರ ಮಧ್ಯ ಪ್ರವೇಶಿಸುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

### ‘ಸಲಾಂ ಆರತಿ’ ಕೈಬಿಡಲು ಒತ್ತಾಯ

**ಮಂಡ್ಯ:** ಮೇಲುಕೋಟೆ ಚೆಲುವನಾರಾಯಣಸ್ವಾಮಿ ದೇವಾಲಯದಲ್ಲಿ ಹಲವು ವರ್ಷಗಳಿಂದ ನಡೆದುಕೊಂಡು ಬರುತ್ತಿರುವ ‘ಸಲಾಂ ಆರತಿ’ ಆಚರಣೆಯನ್ನು ಕೈಬಿಡಬೇಕು ಎಂದು ದೇವಾಲಯದ ಸ್ಥಾನೀಕರು ಸರ್ಕಾರವನ್ನು ಒತ್ತಾಯಿಸಿದ್ದಾರೆ.

‘ಸಾವಿರಾರು ವರ್ಷಗಳಿಂದ ದೇವಾಲಯದಲ್ಲಿ ಸಂಜೆ ಸಂಧ್ಯಾರತಿ ಆಚರಣೆ ಇತ್ತು. ಟಿಪ್ಪು ಆಳ್ವಿಕೆ ಕಾಲದಲ್ಲಿ ಸಂಧ್ಯಾರತಿ ಜೊತೆಗೆ ಸಲಾಂ ಆರತಿ ಪದ್ಧತಿ ಜಾರಿಗೊಳಿಸಲಾಗಿದೆ. ಸಲಾಂ ಆರತಿ ಆಚರಣೆ ಸ್ಥಗಿತಗೊಳಿಸಿ ಸಂಧ್ಯಾರತಿ ಆಚರಣೆಯನ್ನು ಮುಂದುವರಿಸಬೇಕು’ ಎಂದು ಒತ್ತಾಯಿಸಿ ಸ್ಥಾನೀಕರು ಹೆಚ್ಚುವರಿ ಜಿಲ್ಲಾಧಿಕಾರಿ ಶೈಲಜಾ ಅವರಿಗೆ ಸಲ್ಲಿಸಿರುವ ಮನವಿ ಪತ್ರದಲ್ಲಿ ಒತ್ತಾಯಿಸಿದ್ದಾರೆ. ‘ಚೆಲುವನಾರಾಯಣಸ್ವಾಮಿಗೆ ತ್ರಿಕಾಲ ಆರತಿ ನಡೆಯುತ್ತದೆ. ಮಹಾಮಂಗಳಾರತಿ ನಡೆಯುವಾಗ ದೇವಾಲಯದ ಹೊರಗಿನ ರಾಜಗೋಪುರದ ಬಳಿ ಸಲಾಂ ಆರತಿ ನಡೆಯುತ್ತದೆ. ಮಹಾಮಂಗಳಾರತಿ, ಸಂಧ್ಯಾರತಿಯನ್ನು ಉಳಿಸಿಕೊಂಡು ಸಲಾಂ ಆರತಿಯನ್ನು ಕೈಬಿಡಬೇಕು’ ಎಂದು ಸ್ಥಾನೀಕರಾದ ಶ್ರೀನಿವಾಸ ಗುರೂಜಿ ಒತ್ತಾಯಿಸಿದ್ದಾರೆ.

### ‘ಕೋಮುಭಾವನೆ ಕೆರಳಿಸುತ್ತಿಲ್ಲ’

**ಬೇಲೂರು:** ‘ಜಾತ್ರೆಯಲ್ಲಿ ಹಿಂದೂಯೇತರರಿಗೆ ವ್ಯಾಪಾರಕ್ಕೆ ಅವಕಾಶ ನೀಡಬಾರದೆಂದು ವೈಯಕ್ತಿಕವಾಗಿ ಹೇಳುತ್ತಿಲ್ಲ. ಈಗಾಗಲೇ ಇರುವ ಕಾನೂನನ್ನು ಜಾರಿಗೆ ತರಬೇಕೆಂದಷ್ಟೇ ಆಗ್ರಹಿಸುತ್ತಿರುವೆ. ಕೋಮು ಭಾವನೆ ಕೆರಳಿಸುತ್ತಿಲ್ಲ’ ಎಂದು ರಾಷ್ಟ್ರಧರ್ಮ ಸಂಘಟನೆ ಅಧ್ಯಕ್ಷ ಸಂತೋಷ್ ಕೆಂಚಾಂಬ ಪ್ರತಿಪಾದಿಸಿದರು.

### ಬ್ಯಾನರ್ ತೆರವು

**ಸಾಗರ:** ಇಲ್ಲಿಯ ಮಹಾಗಣಪತಿ ದೇವರ ಜಾತ್ರೆಯು ಏಪ್ರಿಲ್ 2ರಿಂದ 8ರವರೆಗೆ ನಡೆಯಲಿದ್ದು, ಗುರುವಾರ ವ್ಯಾಪಾರಿ ಮಳಿಗೆಗಳ ಹರಾಜು ನಡೆಸಲಾಯಿತು. ದೇವಸ್ಥಾನದ ಎದುರು ‘ಹಿಂದೂಯೇತರ ವ್ಯಾಪಾರಿಗಳಿಗೆ ವ್ಯಾಪಾರಕ್ಕೆ ಅವಕಾಶವಿಲ್ಲ’ ಎಂಬ ಬ್ಯಾನರ್ ಅಳವಡಿಸಲಾಗಿತ್ತು.

ಈ ಬ್ಯಾನರ್ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆದ ನಂತರ ತಾಲ್ಲೂಕು ಆಡಳಿತದ ವತಿಯಿಂದ ಅದನ್ನು ಅಲ್ಲಿಂದ ತೆರವುಗೊಳಿಸಲಾಯಿತು.

‘ತಾಲ್ಲೂಕು ಆಡಳಿತ ಯಾವುದೇ ಬ್ಯಾನರ್ ಹಾಕಿಲ್ಲ. ಅಂತಹ ಯಾವುದೇ ನಿರ್ಬಂಧ ಹೇರಿಲ್ಲ’ ಎಂದು ತಹಶೀಲ್ದಾರ್ ಮಲ್ಲೇಶ್ ಬಿ. ಪೂಜಾರ್ ಸ್ಪಷ್ಟಪಡಿಸಿದ್ದಾರೆ.

## ‘ಹಲಾಲ್’ ಫಲಕ ಕಿತ್ತೆಸೆದ ಬಜರಂಗದಳ

**ಬೆಂಗಳೂರು:** ಹಲಾಲ್ ವಿರೋಧ ವ್ಯಕ್ತಪಡಿಸಿರುವ ಬಜರಂಗದಳ ಸಂಘಟನೆಯ ಕೆಲ ಕಾರ್ಯಕರ್ತರು, ನಗರದ ಹಲವು ಹೋಟೆಲ್‌ಗಳ ಮೇಲಿದ್ದ ಹಲಾಲ್ ಫಲಕವನ್ನು ಕಿತ್ತೆಸೆದು ಮಾಲೀಕರಿಗೆ ಎಚ್ಚರಿಕೆ ನೀಡಿದರು.

ನಗರದ ಕೋರಮಂಗಲ, ಜೆ.ಪಿ. ನಗರ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಸುತ್ತಾಡಿದ ಕಾರ್ಯಕರ್ತರು, ಜಟ್ಕಾ ವಿಧಾನದ ಪರವಾಗಿರುವ ಕರಪತ್ರಗಳನ್ನು ಸಾರ್ವಜನಿಕರಿಗೆ ಹಂಚಿದರು. ‘ಹಲಾಲ್ ವಿಧಾನದ ಮೂಲಕ ಕತ್ತರಿಸಿದ ಮಾಂಸವನ್ನು ತಿರಸ್ಕರಿಸಿ. ಜಟ್ಕಾ ವಿಧಾನದ ಮೂಲಕ ಕತ್ತರಿಸಿದ ಮಾಂಸವನ್ನು ಖರೀದಿಸಿ’ ಎಂದರು.

‘ಕೋರಮಂಗಲದ ‘ಅರಮನೆ ದೊನ್ನೆ ಬಿರಿಯಾನಿ’ ಹಾಗೂ ಜೆ.ಪಿ. ನಗರದ ‘ಅಲ್ಟ್ರಾ ಬಿರಿಯಾನಿ ಪ್ಯಾರಾಡೈಸ್’ ಹೋಟೆಲ್ ಮೇಲೆ ಹಲಾಲ್ ಫಲಕ ಹಾಕಲಾಗಿತ್ತು. ಅದನ್ನು ಕಿತ್ತೆಸೆದ ಕಾರ್ಯಕರ್ತರು, ಜಟ್ಕಾ ಫಲಕ ಹಾಕುವಂತೆ ಮಾಲೀಕರಿಗೆ ಎಚ್ಚರಿಕೆ ನೀಡಿ ಸ್ಥಳದಿಂದ ತೆರಳಿದರು’ ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದರು.

**ಕಮಿಷನರ್‌ಗೆ ದೂರು ಸಲ್ಲಿಕೆ:** ‘ಹಲಾಲ್ ಮಾಂಸ ಮಾರಾಟವನ್ನು ಅಕ್ರಮವಾಗಿ ತಡೆಯುತ್ತಿರುವ ಕೆಲವರು, ಅಂಥ ಮಾಂಸ ಖರೀದಿಸದಂತೆ ಸಾರ್ವಜನಿಕರನ್ನು ಪ್ರಚೋದಿಸುತ್ತಿದ್ದಾರೆ. ಈ ಮೂಲಕ ರಾಜ್ಯದಲ್ಲಿ ಸಾಮರಸ್ಯ ಕದಡಲು ಯತ್ನಿಸುತ್ತಿದ್ದಾರೆ. ಇಂಥವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಕಮಿಷನರ್ ಕಮಲ್ ಪಂತ್ ಅವರಿಗೆ ದೂರು ನೀಡಲಾಗುವುದು’ ಎಂದು ಬೆಂಗಳೂರು ವಕೀಲರ ಸಂಘದ ಮಾಜಿ ಅಧ್ಯಕ್ಷ ಎ.ಪಿ. ರಂಗನಾಥ್ ಹೇಳಿದ್ದಾರೆ.

ಪತ್ರಿಕಾ ಪ್ರಕಟಣೆ ನೀಡಿರುವ ಅವರು, ‘ಕಮಿಷನರ್ ಅವರನ್ನು ಶುಕ್ರವಾರ (ಏಪ್ರಿಲ್ 1) ಮಧ್ಯಾಹ್ನ ಭೇಟಿ ಮಾಡಿ ದೂರು ಸಲ್ಲಿಸಲಾಗುವುದು. ಹಲವು ಸಂಘಟನೆಗಳ ಮುಖಂಡರು ಜೊತೆಯಲ್ಲಿ ಇರಲಿದ್ದಾರೆ’ ಎಂದಿದ್ದಾರೆ.

### ‘ಹಲಾಲ್ ನಿಷೇಧಿಸಿ’

‘ಹಲಾಲ್ ಉತ್ಪನ್ನಗಳನ್ನು ರಾಜ್ಯದಲ್ಲಿ ನಿಷೇಧಿಸಬೇಕು’ ಎಂದು ಹಿಂದೂ ಸಂಘಟನೆಗಳ ಒಕ್ಕೂಟ ಆಗ್ರಹಿಸಿದೆ.

ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿರುವ ಒಕ್ಕೂಟದ ಪದಾಧಿಕಾರಿಗಳು, ‘ಹಲಾಲ್ ಮೂಲಕ ದೇಶದ ಆರ್ಥಿಕ ವ್ಯವಹಾರದ ಮೇಲೆ ಹಿಡಿತ ಸಾಧಿಸುವುದು ಮುಸ್ಲಿಂ ಸಮುದಾಯದವರ ಸಂಚಾಗಿದೆ’ ಎಂದು ದೂರಿದ್ದಾರೆ.

‘ಹಲಾಲ್ ಪ್ರಮಾಣ ಪತ್ರ ನೀಡುತ್ತಿರುವ ಸಂಸ್ಥೆಯು ಭಯೋತ್ಪಾದನಾ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದ 700 ಆರೋಪಿಗಳಿಗೆ ಕಾನೂನು ಸಹಾಯ ಮಾಡುತ್ತಿದೆ. ಹೀಗಾಗಿ, ಹಲಾಲ್ ಪ್ರಮಾಣ ಪತ್ರವನ್ನು ರಾಜ್ಯದಲ್ಲಿ ನಿಷೇಧಿಸಬೇಕು’ ಎಂದೂ ಒತ್ತಾಯಿಸಿದ್ದಾರೆ.

## ರಾಜ್ಯ ಕಾಂಗ್ರೆಸ್ ನಾಯಕರ ಜೊತೆ ರಾಹುಲ್ ಸಭೆ ಇಂದು

**ಬೆಂಗಳೂರು:** ರಾಜ್ಯ ವಿಧಾನಸಭೆ ಚುನಾವಣೆಯ ಹೊಸ್ತಿಲಲ್ಲಿ ಇರುವಂತೆ, ಚುನಾವಣಾ ತಯಾರಿ, ಪಕ್ಷ ಸಂಘಟನೆ ಕುರಿತಂತೆ ರಾಜ್ಯ ಕಾಂಗ್ರೆಸ್ ನಾಯಕರ ಜೊತೆ ಎಐಸಿಸಿ ಮುಖಂಡ ರಾಹುಲ್ ಗಾಂಧಿ ಶುಕ್ರವಾರ (ಏ. 1) ಚರ್ಚೆ ನಡೆಸಲಿದ್ದಾರೆ.

ಬೆಳಿಗ್ಗೆ 11 ಗಂಟೆಯಿಂದ 1ರವರೆಗೆ ಪಕ್ಷದ ಪ್ರಮುಖರ ಜೊತೆ ಸಭೆ ನಡೆಸಲಿರುವ ರಾಹುಲ್, ಮಧ್ಯಾಹ್ನ 2ರ ಬಳಿಕ ಶಾಸಕರು, ಸಂಸದರು, ಈ ಹಿಂದಿನ ವಿಧಾನಸಭೆ, ಲೋಕಸಭೆ ಚುನಾವಣೆಯಲ್ಲಿ ಸೋಲು ಕಂಡ ಅಭ್ಯರ್ಥಿಗಳು ಹಾಗೂ ಪಕ್ಷದ ಮುಂಚೂಣಿ ಘಟಕಗಳ ನಾಯಕರ ಜೊತೆ ಸಮಾಲೋಚನೆ ನಡೆಸಲಿದ್ದಾರೆ.

‘ರಾಜ್ಯ ರಾಜಕೀಯದ ಸದ್ಯದ ವಿದ್ಯಮಾನ, ಹಿಜಾಬ್, ಹಲಾಲ್ ಮುಂತಾದ ವಿಷಯಗಳಿಂದ ಕದಡಿರುವ ಸೌಹಾರ್ದ ವಾತಾವರಣ, ಭಾವನಾತ್ಮಕ ವಿಷಯಗಳನ್ನು ಮುಂದಿಟ್ಟು ಸಮುದಾಯಗಳ ಧ್ರುವೀಕರಣಕ್ಕೆ ಮುಂದಾಗಿರುವ ಬಿಜೆಪಿಯ ನಡೆ, ಈ ಎಲ್ಲ ಸವಾಲುಗಳನ್ನು ಎದುರಿಸಲು ಮಾಡಿಕೊಳ್ಳಬೇಕಾದ ಸಿದ್ಧತೆಗಳ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಲಿದೆ’ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

## ಸಂವಿಧಾನ ಬೇಕೇ, ಶರಿಯಾ ಬೇಕೇ: ಸಿ.ಟಿ.ರವಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ದೇಶದಲ್ಲಿ ಸಂವಿಧಾನ ಇರಬೇಕೇ ಅಥವಾ ಶರಿಯಾ ಇರಬೇಕೇ ಎಂದು ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಪ್ರಶ್ನಿಸಿದ್ದಾರೆ.

ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ಸಬ್ ಕಾ ಸಾಥ್, ಸಬ್ ಕಾ ವಿಕಾಸ್, ಸಬ್ ಕಾ ವಿಶ್ವಾಸ್ ಹೇಳಿಕೆಯ ಜೊತೆಗೆ ಯೋಜನೆಗಳನ್ನು ಜಾರಿಗೊಳಿಸಿದ ಮೋದಿ ಅವರು ಯಾರಿಗೂ ಅಭಿವೃದ್ಧಿ ಯೋಜನೆಯಲ್ಲಿ ದೋಖಾ ಮಾಡಿಲ್ಲ. ತಾರತಮ್ಯ ಮಾಡದೇ ಎಲ್ಲರಿಗೂ ಎಲ್ಲ ಸೌಲಭ್ಯಗಳನ್ನು ತಲುಪಿಸಿದ್ದಾರೆ. ಆದರೂ ಕೆಲವರು ಬಿಜೆಪಿಗೆ ಮತ ಹಾಕಿಲ್ಲ. ಅದಕ್ಕೆ ಮತೀಯ ಕಾರಣವಿದ್ದರೆ ತಪ್ಪಲ್ಲವೇ’ ಎಂದು ಪ್ರಶ್ನಿಸಿದರು.

‘ಸೆಕ್ಯುಲರ್ ಪಾಠ ಹಿಂದೂಗಳಿಗೆ ಮಾತ್ರ ಇರಬೇಕೆ’ ಎಂದು ಪ್ರಶ್ನಿಸಿದ ಅವರು, ‘ದಾರುಲ್ ಉಲೂಮ್, ದಾರುಲ್ ಇಸ್ಲಾಂ ಎಂದರೇನು ಎಂಬ ಚರ್ಚೆಯೂ ನಡೆಯಲಿ. ಆಗ ಕಮ್ಯುನಲ್ ಯಾರು, ಲಿಬರಲ್ ಯಾರೆಂಬುದು ಗೊತ್ತಾಗುತ್ತದೆ. ಹಲಾಲ್ ಮನೆಯಲ್ಲಿ ಇರಲಿ. ಮಾರ್ಕೆಟ್‌ನಲ್ಲಿ ಯಾಕೆ? ಮಾರ್ಕೆಟ್‌ನಲ್ಲಿ ಹಲಾಲ್ ಸೀಲ್ ಹಾಕಿ ಕಳುಹಿಸುವುದು ಮತೀಯವಾದದ ಪ್ರತೀಕ ಆಗುವುದಿಲ್ಲವೇ? ನಾವು ಗಾಳಿ ಮತ್ತು ಸಮಾಜವನ್ನು ವಿಭಜಿಸಲು ಆಗುವುದಿಲ್ಲ. ಹಲಾಲ್‌ನಂಥ ಕಾರಣಕ್ಕೆ ಸಮಾಜ ವಿಭಜನೆ ಆಗುವುದು ಸರಿಯೇ’ ಎಂದು ಪ್ರಶ್ನಿಸಿದರು.

### ಏ.16 ಮತ್ತು 17 ಬಿಜೆಪಿ ಕಾರ್ಯಕಾರಿಣಿ

ಏಪ್ರಿಲ್ 16 ಮತ್ತು 17 ರಂದು ವಿಜಯನಗರ ಜಿಲ್ಲೆಯಲ್ಲಿ ಪಕ್ಷದ ರಾಜ್ಯ ಕಾರ್ಯಕಾರಿಣಿ ಸಭೆ ನಡೆಯಲಿದ್ದು, ಇದರಲ್ಲಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಭಾಗವಹಿಸುವರು. ವಿಶೇಷ ಕಾರ್ಯಕಾರಿಣಿಯಲ್ಲಿ ಒಂದು ವರ್ಷದ ಕಾರ್ಯ ಚಟುವಟಿಕೆ, ಒಂದು ವರ್ಷದೊಳಗೆ ನಡೆಯುವ ಚುನಾವಣಾ ಕಾರ್ಯತಂತ್ರದ ರೋಡ್ ಮ್ಯಾಪ್ ಕುರಿತು ಚರ್ಚೆ ನಡೆಯಲಿದೆ. ಸಂಘಟನಾತ್ಮವಾಗಿ ಮತ್ತು ಗುಣಾತ್ಮಕವಾಗಿ ಪಕ್ಷವನ್ನು ಬಲಿಷ್ಠಗೊಳಿಸುವ ಸಂಬಂಧ ಮಾರ್ಗದರ್ಶನ ಸಿಗಲಿದೆ ಎಂದು ಹೇಳಿದರು.

### ಯುಗಾದಿ: ಹಲಾಲ್ ಮಾಂಸ ನಿಷೇಧಿಸಿ

**ಮೈಸೂರು:** ‘ಯುಗಾದಿಯ ಮರುದಿನ ಹಿಂದೂಗಳು ಹಲಾಲ್ ಮಾಂಸವನ್ನು ನಿಷೇಧಿಸಿ ಮತ್ತು ಹಿಂದೂ ಜಟ್ಕಾ ಮಾಂಸವನ್ನು ಬಳಸಬೇಕು’ ಎಂದು ಸಮಸ್ತ ಹಿಂದೂ ಸಂಘಟನೆಗಳ ಒಕ್ಕೂಟ ಮನವಿ ಮಾಡಿದೆ. ‘ಹಲಾಲ್ ಪದ್ಧತಿ ಮೂಲಕ ಮುಸ್ಲಿಮರು ತಮ್ಮ ದೇವರಿಗೆ ಅರ್ಪಿಸಿದ್ದನ್ನು, ಮತ್ತೆ ಹಿಂದೂ ದೇವರಿಗೆ ಅರ್ಪಿಸುವುದು ಹಿಂದೂ ಧರ್ಮಕ್ಕೆ ವಿರುದ್ಧವಾಗಿದೆ. ಹಾಗಾಗಿ, ಜಟ್ಕಾ ಮಾಂಸ ಸಿಗುವ ಹಾಗೆ ವ್ಯವಸ್ಥೆ ಮಾಡಬೇಕು’ ಎಂದು ಹಿಂದೂ ಜನಜಾಗೃತಿ ಸಮಿತಿಯ ರಾಜ್ಯ ವಕ್ತಾರ ಮೋಹನಗೌಡ, ಅಖಿಲ ಭಾರತ ಹಿಂದೂ ಮಹಾಸಭಾದ ಅಧ್ಯಕ್ಷ ಸುರೇಶ ಜೈನ್, ವಿಶ್ವ ಸನಾತನ ಪರಿಷತ್ತಿನ ಅಧ್ಯಕ್ಷ ಎಸ್. ಭಾಸ್ಕರನ್ ಆಗ್ರಹಿಸಿದ್ದಾರೆ.

## ದೇಶದಲ್ಲಿ ಹೆಚ್ಚಿದ ದ್ವೇಷ: ರಾಹುಲ್ ಆತಂಕ

ಪ್ರಜಾವಾಣಿ ವಾರ್ತೆ

**ತುಮಕೂರು:** ದೇಶದಲ್ಲಿ ದ್ವೇಷ ಹರಡುವ ಕೆಲಸ ನಡೆಯುತ್ತಿದ್ದು, ಅದನ್ನು ಶೀಘ್ರ ತಡೆಯುವ ಪ್ರಯತ್ನ ಮಾಡಬೇಕಿದೆ ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಹೇಳಿದರು.

ಸಿದ್ಧಗಂಗಾ ಮಠದಲ್ಲಿ ಶುಕ್ರವಾರ ಶಿವಕುಮಾರ ಸ್ವಾಮೀಜಿ ಜಯಂತ್ಯುತ್ಸವ ನೆರವೇರಲಿದ್ದು, ಅದಕ್ಕೂ ಮುನ್ನಾ ದಿನ ಗುರುವಾರ ಸಂಜೆ ಮಠಕ್ಕೆ ಭೇಟಿ ನೀಡಿದ್ದರು. ಮಕ್ಕಳ ಜತೆ ಸಾಮೂಹಿಕ ಪ್ರಾರ್ಥನೆಯಲ್ಲಿ ಭಾಗವಹಿಸಿದ ನಂತರ ಮಾತನಾಡಿದರು.

‘ಬಸವಣ್ಣನ ಸಂದೇಶವನ್ನು ಜಗತ್ತಿಗೆ ತಿಳಿಸುವ ಪ್ರಯತ್ನದಲ್ಲಿ ಮಠ, ಸ್ವಾಮೀಜಿ ಸಾಗಿದ್ದಾರೆ. ಹಿಂದೆ ಮಠಕ್ಕೆ ಬಂದಿದ್ದಾಗ ಶಿವಕುಮಾರ ಸ್ವಾಮೀಜಿಯನ್ನು ಭೇಟಿಯಾಗಿ ಆಶೀರ್ವಾದ ಪಡೆದುಕೊಂಡಿದ್ದೆ. ಅವರು ನಮಗೆಲ್ಲ ಮಾರ್ಗದರ್ಶಕರಾಗಿದ್ದರು. ತ್ರಿವಿಧ ದಾಸೋಹದ ಮೂಲಕ ನಾಡಿಗೆ ಮಾದರಿ ಸಂದೇಶ ನೀಡಿದ್ದಾರೆ. ಅವರ ದಾರಿಯಲ್ಲಿ ನಾವೆಲ್ಲ ಸಾಗಬೇಕಿದೆ. ಆದರೆ ಈಗ ಅವರಿಲ್ಲ ಎಂಬುದು ದುಃಖದ ಸಂಗತಿ’ ಎಂದು ತಿಳಿಸಿದರು.

ಮಠ ಹಾಗೂ ತಮ್ಮ ಕುಟುಂಬದ ಸಂಬಂಧವನ್ನು ನೆನಪಿಸಿಕೊಂಡ ರಾಹುಲ್, ಅಜ್ಜಿ ಇಂದಿರಾ ಗಾಂಧಿ, ತಂದೆ ರಾಜೀವ್ ಗಾಂಧಿ, ತಾಯಿ ಸೋನಿಯಾ ಗಾಂಧಿ ಮಠಕ್ಕೆ ಭೇಟಿಕೊಟ್ಟಿದ್ದಾರೆ. ಹಿಂದಿನಿಂದಲೂ ಮಠದ ಜತೆಗೆ ತಮ್ಮ ಕುಟುಂಬ ಅವಿನಾಭಾವ ಸಂಬಂಧ ಹೊಂದಿದೆ. ಮುಂದಿನ ದಿನಗಳಲ್ಲೂ ಇದೇ ಸಂಬಂಧ ಮುಂದುವರಿಯಲಿದೆ. ಮಠಕ್ಕೆ ಬೇಕಾದ ಅಗತ್ಯ ನೆರವನ್ನು ನೀಡಲಾಗುವುದು ಎಂದು ಹೇಳಿದರು.

ಕೆಪಿಸಿಸಿ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಮುಖಂಡರಾದ ಡಾ.ಜಿ.ಪರಮೇಶ್ವರ, ಎಂ.ಬಿ.ಪಾಟೀಲ, ಬಿ.ಕೆ.ಹರಿಪ್ರಸಾದ್, ಪ್ರಿಯಾಂಕ್ ಖರ್ಗೆ ಇತರರು ಇದ್ದರು.



ತುಮಕೂರು ಸಿದ್ಧಗಂಗಾ ಮಠದಲ್ಲಿ ಗುರುವಾರ ರಾಹುಲ್ ಗಾಂಧಿ ಅವರು ಶಿವಕುಮಾರ ಸ್ವಾಮೀಜಿ ಗದ್ದುಗೆ ದರ್ಶನ ಪಡೆದರು. ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯ, ಶಾಸಕ ಡಾ.ಜಿ.ಪರಮೇಶ್ವರ ಇದ್ದಾರೆ – ಪ್ರಜಾವಾಣಿ ಚಿತ್ರ/ ಎಸ್. ಚಂದನ್

## ‘ಗಂಡಸುತನ ಹೇಳಿಕೆ ಖಂಡನೀಯ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮಾಜಿ ಮುಖ್ಯಮಂತ್ರಿ ಎಚ್‌.ಡಿ.ಕುಮಾರಸ್ವಾಮಿ ಅವರು ಹಾಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗಂಡಸುತನ ಬಗ್ಗೆ ಮಾತನಾಡಿರುವುದನ್ನು ಉಗ್ರವಾಗಿ ಖಂಡಿಸುತ್ತೇನೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಅವರು ಹೇಳಿದ್ದಾರೆ.

ವಿಧಾನಸೌಧದಲ್ಲಿ ಗುರುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಅವರೊಬ್ಬ ಹಿರಿಯ ರಾಜಕಾರಣಿಯಾಗಿ ಈ ರೀತಿ ಮಾತನಾಡುವುದು ಶೋಭೆ ತರುವುದಿಲ್ಲ ಎಂದರು.

‘ಗಂಡಸುತನ ಯಾವುದಕ್ಕೆ ಬಳಸಬೇಕು ಎಂಬುದು ಕುಮಾರಸ್ವಾಮಿಗೆ ಗೊತ್ತಿದೆ. ಒಂದು ಕಡೆ ಬಳಸಬೇಕೋ, ಎರಡು ಕಡೆ ಬಳಸಬೇಕೋ, ಮೂರು ಕಡೆ ಬಳಸಬೇಕೋ ಎಂಬುದು ಅವರಿಗೆ ಗೊತ್ತಿದೆ’ ಎಂದು ಹೇಳಿದರು.

‘ಹಿಂದೂಗಳು ಮತ್ತು ಮುಸ್ಲಿಮರು ಅವರವರ ಸಂಪ್ರದಾಯ ಅವರು ಪಾಲಿಸಲಿ. ನನ್ನ ಅಭಿಪ್ರಾಯದಲ್ಲಿ ಜಟ್ಕಾ ಕಟ್ ರೀತಿಯಲ್ಲೇ ಪ್ರಾಣಿಗಳ ಹತ್ಯೆ ಆಗಬೇಕು. ವ್ಯಾಪಾರದ ವಿಷಯದಲ್ಲಿ ಹಿಂದೂಗಳು ತಮ್ಮ ಸಂಪ್ರದಾಯವನ್ನು ಪಾಲಿಸಲಿ ಎಂದು ಹೇಳುವುದರಲ್ಲಿ ತಪ್ಪೇನಿದೆ’ ಎಂದು ಪ್ರಶ್ನಿಸಿದರು.

‘ಯಾರಾದರೂ ಮುಸಲ್ಮಾನರು ಮಾಡುವ ತಪ್ಪುಗಳ ಬಗ್ಗೆ ಮಾತನಾಡಿದ್ದಾರಾ? ಶಿವಮೊಗ್ಗದಲ್ಲಿ ಹರ್ಷನ ಹತ್ಯೆಯಾಯಿತಲ್ಲ. ಆಗ ಮುಸಲ್ಮಾನರಿಗೆ ಬುದ್ಧಿ ಹೇಳಬೇಕಿತ್ತಲ್ಲ. ಎಲ್ಲ ಮುಸ್ಲಿಮರು ದೋಷಿಗಳು ಎನ್ನುವುದಿಲ್ಲ. ಕೆಲವು ಮುಸ್ಲಿಂ ಗೂಂಡಾಗಳು ಈ ಕೃತ್ಯ ಎಸಗಿದರು. ಇವರ ವಿರುದ್ಧ ಕ್ರಮ ಆಗಲಿ ಎಂದು ಯಾರಾದರೂ ಹೇಳಿದ್ದಾರಾ’ ಎಂದು ಈಶ್ವರಪ್ಪ ಆಕ್ರೋಶ ವ್ಯಕ್ತಪಡಿಸಿದರು.

### ‘ಎಚ್‌ಡಿಕೆ ಹೇಳಿಕೆಗೆ ಪ್ರತಿಕ್ರಿಯಿಸುವುದಿಲ್ಲ’

**ಬೆಂಗಳೂರು:** ‘ಸರ್ಕಾರಕ್ಕೆ ಮಾನ ಮರ್ಯಾದೆ ಇದ್ದರೆ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಗೆ ಗಂಡಸುತನ ಇದ್ದರೆ ಹಲಾಲ್ ವಿಚಾರದಲ್ಲಿ ಕ್ರಮ ಕೈಗೊಳ್ಳಬೇಕು’ ಎಂಬ ಎಚ್‌.ಡಿ. ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಲು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ನಿರಾಕರಿಸಿದರು. ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಕುಮಾರಣ್ಣ ಬಹಳ ಹಿರಿಯರಿದ್ದಾರೆ. ಸಚಿವ ಸಿ.ಎನ್. ಅಶ್ವತ್ಥನಾರಾಯಣ್ ಅವರು ಗಂಡಸುತನ ಬಗ್ಗೆ ಮಾತನಾಡುತ್ತಾರೊ, ಬೇರೆಯವರು ಮಾತನಾಡುತ್ತಾರೋ... ಆ ಬಗ್ಗೆ ಪ್ರತಿಕ್ರಿಯಿಸುವುದಿಲ್ಲ’ ಎಂದರು.

### ಗಂಡಸುತನ ಬೇಕಿರುವುದು ಸರ್ಕಾರ ನಡೆಸುವುದಕ್ಕಲ್ಲ: ಸಚಿವ ನಾಗೇಶ್

**ಮಡಿಕೇರಿ:** ‘ಗಂಡಸುತನ ಬೇಕಿರುವುದು ಸರ್ಕಾರ ನಡೆಸುವುದಕ್ಕಲ್ಲ. ಅದು ಎಲ್ಲಿಗೆ ಬೇಕೆಂಬುದು ಎಲ್ಲರಿಗೂ ಗೊತ್ತಿದೆ’ ಎಂದು ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ ಅವರು, ಎಚ್‌.ಡಿ.ಕುಮಾರಸ್ವಾಮಿ ಅವರ ಹೇಳಿಕೆಗೆ ಗುರುವಾರ ಇಲ್ಲಿ ತಿರುಗೇಟು ನೀಡಿದರು.

‘ರಾಜ್ಯ ಸರ್ಕಾರ ನಡೆಸುವ ಶಕ್ತಿ, ಸಾಮರ್ಥ್ಯ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಇದೆ’ ಎಂದು ಹೇಳಿದರು.

### ಇಂದು ಶಿವಕುಮಾರ ಸ್ವಾಮೀಜಿ ಜಯಂತ್ಯುತ್ಸವ • ಶೃಂಗಾರಗೊಂಡ ತುಮಕೂರು

# ಸಿದ್ಧಗಂಗಾ ಮಠದಲ್ಲಿ ಹಬ್ಬದ ಸಂಭ್ರಮ

ಪ್ರಜಾವಾಣಿ ವಾರ್ತೆ

**ತುಮಕೂರು:** ತ್ರಿವಿಧ ದಾಸೋಹಿ ಶಿವಕುಮಾರ ಸ್ವಾಮೀಜಿ 115ನೇ ಜಯಂತ್ಯುತ್ಸವಕ್ಕೆ ತುಮಕೂರು ಶೃಂಗಾರಗೊಂಡಿದ್ದು, ಸಿದ್ಧಗಂಗಾ ಮಠದಲ್ಲಿ ಸಂಭ್ರಮ ಮನೆ ಮಾಡಿದೆ.

ಶುಕ್ರವಾರ ಬೆಳಿಗ್ಗೆ ಕಾರ್ಯಕ್ರಮಗಳು ವಿಧ್ಯುಕ್ತವಾಗಿ ಆರಂಭವಾಗಲಿದ್ದು, ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ. ಸ್ವಾಮೀಜಿ ಸ್ಮರಿಸುವ ಫ್ಲೆಕ್ಸ್, ಕಟೌಟ್, ಬ್ಯಾನರ್ ನಗರದಲ್ಲಿ ರಾರಾಜಿಸುತ್ತಿವೆ. ಪ್ರಮುಖ ರಸ್ತೆ, ವೃತ್ತ, ಬಡಾವಣೆಗಳಲ್ಲಿ ಫ್ಲೆಕ್ಸ್ ಮೂಲಕ ಜನರು ಸ್ವಾಮೀಜಿಯನ್ನು ನೆನಪು ಮಾಡಿಕೊಳ್ಳುತ್ತಿದ್ದಾರೆ.

ಕಳೆದ ಎರಡು ದಿನಗಳಿಂದ ನಗರದ ಪ್ರಮುಖ ರಸ್ತೆ, ವೃತ್ತಗಳಲ್ಲಿ ಎಲ್‌ಇಡಿ ಪರದೆ ಅಳವಡಿಸಿ ಶಿವಕುಮಾರ ಸ್ವಾಮೀಜಿ ಸಾಧನೆ, ಅವರ ಕುರಿತು ಬರೆದಿರುವ ಹಾಡುಗಳನ್ನು ಪ್ರದರ್ಶಿಸಲಾಗುತ್ತಿದೆ. ಅಕ್ಷರ, ದಾಸೋಹ, ಆಧ್ಯಾತ್ಮಿಕ ಕ್ಷೇತ್ರದಲ್ಲಿ ಮಾಡಿರುವ ಸಾಧನೆಗಳನ್ನು ಜನರಿಗೆ ತಿಳಿಸುವ ಕೆಲಸ ನಡೆದಿದೆ.

ಕೋವಿಡ್‌ನಿಂದಾಗಿ ಕಳೆದ ಎರಡು ವರ್ಷಗಳಿಂದ ಜಯಂತಿ ಆಚರಣೆ ಮಾಡಿರಲಿಲ್ಲ. ಈಗ ಕೋವಿಡ್ ಆತಂಕ ಕಡಿಮೆಯಾಗಿದ್ದು, ಕೇಂದ್ರ ಗೃಹ ಸಚಿವ ಅಮಿತ್ ಶಾ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದಾರೆ. ಅವರನ್ನು ಸ್ವಾಗತಿಸಲು ಬಿಜೆಪಿ ಮುಖಂಡರು ಸಹ ಸಜ್ಜಾಗಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗುರುವಾರ ಮಠಕ್ಕೆ ಭೇಟಿ ನೀಡಿ ಖುದ್ದಾಗಿ ಪೂರ್ವ ಸಿದ್ಧತೆ ಪರಿಶೀಲಿಸಿದ್ದಾರೆ. ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ, ರಣದೀಪ್ ಸಿಂಗ್ ಸುರ್ಜೇವಾಲ ಕೂಡ ಈಗಾಗಲೇ ಮಠಕ್ಕೆ ಭೇಟಿ ನೀಡಿದ್ದಾರೆ.

**ಉತ್ತರ ಕರ್ನಾಟಕದಿಂದ ಭಕ್ತರ ದಂಡು:** ಶುಕ್ರವಾರ ಬೆಳಗಿನ ಜಾವ ಶಿವಕುಮಾರ ಸ್ವಾಮೀಜಿ ಗದ್ದುಗೆಗೆ ಸಿದ್ಧಗಂಗಾ ಮಠಾಧ್ಯಕ್ಷ ಸಿದ್ಧಲಿಂಗ ಸ್ವಾಮೀಜಿ ಪೂಜೆ ಸಲ್ಲಿಸಿದ ನಂತರ ಧಾರ್ಮಿಕ ಕಾರ್ಯ ಚಾಲನೆ ಪಡೆದುಕೊಳ್ಳಲಿವೆ. ಉತ್ತರ ಕರ್ನಾಟಕ ಸೇರಿದಂತೆ ದೂರದ ಊರಿನ ಭಕ್ತರ ದಂಡು ಈಗಾಗಲೇ ಮಠದತ್ತ ಬರುತ್ತಿದೆ. ಒಂದು ಲಕ್ಷಕ್ಕೂ ಹೆಚ್ಚು ಜನರು ಸೇರುವ ನಿರೀಕ್ಷೆ ಇದ್ದು, ಎಲ್ಲರಿಗೂ ಮಠದ ವತಿಯಿಂದ ಪ್ರಸಾದ ವ್ಯವಸ್ಥೆ ಮಾಡಲಾಗಿದೆ. ಸಾವಿರಾರು ಮಂದಿ ಅಡುಗೆ ತಯಾರಿಯಲ್ಲಿ ತೊಡಗಿದ್ದು, ಸ್ವಯಂ ಸೇವಕರು ಸಹಕಾರ ನೀಡುತ್ತಿದ್ದಾರೆ.




ಶಿವಕುಮಾರ ಸ್ವಾಮೀಜಿ 115ನೇ ಜಯಂತಿ ಕಾರ್ಯಕ್ರಮದ ನಿಮಿತ್ತ ನಿರ್ಮಿಸಿರುವ ವೇದಿಕೆಯ ಪ್ರವೇಶ ದ್ವಾರದ ಹೊರನೋಟ

### ಬೃಹತ್ ವೇದಿಕೆ

ಮಠದ ಆವರಣದಲ್ಲಿ ಸಾರ್ವಜನಿಕ ಸಮಾರಂಭಕ್ಕಾಗಿ ಬೃಹತ್ ವೇದಿಕೆ ನಿರ್ಮಾಣ ಮಾಡಲಾಗಿದೆ. ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಕಾರ್ಯಕ್ರಮದ ಉಸ್ತುವಾರಿ ವಹಿಸಿಕೊಂಡಿದ್ದಾರೆ. ಕಾರ್ಯಕ್ರಮಕ್ಕೆ ಹೆಚ್ಚು ಜನರನ್ನು ಕರೆತಂದು ಅಮಿತ್ ಶಾ ಎದುರು ಶಕ್ತಿ ಪ್ರದರ್ಶನಕ್ಕೆ ಬಿಜೆಪಿ ನಾಯಕರು ಮುಂದಾಗಿದ್ದಾರೆ.

ರಸ್ತೆ ಬದಿ ತೆರೆದ ಸ್ಥಿತಿಯಲ್ಲಿರುವ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳು • ಜೋತು ಬಿದ್ದಿರುವ ವಿದ್ಯುತ್ ತಂತಿಗಳು

# ಅಪಾಯ ತಂದೊಡ್ಡುತ್ತಿರುವ ಟ್ರಾನ್ಸ್‌ಫಾರ್ಮರ್

ಪ್ರಜಾವಾಣಿ ವಾರ್ತೆ

**ದಾಬಸ್‌ಪೇಟೆ:** ರಸ್ತೆಯಲ್ಲೇ ಇರುವ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳು, ಕೈಗೆಟಕುವ ಹಂತಕ್ಕೆ ಜೋತು ಬಿದ್ದಿರುವ ವಿದ್ಯುತ್ ತಂತಿಗಳು, ಆಗಾಗ ಬಲಿಯಾಗುವ ದನ-ಕರುಗಳು... ಇದು ಸೋಂಪುರ ಸುತ್ತಮುತ್ತಲ ಗ್ರಾಮಗಳ ಸ್ಥಿತಿ.

ಸೋಂಪುರ ಹೋಬಳಿಯ ಗ್ರಾಮೀಣ ಭಾಗದಲ್ಲಿ ಅಳವಡಿಸಿರುವ ಬಹುತೇಕ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳು ರಸ್ತೆಗೆ ಹೊಂದಿಕೊಂಡಂತೆ ಇದ್ದು, ಸುತ್ತಲೂ ತಂತಿ ಬೇಲಿ ಇಲ್ಲದೆ ಅಪಾಯ ಕೇಂದ್ರಗಳಾಗಿವೆ. ಸುತ್ತಲೂ ತಂತಿಬೇಲಿ ಅಳವಡಿಸಿ ಅಪಾಯ ತಪ್ಪಿಸಬೇಕು ಎಂಬ ಕೂಗು ದೊಡ್ಡದಾಗಿದೆ.

ಈ ಹೋಬಳಿ ವ್ಯಾಪ್ತಿಯಲ್ಲಿ 80 ಕಂದಾಯ ಗ್ರಾಮಗಳು ಹಾಗೂ ಉಪಗ್ರಾಮಗಳಿವೆ. ಗ್ರಾಮದ ಮನೆಗಳಿಗೆ, ಕುಡಿಯುವ ನೀರಿನ ಕೊಳವೆ ಬಾವಿ, ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಎರಡು ಸಾವಿರಕ್ಕೂ ಹೆಚ್ಚು ಟ್ರಾನ್ಸ್‌ಫಾರ್ಮರ್‌ಗಳನ್ನು ಅಲ್ಲಲ್ಲಿ ಅಳವಡಿಸಲಾಗಿದೆ.

'ಬಹುತೇಕ ಟ್ರಾನ್ಸ್‌ಫಾರ್ಮರ್‌ಗಳು ಊರ ಮಧ್ಯ ಮತ್ತು ರಸ್ತೆ ಪಕ್ಕದಲ್ಲಿಯೇ ಅಳವಡಿಸಿರುವುದರಿಂದ ಅವು ಅಪಾಯಕ್ಕೆ ಆಹ್ವಾನ ನೀಡುತ್ತಿವೆ. ಕನಿಷ್ಠ ಪಕ್ಷ ಸುತ್ತಲೂ ತಂತಿಬೇಲಿ ಅಳವಡಿಕೆಯನ್ನಾದರೂ ಮಾಡಿದರೆ ಅಪಾಯ ತಪ್ಪಿಸಬಹುದು. ಅದನ್ನೂ ಮಾಡದ ಬೆಸ್ಕಾಂ ಅಧಿಕಾರಿಗಳು ಜನ ಮತ್ತು ಜಾನುವಾರುಗಳ ಜೀವದ ಜತೆ ಚೆಲ್ಲಾಟವಾಡುತ್ತಿದ್ದಾರೆ' ಎಂಬುದು ಸ್ಥಳೀಯರ ಆರೋಪ.

'ಶಾಲಾ ಆವರಣ ಮತ್ತು ಮನೆಗಳಿಗೆ ಹೊಂದಿಕೊಂಡಂತೆ ಕೆಲವೆಡೆ ಟ್ರಾನ್ಸ್‌ಫಾರ್ಮರ್‌ಗಳನ್ನು ಅವೈಜ್ಞಾನಿಕ ಮತ್ತು ಅಸುರಕ್ಷಿತವಾಗಿ ಅಳವಡಿಸಲಾಗಿದೆ. ಮಳೆಗಾಲದಲ್ಲಿ ಬೆಳೆಯುವ ಹಸಿರು ಮೇವು ಮೇಯಲು ಹೋಗುವ ದನ, ಕರು, ಮೇಕೆ, ಕುರಿಗಳು ಹೋದಾಗ ವಿದ್ಯುತ್ ತಗಲಿ ಅವಘಡಗಳು ಸಂಭವಿಸುತ್ತಿವೆ. ಇನ್ನೂ ಕೆಲವೆಡೆ ಮಕ್ಕಳ ಕೈಗೆ ಎಟಕುವ ಹತ್ತಿರದಲ್ಲಿ ಟ್ರಾನ್ಸ್‌ಫಾರ್ಮರ್‌ಗಳಿವೆ. ಆಟವಾಡಲು ಹೋಗಿ ಮಕ್ಕಳು ಮುಟ್ಟಿದರೆ ಅಪಾಯ ಖಚಿತ. ಇದನ್ನು ತಡೆಯುವ ನಿಟ್ಟಿನಲ್ಲಿ ಸುರಕ್ಷಿತ ಕ್ರಮಗಳನ್ನು ಕೈಗೊಳ್ಳುವಲ್ಲಿ ಬೆಸ್ಕಾಂ ಅಧಿಕಾರಿಗಳು ವಿಫಲರಾಗಿದ್ದಾರೆ' ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸುತ್ತಾರೆ.

'ಕೆಲವೆಡೆ ಇಂದಿಗೂ ಹಳೆಯ ಕಂಬಗಳೇ ಇದ್ದು, ಅಲ್ಲಿ ವಿದ್ಯುತ್ ತಂತಿಗಳು ಜೋತು ಬಿದ್ದಿವೆ. ಲಾರಿ ಅಥವಾ ದೊಡ್ಡ ವಾಹನಗಳು ಸಂಚರಿಸುವಾಗ ತಂತಿ ತಗುಲುವ ಸಾಧ್ಯತೆ ಹೆಚ್ಚಿದೆ. ಅನಾಹುತಗಳು ಸಂಭವಿಸಿದರೆ ಯಾರು ಹೊಣೆ' ಎಂದು ಸಾಮಾಜಿಕ ಕಾರ್ಯಕರ್ತ ಮಾರುತಿ ಪ್ರಶ್ನಿಸುತ್ತಾರೆ.

'ಜ್ಞಾನಭಾರತಿ ಪೊಲೀಸ್ ಠಾಣಾ ವ್ಯಾಪ್ತಿಯ ಮಂಗನಹಳ್ಳಿ ಮೇಲ್ಸೇತುವೆ ಬಳಿ ಮಾ.23ರಂದು ಟ್ರಾನ್ಸ್‌ಫಾರ್ಮರ್ ಸ್ಫೋಟಗೊಂಡು ತಂದೆ ಮತ್ತು ಮಗಳು ಮೃತಪಟ್ಟಿದ್ದಾರೆ. ಸೋಂಪುರ ಹೋಬಳಿಯಲ್ಲಿ ರಸ್ತೆ ಬದಿಯಲ್ಲಿರುವ ಟ್ರಾನ್ಸ್‌ಫಾರ್ಮರ್‌ಗಳನ್ನು ಗಮನಿಸಿದರೆ ಆ ಘಟನೆ ಕಣ್ಮುಂದೆ ಬರುತ್ತಿದೆ' ಎಂದು ಸ್ಥಳೀಯರು ಆತಂಕ ವ್ಯಕ್ತಪಡಿಸುತ್ತಾರೆ.





ಚನ್ನೋಹಳ್ಳಿಯಲ್ಲಿ ರಸ್ತೆ ಬದಿಯಲ್ಲಿ ತೆರೆದ ಸ್ಥಿತಿಯಲ್ಲಿರುವ ಟ್ರಾನ್ಸ್‌ಫಾರ್ಮರ್‌ಗಳು

ಹೊರ ವಲಯ ಒಳ ಬೇಗುದಿ

### ಸುರಕ್ಷತೆಗೆ ಕ್ರಮ: ಎಂಜಿನಿಯರ್

'ಇಡೀ ಹೋಬಳಿಯಲ್ಲಿ ಎಲ್ಲೆಲ್ಲಿ ಟ್ರಾನ್ಸ್‌ಫಾರ್ಮರ್‌ಗಳಿವೆ, ಎಲ್ಲಿ ಸುರಕ್ಷತೆ ಇಲ್ಲ ಎಂಬುದರ ಮಾಹಿತಿ ಕಲೆ ಹಾಕಲಾಗುತ್ತಿದೆ' ಎಂದು ಬೆಸ್ಕಾಂ ದಾಬಸ್‌ಪೇಟೆ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ರಮೇಶ್ ತಿಳಿಸಿದರು.

ಸಂಪೂರ್ಣ ಮಾಹಿತಿ ಪಡೆದು ಬೆಸ್ಕಾಂಗೆ ವರದಿ ಸಲ್ಲಿಸಲಾಗುವುದು. ಕೆಲವೇ ದಿನಗಳಲ್ಲಿ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಹೇಳಿದರು.

# ಸಚಿವ ಈಶ್ವರಪ್ಪ ವಿರುದ್ಧ ತನಿಖೆಗೆ ಆದೇಶ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಶಿವಮೊಗ್ಗದಲ್ಲಿ ಕಳೆದ ತಿಂಗಳ 20ರಂದು ನಡೆದಿದ್ದ ಬಜರಂಗದಳ ಕಾರ್ಯಕರ್ತ ಹರ್ಷ ಹತ್ಯೆ ಪ್ರಕರಣವು ತನಿಖೆಯ ಹಂತದಲ್ಲಿರುವಾಗ ಪ್ರಚೋದನಕಾರಿ, ಸಾರ್ವಜನಿಕ ಹೇಳಿಕೆ ನೀಡಿ ಹಿಂದೂ–ಮುಸ್ಲಿಂ ಸಮುದಾಯದ ನಡುವೆ ವೈರತ್ವ ಉಂಟಾಗುವಂತೆ ಮಾಡಿದ್ದಾರೆ' ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಮತ್ತು ಬಿಜೆಪಿ ಮುಖಂಡ ಚನ್ನಬಸಪ್ಪ ವಿರುದ್ಧ ತನಿಖೆ ನಡೆಸಲು ಬೆಂಗಳೂರಿನ ಜನಪ್ರತಿನಿಧಿಗಳ ಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ಶಿವಮೊಗ್ಗದ ಇಲಿಯಾಸ್ ನಗರದ ನ್ಯೂ ಮಂಡಲಿ ರಸ್ತೆಯ 'ಶಾಂತಿ ಸಂಘಟನೆ' ಮುಖಂಡ ರಿಯಾಜ್ ಅಹಮದ್ ಸಲ್ಲಿಸಿರುವ ಖಾಸಗಿ ದೂರಿನ ವಿಚಾರಣೆ ನಡೆಸಿದ, 'ಕರ್ನಾಟಕದ ಹಾಲಿ–ಮಾಜಿ ಶಾಸಕರು ಮತ್ತು ಸಂಸದರ ವಿರುದ್ಧದ ಪ್ರಕರಣಗಳ ವಿಚಾರಣೆಯ ವಿಶೇಷ ಮ್ಯಾಜಿಸ್ಟ್ರೇಟ್ ಕೋರ್ಟ್' ನ್ಯಾಯಾಧೀಶೆ ಪ್ರೀತ್ ಜೆ. ಈ ಕುರಿತಂತೆ ನಿರ್ದೇಶಿಸಿದ್ದಾರೆ.

'ರಿಯಾಜ್ ಅಹಮದ್ ಅವರ ದೂರನ್ನು ಸಿಆರ್‌ಪಿಸಿ ಕಲಂ 156 (3)ರ ಅಡಿಯಲ್ಲಿ ದಾಖಲಿಸಿಕೊಂಡು ಆರೋಪಿಗಳಾದ ರಾಜ್ಯ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಹಾಗೂ ಶಿವಮೊಗ್ಗ ನಗರಸಭೆ ಮಾಜಿ ಅಧ್ಯಕ್ಷರೂ ಆದ ಬಿಜೆಪಿ ಮುಖಂಡ ಚನ್ನಬಸಪ್ಪ (ಚನ್ನಿ) ವಿರುದ್ಧ ಸೂಕ್ತ ತನಿಖೆ ನಡೆಸಿ' ಎಂದು ಶಿವಮೊಗ್ಗ ದೊಡ್ಡಪೇಟೆಯ ಪೊಲೀಸ್ ಠಾಣೆ ಅಧಿಕಾರಿಗೆ ನಿರ್ದೇಶಿಸಿರುವ ನ್ಯಾಯಾಧೀಶೆ, ವಿಚಾರಣೆಯನ್ನು ಮೇ 5ಕ್ಕೆ ಮುಂದೂಡಿದ್ದಾರೆ.

**ದೂರಿನಲ್ಲಿ ಏನಿದೆ?:** 'ಬಜರಂಗದಳದ ಕಾರ್ಯಕರ್ತ ಹರ್ಷ ಶಿವಮೊಗ್ಗದ ದೊಡ್ಡಪೇಟೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 2022ರ ಫೆ.20ರಂದು ರಾತ್ರಿ 9 ಗಂಟೆ ವೇಳೆಯಲ್ಲಿ ಹತ್ಯೆಗೀಡಾಗಿದ್ದರು. ಈ ಕುರಿತಂತೆ ದೊಡ್ಡಪೇಟೆ ಠಾಣೆಯ ಪೊಲೀಸರು ಕೊಲೆ ಮೊಕದ್ದಮೆ ದಾಖಲಿಸಿಕೊಂಡಿದ್ದರು. ಹತ್ಯೆ ನಡೆದ ಮರುದಿನ ಶವಯಾತ್ರೆ ವೇಳೆ ಸಾರ್ವಜನಿಕವಾಗಿ ಹೇಳಿಕೆ ನೀಡಿರುವ ಸಚಿವ ಈಶ್ವರಪ್ಪ ಮತ್ತು ಚನ್ನಬಸಪ್ಪ ಅವರು ಪ್ರಕರಣಕ್ಕೆ ರಾಜಕೀಯ ಮತ್ತು ಧಾರ್ಮಿಕ ಲೇಪನ ಮಾಡಿ ಹಿಂದೂ– ಮುಸ್ಲಿಂ ಸಮುದಾಯಗಳ ನಡುವಿನ ಕೋಮು ಸಾಮರಸ್ಯಕ್ಕೆ ಧಕ್ಕೆ ತಂದಿದ್ದಾರೆ. ಇವರ ವಿರುದ್ಧ ನಾನು ದೊಡ್ಡಪೇಟೆ ಠಾಣೆಯಲ್ಲಿ ದೂರು ನೀಡಲು ಹೋದರೂ ಠಾಣಾಧಿಕಾರಿ ದೂರು ದಾಖಲಿಸಿಕೊಳ್ಳಲಿಲ್ಲ. ಈ ಸಂಬಂಧ ನಾನು ಮೇಲಧಿಕಾರಿಗಳನ್ನು ಸಂಪರ್ಕಿಸಿದರೂ ಪ್ರಯೋಜನವಾಗಲಿಲ್ಲ. ಆದ್ದರಿಂದ, ನ್ಯಾಯಕ್ಕಾಗಿ ಈ ಕೋರ್ಟಿನ ಮೊರೆ ಹೊಕ್ಕಿದ್ದೇನೆ' ಎಂದು ರಿಯಾಜ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

# ಬಿಬಿಎಂಪಿ 'ಗುಪ್ತ' ಬಜೆಟ್!

ಒಂದನೇ ಪುಟದಿಂದ..

ಬಜೆಟ್‌ನಲ್ಲಿ ಕೇಂದ್ರ ಹಣಕಾಸು ಆಯೋಗದ ನಿಧಿಯಿಂದ ₹436 ಕೋಟಿ ಹಾಗೂ ವಿಶೇಷ ಮೂಲ ಸೌಕರ್ಯ ಯೋಜನೆ ಅನುದಾನದಿಂದ ₹3 ಸಾವಿರ ಕೋಟಿ ನಿರೀಕ್ಷೆ ಮಾಡಲಾಗಿದೆ.

ಈ ಬಾರಿ ವಿಶೇಷ ಅಭಿವೃದ್ಧಿ ವಿವೇಚನೆಗೆ ₹ 341 ಕೋಟಿ ಮೀಸಲಿಡಲಾಗಿದೆ. ವಿಶೇಷ ಮೂಲಸೌಕರ್ಯಗಳ ಅಭಿವೃದ್ಧಿ ಯೋಜನೆಗೆ ₹ 2673.37 ಕೋಟಿ ಕಾಯ್ದಿರಿಸಲಾಗಿದೆ. ಮೇಯರ್, ಉಪಮೇಯರ್, ಸ್ಥಾಯಿ ಸಮಿತಿಗಳಿಗೆ ಹಾಗೂ ಮುಖ್ಯ ಆಯುಕ್ತರ ವಿವೇಚನಾ ನಿಧಿಗೆ ಒಂದಿಷ್ಟು ಮೊತ್ತ ಕಾಯ್ದಿರಿಸಲಾಗುತ್ತಿತ್ತು.


ಆದರೀಗ ವಿಶೇಷ ಅಭಿವೃದ್ಧಿ ವಿವೇಚನೆ ನಿಧಿಗೂ ಮೊತ್ತ ಕಾಯ್ದಿರಿಸಲಾಗಿದೆ. ಚುನಾಯಿತ ಕೌನ್ಸಿಲ್ ಅಸ್ತಿತ್ವದಲ್ಲಿ ಇಲ್ಲದ ಕಾರಣ ಇದರ ಬಳಕೆಗೆ ಯಾರ 'ವಿವೇಚನೆ' ಬಳಸಲಾಗುತ್ತದೆ ಎಂಬುದರ ಬಗ್ಗೆ ಸ್ಪಷ್ಟತೆ ಇಲ್ಲ.

ಬಜೆಟ್ ಮಂಡನೆ ಕಾರ್ಯಕ್ರಮ ನಡೆಸದೆಯೇ ನೇರವಾಗಿ ವೆಬ್‌ಸೈಟ್ ನಲ್ಲಿ ಪ್ರಕಟಿಸಿದ ಬಗ್ಗೆ ಪ್ರತಿಕ್ರಿಯೆ ಪಡೆಯಲು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರಿಗೆ ಮಧ್ಯರಾತ್ರಿ ಕರೆ ಮಾಡಿ ಸಂಪರ್ಕಿಸಲು ಪ್ರಯತ್ನಿಸಲಾಯಿತು. ಅವರು ಕರೆ ಸ್ವೀಕರಿಸಲಿಲ್ಲ.


### ಅನುದಾನ ಖರ್ಚು ಮಾಡುವುದಕ್ಕೆ ನಿರ್ಬಂಧ

ಹಣ ತೆಗೆಯುವ ಹಾಗೂ ಬಟವಾಡೆ ಮಾಡುವ ಇಲಾಖೆಯ ಅಧಿಕಾರಿಗಳು ವೇತನ, ಭತ್ಯೆ, ಕಚೇರಿ ವೆಚ್ಚವನ್ನು ಹೊರತುಪಡಿಸಿ ಉಳಿದ ಲೆಕ್ಕ ಶೀರ್ಷಿಕೆಗಳ ಅನುದಾನವನ್ನು ನೇರಚಾಗಿ ಬಳಕೆ ಮಾಡುವಂತಿಲ್ಲ.

ಇಲಾಖೆ ಮುಖ್ಯಸ್ಥರು ಎಲ್ಲ ಕಾಮಗಾರಿಗಳ ಮತ್ತು ಇತರೆ ವೆಚ್ಚ ಭರಿಸಲು ಸ್ಥಾಯಿ ಸಮಿತಿ ಆಯುಕ್ತರ ಅಥವಾ ಕೌನ್ಸಿಲ್ ಸಭೆಯ ಅನುಮೋದನೆ ಪಡೆಯುವುದು ಕಡ್ಡಾಯ. ಬಿಲ್ಲುಗಳನ್ನು ಜ್ಯೇಷ್ಠತೆ ಆಧಾರದಲ್ಲೇ ಪಾವತಿಸಲು ಸಲ್ಲಿಕೆ ಮಾಡಬೇಕು ಎಂದು ಬಜೆಟ್‌ನಲ್ಲಿ ಉಲ್ಲೇಖಿಸಲಾಗಿದೆ.




| ಕ್ರ.ಸ. | ಆದಾಯದ ಮೂಲಗಳು | ಮೊತ್ತ (₹ ಕೋಟಿಗಳಲ್ಲಿ) | ಶೇಕಡ |
|---|---|---|---|
| 1. | ತೆರಿಗೆ ಮತ್ತು ಕರಗಳ ಆದಾಯ | 3,680.15 | 35 |
| 2. | ತೆರಿಗೆಯೇತರ ಆದಾಯ | 2,302.23 | 22 |
| 3. | ಭಾರತ ಸರ್ಕಾರದ ಅನುದಾನ | 436.01 | 4 |
| 4. | ಕರ್ನಾಟಕ ಸರ್ಕಾರದ ಅನುದಾನ | 3,576.59 | 34 |
| 5. | ಅಸಾಧಾರಣ ಆದಾಯ | 489.30 | 5 |
| | | 10,484.28 | 100 |




| ಕ್ರ.ಸ. | ವೆಚ್ಚಗಳ ವರ್ಗೀಕರಣ | ಮೊತ್ತ (₹ ಕೋಟಿಗಳಲ್ಲಿ) | ಶೇಕಡ |
|---|---|---|---|
| 1. | ಸಿಬ್ಬಂದಿ ವೆಚ್ಚಗಳು | 1,234.72 | 12 |
| 2. | ಆಡಳಿತ ವೆಚ್ಚಗಳು | 313.51 | 3 |
| 3. | ಬ್ಯಾಂಕ್ ಸಾಲ ಮತ್ತು ಬಡ್ಡಿ ಪಾವತಿ | 122.00 | 1 |
| 4. | ಕಾರ್ಯಕ್ರಮಗಳ ವೆಚ್ಚಗಳು | 456.84 | 4 |
| 5. | ಕಾರ್ಯಾಚರಣೆ ಮತ್ತು ನಿರ್ವಹಣೆ ವೆಚ್ಚಗಳು | 3,148.12 | 30 |
| 6. | ಸಾರ್ವಜನಿಕ ಅಭಿವೃದ್ಧಿ ಕಾಮಗಾರಿಗಳು | 4,838.26 | 46 |
| 7. | ಠೇವಣಿ ಮತ್ತು ಕರಗಳ ಮರುಪಾವತಿ | 367.48 | 4 |
| | | 10,480.93 | 100 |

ನಿವೃತ್ತರಾಗುತ್ತಿರುವ ರಾಜ್ಯಸಭೆಯ 72 ಸದಸ್ಯರಿಗೆ ಕಿವಿಮಾತು

# ಅನುಭವಾಮೃತ ಧಾರೆ ಎರೆಯಿರಿ: ಪ್ರಧಾನಿ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಸದನದ ನಾಲ್ಕು ಗೋಡೆಗಳ ನಡುವೆ ಪಡೆದ ಅನುಭವವನ್ನು ನಾಲ್ಕೂ ದಿಕ್ಕುಗಳಿಗೆ ಪಸರಿಸುವ ಮೂಲಕ ಮುಂದಿನ ಪೀಳಿಗೆಗೆ ಸ್ಫೂರ್ತಿಯಾಗಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಸಲಹೆ ನೀಡಿದರು.

72 ಜನ ಸದಸ್ಯರು ನಿವೃತ್ತರಾಗುತ್ತಿರುವ ಹಿನ್ನೆಲೆಯಲ್ಲಿ ಗುರುವಾರ ರಾಜ್ಯಸಭೆಯ ಕಲಾಪದಲ್ಲಿ ಬೀಳ್ಕೊಡುಗೆ ಭಾಷಣ ಮಾಡಿದ ಅವರು, 'ಅನುಭವವು ಜ್ಞಾನಕ್ಕಿಂತ ಅಪಾರ ಶಕ್ತಿ ಹೊಂದಿದೆ. ಸಂಸದರು ತಮ್ಮ ಅನುಭವವನ್ನು ರಾಷ್ಟ್ರದ ಅಭ್ಯುದಯಕ್ಕಾಗಿ ಧಾರೆ ಎರೆಯಬೇಕು' ಎಂದು ಕಿವಿಮಾತು ಹೇಳಿದರು.

'ನಾವು ಈ ನಾಲ್ಕು ಗೋಡೆಗಳಿಂದ ಹೊರಹೋಗುತ್ತಿರಬಹುದು. ಆದರೆ, ಇಲ್ಲಿ ಗಳಿಸಿರುವ ಅನುಭವವನ್ನು ದೇಶದ ಹಿತದೃಷ್ಟಿಯಿಂದ ಎಲ್ಲ ದಿಕ್ಕುಗಳಿಗೆ ಕೊಂಡೊಯ್ಯಬೇಕು. ನಿವೃತ್ತರಾಗುತ್ತಿರುವ ಅನೇಕ ಸದಸ್ಯರು ಸುದೀರ್ಘ ಅನುಭವ ಹೊಂದಿದ್ದು, ಇಲ್ಲಿ ಗಳಿಸಿದ ಜ್ಞಾನ ಮತ್ತು ಅನುಭವವನ್ನು ಕೃತಿಯ ಮೂಲಕವೂ ಹೊರತರಬೇಕು' ಎಂದು ಅವರು ತಿಳಿಸಿದರು.



ನವದೆಹಲಿಯಲ್ಲಿ ಗುರುವಾರ ನಡೆದ ರಾಜ್ಯಸಭೆಯ ನಿವೃತ್ತ ಸದಸ್ಯರ ಬೀಳ್ಕೊಡುಗೆ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಹಾಗೂ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಪರಸ್ಪರ ಮಾತುಕತೆಯಲ್ಲಿ ತೊಡಗಿದ್ದ ಕ್ಷಣ –ಪಿಟಿಐ ಚಿತ್ರ

'ಅನುಭವಕ್ಕೆ ತನ್ನದೇ ಆದ ಮಹತ್ವವಿದೆ. ಅನುಭವಿಗಳು ನಿವೃತ್ತರಾದಾಗ ಸದನ ಮತ್ತು ರಾಷ್ಟ್ರಕ್ಕೆ ಖಂಡಿತ ನಷ್ಟವಾಗಲಿದೆ. ಆದರೆ, ಅವರ ಅನುಭವವು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಹಾಯಕವಾಗಲಿದೆ' ಎಂದು ಅವರು ಅಭಿಪ್ರಾಯಪಟ್ಟರು.

19 ರಾಜ್ಯಗಳನ್ನು ಪ್ರತಿನಿಧಿಸುತ್ತಿರುವ ಒಟ್ಟು 72 ಜನ ಸದಸ್ಯರು ಜುಲೈ ವೇಳೆಗೆ ನಿವೃತ್ತರಾಗಲಿದ್ದಾರೆ. ಇವರಲ್ಲಿ ಏಳು ಜನ ನಾಮನಿರ್ದೇಶಿತ ಸದಸ್ಯರಾಗಿದ್ದು, ಕೆಲವರು ಐದು ಅವಧಿ ಪೂರೈಸಲಿದ್ದಾರೆ.

ನಿವೃತ್ತಿ ಹೊಂದುತ್ತಿರುವ ಸದಸ್ಯರ ಪೈಕಿ ಎ.ಕೆ. ಆಂಟನಿ, ಅಂಬಿಕಾ ಸೋನಿ, ಪಿ.ಚಿದಂಬರಂ, ಆನಂದ್ ಶರ್ಮಾ, ಜೈರಾಮ್ ರಮೇಶ್, ಸುರೇಶ್ ಪ್ರಭು, ಪ್ರಫುಲ್ ಪಟೇಲ್, ಸುಬ್ರಮಣಿಯನ್ ಸ್ವಾಮಿ, ಪ್ರಸನ್ನ ಆಚಾರ್ಯ, ಸಂಜಯ್ ರಾವುತ್, ನರೇಶ್ ಗುಜ್ರಾಲ್, ಸತೀಶ್ ಚಂದ್ರ ಮಿಶ್ರಾ, ಎಂ.ಸಿ. ಮೇರಿ ಕೋಮ್, ಸ್ವಪನ್ ದಾಸ್‌ಗುಪ್ತ, ನರೇಂದ್ರ ಜಾಧವ್ ಮತ್ತಿತರರು ಇದ್ದಾರೆ.

# ಬೆಲೆ ಏರಿಕೆ: ತಟ್ಟೆ ಬಾರಿಸಿ 'ಕೈ' ಪ್ರತಿಭಟನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆ ವಿರೋಧಿಸಿ ಕೇಂದ್ರ ಸರ್ಕಾರದ ವಿರುದ್ಧ ದೇಶದಾದ್ಯಂತ ಕಾಂಗ್ರೆಸ್ ಗುರುವಾರ ಹಮ್ಮಿಕೊಂಡಿದ್ದ 'ಬೆಲೆ ಏರಿಕೆ ಮುಕ್ತ ಭಾರತ' ಅಭಿಯಾನ ಅಂಗವಾಗಿ ಕೆಪಿಸಿಸಿ ಕಚೇರಿ ಎದುರು ಪ್ರತಿಭಟನೆ ನಡೆಯಿತು.

ದ್ವಿಚಕ್ರ ವಾಹನ ಮತ್ತು ಅಡುಗೆ ಅನಿಲ ಸಿಲಿಂಡರ್‌ಗೆ ಹೂವಿನ ಹಾರ ಹಾಕಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಮಂಗಳಾರತಿ ಮಾಡಿದರೆ, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಜಾಗಟೆ ಬಾರಿಸಿದರು. ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು, ನರೇಂದ್ರ ಮೋದಿ ನೇತೃತ್ವದ ಕೇಂದ್ರ ಬಿಜೆಪಿ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದರು.

ಈ ಸಂದರ್ಭದಲ್ಲಿ ಮಾತನಾಡಿದ ಡಿ.ಕೆ. ಶಿವಕುಮಾರ್, 'ಕಳೆದ 11 ದಿನ ಗಳಲ್ಲಿ ಕೇಂದ್ರ ಸರ್ಕಾರ 10 ಬಾರಿ ಇಂಧನ ಬೆಲೆ ಏರಿಸಿದೆ. ಜನರ ಜೇಬು ದಿನನಿತ್ಯ ಪಿಕ್ ಪಾಕೆಟ್ ಆಗುತ್ತಿದೆ. ಎಲ್ಲರ ಆದಾಯ ದ್ವಿಗುಣಗೊಳಿಸುತ್ತೇವೆ ಎಂದಿದ್ದ ಬಿಜೆಪಿ ಸರ್ಕಾರದ ಅವಧಿ ಯಲ್ಲಿ ಬೆಲೆ ಏರಿಕೆ ಗಗನಕ್ಕೇರಿದೆ. ಆದಾಯ ಪಾತಾಳಕ್ಕೆ ಹೋಗಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಗೃಹಿಣಿಯರು, ವಾಹನ ಸವಾರರು ಹೀಗೆ ಎಲ್ಲರೂ ದಿನನಿತ್ಯ ನೋವು ಅನುಭವಿಸುತ್ತಿದ್ದಾರೆ. ರಾಜ್ಯದ ಜನ ಅವಕಾಶಕ್ಕಾಗಿ ಕಾದು ಕುಳಿತಿದ್ದಾರೆ. ಅವಕಾಶ ಸಿಕ್ಕಾಗ ಕಾಂಗ್ರೆಸ್‌ಗೆ ಮತ ಹಾಕಿ ಬಿಜೆಪಿ ಸರ್ಕಾರವನ್ನು ಕಿತ್ತೊಗೆಯುವ ಮೂಲಕ ನೋವು ಹೊರಹಾಕುತ್ತಾರೆಂಬ ನಂಬಿಕೆ ನಮಗಿದೆ. ಜನರ ಧ್ವನಿಯಾಗಿ ನಾವು ಕೆಲಸ ಮಾಡುತ್ತಿದ್ದೇವೆ' ಎಂದು ಹೇಳಿದರು.

ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ವಿಧಾನ ಪರಿಷತ್ ವಿರೋಧ ಪಕ್ಷ ನಾಯಕ ಬಿ.ಕೆ. ಹರಿಪ್ರಸಾದ್, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಸಲೀಂ ಅಹ್ಮದ್, ರಾಮಲಿಂಗಾರೆಡ್ಡಿ, ಧ್ರುವನಾರಾಯಣ ಇದ್ದರು.

ಅದಕ್ಕೂ ಮೊದಲು ಸದಾಶಿವನಗರದಲ್ಲಿರುವ ತಮ್ಮ ನಿವಾಸದ ಬಳಿ ಅಡುಗೆ ಅನಿಲದ ಸಿಲಿಂಡರ್‌ಗೆ ಹೂವಿನ ಹಾರ ಹಾಕಿ, ಚಪ್ಪಾಳೆ ತಟ್ಟಿ ಡಿ.ಕೆ. ಶಿವಕುಮಾರ್ ಪ್ರತಿಭಟನೆ ನಡೆಸಿದರು.

# ರೇಣುಕಾಚಾರ್ಯಗೆ ಜೀವ ಬೆದರಿಕೆ ಕರೆ: ಎಫ್‌ಐಆರ್

**ಬೆಂಗಳೂರು:** ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಅವರಿಗೆ ಅಪರಿಚಿತನೊಬ್ಬ ಕೊಲೆ ಬೆದರಿಕೆ ಹಾಕಿದ್ದು, ಸದಾಶಿವನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಬೆದರಿಕೆ ಬಗ್ಗೆ ರೇಣುಕಾಚಾರ್ಯ ದೂರು ನೀಡಿದ್ದಾರೆ. ಅಪರಿಚಿತನ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಅಂತರ್ಜಾಲದ ಮೂಲಕ ರೇಣುಕಾಚಾರ್ಯ ಅವರಿಗೆ ಬುಧವಾರ ಕರೆ ಮಾಡಿದ್ದ ಅಪರಿಚಿತ, '3-4 ದಿನಗಳಲ್ಲಿ ಕೊಲೆ ಮಾಡುತ್ತೇನೆ' ಎಂಬುದಾಗಿ ಬೆದರಿಸಿದ್ದ. ವಿಧಿವಿಜ್ಞಾನ ಪ್ರಯೋಗಾಲಯದ ತಜ್ಞರ ನೆರವಿನಿಂದ ಕರೆ ವಿವರ ಸಂಗ್ರಹಿಸಲಾಗುತ್ತಿದೆ' ಎಂದೂ ಹೇಳಿದರು.

# ಸಿಸಿಬಿ: ₹ 20 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮಾದಕ ವಸ್ತು (ಡ್ರಗ್ಸ್) ಸಾಗಣೆ ಹಾಗೂ ಮಾರಾಟದ ವಿರುದ್ಧ ಕಾರ್ಯಾಚರಣೆ ಮುಂದುವರಿಸಿರುವ ಸಿಸಿಬಿ ಪೊಲೀಸರು, ಬಾಣಸವಾಡಿಯಲ್ಲಿ ನೈಜೀರಿಯಾದ ಇಬ್ಬರು ಪ್ರಜೆಗಳನ್ನು ಬುಧವಾರ ಬಂಧಿಸಿದ್ದಾರೆ.

'ಮೀಕಾಲೆ ಜಾನ್ಸನ್ ಹಾಗೂ ಚಿನೆಡೂ ಅನವೋರಾ ಲಾವರೆನ್ಸಿ ಬಂಧಿತರು. ಅವರಿಂದ ₹ 20 ಲಕ್ಷ ಮೌಲ್ಯದ 250 ಗ್ರಾಂ ಎಂಡಿಎಂಎ ಡ್ರಗ್ಸ್, ಎರಡು ಮೊಬೈಲ್ ಹಾಗೂ ಎಲೆಕ್ಟ್ರಾನಿಕ್ ತೂಕದ ಯಂತ್ರ ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ವ್ಯಾಪಾರ ವೀಸಾದಡಿ ನಗರಕ್ಕೆ ಬಂದಿದ್ದ ಆರೋಪಿಗಳು, ಬಾಡಿಗೆ ಮನೆಯಲ್ಲಿ ಉಳಿದುಕೊಂಡಿದ್ದರು. ಮುಂಬೈನಲ್ಲಿರುವ ಪರಿಚಯಸ್ಥರ ಮೂಲಕ ಡ್ರಗ್ಸ್ ತರಿಸಿಕೊಳ್ಳುತ್ತಿದ್ದ ಆರೋಪಿಗಳು, ಮನೆಯಲ್ಲಿ ಸಂಗ್ರಹಿಸಿಟ್ಟುಕೊಳ್ಳುತ್ತಿದ್ದರು. ವ್ಯಾಪಾರದ ಸೋಗಿನಲ್ಲಿ ನಗರದೆಲ್ಲೆಡೆ ಸುತ್ತಾಡಿ ಡ್ರಗ್ಸ್ ಮಾರುತ್ತಿದ್ದರು.'

'ಕೆಲ ಕಾಲೇಜು ವಿದ್ಯಾರ್ಥಿಗಳು, ಕೆಲ ಕಂಪನಿಗಳ ಉದ್ಯೋಗಿಗಳು ಹಾಗೂ ಇತರರು ಆರೋಪಿಗಳ ಬಳಿ ಡ್ರಗ್ಸ್ ಖರೀದಿಸುತ್ತಿದ್ದರು. ಡ್ರಗ್ಸ್ ಮಾರಾಟದಿಂದ ಬಂದ ಹಣದಲ್ಲಿ ಆರೋಪಿಗಳು ಐಷಾರಾಮಿ ಜೀವನ ನಡೆಸುತ್ತಿದ್ದರು. ಆರೋಪಿಗಳ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಡ್ರಗ್ಸ್ ಸಮೇತ ಬಂಧಿಸಲಾಗಿದೆ' ಎಂದೂ ಸಿಸಿಬಿ ಪೊಲೀಸರು ತಿಳಿಸಿದರು.

'ಇಂದಿರಾನಗರ ಹಾಗೂ ಕಾಡುಗೋಡಿ ಠಾಣೆಗಳಲ್ಲೂ ಆರೋಪಿಗಳ ವಿರುದ್ಧ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಾಗಿರುವ ಮಾಹಿತಿ ಇದೆ' ಎಂದೂ ಹೇಳಿದರು.



ಆರೋಪಿಗಳಿಂದ ಜಪ್ತಿ ಮಾಡಲಾದ ಎಂಡಿಎಂಎ ಡ್ರಗ್ಸ್

ಅಪರಾಧ ಸುದ್ದಿ

### ಗಾಂಜಾ: ಮತ್ತೊಬ್ಬ ಆರೋಪಿ ಬಂಧನ

**ಬೆಂಗಳೂರು:** ಬ್ಯಾಟರಾಯನಪುರ ಠಾಣೆ ವ್ಯಾಪ್ತಿಯಲ್ಲಿ 2021ರ ನವೆಂಬರ್ 29ರಂದು ಗಾಂಜಾ ಮಾರುತ್ತಿದ್ದ ಆರೋಪಿಯನ್ನು ಬಂಧಿಸಿದ್ದ ಪೊಲೀಸರು, ಇದೀಗ ಅದೇ ಪ್ರಕರಣದಲ್ಲಿ ಮತ್ತೊಬ್ಬ ಆರೋಪಿಯನ್ನು ಸೆರೆಹಿಡಿದಿದ್ದಾರೆ.

'ಚಾಂದಾ ಪಾಷಾ ಬಂಧಿತ. ಅವರಿಂದ 5 ಕೆ.ಜಿ 580 ಗ್ರಾಂ ಗಾಂಜಾ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

# ಪತ್ನಿ ಕಾಟದಿಂದ ನಾಪತ್ತೆ: ಏಳು ವರ್ಷಗಳ ಬಳಿಕ ಪತ್ತೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪತ್ನಿ ಕಾಟದಿಂದ ಬೇಸತ್ತು 2015ರಲ್ಲಿ ಮನೆ ಬಿಟ್ಟು ಹೋಗಿದ್ದ ಕೋಟೆಪ್ಪ (40) ಎಂಬುವರನ್ನು ಏಳು ವರ್ಷಗಳ ಬಳಿಕ ಆಡುಗೋಡಿ ಪೊಲೀಸರು ಪತ್ತೆ ಮಾಡಿದ್ದಾರೆ.

'ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕಿನ ಕೋಟೆಪ್ಪ, ಬೆಂಗಳೂರಿನ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಸಹೋದ್ಯೋಗಿಯೂ ಆಗಿದ್ದ ಸವಿತಾ ಎಂಬುವರನ್ನು ಪ್ರೀತಿಸಿ 2012ರಲ್ಲಿ ಮದುವೆಯಾಗಿದ್ದರು. ಆದರೆ, ದಂಪತಿ ನಡುವೆ ಕಲಹ ಶುರುವಾಗಿತ್ತು. ಬೇಸತ್ತ ಕೋಟೆಪ್ಪ, 2015ರಲ್ಲಿ ಮನೆ ಬಿಟ್ಟು ಹೋಗಿದ್ದರು. ನಾಪತ್ತೆಯಾಗಿರುವ ಪತಿಯನ್ನು ಹುಡುಕಿಕೊಡುವಂತೆ ಸವಿತಾ ಠಾಣೆಗೆ ದೂರು ನೀಡಿದ್ದರು' ಎಂದೂ ಪೊಲೀಸ್ ಮೂಲಗಳು ಹೇಳಿವೆ. 'ಒಡಿಶಾಗೆ ಹೋಗಿದ್ದ ಕೋಟೆಪ್ಪ, ಅಲ್ಲಿಯೇ ಉಳಿದುಕೊಂಡಿದ್ದರು. ಕೆಲ ತಿಂಗಳ ಹಿಂದಷ್ಟೇ ತಮ್ಮೂರಾದ ಹರಿಹರಕ್ಕೆ ಬಂದಿದ್ದರು. ಇದು ಗೊತ್ತಾಗುತ್ತಿದ್ದಂತೆ ಪತಿ ಸವಿತಾ, ಠಾಣೆಗೆ ಮಾಹಿತಿ ನೀಡಿದ್ದರು. ಹರಿಹರಕ್ಕೆ ಹೋಗಿ ಕೋಟೆಪ್ಪ ಅವರನ್ನು ಠಾಣೆಗೆ ಕರೆತರಲಾಗಿದೆ' ಎಂದೂ ತಿಳಿಸಿವೆ.

'ಪತ್ನಿ ಕಿರುಕುಳದಿಂದ ಮನೆ ಬಿಟ್ಟು ಹೋಗಿದ್ದಾಗಿ ಕೋಟೆಪ್ಪ ಹೇಳಿಕೆ ನೀಡಿದ್ದಾರೆ. 'ಪತ್ನಿ ಜೊತೆ ಸಂಸಾರ ಮಾಡುವುದಿಲ್ಲ' ಎಂದೂ ಪಟ್ಟು ಹಿಡಿದಿದ್ದಾರೆ. ಹೀಗಾಗಿ, ದಂಪತಿ ನಡುವೆ ಕಾನೂನು ಪ್ರಕಾರ ಸಂಧಾನ ನಡೆಸಲು ಕ್ರಮ ಕೈಗೊಳ್ಳಲಾಗಿದೆ' ಎಂದೂ ಪೊಲೀಸ್ ಮೂಲಗಳು ಹೇಳಿವೆ.

# ಸಂಬಳ ನೀಡದಿದ್ದಕ್ಕೆ ಚಾಲಕ ಆತ್ಮಹತ್ಯೆ

**ಬೆಂಗಳೂರು:** ಗೋವಿಂದರಾಜನಗರ ಠಾಣೆ ವ್ಯಾಪ್ತಿಯಲ್ಲಿ ಲಾರಿ ಚಾಲಕ ಕಿರಣ್‌ಕುಮಾರ್ (35) ಎಂಬುವರು ನೇಣು ಹಾಕಿಕೊಂಡು ಬುಧವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ಮೃತ ಕಿರಣ್‌ಕುಮಾರ್, ಕೆ.ಆರ್.ಪುರ ಬಳಿಯ ಲಾಜಿಸ್ಟಿಕ್ ಕಂಪನಿಯೊಂದರಲ್ಲಿ ಲಾರಿ ಚಾಲಕರಾಗಿದ್ದರು. ಕಂಪನಿ ಮಾಲೀಕರು ಸಂಬಳ ನೀಡದೇ ಸತಾಯಿಸುತ್ತಿದ್ದರು. ಇದರಿಂದ ನೊಂದಿದ್ದರು ಎನ್ನಲಾದ ಕಿರಣ್, ಸಂಜೀವಿನಗರದಲ್ಲಿರುವ ಸಂಬಂಧಿಯ ಮನೆಯಲ್ಲಿ ಆತ್ಮಹತ್ಯೆಗೆ ಶರಣಾಗಿದ್ದಾರೆ' ಎಂದು ಪೊಲೀಸರು ಹೇಳಿದರು.



ಯುಗಾದಿ ಹಾಗೂ ರಂಜಾನ್ ಹಬ್ಬದ ಪ್ರಯುಕ್ತ ಹೆಬ್ಬಾಳ ಕ್ಷೇತ್ರದ ಎಂಟು ವಾರ್ಡ್‌ಗಳ ಜನರಿಗೆ ₹1.50 ಕೋಟಿ ಮೊತ್ತದ 40 ಸಾವಿರ ದಿನಸಿ ಕಿಟ್‌ಗಳನ್ನು ಉಚಿತವಾಗಿ ವಿತರಿಸುವ ಕಾರ್ಯಕ್ರಮಕ್ಕೆ ಶಾಸಕ ಬೈರತಿ ಸುರೇಶ್ ಚಾಲನೆ ನೀಡಿದರು. ಕಾಂಗ್ರೆಸ್ ಮುಖಂಡ ಅಬ್ದುಲ್ ವಾಜೀದ್, ಆನಂದ್, ಆನಂದಕುಮಾರ್, ಬಾಲಾಜಿ, ಮುಜಾಮಿಲ್ ಅಹ್ಮದ್ ಇದ್ದರು

# ಅಪಘಾತ: ಎಸ್‌ಐ, ವಿದ್ಯಾರ್ಥಿ ಸಾವು

**ಬೆಂಗಳೂರು:** ಯಲಹಂಕ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಬುಧವಾರ ರಾತ್ರಿ ಅಪಘಾತ ಸಂಭವಿಸಿದ್ದು, ಕೇಂದ್ರೀಯ ಮೀಸಲು ಪೊಲೀಸ್ ಪಡೆಯ (ಸಿಆರ್‌ಪಿಎಫ್) ಸಬ್ ಇನ್‌ಸ್ಪೆಕ್ಟರ್ ಸ್ವಾಮಿಗೌಡ (54) ಹಾಗೂ ಎಂಜಿನಿಯರಿಂಗ್ ವಿದ್ಯಾರ್ಥಿ ಅಮ್ಮರ್ ಸುಲೆಹಾ (22) ಎಂಬುವರು ಮೃತಪಟ್ಟಿದ್ದಾರೆ.

'ಮೃತ ಸ್ವಾಮಿಗೌಡ, ಹಾಸನದ ಅರಕಲಗೂಡಿನವರು. ಯಲಹಂಕದ ಸಿಆರ್‌ಪಿಎಫ್ ಕ್ಯಾಂಪಸ್‌ನಲ್ಲಿ ಕೆಲಸ ಮಾಡುತ್ತಿದ್ದರು. ಯೆಮೆನ್ ದೇಶದ ಪ್ರಜೆ ಅಮ್ಮರ್, ಎಂ.ಎಸ್. ರಾಮಯ್ಯ ಎಂಜಿನಿಯರಿಂಗ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ರಾತ್ರಿ ಪಾಳಿಯಲ್ಲಿದ್ದ ಸ್ವಾಮಿಗೌಡ, ಕ್ಯಾಂಪಸ್ ಹಾಗೂ ಸುತ್ತಮುತ್ತ ಸಿಬ್ಬಂದಿಯ ಹಾಜರಿ ಪರಿಶೀಲಿಸುತ್ತಿದ್ದರು. ರಾತ್ರಿ 11.30ರ ಸುಮಾರಿಗೆ ಕ್ಯಾಂಪಸ್‌ನ ಪೂರ್ವ ಪ್ರವೇಶ ದ್ವಾರದ ಎದುರು ನಡೆದುಕೊಂಡು ಒಳಗೆ ಹೊರಟಿದ್ದರು. ಯಲಹಂಕ ಕಡೆಯಿಂದ ಅತೀ ವೇಗವಾಗಿ ಬೈಕ್ ಚಲಾಯಿಸಿಕೊಂಡು ಬಂದಿದ್ದ ಅಮ್ಮರ್, ನಿಯಂತ್ರಣ ಕಳೆದುಕೊಂಡು ಸ್ವಾಮಿ ಅವರಿಗೆ ಗುದ್ದಿಸಿದ್ದರು.''ಸ್ವಾಮಿಗೌಡ ಹಾಗೂ ಅಮ್ಮರ್ ಇಬ್ಬರೂ ತೀವ್ರವಾಗಿ ಗಾಯಗೊಂಡಿದ್ದರು. ಸಿಆರ್‌ಪಿಎಫ್ ಸಿಬ್ಬಂದಿ ಹಾಗೂ ಸ್ಥಳೀಯರೇ ಅವರಿಬ್ಬರನ್ನು ಸಮೀಪದ ಆಸ್ಪತ್ರೆಗೆ ಕರೆದೊಯ್ದು ದಾಖಲಿಸಿದ್ದರು. ಚಿಕಿತ್ಸೆಗೆ ಸ್ಪಂದಿಸದೇ ಅವರಿಬ್ಬರು ಅಸುನೀಗಿದರು. ಅಪಘಾತ ಸಂಬಂಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದೂ ಪೊಲೀಸರು ಮಾಹಿತಿ ನೀಡಿದರು.

**ಕಳಚಿದ್ದ ಹೆಲ್ಮೆಟ್:** 'ಅಮ್ಮರ್ ಅವರು ಹೆಲ್ಮೆಟ್ ಧರಿಸಿದ್ದರು. ಆದರೆ, ಬಟನ್ ಲಾಕ್ ಮಾಡಿರಲಿಲ್ಲ. ಅಪಘಾತವಾಗುತ್ತಿದ್ದಂತೆ ಹೆಲ್ಮೆಟ್ ಕಳಚಿತ್ತು. ಅವರ ತಲೆಗೆ ತೀವ್ರ ಪೆಟ್ಟು ಬಿದ್ದಿತ್ತು' ಎಂದು ಪೊಲೀಸರು ಹೇಳಿದರು.

### ಅತ್ಯಾಚಾರ: ರೌಡಿ ಬಂಧನ

**ಬೆಂಗಳೂರು:** ದೇವರ ಜೀವನಹಳ್ಳಿ (ಡಿ.ಜೆ.ಹಳ್ಳಿ) ಠಾಣೆ ವ್ಯಾಪ್ತಿಯಲ್ಲಿ ನೇಪಾಳಿ ಮಹಿಳೆಯೊಬ್ಬರ ಮೇಲೆ ಅತ್ಯಾಚಾರ ನಡೆದಿದ್ದು, ಪ್ರಕರಣದ ಆರೋಪಿ, ರೌಡಿ ಅವೇಜ್‌ನನ್ನು ಪೊಲೀಸರು ಬಂಧಿಸಿದ್ದಾರೆ. 'ಸಂತ್ರಸ್ತ ಮಹಿಳೆ, ಅತ್ಯಾಚಾರದ ಬಗ್ಗೆ ಗುರುವಾರ ಬೆಳಿಗ್ಗೆ ಠಾಣೆಗೆ ದೂರು ನೀಡಿದ್ದರು. ರೌಡಿ ಅವೇಜ್ ವಿರುದ್ಧ ಪ್ರಕರಣ ದಾಖಲಾಗಿತ್ತು. ಆತನನ್ನು ಬಂಧಿಸಿದ್ದ ಪೊಲೀಸರು, ವೈದ್ಯಕೀಯ ಪರೀಕ್ಷೆಗೆಂದು ಬೌರಿಂಗ್ ಆಸ್ಪತ್ರೆಗೆ ಕರೆದೊಯ್ದಿದ್ದರು. ಈ ವೇಳೆ ಆತ ಪರಾರಿಯಾಗಿದ್ದ. ತಡರಾತ್ರಿ ಆತ ಮತ್ತೆ ಸಿಕ್ಕಿಬಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಹಿಂದಿನ ಶುಲ್ಕಕ್ಕೆ ಹೋಲಿಸಿದರೆ 15ರಿಂದ 60 ಪಟ್ಟು ಹೆಚ್ಚಳ

# ಹಸಿರು ತೆರಿಗೆ: ಹಳೇ ವಾಹನಗಳ ಎಫ್‌ಸಿ ದುಬಾರಿ

• ಚಿರಂಜೀವಿ ಕುಲಕರ್ಣಿ

**ಬೆಂಗಳೂರು:** 15 ವರ್ಷಕ್ಕೂ ಹಳೆಯದಾದ ವಾಹನಗಳಿಗೆ ಎಫ್‌ಸಿ (ಫಿಟ್‌ನೆಸ್ ಸರ್ಟಿಫಿಕೇಟ್) ಪಡೆಯುವುದು ಇನ್ನು ಭಾರಿ ದುಬಾರಿ ಆಗಲಿದೆ. ಈ ಹಿಂದೆ ಇದ್ದ ಶುಲ್ಕಕ್ಕೆ ಹೋಲಿಸಿದರೆ 15ರಿಂದ 60 ಪಟ್ಟು ಹೆಚ್ಚಿಸಲಾಗಿದೆ.

2002ರಿಂದಲೇ ಹಸಿರು ತೆರಿಗೆಯನ್ನು ಕರ್ನಾಟಕ ಸಂಗ್ರಹಿಸುತ್ತಿದೆ. ದ್ವಿಚಕ್ರ ವಾಹನಗಳಿಗೆ ₹250, ನಾಲ್ಕು ಚಕ್ರದ ವಾಹನಗಳಿಗೆ ₹500 ಮತ್ತು ಏಳು ವರ್ಷ ಮೇಲ್ಪಟ್ಟ ಎಲ್ಲಾ ಸಾರಿಗೆ ವಾಹನಗಳಿಗೆ ₹200 ಶುಲ್ಕವನ್ನು ನಾಮಮಾತ್ರಕ್ಕೆ ಪಡೆಯಲಾಗುತ್ತಿತ್ತು.

ಹೊಸ ನೀತಿ ಪ್ರಕಾರ ಹೆಚ್ಚಳವಾಗುವ ಶುಲ್ಕವು 15 ವರ್ಷ ಮೇಲ್ಪಟ್ಟ ವಾಣಿಜ್ಯ ಉದ್ದೇಶದ ವಾಹನಗಳನ್ನು ಬಳಸಲು ಇಚ್ಛಿಸುವ ಮಾಲೀಕರ ಮೇಲೆ ಹೆಚ್ಚು ಪರಿಣಾಮ ಬೀರಲಿದೆ. ಉದಾಹರಣೆಗೆ ಹಳೆಯ ಸ್ಕೂಟರ್ ಮತ್ತು ಬೈಕ್‌ಗಳ ಮಾಲೀಕರು ಎಫ್‌ಸಿ ಪಡೆಯಲು ₹1 ಸಾವಿರ ಶುಲ್ಕದ ಜತೆಗೆ ವಾಹನ ಪರೀಕ್ಷಾ ಶುಲ್ಕವಾಗಿ ₹400-₹500 ಪಾವತಿಸಬೇಕಾಗುತ್ತದೆ.

ಹಳೆಯ ಕಾರುಗಳಿಗೆ ₹4500, ಸರಕು ಸಾಗಣೆಯ ಮಧ್ಯಮ ವಾಹನಗಳಿಗೆ ₹10 ಸಾವಿರ ಮತ್ತು ಭಾರಿ ವಾಹನಗಳಿಗೆ ₹12 ಸಾವಿರ ಶುಲ್ಕ ಪಾವತಿಸಬೇಕಾಗುತ್ತದೆ. ರಾಜ್ಯದಲ್ಲಿ 15 ವರ್ಷಕ್ಕಿಂತ ಮೇಲ್ಪಟ್ಟ 70.29 ಲಕ್ಷ ವಾಹನಗಳಿದ್ದು, ಅವುಗಳಲ್ಲಿ 45.62 ಲಕ್ಷ ದ್ವಿಚಕ್ರ ವಾಹನಗಳು, 11.7 ಲಕ್ಷ ಕಾರುಗಳು, 2.4 ಲಕ್ಷ ಟ್ರಕ್ ಮತ್ತು ಲಾರಿಗಳು, 2.19 ಲಕ್ಷ ಸರಕು ಸಾಗಣೆ ಲಘು ವಾಹನಗಳಿವೆ.

'ದೇಶದಾದ್ಯಂತ ಹೊಸ ನಿಯಮಗಳನ್ನು ಜಾರಿಗೆ ತರಲಾಗುತ್ತಿದೆ. ಕೇಂದ್ರದ ನಿಯಮ ಎಲ್ಲರಿಗೂ ಒಂದೇ ಆಗಿದೆ' ಎಂದು ಹೆಚ್ಚುವರಿ ಸಾರಿಗೆ ಆಯುಕ್ತ(ಜಾರಿ) ನರೇಂದ್ರ ಹೋಳ್ಕರ್ ಹೇಳಿದರು.



'ಮಾಲಿನ್ಯ ನಿಯಂತ್ರಣದ ಹೆಸರಿನಲ್ಲಿ ವಿಧಿಸಿರುವ ಹೆಚ್ಚುವರಿ ಶುಲ್ಕವು ವಾಹನಗಳ ಮಾಲೀಕರು ಮತ್ತು ಚಾಲಕರಿಗೆ ಕಿರುಕುಳ ನೀಡಲು ಸಾಧನವಾಗಲಿದೆ ಅಷ್ಟೇ. ಹಳೆಯ ವಾಹನಳು ಮಾಲಿನ್ಯಕ್ಕೆ ಕೊಡುಗೆ ನೀಡುತ್ತವೆ ಎಂಬುದು ತಪ್ಪು ಕಲ್ಪನೆ' ಎಂದು ಲಾರಿ ಮಾಲೀಕರ ಸಂಘಗಳ ಒಕ್ಕೂಟದ ಅಧ್ಯಕ್ಷ ಬಿ. ಚನ್ನಾರೆಡ್ಡಿ ಹೇಳಿದರು.

'ಸರ್ಕಾರದ ಈ ನೀತಿಯನ್ನು ಒಪ್ಪಲಾಗದು. ಚೆನ್ನೈನಲ್ಲಿ ಏ.3ರಂದು ನಡೆಯಲಿರುವ ದಕ್ಷಿಣ ಭಾರತ ಲಾರಿ ಮಾಲೀಕರ ಸಂಘದ ಸಭೆಯಲ್ಲಿ ಚರ್ಚಿಸಿ ಮುಂದಿನ ನಿರ್ಧಾರ ಕೈಗೊಳ್ಳಲಾಗುವುದು' ಎಂದು ದಕ್ಷಿಣ ಭಾರತ ಲಾರಿ ಮಾಲೀಕರ ಸಂಘದ ಅಧ್ಯಕ್ಷ ಷಣ್ಮುಖಪ್ಪ ತಿಳಿಸಿದರು.

### ಗುರುವಂದನಾ ಸಮಾರಂಭದಲ್ಲಿ ಪುತ್ತಿಗೆ ಮಠದ ಸುಗುಣೇಂದ್ರ ಸ್ವಾಮೀಜಿ ಅಭಿಮತ

# ‘ಭಗವದ್ಗೀತೆ ಮತೀಯ ಗ್ರಂಥ ಅಲ್ಲ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಭಗವದ್ಗೀತೆ ಮತೀಯ ಗ್ರಂಥ ಅಲ್ಲ. ಸನ್ಮತಿ ನೀಡುವ ಗ್ರಂಥ’ ಎಂದು ಉಡುಪಿ ಪುತ್ತಿಗೆ ಮಠದ ಸುಗುಣೇಂದ್ರತೀರ್ಥ ಶ್ರೀಗಳು ಪ್ರತಿಪಾದಿಸಿದರು.

ಸ್ವಾಮೀಜಿ ಅವರಿಗೆ 60 ವರ್ಷಗಳು ತುಂಬಿದ ಹಿನ್ನೆಲೆಯಲ್ಲಿ ವಿವಿಧ ಸಂಘಟನೆಗಳು ನಗರದಲ್ಲಿ ಗುರುವಾರ ಆಯೋಜಿಸಿದ್ದ ‘ಪುತ್ತಿಗೆ ಶ್ರೀ-60: ಗುರುವಂದನೋತ್ಸವ’ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಭಗವದ್ಗೀತೆ ವ್ಯಕ್ತಿತ್ವ ಬೆಳೆಸುವ ಗ್ರಂಥ. ಅದನ್ನು ಧಾರ್ಮಿಕ ಗ್ರಂಥಕ್ಕೆ ಸೀಮಿತಗೊಳಿಸಬಾರದು. ಹೀಗಾಗಿ, ಭಗವದ್ಗೀತೆಯ ಸಂದೇಶಗಳನ್ನು ಪ್ರಚಾರ ಮಾಡುವ ಅಗತ್ಯವಿದೆ’ ಎಂದರು.

‘ಇಂದು ಬೌದ್ಧಿಕ ಮಾಲಿನ್ಯವೂ ಹೆಚ್ಚಾಗಿದೆ. ಈ ಮಾಲಿನ್ಯ ಹೋಗಲಾಡಿಸಬೇಕಾದರೆ ಭಗವದ್ಗೀತೆಯ ಪ್ರಚಾರವಾಗಬೇಕು. ಭಗವದ್ಗೀತೆಯು ಸ್ಫೂರ್ತಿ ನೀಡುವ ಗ್ರಂಥವಾಗಿದೆ. ಅನ್ನ, ಆಹಾರ ಯಾರಾದರೂ ಕೊಡಬಹುದು. ಆದರೆ, ಯಾವುದೇ ವ್ಯಕ್ತಿಗೆ ಸ್ಫೂರ್ತಿ ತುಂಬಲು ಸಾಧ್ಯವಿಲ್ಲ’ ಎಂದು ಸಲಹೆ ನೀಡಿದರು.

‘ಇಂದು ಜೀವನದ ಗುಣಮಟ್ಟ ಹೆಚ್ಚಾಗುತ್ತಿದೆ. ಆದರೆ, ಸಂಸ್ಕಾರ ಕಡಿಮೆಯಾಗಿದೆ. ಜಗತ್ತಿನಲ್ಲಿ ಶ್ರೀಮಂತಿಕೆ ಹೆಚ್ಚಾಗುತ್ತಿದೆ. ಬಡವರ ಸಂಖ್ಯೆ ಕಡಿಮೆಯಾಗುತ್ತಿದೆ. ಸ್ಮಾರ್ಟ್ ಫೋನ್ ಇಲ್ಲದವರು ಮತ್ತು ಟಿ.ವಿ. ಇಲ್ಲದವರು ಮಾತ್ರ ಬಡವರು. ಆದರೆ, ಗುಣಮಟ್ಟದ ಜೀವನವನ್ನು ಹೆಚ್ಚಿಸುವ ಭರದಲ್ಲಿ ಮಾನಸಿಕ ಒತ್ತಡವನ್ನು ಹೆಚ್ಚಿಸಿಕೊಳ್ಳುತ್ತಿದ್ದೇವೆ. ಪ್ರತಿಯೊಬ್ಬರು ಇಂದು ಒತ್ತಡದಲ್ಲಿ ಬದುಕುತ್ತಿದ್ದಾರೆ. ಹೀಗಾಗಿ, ಭಗವದ್ಗೀತೆಯ ಸಂದೇಶಗಳನ್ನು ತಿಳಿದುಕೊಳ್ಳುವ ಅಗತ್ಯವಿದೆ’ ಎಂದು ವಿಶ್ಲೇಷಿಸಿದರು.

ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ ಅವರು ಮಾತನಾಡಿ, ‘ಮಾನವೀಯ ಮೌಲ್ಯಗಳನ್ನು ಬಿತ್ತುವ ಕಾರ್ಯದಲ್ಲಿ ಶ್ರೀಗಳು ತೊಡಗಿದ್ದಾರೆ. ದೇಶ ಮತ್ತು ವಿದೇಶಗಳಲ್ಲಿ ಧಾರ್ಮಿಕ ಭಾವನೆ ಮೂಡಿಸುವ ಕಾರ್ಯ ಮಾಡಿದ್ದಾರೆ’ ಎಂದು ಶ್ಲಾಘಿಸಿದರು.

ಶಾಸಕ ಎಲ್‌.ಎ. ರವಿಸುಬ್ರಹ್ಮಣ್ಯ ಮಾತನಾಡಿ, ‘ಕಿರಿಯ ವಯಸ್ಸಿನಲ್ಲಿ ಸನ್ಯಾಸ ದೀಕ್ಷೆ ಪಡೆದ ಪುತ್ತಿಗೆ ಶ್ರೀಗಳು, ಜಗತ್ತಿನಾದ್ಯಂತ ಸನಾತನ ಧರ್ಮ ಮತ್ತು ಸಂಸ್ಕೃತಿಯನ್ನು ಪರಿಚಯಿಸಿದ್ದಾರೆ. ಇವರೇ ನಿಜವಾದ ಜಗದ್ಗುರುಗಳು’ ಎಂದರು.

ಮಾಜಿ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಇದ್ದರು. ಕಾರ್ಯಕ್ರಮದಲ್ಲಿ ಪುತ್ತಿಗೆ ಶ್ರೀಗಳ 60 ಲೇಖನಗಳ ‘ಅರವತ್ತು’ ಕೃತಿಯನ್ನು ಬಿಡುಗಡೆ ಮಾಡಲಾಯಿತು. ಲೀಲಾ ನಾಟ್ಯ ವೃಂದ ಕಲಾ ನೃತ್ಯ ಶಾಲೆಯ ವಿದ್ಯಾರ್ಥಿಗಳು ನೀಡಿದ ‘ನಾಟ್ಯ ನಮನ’ ನೃತ್ಯ ಕಾರ್ಯಕ್ರಮ ಗಮನಸೆಳೆಯಿತು. ಶ್ರೀ ಲಕ್ಷ್ಮೀ ದಾಸ್ ಅವರಿಂದ ವೀಣಾ ವಾದನ ಕಾರ್ಯಕ್ರಮ ನಡೆಯಿತು.

ಸುಗುಣೇಂದ್ರತೀರ್ಥ ಶ್ರೀಗಳಿಗೆ ಪೇಜಾವರ ವಿಶ್ವಪ್ರಸನ್ನ ತೀರ್ಥ ಶ್ರೀಗಳು [illegible] ತಯಾರಿಸಿದ ಪೇಟವನ್ನು ತೊಡಿಸಿ ಗೌರವಿಸಿದರು.

**ಸುಗುಣೇಂದ್ರತೀರ್ಥರ ಗುರುಗಳಲ್ಲು ಮೇರು ವ್ಯಕ್ತಿತ್ವ. ಶ್ರೀಗಳು ವಿಶ್ವದೆತ್ತರಕ್ಕೆ ಬೆಳೆದವರು. ಪ್ರಪಂಚದ ಉದ್ದಗಲಕ್ಕೆ ಸುತ್ತಾಡಿ ಧರ್ಮ ಪ್ರಚಾರ ಮಾಡಿದ್ದಾರೆ. ಅವರು ನಡೆದಾಡುವ ವಿಶ್ವಕೋಶ.**
**ವಿಶ್ವಪ್ರಸನ್ನ ತೀರ್ಥ ಶ್ರೀಗಳು,** ಪೇಜಾವರ


ಬೆಂಗಳೂರಿನಲ್ಲಿ ಗುರುವಾರ ಆಯೋಜಿಸಿದ್ದ ಉಡುಪಿ ಪುತ್ತಿಗೆ ಪೀಠಾಧಿಪತಿ ಸುಗುಣೇಂದ್ರತೀರ್ಥ ಶ್ರೀಗಳ ಗುರುವಂದನಾ ಸಮಾರಂಭದಲ್ಲಿ ಶ್ರೀಮದ್ಭಗವದ್ಗೀತೆಯ ಕೃತಿಯನ್ನು ಸುಧಾಮೂರ್ತಿ ಬಿಡುಗಡೆ ಮಾಡಿದರು. ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ, ಪ್ರೊ. ಕೆ.ಇ. ರಾಧಾಕೃಷ್ಣ, ಸುಗುಣೇಂದ್ರತೀರ್ಥ ಸ್ವಾಮೀಜಿ, ವಿಶ್ವಪ್ರಸನ್ನ ತೀರ್ಥ ಶ್ರೀಗಳು, ಶಾಸಕ ಎಲ್‌.ಎ. ರವಿಸುಬ್ರಹ್ಮಣ್ಯ, ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ ಹಾಗೂ ವಿಧಾನ ಪರಿಷತ್ ಸದಸ್ಯ ಯು.ಬಿ. ವೆಂಕಟೇಶ್ ಇದ್ದರು. –ಪ್ರಜಾವಾಣಿ ಚಿತ್ರ

## ‘ಧರ್ಮದ ಚೌಕಟ್ಟು ಮೀರಿ ಮಾನವೀಯತೆ ಬೆಳೆಯಲಿ’

‘ಪ್ರಸ್ತುತ ಕಾಲಘಟ್ಟದಲ್ಲಿ ಧರ್ಮದ ಚೌಕಟ್ಟು ಮೀರಿ ಮಾನವೀಯತೆ ಬೆಳೆಯಲಿ’ ಎಂದು ಇನ್ಫೊಸಿಸ್ ಪ್ರತಿಷ್ಠಾನದ ಅಧ್ಯಕ್ಷೆ ಸುಧಾಮೂರ್ತಿ ಹೇಳಿದರು.

‘ಮಾನವೀಯತೆ ನಮ್ಮ ಕೈಯಲ್ಲಿದೆ. ಧರ್ಮ ನಮ್ಮ ಕೈಯಲ್ಲಿ ಇಲ್ಲ. ಯಾರೂ ಧರ್ಮವನ್ನು ಬೇಡಿ ಬಂದಿರುವುದಿಲ್ಲ. ಆದ್ದರಿಂದ, ಮಾನವೀಯ ಮೌಲ್ಯಗಳು ಸಮಾಜದಲ್ಲಿ ಬೆಳೆಯಬೇಕಾಗಿದೆ’ ಎಂದರು.

‘ಸುಗುಣೇಂದ್ರ ತೀರ್ಥರ ಹತ್ತು ಹಲವು ಯೋಜನೆಗಳು ಆಕರ್ಷಣೀಯವಾಗಿವೆ. ಸಪ್ತ ಸಾಗರ ದಾಟಬಾರದು ಎನ್ನುವ ಸಂಪ್ರದಾಯವನ್ನು ಉಲ್ಲಂಘಿಸಿ ದಿಟ್ಟ ನಿಲುವು ತಳೆದವರು ಶ್ರೀಗಳು. ಶ್ರೀಗಳ ವಿಶೇಷ ಪ್ರಯತ್ನ ಮಾಡಿ ಸ್ವತಃ ವಿದೇಶ ಪ್ರಯಾಣ ಮಾಡಿ ಉಳಿದ ಶ್ರೀಗಳಿಗೆ ಮಾರ್ಗದರ್ಶನ ಮಾಡಿದರು. ಇಂತಹ ಹೊಸ ಯೋಜನೆಗಳನ್ನು ರೂಪಿಸಿದವರು ಶ್ರೀಗಳು. ವಿದೇಶಕ್ಕೆ ಹೋಗುವುದು ಅಪರಾಧವೂ ಅಲ್ಲ, ಸೌಭಾಗ್ಯವೂ ಅಲ್ಲ. ಸಾಫ್ಟ್‌ವೇರ್ ವ್ಯಕ್ತಿಯಲ್ಲಿರುವುದು ವಿದೇಶಕ್ಕೆ ತೆರಳುವುದು ಅನಿವಾರ್ಯ’ ಎಂದು ವಿವರಿಸಿದರು.

‘ಮಹಿಳೆಯರಿಗೆ ಅವಕಾಶಗಳು ಇನ್ನೂ ಕಡಿಮೆ. ಸಮಾಜದಲ್ಲಿ ಅನಿಷ್ಟ ಪಿಡುಗುಗಳು ತೊಲಗಬೇಕಾಗಿದೆ. ಸ್ವಾಮೀಜಿಗಳು ಇಂತಹ ಅನಿಷ್ಟ ಪದ್ಧತಿಗಳನ್ನು ಹೋಗಲಾಡಿಸಲು ಶ್ರಮಿಸುತ್ತಿದ್ದಾರೆ’ ಎಂದು ಹೇಳಿದರು.

## ಸುದ್ದಿ 2 ನಿಮಿಷ

### ಸಾವಯವ ಸಿರಿ: ತಾಲ್ಲೂಕು ಆಯ್ಕೆ ಪ್ರಕ್ರಿಯೆಗೆ ತಾತ್ಕಾಲಿಕ ತಡೆ

**ಬೆಂಗಳೂರು:** ‘ಸಾವಯವ ಸಿರಿ’ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ತಾಲ್ಲೂಕು ಮಟ್ಟದ ಅನುಷ್ಠಾನ ಸಂಸ್ಥೆಗಳಿಗೆ ಆರ್ಥಿಕ ಬೆಂಬಲ ನೀಡುವ ಬಗ್ಗೆ ಸ್ಪಷ್ಟತೆ ಇಲ್ಲದಿರುವ ಕಾರಣ ತಾಲ್ಲೂಕು ಮಟ್ಟದ ಆಯ್ಕೆ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ತಡೆ ಹಿಡಿಯಲಾಗಿದೆ.

ಕೃಷಿ ಸಚಿವ ಬಿ.ಸಿ.ಪಾಟೀಲ ಅವರು ಈ ವಿಷಯವನ್ನು ಪ್ರಕಟಣೆಯಲ್ಲಿ ತಿಳಿಸಿದ್ದು, ತಾಲ್ಲೂಕು ಮಟ್ಟದ ಸೇವಾ ಸಂಸ್ಥೆಗಳಿಗೆ ಆರ್ಥಿಕ ಬೆಂಬಲ ನೀಡುವ ಬಗ್ಗೆ ವಿವರಣೆ ಕೋರಲಾಗಿದೆ. ಈ ಬಗ್ಗೆ ಮುಂದಿನ ಆದೇಶ ಹೊರಡಿಸುವವರೆಗೆ ಪ್ರಕ್ರಿಯೆ ನಿಲ್ಲಿಸಲು ಸೂಚಿಸಲಾಗಿದೆ ಎಂದಿದ್ದಾರೆ.

2021–22 ನೇ ಸಾಲಿನ ಆಯವ್ಯಯದಲ್ಲಿ ಈ ಯೋಜನೆಗೆಂದು ₹500 ಕೋಟಿ ಘೋಷಿಸಿದ್ದರೂ ಅನುದಾನ ಒದಗಿಸಿರಲಿಲ್ಲ. 2021 ರ ಸೆಪ್ಟೆಂಬರ್ 23 ರಂದು ಈ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ₹500 ಕೋಟಿ ಕ್ರಿಯಾ ಯೋಜನೆಯನ್ನು ಈ ಸಾಲಿನ ಚಾಲ್ತಿಯಲ್ಲಿರುವ ಕಾರ್ಯಕ್ರಮಗಳ ಮುಂದುವರಿಕೆಗಾಗಿ ಒದಗಿಸಲಾದ ₹50 ಕೋಟಿ ಅನುದಾನದಲ್ಲಿ ಅನುಮೋದಿಸಲು ತಿಳಿಸಲಾಗಿತ್ತು ಎಂದರು.

ಆ ಪ್ರಕಾರ, ಫೆಬ್ರುವರಿ 8 ರಂದು ₹30 ಕೋಟಿ ಅನುದಾನದಲ್ಲಿ ಯೋಜನೆ ಪ್ರಾರಂಭಿಸಲು ಆದೇಶ ಹೊರಡಿಸಲಾಯಿತು. ಆದೇಶದಲ್ಲಿ ‘ಸಾವಯವ ಸಿರಿ’ ಯೋಜನೆಯನ್ನು ಮೂರು ಹಂತದ ಕಾರ್ಯಕ್ರಮವಾಗಿ ಮೂರು ವರ್ಷಗಳ ಅವಧಿಯಲ್ಲಿ ಯೋಜನೆಯನ್ನು ಜಾರಿಗೊಳಿಸಲು ಉದ್ದೇಶಿಸಲಾಗಿತ್ತು ಎಂದೂ ವಿವರಿಸಿದ್ದಾರೆ.



### ರಷ್ಯಾದ ಜತೆ ವ್ಯಾಪಾರ ಒಪ್ಪಂದ ಬೇಡ: ಭಾರತಕ್ಕೆ ಅಮೆರಿಕ ಒತ್ತಡ

**ನವದೆಹಲಿ:** ಉಕ್ರೇನ್ ಮೇಲೆ ಯುದ್ಧ ಸಾರಿದ ಕಾರಣಕ್ಕೆ ಹಲವು ದೇಶಗಳಿಂದ ನಿರ್ಬಂಧಕ್ಕೆ ಒಳಗಾಗಿರುವ ರಷ್ಯಾದ ಜತೆ ಭಾರತದ ಯಾವುದೇ ಒಪ್ಪಂದ ಮಾಡಿಕೊಳ್ಳಬಾರದು ಎಂದು ಭಾರತಕ್ಕೆ ಅಮೆರಿಕ ಅಧ್ಯಕ್ಷ ಜೋ ಬೈಡನ್ ಆಡಳಿತ ಸೂಚ್ಯವಾಗಿ ಎಚ್ಚರಿಕೆ ನೀಡಿದೆ.

ಅಮೆರಿಕದ ವಾಣಿಜ್ಯ ಕಾರ್ಯದರ್ಶಿ ಗಿನಾ ರೈಮೊಂಡೊ ಅವರು, ‘ರಷ್ಯಾದಿಂದ ರಿಯಾಯಿತಿ ದರದಲ್ಲಿ ಕಚ್ಚಾತೈಲ ಖರೀದಿಸುವ ಹಾಗೂ ರಷ್ಯಾದ ಮೇಲಿನ ನಿರ್ಬಂಧವನ್ನು ತಪ್ಪಿಸಿಕೊಳ್ಳಲು ಪರ್ಯಾಯ ವ್ಯವಸ್ಥೆಗೆ ಮುಂದಾಗಿರುವ ಭಾರತದ ಕ್ರಮವು ತೀವ್ರ ಬೇಸರ ತರಿಸಿದೆ’ ಎಂದು ಹೇಳಿದ್ದಾರೆ.

ಈ ಬಗ್ಗೆ ಮಾತನಾಡಿದ ಅಮೆರಿಕದ ಹಿರಿಯ ಅಧಿಕಾರಿಯೊಬ್ಬರು, ‘ಭಾರತದ ಗಡಿ ನಿಯಂತ್ರಣ ರೇಖೆಯನ್ನು ಚೀನಾ ಮತ್ತೆ ಉಲ್ಲಂಘಿಸಿದರೆ, ರಷ್ಯಾ ತನ್ನ ನೆರವಿಗೆ ಬರುತ್ತದೆ ಎಂಬುದನ್ನು ಪ್ರಧಾನಿ ನರೇಂದ್ರ ಮೋದಿ ಅವರು ನಿರೀಕ್ಷಿಸಬಾರದು. ಅಲ್ಲದೆ ರಷ್ಯಾದ ಮೇಲೆ ಅಮೆರಿಕ ಹೇರಿದ ನಿರ್ಬಂಧಗಳನ್ನು ಉಲ್ಲಂಘಿಸುವ ಯಾವುದೇ ದೇಶಗಳು ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ’ ಎಂದು ಭಾರತಕ್ಕೆ ಪರೋಕ್ಷ ಎಚ್ಚರಿಕೆ ನೀಡಿದರು.

## ಎಎಪಿ ರಾಜ್ಯ ಉಸ್ತುವಾರಿಯಾಗಿ ದಿಲೀಪ್ ಪಾಂಡೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಆಮ್ ಆದ್ಮಿ ಪಕ್ಷದ (ಎಎಪಿ) ಕರ್ನಾಟಕ ಚುನಾವಣಾ ಉಸ್ತುವಾರಿಯಾಗಿ ದೆಹಲಿಯ ಶಾಸಕ ದಿಲೀಪ್ ಪಾಂಡೆ ನೇಮಕಗೊಂಡಿದ್ದಾರೆ.

ಉತ್ತರಪ್ರದೇಶದ ದಿಲೀಪ್ ಪಾಂಡೆ ಅವರು 2011ರಲ್ಲಿ ಅಣ್ಣಾ ಹಜಾರೆ ನೇತೃತ್ವದಲ್ಲಿ ನಡೆದ ಭ್ರಷ್ಟಾಚಾರ ವಿರೋಧಿ ಸತ್ಯಾಗ್ರಹದಲ್ಲಿ ಭಾಗಿಯಾಗಿದ್ದರು. ನಂತರ ಅರವಿಂದ್ ಕೇಜ್ರಿವಾಲ್ ಅವರು ಪಕ್ಷ ಕಟ್ಟಿದಾಗ ಆಮ್ ಆದ್ಮಿ ಪಕ್ಷ ಸೇರ್ಪಡೆಯಾದರು. 2015ರಲ್ಲಿ ಪಕ್ಷದ ದೆಹಲಿ ರಾಜ್ಯ ಘಟಕದ ಅಧ್ಯಕ್ಷರಾಗಿ ನೇಮಕಗೊಂಡಿದ್ದರು. ದೆಹಲಿಯ ತಿಮಾರ್ಪುರ ಕ್ಷೇತ್ರದ ಶಾಸಕರಾಗಿ, ದೆಹಲಿ ವಿಧಾನಸಭೆಯ ಮುಖ್ಯ ಸಚೇತಕ ಹಾಗೂ ಎಎಪಿ ವಕ್ತಾರರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.




### ಸ್ವಾತಂತ್ರ್ಯ ಉದ್ಯಾನದಲ್ಲಿ ಮಾತ್ರ ಅವಕಾಶ: ಸುತ್ತೋಲೆ ಹೊರಡಿಸಿದ ಕುಲಸಚಿವರು

# ಬೆಂಗಳೂರು ವಿ.ವಿ: ಪ್ರತಿಭಟನೆಗೆ ಅವಕಾಶ ಇಲ್ಲ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೆಂಗಳೂರು ವಿಶ್ವವಿದ್ಯಾಲಯ ಆವರಣದಲ್ಲಿ ಪ್ರತಿಭಟನೆ ನಡೆಸಲು ನಿರ್ಬಂಧ ವಿಧಿಸಿ ಕುಲಸಚಿವರು ಗುರುವಾರ ಸುತ್ತೋಲೆ ಹೊರಡಿಸಿದ್ದಾರೆ.

ನೂತನ ಕುಲಪತಿ ನೇಮಿಸುವಂತೆ ಒತ್ತಾಯಿಸಿ ಹಲವು ದಿನಗಳಿಂದ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಆವರಣದಲ್ಲಿ ಪ್ರತಿಭಟನೆ ನಡೆಸುತ್ತಿದ್ದಾರೆ. ಈ ಪ್ರತಿಭಟನೆ ಹತ್ತಿಕ್ಕಲು ಈ ಸುತ್ತೋಲೆ ಹೊರಡಿಸಲಾಗಿದೆ ಎಂದು ವಿದ್ಯಾರ್ಥಿಗಳು ದೂರಿದ್ದಾರೆ.

ಯಾವುದೇ ಗುಂಪು, ರಾಜಕೀಯ ಸಂಘಟನೆ ಅಥವಾ ಇತರ ಸಂಘಟನೆಗಳು ಬೆಂಗಳೂರು ನಗರದ ಬೇರೆ ಬೇರೆ ಸ್ಥಳಗಳಲ್ಲಿ ಪ್ರತಿಭಟನೆ ಮಾಡಬಾರದು. ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಾತ್ರ ಪ್ರತಿಭಟನೆಗಳನ್ನು ನಡೆಸುವಂತೆ ಹೈಕೋರ್ಟ್ ಆದೇಶ ಹೊರಡಿಸಿರುವುದನ್ನು ಸುತ್ತೋಲೆಯಲ್ಲಿ ಉಲ್ಲೇಖಿಸಲಾಗಿದೆ.

‘ಜ್ಞಾನಭಾರತಿ ಕ್ಯಾಂಪಸ್‌ನ ಬೆಂಗಳೂರು ವಿಶ್ವವಿದ್ಯಾಲಯದ ಆಡಳಿತ ಕಚೇರಿ ಬಳಿ ವಿದ್ಯಾರ್ಥಿ ಸಂಘಟನೆಗಳು ಯಾವುದಾದರೂ ಒಂದು ವಿಚಾರದ ಬಗ್ಗೆ ಗುಂಪು ಕಟ್ಟಿಕೊಂಡು ಪ್ರತಿಭಟನೆ, ಸಭೆ, ಮೆರವಣಿಗೆಗಳನ್ನು ನಡೆಸುತ್ತಿರುವುದು ಕಂಡು ಬಂದಿದೆ. ಇದರಿಂದಾಗಿ ಕೆಲವೊಮ್ಮೆ ಅಹಿತಕರ ಘಟನೆಗಳು ನಡೆದು ಪ್ರತಿಭಟನಕಾರರಿಗೆ ಹಾಗೂ ಇತರರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಇದರಿಂದ, ಸಾರ್ವಜನಿಕರ ನೆಮ್ಮದಿಗೂ ಮತ್ತು ಕಾನೂನು ಸುವ್ಯವಸ್ಥೆಗೂ ತೊಂದರೆಯಾಗಿದೆ. ಆದ್ದರಿಂದ, ಹೈಕೋರ್ಟ್ ಆದೇಶವನ್ನು ಪಾಲಿಸುವಂತೆ ಪೊಲೀಸ್ ಇಲಾಖೆಯು ಪತ್ರ ಬರೆದಿದೆ’ ಎಂದು ಕುಲಸಚಿವರು ತಿಳಿಸಿದ್ದಾರೆ.

‘ಪ್ರತಿಭಟನೆಗಳಿಂದ ವಿಶ್ವವಿದ್ಯಾಲಯದ ಶೈಕ್ಷಣಿಕ ವಾತಾವರಣದ ಮೇಲೆಯೂ ಪರಿಣಾಮ ಬೀರಿದೆ. ಹೀಗಾಗಿ, ಬೆಂಗಳೂರು ವಿಶ್ವವಿದ್ಯಾಲಯದ ಯಾವುದೇ ವಿದ್ಯಾರ್ಥಿ ಹಾಗೂ ಇತರೆ ಸಂಘಟನೆಗಳು ಆಡಳಿತ ಕಚೇರಿ ಮುಂದೆ ಪ್ರತಿಭಟನೆ ನಡೆಸಲು ಅವಕಾಶ ಇಲ್ಲ’ ಎಂದು ತಿಳಿಸಿದ್ದಾರೆ.

‘ಆದ್ದರಿಂದ, ವಿಶ್ವವಿದ್ಯಾಲಯದ ಎಲ್ಲ ವಿಭಾಗಗಳ ಅಧ್ಯಕ್ಷರು, ನಿರ್ದೇಶಕರು, ಸಂಯೋಜಕರು ಮತ್ತು ವಿದ್ಯಾರ್ಥಿ ನಿಲಯಗಳ ಕ್ಷೇಮ ಪಾಲಕರು ಹೈಕೋರ್ಟ್ ನಿರ್ದೇಶನ ಹಾಗೂ ಪೊಲೀಸರ ಸೂಚನೆಯನ್ನು ತಮ್ಮ ವಿಭಾಗದ ಸಿಬ್ಬಂದಿ, ಸಂಶೋಧನಾ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು, ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳ ಗಮನಕ್ಕೆ ತರಬೇಕು’ ಎಂದು ಅವರು ಸೂಚಿಸಿದ್ದಾರೆ.

**ವಿದ್ಯಾರ್ಥಿಗಳ ಧರಣಿ:** ಬೆಂಗಳೂರು ವಿಶ್ವವಿದ್ಯಾಲಯ ಉಳಿಸಿ ಎಂದು ವಿದ್ಯಾರ್ಥಿಗಳು ಗುರುವಾರ ವಿಶ್ವವಿದ್ಯಾಲಯದ ಕುಲಪತಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು.

ವಿಶ್ವವಿದ್ಯಾಲಯಕ್ಕೆ ಹೊಸ ಕುಲಪತಿಯನ್ನು ಶೀಘ್ರ ನೇಮಿಸಬೇಕು. ಹತ್ತು ದಿನಗಳಿಂದಲೂ ವಿಶ್ವವಿದ್ಯಾಲಯದಲ್ಲಿ ಕುಲಪತಿ ಇಲ್ಲ. ಇದರಿಂದ, ಶೈಕ್ಷಣಿಕ ಚಟುವಟಿಕೆಗಳ ಮೇಲೆಯೂ ಪರಿಣಾಮ ಬೀರಿದೆ ಎಂದು ವಿದ್ಯಾರ್ಥಿಗಳು ದೂರಿದರು.



ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಕಚೇರಿ ಮುಂದೆ ವಿದ್ಯಾರ್ಥಿಗಳು ಧರಣಿ ನಡೆಸಿದರು

### ‘ಕುಲಪತಿ ನೇಮಕದಲ್ಲಿ ವಿಳಂಬ ಬೇಡ’

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ನೇಮಕಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ಆದೇಶವನ್ನು ರಾಜ್ಯ ಸರ್ಕಾರ ಗೌರವಿಸಬೇಕು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ.

ಕುಲಪತಿ ನೇಮಿಸಲು ಯಾವುದೇ ರೀತಿ ವಿಳಂಬ ಮಾಡುವುದರಿಂದ ಆಡಳಿತದ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ ಮತ್ತು ವಿದ್ಯಾರ್ಥಿಗಳ ಭವಿಷ್ಯದ ಮೇಲೆ ಪರಿಣಾಮ ಬೀರಲಿದೆ ಎಂದು ಟ್ವೀಟ್ ಮಾಡಿದ್ದಾರೆ.

ಶ್ರೀಮಂತ ಇತಿಹಾಸ ಹೊಂದಿರುವ ಬೆಂಗಳೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ವಿವಿಧ ಕ್ಷೇತ್ರಗಳಲ್ಲಿ ಅತ್ಯುತ್ತಮ ಸಾಧನೆ ತೋರಿದ್ದಾರೆ. ಇಂತಹ ವಿಶ್ವವಿದ್ಯಾಲಯದಲ್ಲಿ ಕುಲಪತಿ ನೇಮಕಾತಿ ಸೃಷ್ಟಿಸಿರುವ ಗೊಂದಲ ಗಂಭೀರ ವಿಷಯವಾಗಿದೆ. ಬಿಜೆಪಿ ಸರ್ಕಾರ ಈಗಲಾದರೂ ಎಚ್ಚೆತ್ತುಕೊಂಡು ವಿಶ್ವವಿದ್ಯಾಲಯದಲ್ಲಿ ಆಡಳಿತವನ್ನು ಸರಿದಾರಿಗೆ ತರುವ ನಿಟ್ಟಿನಲ್ಲಿ ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

## ‘ರಾಜ್ಯದಲ್ಲಿ ಮತ್ತೆ ಅಧಿಕಾರಕ್ಕೆ’

**ಬೆಂಗಳೂರು:** ‘ಇತ್ತೀಚಿನ ನಾಲ್ಕು ರಾಜ್ಯಗಳ ಚುನಾವಣೆಗಳಲ್ಲಿ ಗೆದ್ದ ಮಾದರಿ ಕರ್ನಾಟಕದಲ್ಲೂ ಬಿಜೆಪಿ ಎರಡನೇ ಬಾರಿ ಅಧಿಕಾರ ಹಿಡಿಯಲಿದೆ’ಎಂದು ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್‌ಸಿಂಗ್ ವಿಶ್ವಾಸ ವ್ಯಕ್ತಪಡಿಸಿದರು.

ಬುಧವಾರ ನಗರಕ್ಕೆ ಆಗಮಿಸಿದ ಅವರು ಸುದ್ದಿಗಾರರ ಜತೆ ಮಾತನಾಡಿ, ಪ್ರಧಾನಿ ಮೋದಿ ನೇತೃತ್ವದಲ್ಲಿ ಪಕ್ಷ ನಾಲ್ಕು ರಾಜ್ಯಗಳಲ್ಲಿ ಅಧಿಕಾರವನ್ನು ಮರಳಿ ಪಡೆದಿದೆ. ಇದರಿಂದ ಕರ್ನಾಟಕದ ಕಾರ್ಯಕರ್ತರಲ್ಲೂ ಉತ್ಸಾಹ ಹೆಚ್ಚಾಗಿದೆ. ಆದ್ದರಿಂದ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕರ್ನಾಟಕದಲ್ಲೂ ಬಿಜೆಪಿ ಅಧಿಕಾರ ಹಿಡಿಯುವುದು ಖಚಿತ ಎಂದರು. ಉತ್ತರ ಪ್ರದೇಶದಲ್ಲಿ ಪ್ರಿಯಾಂಕ ಗಾಂಧಿ ಪ್ರಚಾರ ಮಾಡಿದ ಕಡೆಗಳಲ್ಲಿ ಕಾಂಗ್ರೆಸ್ ಪಕ್ಷವು ಠೇವಣಿ ಕಳೆದುಕೊಂಡು ಹೀನಾಯ ಸೋಲು ಕಂಡಿದೆ. ಕರ್ನಾಟಕದಲ್ಲಿ ಕಾಂಗ್ರೆಸ್ ಒಡೆದ ಮನೆಯಾಗಿದೆ. ಇಲ್ಲಿ ಬಸವರಾಜ ಬೊಮ್ಮಾಯಿ ಕೆಲಸ ಮಾಡುತ್ತಿದ್ದಾರೆ. ಜತೆಗೆ ಬಿ.ಎಸ್.ಯಡಿಯೂರಪ್ಪ ನಾಯಕತ್ವವೂ ಇದೆ. ಹಾಗಾಗಿ, ಇಲ್ಲಿ ಬಿಜೆಪಿ ಬಹುಮತದೊಂದಿಗೆ ಅಧಿಕಾರ ಪಡೆಯಲಿದೆ ಎಂದು ಅರುಣ್‌ಸಿಂಗ್ ಹೇಳಿದರು.

## ಜಲಮಂಡಳಿಗೆ ಜೈಕಾ ₹ 2391 ಕೋಟಿ ಸಾಲ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯನ್ನು ಕೈಗೊಳ್ಳಲು ‘ಜಪಾನ್ ಇಂಟರ್‌ನ್ಯಾಷನಲ್ ಕಾರ್ಪೋರೇಷನ್ ಏಜೆನ್ಸಿ’ (ಜೈಕಾ) ಜಲಮಂಡಳಿಗೆ ₹2,391 ಕೋಟಿ ಸಾಲ ಮಂಜೂರು ಮಾಡಿದೆ.

ಇದಕ್ಕೆ ಸಂಬಂಧಿಸಿದಂತೆ ಸಂಸ್ಥೆಯು ಕೇಂದ್ರ ಸರ್ಕಾರದೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದೆ. ಮೂರನೇ ಹಂತದ ಕುಡಿಯುವ ನೀರು ಯೋಜನೆಗೆ ಈ ಸಾಲ ನೀಡಲಾಗುತ್ತಿದ್ದು, ಬಿಬಿಎಂಪಿ ವ್ಯಾಪ್ತಿಯ 110 ಹಳ್ಳಿಗಳಿಗೂ ನೀರು ಪೂರೈಕೆಗೆ ಹಣ ವಿನಿಯೋಗಿಸಲು ಉದ್ದೇಶಿಸಲಾಗಿದೆ.

ಈ ಯೋಜನೆ ಅಡಿ ಬಿಬಿಎಂಪಿ ವ್ಯಾಪ್ತಿಯಲ್ಲಿ ಸುರಕ್ಷಿತ ಮತ್ತು ಸುಸ್ಥಿರವಾದ ನೀರು ಸರಬರಾಜು ಹಾಗೂ ಒಳಚರಂಡಿ ವ್ಯವಸ್ಥೆ ಮತ್ತು ನೀರು ಶುದ್ಧೀಕರಣ ಘಟಕಗಳನ್ನು ನಿರ್ಮಾಣ ಮಾಡಲಾಗುತ್ತದೆ. ಈ ಯೋಜನೆಯಡಿಯಲ್ಲಿ ಹೊಸದಾಗಿ ಸೇರ್ಪಡೆಗೊಂಡಿರುವ 110 ಗ್ರಾಮಗಳೂ ಸೇರಿದ್ದು, ಇದರಿಂದ ಸುಮಾರು 35 ಲಕ್ಷ ಜನರಿಗೆ ಅನುಕೂಲವಾಗಲಿದೆ. ಈ ಯೋಜನೆಯಿಂದಾಗಿ ನಗರದ ನಾಗರಿಕರ ಜೀವನ ಮಟ್ಟವನ್ನು ಸುಧಾರಣೆ ಮಾಡುವ ಜತೆಗೆ, ಬಿಬಿಎಂಪಿ ಪ್ರದೇಶಗಳಲ್ಲಿ ಬಂಡವಾಳ ಹೂಡಿಕೆ ವಾತಾವರಣವನ್ನು ಉತ್ತೇಜನ ದೊರೆತಂತಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಜೆಐಸಿಎ ಬೆಂಗಳೂರು ಮತ್ತು ಸುತ್ತಮುತ್ತಲಿನ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕುಡಿಯುವ ನೀರು ಮತ್ತು ಒಳಚರಂಡಿ ಸೌಲಭ್ಯಗಳನ್ನು ಕಲ್ಪಿಸುವ ಯೋಜನೆಗಳಿಗೆ ನೆರವಾಗುತ್ತಲೇ ಬಂದಿದೆ. ಅದೇ ರೀತಿ ಬೆಂಗಳೂರು ಜಲಮಂಡಳಿಗೆ 1996ರಿಂದ 1 ಮತ್ತು 2 ನೇ ಹಂತದ ಯೋಜನೆಗಳಿಗೆ ಆರ್ಥಿಕ ನೆರವು ನೀಡಿದೆ. ಇದೀಗ 3ನೇ ಹಂತದ ಯೋಜನೆಗೂ ನೆರವಿನ ಹಸ್ತ ಚಾಚುವ ಮೂಲಕ ಪರಿಣಾಮಕಾರಿಯಾಗಿ ಯೋಜನೆಯನ್ನು ಕಾರ್ಯಗತಗೊಳಿಸಲು ನೆರವಾಗುತ್ತಿದೆ.

ಈ ಸಾಲ ಒಪ್ಪಂದಕ್ಕೆ ಹಣಕಾಸು ಇಲಾಖೆಯ ಆರ್ಥಿಕ ವ್ಯವಹಾರಗಳ ಹೆಚ್ಚುವರಿ ಕಾರ್ಯದರ್ಶಿ ರಜತ್ ಕುಮಾರ್ ಮಿಶ್ರಾ ಮತ್ತು ಭಾರತದಲ್ಲಿ ಜೆಐಸಿಎ ಮುಖ್ಯ ಪ್ರತಿನಿಧಿ ಸೈಟೋ ಮಿಟ್ಸುನೊರಿ ಸಹಿ ಹಾಕಿದರು.

## ಅಪಘಾತ ಪರಿಹಾರ ಮೊತ್ತ ಹೆಚ್ಚಿಸಿದ ‘ಸುಪ್ರೀಂ’

ಪ್ರಜಾವಾಣಿ ವಾರ್ತೆ

**ನವದೆಹಲಿ:** ರಸ್ತೆ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡು ಶಾಶ್ವತ ಅಂಗವೈಕಲ್ಯಕ್ಕೆ ತುತ್ತಾಗಿರುವ ಕರ್ನಾಟಕದ ಐದು ವರ್ಷ ವಯಸ್ಸಿನ ಬಾಲಕ ಮಾಸ್ಟರ್ ಆಯುಷ್‌ನಿಗೆ ₹ 49.93 ಲಕ್ಷ ಪರಿಹಾರ ನೀಡುವಂತೆ ಸುಪ್ರೀಂ ಕೋರ್ಟ್ ಮಂಗಳವಾರ ತೀರ್ಪು ನೀಡಿದೆ.

ರಸ್ತೆ ಅಪಘಾತದಲ್ಲಿ ಸಂತ್ರಸ್ತರಾದವರ ಮಾನಸಿಕ ಮತ್ತು ದೈಹಿಕ ಹಾನಿಯನ್ನು ಹಣದ ರೂಪದಲ್ಲಿ ಭರಿಸಲಾಗದು. ಆದರೂ, ಅವರ ಆರೈಕೆಗಾಗಿ ಸಮರ್ಪಕ ಪರಿಹಾರ ನೀಡುವುದನ್ನು ಹೊರತುಪಡಿಸಿ ಬೇರಾವುದೇ ರೀತಿಯ ಮಾರ್ಗವಿಲ್ಲ ಎಂದು ಪೀಠ ಅಭಿಪ್ರಾಯಪಟ್ಟಿದೆ.

ಮೋಟಾರು ವಾಹನ ಅಪಘಾತ ಪರಿಹಾರ ಹಕ್ಕು ನ್ಯಾಯಮಂಡಳಿಯ ದಕ್ಷಿಣ ಕನ್ನಡ ಜಿಲ್ಲಾ ಪೀಠ ನೀಡಿದ್ದ ₹ 13.46 ಲಕ್ಷ ಪರಿಹಾರದ ಆದೇಶವನ್ನು ವಜಾಗೊಳಿಸಿ, ಕರ್ನಾಟಕ ಹೈಕೋರ್ಟ್ ₹ 18.24 ಲಕ್ಷ ಪರಿಹಾರ ಹೆಚ್ಚಿಸಿ ಆದೇಶಿಸಿತ್ತು. ಈ ಆದೇಶ ಪ್ರಶ್ನಿಸಲಾದ ಮೇಲ್ಮನವಿಯ ವಿಚಾರಣೆ ನಡೆಸಿರುವ ನ್ಯಾಯಮೂರ್ತಿಗಳಾದ ಹೇಮಂತ್ ಗುಪ್ತಾ ಹಾಗೂ ವಿ. ರಾಮಸುಬ್ರಹ್ಮಣ್ಯಂ ಅವರಿದ್ದ ಪೀಠವು ಪರಿಹಾರ ಮೊತ್ತವನ್ನು ಹೆಚ್ಚಿಸಿ ಆದೇಶಿಸಿದೆ.

ಅರ್ಜಿದಾರನ ಎರಡೂ ಕಾಲುಗಳು ಸ್ವಾಧೀನ ಕಳೆದುಕೊಂಡಿದ್ದು, ಪಾರ್ಶ್ವವಾಯುವಿಗೆ ತುತ್ತಾಗಿದ್ದರಿಂದ ಅನೇಕ ಸಮಸ್ಯೆಗಳು ಎದುರಾಗಿವೆ. ಅಪಘಾತಕ್ಕೊಳಗಾದ ಬಾಲಕ ಮುಂದೆ ಸಹಾಯಕರ ನೆರವಿನೊಂದಿಗೆ ಬದುಕಬೇಕಿದೆ. ಅಪೂರ್ವ ಬಾಲ್ಯವನ್ನು ಮಾತ್ರವಲ್ಲದೆ ಇಡೀ ಜೀವನವನ್ನೇ ಕಳೆದುಕೊಂಡಂತಾಗಿದೆ ಎಂದು ಹೇಳಿದೆ.

₹ 49.93 ಲಕ್ಷ ಪರಿಹಾರ ಮಾತ್ರವಲ್ಲದೆ, ಮೇಲ್ಮನವಿ ಸಲ್ಲಿಸಿದ ದಿನದಿಂದ ಶೇ 7.50ರಷ್ಟು ಬಡ್ಡಿಯನ್ನೂ ಪಾವತಿಸುವಂತೆ ಪೀಠ ಸೂಚಿಸಿದೆ.

## ‘ಇವಿಎಂ ನಾಪತ್ತೆ: ಚುನಾವಣಾ ಆಯೋಗಕ್ಕೆ ಪತ್ರ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 19 ಲಕ್ಷ ಇವಿಎಂಗಳು ನಾಪತ್ತೆ ಆಗಿವೆ ಎಂದು ಕಾಂಗ್ರೆಸ್ ಶಾಸಕ ಎಚ್.ಕೆ.ಪಾಟೀಲ ಅವರು ಎತ್ತಿರುವ ಪ್ರಶ್ನೆಯ ಬಗ್ಗೆ ಚುನಾವಣಾ ಆಯೋಗಕ್ಕೆ ಪತ್ರ ಬರೆದು ಮಾಹಿತಿ ತರಿಸುವುದಾಗಿ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ತಿಳಿಸಿದರು.

ವಿಧಾನಸೌಧದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಇಷ್ಟು ದೊಡ್ಡ ಪ್ರಮಾಣದಲ್ಲಿ ಇವಿಎಂಗಳು ನಾಪತ್ತೆ ಆಗಿದ್ದರೆ ದೇಶದಲ್ಲಿ ವಿರೋಧ ಪಕ್ಷಗಳು ಮತ್ತು ಸಾಮಾನ್ಯ ಜನರ ಸುಮ್ಮನೆ ಕೂರಲು ಸಾಧ್ಯವಿತ್ತೆ? ದೊಡ್ಡ ಗದ್ದಲವೇ ಆಗುತ್ತಿತ್ತು. ಅವರೊಂದು ಸಂಶಯದ ಬೀಜ ಬಿತ್ತಿದ್ದಾರೆ. ಅದಕ್ಕೆ ಸೂಕ್ತ ಉತ್ತರ ತರಿಸಿ, ಸದಸ್ಯರಿಗೆ ಕೊಡುವುದು ನಮ್ಮ ಜವಾಬ್ದಾರಿ’ ಎಂದು ಅವರು ಹೇಳಿದರು.

ಚುನಾವಣೆ ವ್ಯವಸ್ಥೆಯ ಬಗ್ಗೆ ವಿಧಾನ ಸಭೆಯಲ್ಲಿ ಎಲ್ಲ ಸದಸ್ಯರೂ ಉತ್ತಮವಾಗಿ ಮಾತನಾಡಿದರು. ಆರಂಭದಲ್ಲಿ ಕೆಲವು ಶಾಸಕರು ಬೇರೆಯದೇ ರೀತಿಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದರು. ದಿಕ್ಸೂಚಿ ಭಾಷಣವನ್ನು ಓದಿದ ಬಳಿಕ ಎಲ್ಲರೂ ಉತ್ಸಾಹದಿಂದ ಮಾತನಾಡಿದರು ಎಂದರು.

‘ವಿಧಾನಪರಿಷತ್ತಿಗೆ ನೂರಾರು ವರ್ಷದ ಇತಿಹಾಸವಿದೆ. ಇತ್ತೀಚೆಗೆ ಪರಿಷತ್ತಿನ ಚುನಾವಣೆಗಳು ಹೇಗೆ ನಡೆದಿವೆ. ವಿಧಾನಪರಿಷತ್ತಿನಲ್ಲಿ ನಡೆದ ಘಟನೆಗಳನ್ನು ಜನರು ನೋಡಿದ್ದಾರೆ. ವಿಧಾನಮಂಡಲದ ಅಧ್ಯಕ್ಷನಾಗಿ ಅದರ ಸುಧಾರಣೆಗೆ ಪ್ರಯತ್ನಿಸಬೇಕು. ಚುನಾವಣಾ ವ್ಯವಸ್ಥೆ ಬಗ್ಗೆ ಅಲ್ಲಿಯೂ ಚರ್ಚೆ ನಡೆಯಬೇಕು ಎಂಬ ಕಾರಣಕ್ಕೆ ಭಾಷಣದ ಪ್ರತಿಗಳನ್ನು ಕಳುಹಿಸಿದ್ದೆ. ಅದಕ್ಕೆ ವಿರೋಧ ವ್ಯಕ್ತಪಡಿಸುವ ಮನಸ್ಥಿತಿ ಇದ್ದರೆ, ಅವರ ಮಾನಸಿಕ ಸ್ಥಿತಿ ಹೇಗಿದೆ ಎಂಬುದನ್ನು ಬಿಡಿಸಿ ಹೇಳಬೇಕಾಗಿಲ್ಲ’ ಎಂದು ಕಾಗೇರಿ ಹೇಳಿದರು.

ಈ ಬಾರಿ ಅಧಿವೇಶನ ಸುಗಮವಾಗಿ ಮತ್ತು ಉತ್ತಮವಾಗಿ ನಡೆಯಿತು. ಫೆಬ್ರುವರಿ 14 ರಿಂದ 22 ರವರೆಗೆ ಮತ್ತು ಮಾರ್ಚ್ 4 ರಿಂದ ಮಾರ್ಚ್ 30 ರವರೆಗೆ ಒಟ್ಟು 26 ದಿನಗಳು ಕಾಲ 116 ಗಂಟೆ 20 ನಿಮಿಷ ಕಾರ್ಯಕಲಾಪ ನಡೆಸಲಾಯಿತು. ಒಟ್ಟು 13 ಮಸೂದೆಗಳನ್ನು ಮಂಡಿಸಿ ಅಂಗೀಕಾರ ಪಡೆಯಲಾಯಿತು. ಒಟ್ಟು 4769 ಪ್ರಶ್ನೆಗಳಲ್ಲಿ ಸದನದಲ್ಲಿ ಉತ್ತರಿಸಬೇಕಾದ 405 ಪ್ರಶ್ನೆಗಳ ಪೈಕಿ 385ಕ್ಕೆ ಉತ್ತರಿಸಲಾಗಿದೆ. ಲಿಖಿತ ಮೂಲಕ ಉತ್ತರಿಸಬೇಕಾದ 4264 ಪ್ರಶ್ನೆಗಳಲ್ಲಿ 3489 ಪ್ರಶ್ನೆಗಳಿಗೆ ಉತ್ತರ ಸ್ವೀಕರಿಸಲಾಗಿದೆ ಎಂದು ಅವರು ತಿಳಿಸಿದರು.

## ‘ಕೊಳೆಗೇರಿ ಜನರಿಗೆ ಬೇವು-ಬೆಲ್ಲ, ಪ್ರಸಾದ ವಿತರಣೆ’

**ನಿಪ್ಪಾಣಿ:** ಯುಗಾದಿ ದಿನವನ್ನು ಧಾರ್ಮಿಕ ಮತ್ತು ದತ್ತಿ ಇಲಾಖೆಯು ‘ಧಾರ್ಮಿಕ ದಿನ’ ವನ್ನಾಗಿ ಆಚರಿಸಲು ನಿರ್ಧರಿಸಿರುವ ನಿಟ್ಟಿನಲ್ಲಿ, ರಾಜ್ಯದ ಮುಜರಾಯಿ ದೇವಸ್ಥಾನಗಳಲ್ಲಿ ಸಾರ್ವಜನಿಕರ ಸಹಭಾಗಿತ್ವದಲ್ಲಿ ವಿಶೇಷವಾಗಿ ಆಚರಿಸಬೇಕು ಎಂದು ಮುಜರಾಯಿ, ಹಜ್ ಮತ್ತು ವಕ್ಫ್ ಸಚಿವೆ ಶಶಿಕಲಾ ಜೊಲ್ಲೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪ್ರಮುಖ ದೇವಸ್ಥಾನಗಳ ಸಮೀಪದಲ್ಲಿರುವ ಕೊಳಗೇರಿ ಪ್ರದೇಶಗಳ ಜನರಿಗೆ ದೇವಸ್ಥಾನದ ವತಿಯಿಂದ ಬೇವು-ಬೆಲ್ಲ ಮತ್ತು ಪ್ರಸಾದವನ್ನು ವಿತರಿಸುವ ವ್ಯವಸ್ಥೆ ಮಾಡಿಕೊಳ್ಳಬೇಕು. ಆರ್ಥಿಕವಾಗಿ ಹಿಂದುಳಿದ ಜನರ ಮುಖದಲ್ಲೂ ಮಂದಹಾಸ ಮೂಡಿಸುವುದು ನಮ್ಮ ಉದ್ದೇಶ. ಈ ಸಂಬಂಧ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು’ ಎಂದು ಸೂಚಿಸಿದ್ದಾರೆ.

# ರಂಗ ಮಂದಿರ ಕಾಯ್ದಿರಿಸಲು ಆನ್‌ಲೈನ್ ವ್ಯವಸ್ಥೆಗೆ ಚಾಲನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರವೀಂದ್ರ ಕಲಾಕ್ಷೇತ್ರ, ನಯನ ಸಭಾಂಗಣ ಸೇರಿದಂತೆ ನಗರದ ವಿವಿಧ ಸರ್ಕಾರಿ ರಂಗಮಂದಿರಗಳನ್ನು ಕಾಯ್ದಿರಿಸುವ ಆನ್‌ಲೈನ್ ವ್ಯವಸ್ಥೆಗೆ ಗುರುವಾರ ಚಾಲನೆ ದೊರೆತಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಗರದಲ್ಲಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಸಚಿವ ವಿ. ಸುನೀಲ್ ಕುಮಾರ್, ‘ಸರ್ಕಾರಿ ರಂಗಮಂದಿರಗಳ ಕಾಯ್ದಿರಿಸುವಿಕೆಯಲ್ಲಿ ಪಾರದರ್ಶಕತೆ ತರಲು ಆನ್‌ಲೈನ್ ವ್ಯವಸ್ಥೆ ಜಾರಿಗೆ ತರಲಾಗಿದೆ. ರಂಗಮಂದಿರಗಳ ಕಾಯ್ದಿರಿಸುವಿಕೆಗೆ ಸಾರ್ವಜನಿಕರಿಗೆ ಏ.1ರಿಂದ ಅವಕಾಶ ಕಲ್ಪಿಸಲಾಗಿದೆ. ಮೇ 1ರಿಂದ ದಿನಾಂಕ ನಿಗದಿಪಡಿಸಿ, ಹಣ ಪಾವತಿಸಬಹುದು’ ಎಂದು ತಿಳಿಸಿದರು.

‘ರವೀಂದ್ರ ಕಲಾಕ್ಷೇತ್ರದಲ್ಲಿ ದಿನಾಂಕ ನಿರ್ಬಂಧಿಸುವ ದಂಧೆ ನಡೆಯುತ್ತಿತ್ತು. ಇದಕ್ಕೆ ಕಡಿವಾಣ ಹಾಕಲು ಇಲಾಖೆಯ ವ್ಯಾಪ್ತಿಯ ಸಭಾಂಗಣಗಳನ್ನು ಕಾಯ್ದಿರಿಸಲು ಆನ್‌ಲೈನ್ ವ್ಯವಸ್ಥೆ ಜಾರಿಗೆ ತರಲಾಗಿದೆ. ಸಭಾಂಗಣಗಳನ್ನು ಕಾಯ್ದಿರಿಸುವಲ್ಲಿ ಪ್ರಭಾವಿಗಳು ಹಾಗೂ ಮಧ್ಯವರ್ತಿಗಳ ಕೈವಾಡ ಹೆಚ್ಚಿದ್ದರಿಂದ ನಿಜವಾದ ರಂಗಾಸಕ್ತರು ಹಾಗೂ ಕಲಾ ತಂಡಗಳಿಗೆ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರದರ್ಶನ ನೀಡಲು ಸಾಧ್ಯವಾಗುತ್ತಿರಲಿಲ್ಲ. ಈ ವಿಚಾರ ಸರ್ಕಾರದ ಗಮನಕ್ಕೆ ಬಂದಿದ್ದರಿಂದ ವ್ಯವಸ್ಥೆ ಬದಲಾಯಿಸಲಾಗಿದೆ’ ಎಂದರು.

‘ಸರ್ಕಾರಿ ನಿಯಮಗಳ ಅನುಸಾರ ನಿಗದಿಯಾದ ಕಾರ್ಯಕ್ರಮ ನಿಂತಲ್ಲಿ ಹಣ ಹಿಂತಿರುಗಿಸುವ ಬದಲು, ಮತ್ತೊಂದು ದಿನಾಂಕ ಆಯ್ಕೆಗೆ ಅವಕಾಶ ನೀಡಲಾಗುವುದು. ಮೂರು ದಿನಗಳಿಗಿಂತಲೂ ಹೆಚ್ಚಿನ ಅವಧಿ ಸತತವಾಗಿ ಸಭಾಂಗಣ ಕಾಯ್ದಿರಿಸುವುದಕ್ಕೆ ಇನ್ನು ಮುಂದೆ ಅವಕಾಶ ಇರುವುದಿಲ್ಲ. ಮುಂದಿನ ದಿನಗಳಲ್ಲಿ ಇಲಾಖೆಯ ವ್ಯಾಪ್ತಿಗೆ ಬರುವ ಎಲ್ಲ ಜಿಲ್ಲಾ ರಂಗಮಂದಿರಗಳಿಗೂ ಈ ಆನ್‌ಲೈನ್ ವ್ಯವಸ್ಥೆಯನ್ನೇ ಜಾರಿಗೊಳಿಸಲಾಗುವುದು’ ಎಂದು ಅವರು ಹೇಳಿದರು.

**ಕಲಾವಿದರ ದತ್ತಾಂಶ ಸಂಗ್ರಹ:** ‘ರಾಜ್ಯದಲ್ಲಿನ ಸಾಹಿತಿ, ಕಲಾವಿದರ ಕುರಿತಾದ ನಿಖರ ಮಾಹಿತಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಇರಲಿಲ್ಲ. ಹೀಗಾಗಿ, ಇಲಾಖೆಯಿಂದ ಕಲಾವಿದರ ದತ್ತಾಂಶ ಸಂಗ್ರಹ ಅಭಿಯಾನ ಕೈಗೊಳ್ಳಲಾಗಿದೆ. ದತ್ತಾಂಶ ಸಂಗ್ರಹಣೆಯ ಜಾಲತಾಣ ಏ.1ರಂದು ತೆರೆದುಕೊಳ್ಳಲಿದೆ. ದತ್ತಾಂಶ ಕಾರ್ಯ ಪೂರ್ಣಗೊಂಡ ನಂತರ ಗುರುತಿನ ಚೀಟಿ ನೀಡಲಾಗುವುದು. ಸಾಹಿತಿ, ಕಲಾವಿದರು ಈ ಯೋಜನೆಯ ಸದುಪಯೋಗ ಪಡೆದುಕೊಳ್ಳಬೇಕು’ ಎಂದು ಮನವಿ ಮಾಡಿಕೊಂಡರು.

**ರಂಗ ಮಂದಿರ ಕಾಯ್ದಿರಿಸುವಿಕೆ ವೆಬ್‌ಸೈಟ್:** www.rangamandira.karnataka.gov.in

### ‘ರಂಗ ಮಂದಿರಗಳು ದುಬಾರಿಯಲ್ಲ’

‘ರವೀಂದ್ರ ಕಲಾಕ್ಷೇತ್ರ, ನಯನ ಸೇರಿದಂತೆ ವಿವಿಧ ಸರ್ಕಾರಿ ರಂಗಮಂದಿರಗಳ ಬಾಡಿಗೆಯನ್ನು ತೀರಾ ಹೆಚ್ಚಳ ಮಾಡಿಲ್ಲ. ರವೀಂದ್ರ ಕಲಾಕ್ಷೇತ್ರ ಅರ್ಧ ದಿನಕ್ಕೆ ₹ 12 ಸಾವಿರ, ಪೂರ್ತಿ ದಿನಕ್ಕೆ ₹ 24 ಸಾವಿರ ನಿಗದಿ ಮಾಡಲಾಗಿದೆ. ಇದರಲ್ಲಿ ₹ 5 ಸಾವಿರ ಠೇವಣಿಯನ್ನು ವಾಪಸ್ ನೀಡಲಾಗುವುದು. ನಿಗದಿತ ದರದಲ್ಲಿಯೇ ಜಿಎಸ್‌ಟಿ, ನಿರ್ವಹಣೆ ಶುಲ್ಕ ಎಲ್ಲವೂ ಸೇರಿಕೊಳ್ಳುತ್ತದೆ. ಖಾಸಗಿ ಸಭಾಂಗಣಗಳಿಗೆ ಹೋಲಿಸಿದರೆ ನಾವು ಮಾಡಿರುವುದು ಶೇ 10ರಿಂದ ಶೇ 20 ರಷ್ಟು ಮಾತ್ರ’ ಎಂದು ಸುನೀಲ್ ಕುಮಾರ್ ತಿಳಿಸಿದರು.

## ಶ್ರೀಲಂಕಾ ಅಧ್ಯಕ್ಷರ ನಿವಾಸದ ಬಳಿ ಪ್ರತಿಭಟನೆ; ಕರ್ಫ್ಯೂ

**ಕೊಲಂಬೊ:** ಆರ್ಥಿಕ ಬಿಕ್ಕಟ್ಟಿನಿಂದ ತತ್ತರಿಸಿರುವ ಶ್ರೀಲಂಕಾದ ನಾಗರಿಕರು ಸರ್ಕಾರದ ವಿರುದ್ಧ ತೀವ್ರ ಪ್ರತಿಭಟನೆಗಿಳಿದ ಕಾರಣ ರಾಜಧಾನಿ ಕೊಲಂಬೊದಲ್ಲಿ ಕರ್ಫ್ಯೂ ಜಾರಿಗೊಳಿಸಲಾಗಿದೆ.

ಲಂಕಾದ ರಾಜಧಾನಿಯಲ್ಲಿರುವ ಅಧ್ಯಕ್ಷರ ಮನೆ ಬಳಿ 5,000 ಕ್ಕೂ ಹೆಚ್ಚು ಜನರು ಗುರುವಾರ ಸಂಜೆ ಪ್ರತಿಭಟನಾ ಮೆರವಣಿಗೆ ನಡೆಸಿ,ಈ ಕೂಡಲೇ ಅಧ್ಯಕ್ಷರು ತಮ್ಮ ಸ್ಥಾನದಿಂದ ಕೆಳಗಿಳಿಯಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಪ್ರತಿಭಟನಕಾರರನ್ನು ಚದುರಿಸಲು ಮುಂದಾದ ಪೊಲೀಸರ ಮೇಲೆ ಜನರು ಕಲ್ಲು ಹಾಗೂ ಬಾಟಲಿಗಳನ್ನು ತೂರಿದರು. ಅವರನ್ನು ನಿಯಂತ್ರಿಸಲು ಪೊಲೀಸರು ಅಶ್ರುವಾಯು, ಜಲಫಿರಂಗಿಗಳನ್ನು ಬಳಸಿದರು. ಬಳಿಕ ನಗರದಲ್ಲಿ ಕರ್ಫ್ಯೂ ಜಾರಿಗೊಳಿಸಲಾಯಿತು.

### ನಾಗಾಲ್ಯಾಂಡ್, ಮಣಿಪುರ, ಅಸ್ಸಾಂಗೆ ಅನ್ವಯ: ಅಮಿತ್ ಶಾ ಘೋಷಣೆ

# ಆಯ್ದ ಪ್ರದೇಶಗಳು ಆಫ್‌ಸ್ಪಾದಿಂದ ಹೊರಕ್ಕೆ

ಪ್ರಜಾವಾಣಿ ವಾರ್ತೆ

**ನವದೆಹಲಿ:** ‘ಈಶಾನ್ಯ ಭಾರತದ ಅಸ್ಸಾಂ, ಮಣಿಪುರ ಮತ್ತು ನಾಗಾಲ್ಯಾಂಡ್ ರಾಜ್ಯಗಳಲ್ಲಿ ಸಶಸ್ತ್ರ ಪಡೆಗಳ ವಿಶೇಷಾಧಿಕಾರ ಕಾಯ್ದೆಯ (ಆಫ್‌ಸ್ಪಾ) ಅಡಿ, ‘ಪ್ರಕ್ಷುಬ್ಧ’ ಎಂದು ಗುರುತಿಸಲಾಗಿರುವ ಹಲವು ಪ್ರದೇಶಗಳಲ್ಲಿ, ಏಪ್ರಿಲ್ 1ರಿಂದ ಅನ್ವಯವಾಗುವಂತೆ ಈ ಕಾಯ್ದೆಯನ್ನು ಹಿಂಪಡೆಯಲಾಗುತ್ತದೆ’ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಘೋಷಿಸಿದ್ದಾರೆ. ಆದರೆ ಈ ಮೂರೂ ರಾಜ್ಯಗಳಿಂದ ಆಫ್‌ಸ್ಪಾವನ್ನು ಸಂಪೂರ್ಣವಾಗಿ ಹಿಂಪಡೆಯುವುದಿಲ್ಲ ಎಂದು ಗೃಹ ಸಚಿವಾಲಯವು ಹೇಳಿದೆ.

ಆಯ್ದ ಕೆಲವೇ ಪ್ರದೇಶಗಳನ್ನು ಆಫ್‌ಸ್ಪಾದಿಂದ ಮುಕ್ತವಾಗಿಸುವ ಕೇಂದ್ರ ಸರ್ಕಾರದ ಈ ನಿರ್ಧಾರಕ್ಕೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ಮೂರೂ ರಾಜ್ಯಗಳ ಮುಖ್ಯಮಂತ್ರಿಗಳು ಈ ನಿರ್ಧಾರವನ್ನು ಸ್ವಾಗತಿಸಿದ್ದಾರೆ. ಆದರೆ, ಈ ಘೋಷಣೆಯಿಂದ ಯಾವುದೇ ಬದಲಾವಣೆ ಆಗುವುದಿಲ್ಲ ಎಂದು ಈ ರಾಜ್ಯಗಳ ಮಾನವ ಹಕ್ಕುಗಳ ಹೋರಾಟಗಾರರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

**ಎಲ್ಲೆಲ್ಲಿ ಅನ್ವಯ?:** ಈಗ ಇಡೀ ನಾಗಾಲ್ಯಾಂಡ್‌ನಲ್ಲಿ ಆಫ್‌ಸ್ಪಾ ಜಾರಿಯಲ್ಲಿದೆ. ಶುಕ್ರವಾರದಿಂದ ರಾಜ್ಯದ ಏಳು ಜಿಲ್ಲೆಗಳ, 15 ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿರುವ ಪ್ರದೇಶಗಳನ್ನು ಈ ಕಾಯ್ದೆಯಿಂದ ಹೊರಗಿಡಲಾಗುತ್ತದೆ.

ಅಸ್ಸಾಂನ 23 ಜಿಲ್ಲೆಗಳನ್ನು ಸಂಪೂರ್ಣವಾಗಿ ಆಫ್‌ಸ್ಪಾದಿಂದ ಹೊರಗೆ ಇಡಲಾಗುತ್ತದೆ. ಒಂದು ಜಿಲ್ಲೆಯನ್ನು ಭಾಗಶಃ, ಆಫ್‌ಸ್ಪಾದಿಂದ ಹೊರಗೆ ಇಡಲಾಗಿದೆ. ಮಣಿಪುರದ ಇಂಫಾಲ ಹೊರತುಪಡಿಸಿ ರಾಜ್ಯದ ಎಲ್ಲಾ ಪ್ರದೇಶಗಳೂ ಆಫ್‌ಸ್ಪಾ ಅಡಿಯಲ್ಲಿ ಇದ್ದವು. ಶುಕ್ರವಾರದಿಂದ ರಾಜ್ಯದ ಆರು ಜಿಲ್ಲೆಗಳ 15 ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳನ್ನು ಆಫ್‌ಸ್ಪಾದಿಂದ ಹೊರಗೆ ಇಡಲಾಗುತ್ತದೆ.

ಈಶಾನ್ಯದ ರಾಜ್ಯಗಳಲ್ಲಿ ಆಂತರಿಕ ಗಲಭೆ ಮತ್ತು ಒಳನುಸುಳುವಿಕೆಯನ್ನು ತಡೆಗಟ್ಟಲು 1958ರಲ್ಲಿ ಸೇನೆಗೆ ವಿಶೇಷಾಧಿಕಾರ ನೀಡಲಾಗಿತ್ತು. ಈ ಕಾಯ್ದೆ ಅಡಿ ಕಾರ್ಯನಿರ್ವಹಿಸುವ ಸಿಬ್ಬಂದಿಯು, ನಾಗರಿಕರನ್ನು ಪ್ರಶ್ನಿಸುವ, ವಿಚಾರಣೆಗೆ ಒಳಪಡಿಸುವ ಮತ್ತು ಅನುಮಾನ ಬಂದಲ್ಲಿ ಗುಂಡಿಟ್ಟು ಕೊಲ್ಲುವ ಅಧಿಕಾರ ಹೊಂದಿರುತ್ತಾರೆ. ಈ ಕಾಯ್ದೆಯಡಿ ನಡೆಸುವ ಯಾವ ಕೃತ್ಯವೂ ವಿಚಾರಣೆಗೆ ಒಳಪಡುವುದಿಲ್ಲ.

2021ರ ಡಿಸೆಂಬರ್‌ನಲ್ಲಿ ನಾಗಾಲ್ಯಾಂಡ್‌ನಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದ ಸೇನೆಯ ತಂಡವು, ನಾಗರಿಕರ ಮೇಲೆ ಗುಂಡಿನ ದಾಳಿ ನಡೆಸಿತ್ತು. ಆ ದಾಳಿಯಲ್ಲಿ ಮತ್ತು ನಂತರದ ಘರ್ಷಣೆಯಲ್ಲಿ ಸೇನೆಯ ಗುಂಡಿಗೆ 14 ನಾಗರಿಕರು ಬಲಿಯಾಗಿದ್ದರು. ಆ ಬಳಿಕ ಆಫ್‌ಸ್ಪಾವನ್ನು ಹಿಂಪಡೆಯಬೇಕು ಎಂಬ ಕೂಗು ಬಲವಾಗಿ ಕೇಳಿಬಂದಿತ್ತು.

**ಇವತ್ತಿನ ಘೋಷಣೆಯಿಂದ ಈಶಾನ್ಯ ಭಾರತದ ಮೂರು ರಾಜ್ಯಗಳ ಶೇ 60ರಷ್ಟು ಪ್ರದೇಶ ಆಫ್‌ಸ್ಪಾದಿಂದ ಮುಕ್ತವಾಗಿವೆ. ಕೆಲವೇ ತಿಂಗಳಲ್ಲಿ ಸಂಪೂರ್ಣ ಮುಕ್ತವಾಗಲಿವೆ**
**ಹಿಮಂತ ಬಿಸ್ವಾ ಶರ್ಮಾ,** ಅಸ್ಸಾಂ ಮುಖ್ಯಮಂತ್ರಿ

**ನಿಜ ಏನೆಂದರೆ, 64 ವರ್ಷಗಳ ನಂತರ ಇವತ್ತೂ ಈಶಾನ್ಯದ ರಾಜ್ಯಗಳು ಆಫ್‌ಸ್ಪಾ ಅಡಿಯಲ್ಲಿಯೇ ಇವೆ. ಅಮಿತ್ ಶಾ ಘೋಷಣೆಯಿಂದ ಏನೂ ಬದಲಾಗುವುದಿಲ್ಲ**
**ಬಿನಾಲಕ್ಷ್ಮೀ ನೆಪ್ರಾನ್,** ಮಣಿಪುರದ ಮಾನವ ಹಕ್ಕುಗಳ ಕಾರ್ಯಕರ್ತೆ

## ಗ್ರಾಹಕರಿಗಾಗಿ ಏ.9ರಿಂದ ಮೇ 31ವರೆಗೆ ಬೇಸಿಗೆ ಉತ್ಸವ

# ವಂಡರ್‌ಲಾ; ಹೊಸ ರೈಡ್‌ಗೆ ಚಾಲನೆ

ಪ್ರಜಾವಾಣಿ ವಾರ್ತೆ

**ರಾಮನಗರ:** ಬಿಡದಿಯಲ್ಲಿರುವ ವಂಡರ್‌ಲಾ ಅಮ್ಯೂಸ್‌ಮೆಂಟ್ ಪಾರ್ಕ್‌ನಲ್ಲಿ ಹೊಸ ಬಗೆಯ ಮನೋರಂಜನಾ ಅನುಭವ ಕೊಡುವ “ಟಾರಾಂಟುಲಾ” ರೈಡ್‌ಗೆ ಗುರುವಾರ ಚಾಲನೆ ನೀಡಲಾಯಿತು.

ಚಿತ್ರನಟ ಹಾಗೂ ನಿರ್ದೇಶಕ ಡಾರ್ಲಿಂಗ್ ಕೃಷ್ಣ ಹೊಸ ರೈಡ್‌ಗೆ ಹಸಿರು ನಿಶಾನೆ ತೋರಿದರು. ನಂತರ ‘ಟಾರಾಂಟುಲಾ’ ಏರಿ ಒಂದಿಷ್ಟು ಹೊತ್ತು ಸುತ್ತುತ್ತ ಹೊಸ ರೈಡ್‌ನ ಅನುಭವವನ್ನೂ ಪಡೆದರು.

ವಂಡರ್‌ಲಾ ಹಾಲಿಡೇಸ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಅರುಣ್ ಕೆ.ಚಿಟ್ಟಿಲಪಲ್ಲಿ ಮಾತನಾಡಿ ‘ಕೋವಿಡ್ ಕಾರಣಕ್ಕೆ ಕಳೆದ ಎರಡು ವರ್ಷದಿಂದ ಮನೋರಂಜನಾ ಉದ್ಯಮ ನೆಲ ಕಚ್ಚಿತ್ತು. ಈಗ ಚೇತರಿಕೆ ಕಾಣುತ್ತಿದೆ. ಬೇಸಿಗೆ ಹಿನ್ನೆಲೆಯಲ್ಲಿ ಗ್ರಾಹಕರನ್ನು ಸ್ವಾಗತಿಸಲು ಹೊಸ ಬಗೆಯ ರೈಡ್‌ಗಳನ್ನು ಆಯೋಜಿಸಿದ್ದೇವೆ’ ಎಂದರು.

‘ವಂಡರ್‌ಲಾದಲ್ಲಿ ವಯಸ್ಕರು, ಮಕ್ಕಳಿಗೆ ಪ್ರತ್ಯೇಕ ಮನೋರಂಜನಾ ಆಟಗಳಿವೆ. ಸುಮಾರು 62 ಬಗೆಯ ರೈಡ್‌ಗಳೊಂದಿಗೆ ಏಪ್ರಿಲ್ 9ರಿಂದ ಮೇ 31ರವರೆಗೆ ಬೇಸಿಗೆ ಉತ್ಸವ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ಲೈವ್ ಶೋಗಳು, ರುಚಿಕರ ಆಹಾರ ಮೇಳ, ಡಿ.ಜೆ. ಸಂಗೀತ, ಸಣ್ಣ ಮನೋರಂಜನಾ ಆಟಗಳು ಗ್ರಾಹಕರಿಗೆ ಲಭ್ಯವಿರಲಿವೆ. ಕೋವಿಡ್ ನಿಯಮಾವಳಿ ಜೊತೆಗೆ ಗ್ರಾಹಕರ ಸುರಕ್ಷತೆಗೆ ಒತ್ತು ನೀಡಿದ್ದೇವೆ’ ಎಂದರು. ವಂಡರ್‌ಲಾ ಬೆಂಗಳೂರು ಪಾರ್ಕ್ ಮುಖ್ಯಸ್ಥ ರುದ್ರೇಶ್ ಇದ್ದರು.



ವಂಡರ್‌ಲಾ ಅಮ್ಯೂಸ್‌ಮೆಂಟ್ ಪಾರ್ಕ್‌ನಲ್ಲಿ ‘ಟಾರಾಂಟುಲಾ’ರೈಡ್‌ಗೆ ಚಿತ್ರನಟ ಹಾಗೂ ನಿರ್ದೇಶಕ ಡಾರ್ಲಿಂಗ್ ಕೃಷ್ಣ ಚಾಲನೆ ನೀಡಿದರು. ವಂಡರ್‌ಲಾ ಹಾಲಿಡೇಸ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಅರುಣ್ ಕೆ.ಚಿಟ್ಟಿಲಪಲ್ಲಿ ಇದ್ದರು



ಬೆಂಗಳೂರಿಗೆ ಗುರುವಾರ ತಡರಾತ್ರಿ ಬಂದ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಎಚ್‌ಎಎಲ್ ವಿಮಾನ ನಿಲ್ದಾಣದಲ್ಲಿ ಬರಮಾಡಿಕೊಂಡರು. ಈ ಸಂದರ್ಭದಲ್ಲಿ ಸಚಿವರಾದ ಗೋಪಾಲಯ್ಯ, ಆನಂದ್ ಸಿಂಗ್ ಮುಂತಾದವರು ಇದ್ದರು

## ಮಹಾರಾಷ್ಟ್ರ: ಕೋವಿಡ್ ನಿರ್ಬಂಧಗಳ ತೆರವು

**ಮುಂಬೈ:** ಏಪ್ರಿಲ್ 2ರಿಂದ ಜಾರಿಗೆ ಬರುವಂತೆ ಕೋವಿಡ್‌ನ ಎಲ್ಲ ನಿರ್ಬಂಧಗಳನ್ನು ತೆರವುಗೊಳಿಸಲು ಮಹಾರಾಷ್ಟ್ರ ಸರ್ಕಾರ ನಿರ್ಧರಿಸಿದೆ.

ಕೊರೊನಾ ಪ್ರಕರಣಗಳು ಇಳಿಮುಖವಾಗುತ್ತಿರುವ ಹಿನ್ನೆಲೆಯಲ್ಲಿ ಎಲ್ಲ ನಿರ್ಬಂಧಗಳನ್ನು ತೆರವುಗೊಳಿಸಲಾಗುವುದು ಎಂದು ಸಂಪುಟ ಸಭೆಯ ಬಳಿಕ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ತಿಳಿಸಿದರು.

‘ನಿರ್ಬಂಧಗಳನ್ನು ವಾಪಸ್ ಪಡೆಯಲಾಗಿದೆ ಎಂದ ಮಾತ್ರಕ್ಕೆ ಜನರು ಉದಾಸೀನರಾಗಬಾರದು. ಮಾಸ್ಕ್ ಧರಿಸುವುದು, ಅಂತರ ಕಾಯ್ದುಕೊಳ್ಳುವುದು ಮತ್ತು ಲಸಿಕೆ ಪಡೆದುಕೊಳ್ಳುವ ಮೂಲಕ ಮುಂದಿನ ದಿನಗಳಲ್ಲಿ ಸಾಂಕ್ರಾಮಿಕವನ್ನು ದೂರು ಇಡಬಹುದಾಗಿದೆ ಎಂದು ಠಾಕ್ರೆ ಹೇಳಿದರು.

## ಲಿಥಿಯಂ ಸೆಲ್ ಉತ್ಪಾದನೆಗೆ ₹ 6,000 ಕೋಟಿ ಬಂಡವಾಳ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದಲ್ಲಿ ಲಿಥಿಯಂ–ಐಯಾನ್ ಸೆಲ್ ಉತ್ಪಾದನೆಗಾಗಿ ₹ 6,000 ಕೋಟಿ ಬಂಡವಾಳ ಹೂಡಿಕೆ ಮಾಡಲು ಎಕ್ಸೈಡ್ ಇಂಡಸ್ಟ್ರೀಸ್ ಮುಂದಾಗಿದೆ.

ಈ ಸಂಬಂಧ ಗುರುವಾರ ಬೆಂಗಳೂರಿನ ಕರ್ನಾಟಕ ಉದ್ಯೋಗ ಮಿತ್ರ ಕಚೇರಿಯಲ್ಲಿ ಎಕ್ಸೈಡ್ ಇಂಡಸ್ಟ್ರೀಸ್ ವ್ಯವಸ್ಥಾಪಕ ನಿರ್ದೇಶಕ ಸುಬೀರ್ ಚಕ್ರವರ್ತಿ ಅವರು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ಅವರನ್ನು ಭೇಟಿ ಮಾತುಕತೆ ನಡೆಸಿದರು.

ಎಕ್ಸೈಡ್ ಇಂಡಸ್ಟ್ರೀಸ್ ಬಂಡವಾಳ ಹೂಡಿಕೆ ಮಾಡುತ್ತಿರುವ ಪರಿಣಾಮ ರಾಜ್ಯದಲ್ಲಿ ಒಟ್ಟು 1200 ರಿಂದ 1400 ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ನಿರೀಕ್ಷೆ ಇದೆ. ಇದು ಸುಧಾರಿತ ಕೋಶ ರಸಾಯನ ಶಾಸ್ತ್ರ ತಂತ್ರಜ್ಞಾನಕ್ಕಾಗಿ ಭಾರತದ ಅತಿ ದೊಡ್ಡ ಗಿಗಾ ಕಾರ್ಖಾನೆಗಳಲ್ಲಿ ಒಂದಾಗಿದೆ ಎಂದು ಚಕ್ರವರ್ತಿ ಹೇಳಿದರು.

ಎಕ್ಸೈಡ್ ಇಂಡಸ್ಟ್ರೀಸ್ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿಯ ಹರಳೂರು ಕೈಗಾರಿಕಾ ಪ್ರದೇಶದಲ್ಲಿ 80 ಎಕರೆ ಭೂಮಿಯನ್ನು ಕೇಳಿದೆ. ಕಂಪನಿಗೆ ಸರ್ಕಾರದ ವತಿಯಿಂದ ಎಲ್ಲ ರೀತಿಯ ಸಹಕಾರ ನೀಡುವುದಾಗಿ ಸಚಿವ ನಿರಾಣಿ ತಿಳಿಸಿದರು.




### PUBLIC NOTICE


**ENTIRE BUILT-UP PROPERTY BEARING NO. 103, FRIENDS COLONY EAST, NEW DELHI**

Be it Known that my Client intends to purchase the above captioned property from its Owners **(1) MR. SHASHI MOHAN CHATURVEDI** S/o late Shri Manmohan Dayal Chaturvedi; **(2) SMT. ASHA CHATURVEDI** W/o Shri Satish Chaturvedi and D/o late Shri Manmohan Dayal Chaturvedi; **(3) MAJ GENERAL (Retd.) ANIL MOHAN CHATURVEDI** S/o late Shri Manmohan Dayal Chaturvedi & **(4) SMT. ASHA CHATURVEDI** W/o late Shri Anand Mohan Chaturvedi **(‘Owners’)** who are in exclusive possession of the above captioned property. The original Sale Deed dated 30th May, 1953 duly registered in the Office of the Sub Registrar, New Delhi, on 18th August, 1953 as Document No. 1296 in Additional Book No. I Volume No. 240 on Pages from 231 to 236, executed by Shri Indraj son of Shri Bhoja (1/3rd Share) and Smt. Ramdei wife of late Shri Baldev (2/3rd Share) and Dharam Singh in favour of Shri Manmohan Dayal Chaturvedi (M.D. Chaturvedi) in respect of the **1/8th undivided share in land bearing Khata Nos. 61/377 (5-11) and 61/378 (6-12), Village Kilokari, Delhi, now House No. 103, situated on Plot No. 103, Friends Colony East, New Delhi-110065**, i.e. the above captioned land/property is reported to have been missing, lost, mislaid or misplaced and is not traceable. The necessary FIR/Police Complaint vide LR No. 1088536/2018 dated 16.04.2018, has also been lodged by the aforesaid Owners regarding the aforesaid lost Sale Deed. It is notified that if any Person, Bank, NBFC, financial institution, governmental / statutory or non-statutory authority/agency, tax or any other department or any other entity etc. has or claims any rights, title, interest, lien, mortgage, demand, charge or claim on the basis of the aforesaid lost/misplaced Sale Deed or by way of ownership, possession, mortgage, surety, guarantee, gift, inheritance, agreement, purchase, HUF, arrangement, lease, license, understanding, etc. or any other claim, rights, etc. of any nature whatsoever in the above captioned property or in part thereof or against the Owner or has any sort of dispute/litigation (except Civil Suit/Case being CS(OS)No. 3083 of 2014 titled Shakti Nath Vs. Mr. Shashi Mohan Chaturvedi and Ors and CS(OS)No. 33 of 2017 titled ‘Mr. Shashi Mohan Chaturvedi and Ors Vs. Mr. Shakti Nath’, which are pending adjudication before the Hon’ble High Court of Delhi), or otherwise has any objection for its absolute sale/transfer/ conveyance to my Client, then, such Person, Bank, NBFC, financial institution, governmental/statutory or non-statutory authority/ agency, tax or any other department, or any other entity, etc. should forthwith notify the undersigned in respect of the same along-with valid Documentary Proof of such claim, dispute, etc. within a period of 15 (fifteen) days from the date of publication of this Notice, failing which it will be deemed that the above captioned property is absolutely free from all sorts of encumbrances of any nature whatsoever (except the aforesaid pending cases) and the above named Owners are vested with absolutely perfect/clear and marketable title in respect to the above captioned property with absolute right to sell the same to my client and to make my client the sole, absolute and exclusive owner in possession of the same with clear, clean, indisputable and marketable title of the same and my client may proceed further with the transaction as bonafide purchaser (subject to approval/permission of the Hon’ble High Court in aforesaid Case/s) and any claim and/or objection raised thereafter shall be considered as waived and abandoned and the same shall not be binding upon my Client.

Sd/-
**Gaurav Sachdeva**
Advocate
C-21, Malviya Nagar,New Delhi 110017
Ph: 9810006297, e-mail: sachdevaassociates@gmail.com



## ಷೇರುಪೇಟೆ ವಹಿವಾಟು




## ಎನ್‌ಎಸ್‌ಇ ನಿಫ್ಟಿ

| | |
|---|---|
| ಹಿಂದಿನ ಅಂತ್ಯ | 17,498 |
| ಇಂದಿನ ಅಂತ್ಯ | 17,465 |
| ▼ | 33 |
| ದಿನದ ಕನಿಷ್ಠ | 17,435 |

## ವಿನಿಮಯ ದರ

| | |
|---|---|
| $ ಡಾಲರ್ | 75.74 |
| £ ಪೌಂಡ್ | 99.43 |
| € ಯುರೊ | 84.20 |
| ¥ ಯೆನ್ (100ಕ್ಕೆ) | 62 |

## ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



| | |
|---|---|
| ಬೆಂಗಳೂರು | |
| 100 ಮೊಟ್ಟೆಗೆ | ₹400 |
| 12 ಮೊಟ್ಟೆಗೆ | ₹54 |
| ಮೈಸೂರು | |
| 100 ಮೊಟ್ಟೆಗೆ | ₹400 |

## ಖಾದ್ಯ ತೈಲ ಮುಂಬೈ



(10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1600 (1605) |
| ಸೋಯಾ (ರಿಫೈನ್ಡ್) | ₹1465 (1470) |
| ಸೂರ್ಯಕಾಂತಿ (ರಿಫೈನ್ಡ್) | ₹1700 (1715) |
| ಪಾಮೋಲಿನ್ | ₹1435 (1440) |

## ತೆಂಗು ಧಾರಣೆ (ಸಾವಿರಕ್ಕೆ)



ಮಂಗಳೂರು
1ನೇ ದರ್ಜೆ
₹18000-20000
2ನೇ ದರ್ಜೆ
₹10000-16000







## ವಿತ್ತೀಯ ಕೊರತೆ ಅಂತರ ಹೆಚ್ಚಳ

ನವದೆಹಲಿ (ಪಿಟಿಐ): ದೇಶದ ವಿತ್ತೀಯ ಕೊರತೆಯು ಫೆಬ್ರುವರಿ ಅಂತ್ಯಕ್ಕೆ ಬಜೆಟ್ ಅಂದಾಜಿನ ಶೇಕಡ 82.7ರಷ್ಟು ಆಗಿದೆ. ಸರ್ಕಾರದ ವೆಚ್ಚದಲ್ಲಿ ಏರಿಕೆ ಆಗಿರುವುದೇ ಇದಕ್ಕೆ ಕಾರಣ.

ಹಿಂದಿನ ಹಣಕಾಸು ವರ್ಷದಲ್ಲಿ ವಿತ್ತೀಯ ಕೊರತೆಯು ಪರಿಷ್ಕೃತ ಅಂದಾಜಿನ ಶೇ 76ರಷ್ಟು ಇತ್ತು.

ಲೆಕ್ಕಪತ್ರಗಳ ಮಹಾನಿಯಂತ್ರಕರ (ಸಿಜಿಎ) ಮಾಹಿತಿಯ ಪ್ರಕಾರ, ಮೌಲ್ಯದ ಲೆಕ್ಕದಲ್ಲಿ 2022ರ ಫೆಬ್ರುವರಿ ಅಂತ್ಯಕ್ಕೆ ವಿತ್ತೀಯ ಕೊರತೆಯು ₹ 13.16 ಲಕ್ಷ ಕೋಟಿ ಆಗಿದೆ.

ಸರ್ಕಾರದ ಒಟ್ಟು ವೆಚ್ಚವು ಫೆಬ್ರುವರಿ ಅಂತ್ಯಕ್ಕೆ ಪರಿಷ್ಕೃತ ಅಂದಾಜಿನ ಶೇ 83.4ರಷ್ಟು ಆಗಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಶೇ 81.7ರಷ್ಟು ಆಗಿತ್ತು ಎಂದು ಹೇಳಿದೆ.

**ಚಾಲ್ತಿ ಖಾತೆ ಕೊರತೆ:** ಚಾಲ್ತಿ ಖಾತೆ ಕೊರತೆ ಅಂತರವು ಡಿಸೆಂಬರ್ ತ್ರೈಮಾಸಿಕದಲ್ಲಿ ಜಿಡಿಪಿಯ ಶೇ 2.7ಕ್ಕೆ ಏರಿಕೆ ಆಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಗುರುವಾರ ತಿಳಿಸಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಶೇ 0.3ರಷ್ಟು ಇತ್ತು.

### ಜಾಗತಿಕ ಪರಿಣಾಮ: ಸಿಎನ್‌ಜಿ, ಪಿಎನ್‌ಜಿ ದರದಲ್ಲಿ ಏರಿಕೆ ಸಂಭವ

# ನೈಸರ್ಗಿಕ ಅನಿಲ ಬೆಲೆ ಹೆಚ್ಚಳ

**ಮುಖ್ಯಾಂಶಗಳು**
- ಏರಿಕೆ ಆಗಲಿದೆ ರಸಗೊಬ್ಬರ ತಯಾರಿಕೆ ವೆಚ್ಚ
- ಕಂಪನಿಗಳಿಗೆ ದಾಖಲೆಯ ದರ ಪಾವತಿ



ನವದೆಹಲಿ (ಪಿಟಿಐ): ವಿದ್ಯುತ್ ಉತ್ಪಾದನೆಯಲ್ಲಿ, ರಸಗೊಬ್ಬರ ತಯಾರಿಕೆಯಲ್ಲಿ ಬಳಸುವ ನೈಸರ್ಗಿಕ ಅನಿಲದ ಬೆಲೆಯನ್ನು ಕೇಂದ್ರ ಸರ್ಕಾರವು ಎರಡು ಪಟ್ಟಿಗಿಂತ ಹೆಚ್ಚು ಮಾಡಿದೆ. ಇದೇ ನೈಸರ್ಗಿಕ ಅನಿಲವನ್ನು ಸಿಎನ್‌ಜಿ ಆಗಿ ಪರಿವರ್ತಿಸಿ ಅದನ್ನು ಕೊಳವೆ ಮೂಲಕ ಮನೆಗಳಿಗೆ ಅಡುಗೆಗೆ ಪೂರೈಕೆ ಮಾಡಲಾಗುತ್ತದೆ.

ಜಾಗತಿಕ ಮಟ್ಟದಲ್ಲಿ ಇಂಧನ ಬೆಲೆಯಲ್ಲಿ ಆಗಿರುವ ಹೆಚ್ಚಳದ ಪರಿಣಾಮವಾಗಿ ಈ ಏರಿಕೆ ಆಗಿದೆ. ನಿಯಂತ್ರಣಕ್ಕೆ ಒಳಪಟ್ಟಿರುವ ಹಳೆಯ ನಿಕ್ಷೇಪಗಳಿಂದ ಉತ್ಪಾದನೆ ಆಗುವ ಅನಿಲ ಬೆಲೆಯು ದಾಖಲೆಯ 6.10 ಡಾಲರ್‌ಗೆ (ಪ್ರತಿ ಮಿಲಿಯನ್ ಬ್ರಿಟಿಷ್ ಥರ್ಮಲ್ ಯೂನಿಟ್‌ಗೆ) ಏರಿಕೆ ಆಗಲಿದೆ. ಅದು 2.90 ಡಾಲರ್ ಮಟ್ಟದಲ್ಲಿತ್ತು.

ಇದರಿಂದಾಗಿ ಸಿಎನ್‌ಜಿ ಮತ್ತು ಕೊಳವೆ ಮೂಲಕ ಪೂರೈಕೆ ಆಗುವ ಅಡುಗೆ ಅನಿಲದ ಬೆಲೆಯಲ್ಲಿ ಹೆಚ್ಚಳ ಆಗುವ ಸಾಧ್ಯತೆ ಇದೆ. ಏಪ್ರಿಲ್ 1ರಿಂದ ಆರು ತಿಂಗಳವರೆಗೆ ಹೊಸ ದರ ಜಾರಿಯಲ್ಲಿ ಇರಲಿದೆ. ಈ ಹೆಚ್ಚಳವು ಇಂಧನ ವಿಭಾಗದಲ್ಲಿನ ಹಣದುಬ್ಬರ ಪ್ರಮಾಣವನ್ನು ಇನ್ನಷ್ಟು ಜಾಸ್ತಿ ಮಾಡಲಿದೆ.

ಹೊಸ ಹಾಗೂ ಕಠಿಣ ನಿಕ್ಷೇಪಗಳಿಂದ ಹೊರತೆಗೆಯುವ ಅನಿಲದ ದರವು 6.13 ಡಾಲರ್ ಇದ್ದಿದ್ದು 9.92 ಡಾಲರ್‌ಗೆ ಏರಿಕೆ ಆಗಲಿದೆ ಎಂದು ಪೆಟ್ರೋಲಿಯಂ ಯೋಜನೆ ಮತ್ತು ವಿಶ್ಲೇಷಣಾ ಘಟಕದ (ಪಿಪಿಎಸಿ) ಅಧಿಸೂಚನೆ ಹೇಳಿದೆ. ದೇಶದ ಅನಿಲ ಉತ್ಪಾದಕರಿಗೆ ನೀಡುತ್ತಿರುವ ಅತಿಹೆಚ್ಚಿನ ದರ ಇದಾಗಿದೆ.

ಈ ಏರಿಕೆಯ ಪರಿಣಾಮವಾಗಿ, ಸಿಎನ್‌ಜಿ ಹಾಗೂ ದೆಹಲಿ, ಮುಂಬೈ ನಗರಗಳಲ್ಲಿ ಕೊಳವೆ ಮೂಲಕ ಪೂರೈಕೆ ಆಗುವ ಅನಿಲದ ಬೆಲೆ ಶೇಕಡ 10ರಿಂದ ಶೇ 15ರಷ್ಟು ತುಟ್ಟಿ ಆಗುವ ನಿರೀಕ್ಷೆ ಇದೆ ಎಂದು ಮೂಲಗಳು ತಿಳಿಸಿವೆ. ಅನಿಲ ಬಳಸಿ ವಿದ್ಯುತ್ ಉತ್ಪಾದನೆ ಮಾಡುವುದು ಕೂಡ ದುಬಾರಿ ಆಗಲಿದೆ.

ರಸಗೊಬ್ಬರ ತಯಾರಿಕೆ ವೆಚ್ಚದಲ್ಲಿ ಹೆಚ್ಚಳ ಆಗಲಿದ್ದು, ಸರ್ಕಾರವು ರಸಗೊಬ್ಬರಕ್ಕೆ ಸಬ್ಸಿಡಿ ನೀಡುತ್ತಿರುವ ಕಾರಣ ಗ್ರಾಹಕರಿಗೆ ಬೆಲೆ ಏರಿಕೆಯ ಬಿಸಿ ತಟ್ಟಲಿಕ್ಕಿಲ್ಲ ಎನ್ನಲಾಗಿದೆ.



### ರಷ್ಯಾ–ಉಕ್ರೇನ್ ಸಂಘರ್ಷದ ಪರಿಣಾಮ: ಕ್ರಿಸಿಲ್ ವರದಿ

# ಕಚ್ಚಾ ಸೂರ್ಯಕಾಂತಿ ಎಣ್ಣೆ ಪೂರೈಕೆ ಕೊರತೆ ಸಾಧ್ಯತೆ



ಮುಂಬೈ (ಪಿಟಿಐ): ರಷ್ಯಾ–ಉಕ್ರೇನ್ ಸಂಘರ್ಷದಿಂದಾಗಿ ಮುಂದಿನ ಹಣಕಾಸು ವರ್ಷದಲ್ಲಿ ಭಾರತಕ್ಕೆ ಕಚ್ಚಾ ಸೂರ್ಯಕಾಂತಿ ಎಣ್ಣೆ ಪೂರೈಕೆಯಲ್ಲಿ ಶೇಕಡ 25ರಷ್ಟು ಅಥವಾ ಗರಿಷ್ಠ 6 ಲಕ್ಷ ಟನ್‌ಗಳಷ್ಟು ಕೊರತೆ ಉಂಟಾಗುವ ಸಾಧ್ಯತೆ ಇದೆ ಎಂದು ರೇಟಿಂಗ್ ಸಂಸ್ಥೆ ಕ್ರಿಸಿಲ್ ಹೇಳಿದೆ.

ಭಾರತಕ್ಕೆ ಶೇ 70ರಷ್ಟು ಕಚ್ಚಾ ಸೂರ್ಯಕಾಂತಿ ಎಣ್ಣೆಯು ಉಕ್ರೇನ್‌ನಿಂದ ಪೂರೈಕೆ ಆಗುತ್ತಿದೆ. ಶೇ 20ರಷ್ಟನ್ನು ರಷ್ಯಾ ಪೂರೈಸುತ್ತಿದೆ. ಇನ್ನುಳಿದ ಶೇ 10ರಷ್ಟನ್ನು ಅರ್ಜೆಂಟೀನಾ ಮತ್ತು ಇತರೆ ದೇಶಗಳು ನೀಡುತ್ತಿವೆ.

ಅಡುಗೆ ಎಣ್ಣೆಯ ವಾರ್ಷಿಕ ಬೇಡಿಕೆ ದೇಶದಲ್ಲಿ 2.30 ಕೋಟಿ ಟನ್‌ಗಳಿಂದ 2.40 ಕೋಟಿ ಟನ್‌ಗಳಷ್ಟು ಇದೆ. ಇದರಲ್ಲಿ ಸಂಸ್ಕರಣೆ ಆಗಿರುವ ಸೂರ್ಯಕಾಂತಿ ಎಣ್ಣೆಯ ಪಾಲು ಸರಿಸುಮಾರು ಶೇ 10ರಷ್ಟು ಇದೆ. ಅಡುಗೆ ಎಣ್ಣೆಯ ಒಟ್ಟು ಬೇಡಿಕೆಯಲ್ಲಿ ಶೇ 60ರಷ್ಟನ್ನು ಆಮದು ಮೂಲಕ ಪೂರೈಸಲಾಗುತ್ತಿದೆ.

ದೇಶದಲ್ಲಿ ಅಡುಗೆ ಎಣ್ಣೆ ಸಂಸ್ಕರಣೆ ಮಾಡುವವರು 30ರಿಂದ 45 ದಿನಗಳಿಗೆ ಸಾಕಾಗುವಷ್ಟು ಕಚ್ಚಾ ಸರಕನ್ನು ಇಟ್ಟುಕೊಂಡಿರುತ್ತಾರೆ. ಇದರಿಂದಾಗಿ ಅಲ್ಪಾವಧಿಗೆ ಪೂರೈಕೆ ಸಮಸ್ಯೆ ನಿವಾರಿಸಬಹುದು. ಆದರೆ, ರಷ್ಯಾ–ಉಕ್ರೇನ್ ಸಂಘರ್ಷ ಶಮನವಾಗದಿದ್ದರೆ, ಪೂರೈಕೆ ಮತ್ತು ಬೆಲೆಯ ಮೇಲೆ ಹೆಚ್ಚಿನ ಪರಿಣಾಮ ಉಂಟಾಗಬಹುದು ಎಂದು ವರದಿ ಹೇಳಿದೆ.

ರಷ್ಯಾ ಮತ್ತು ಉಕ್ರೇನ್‌ನಿಂದ ಕಚ್ಚಾ ಸೂರ್ಯಕಾಂತಿ ಎಣ್ಣೆ ಆಮದು ಮಾಡಿಕೊಳ್ಳಲು ಸಮಸ್ಯೆ ಆದಲ್ಲಿ, ಆಗ ಅರ್ಜೆಂಟೀನಾದಿಂದ ಹೆಚ್ಚಿನ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳಬೇಕಾಗಿ ಬರಲಿದೆ. ಹೀಗಿದ್ದರೂ, ಅರ್ಜೆಂಟೀನಾದಿಂದ ತರಿಸಿಕೊಳ್ಳುವ ಪ್ರಮಾಣವು ರಷ್ಯಾ ಮತ್ತು ಉಕ್ರೇನ್ ಪೂರೈಕೆ ಮಾಡುತ್ತಿರುವುದಕ್ಕೆ ಸಮವಾಗಲು ಸಾಧ್ಯವಿಲ್ಲ ಎಂದು ಅದು ಹೇಳಿದೆ.

**ಮುಖ್ಯಾಂಶಗಳು**
- ಉಕ್ರೇನ್‌ನಿಂದ ಶೇ 70ರಷ್ಟು ಕಚ್ಚಾ ಸೂರ್ಯಕಾಂತಿ ಎಣ್ಣೆ ಪೂರೈಕೆ
- ಅಡುಗೆ ಎಣ್ಣೆಯ ವಾರ್ಷಿಕ ದೇಶಿ ಬೇಡಿಕೆ 2.40 ಕೋಟಿ ಟನ್
- ಕಚ್ಚಾ ಸೂರ್ಯಕಾಂತಿ ಎಣ್ಣೆಯ ವಾರ್ಷಿಕ ಬೇಡಿಕೆ 23 ಲಕ್ಷ ಟನ್

## ಸುದ್ದಿ 2 ನಿಮಿಷ

### ಪ್ರಮುಖ 8 ಕೈಗಾರಿಕಾ ವಲಯಗಳ ಬೆಳವಣಿಗೆ ಶೇ 5.8ರಷ್ಟು

ನವದೆಹಲಿ (ಪಿಟಿಐ): ಮೂಲಸೌಕರ್ಯ ವಲಯದ ಪ್ರಮುಖ ಎಂಟು ಕೈಗಾರಿಕೆಗಳ ಬೆಳವಣಿಗೆಯು 2022ರ ಫೆಬ್ರುವರಿಯಲ್ಲಿ ಶೇಕಡ 5.8ಕ್ಕೆ ತಲುಪಿದೆ. ಕಳೆದ ವರ್ಷದ ಫೆಬ್ರುವರಿಯಲ್ಲಿ ಇದು ಶೇ 3.3ರಷ್ಟು ಇತ್ತು. ಈ ವರ್ಷದ ಜನವರಿಯಲ್ಲಿ ಶೇ 4ರಷ್ಟು ಬೆಳವಣಿಗೆ ಕಂಡಿವೆ.

ಕಲ್ಲಿದ್ದಲು, ನೈಸರ್ಗಿಕ ಅನಿಲ, ಸಂಸ್ಕರಣಾ ಉತ್ಪನ್ನಗಳು ಮತ್ತು ಸಿಮೆಂಟ್ ಉದ್ಯಮಗಳ ಉತ್ತಮ ಬೆಳವಣಿಗೆಯಿಂದಾಗಿ ಈ ವರ್ಷದ ಫೆಬ್ರುವರಿಯಲ್ಲಿ ಈ ಪ್ರಮಾಣದ ಏರಿಕೆ ಸಾಧ್ಯವಾಗಿದೆ. ಸರ್ಕಾರ ಬಿಡುಗಡೆ ಮಾಡಿರುವ ಅಂಕಿ–ಅಂಶದಲ್ಲಿ ಈ ಮಾಹಿತಿ ಇದೆ. ಆದರೆ, ಫೆಬ್ರುವರಿಯಲ್ಲಿ ಕಚ್ಚಾತೈಲ ಮತ್ತು ರಸಗೊಬ್ಬರ ಉತ್ಪಾದನೆ ಇಳಿಕೆ ಕಂಡಿದೆ.



ಕಲ್ಲಿದ್ದಲು, ಕಚ್ಚಾತೈಲ, ನೈಸರ್ಗಿಕ ಅನಿಲ, ಸಂಸ್ಕರಣಾ ಉತ್ಪನ್ನಗಳು, ರಸಗೊಬ್ಬರ, ಉಕ್ಕು, ಸಿಮೆಂಟ್ ಮತ್ತು ವಿದ್ಯುತ್ ವಲಯಗಳು 2021ರ ಏಪ್ರಿಲ್‌ನಿಂದ ಈ ವರ್ಷದ ಫೆಬ್ರುವರಿವರೆಗಿನ ಅವಧಿಯಲ್ಲಿ ಶೇ 11ರಷ್ಟು ಬೆಳವಣಿಗೆ ಕಂಡಿವೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಶೇ (–)8.1ರಷ್ಟು ಕುಸಿತ ಕಂಡಿದ್ದವು.


### ಸಣ್ಣ ಉಳಿತಾಯ: ಬಡ್ಡಿ ಬದಲಿಲ್ಲ

ನವದೆಹಲಿ (ಪಿಟಿಐ): ಸಾರ್ವಜನಿಕ ಭವಿಷ್ಯ ನಿಧಿ (ಪಿಪಿಎಫ್), ರಾಷ್ಟ್ರೀಯ ಉಳಿತಾಯ ಪತ್ರದಂತಹ (ಎನ್‌ಎಸ್‌ಸಿ) ಸಣ್ಣ ಉಳಿತಾಯ ಯೋಜನೆಗಳ ಮೇಲಿನ ಬಡ್ಡಿ ದರವನ್ನು ಕೇಂದ್ರ ಸರ್ಕಾರವು ಏಪ್ರಿಲ್–ಜೂನ್ ತ್ರೈಮಾಸಿಕದ ಅವಧಿಗೆ ಯಥಾಸ್ಥಿತಿಯಲ್ಲಿ ಉಳಿಸಿಕೊಂಡಿದೆ. ಹಣದುಬ್ಬರ ಪ್ರಮಾಣವು ಹೆಚ್ಚಿನ ಮಟ್ಟದಲ್ಲಿ ಇರುವ ಕಾರಣ ಈ ತೀರ್ಮಾನ ಕೈಗೊಂಡಿದೆ.

2020–21ನೆಯ ಹಣಕಾಸು ವರ್ಷದ ಮೊದಲ ತ್ರೈಮಾಸಿಕದ ನಂತರದಲ್ಲಿ ಬಡ್ಡಿ ದರವನ್ನು ಬದಲಾಯಿಸಿಲ್ಲ. ಈಗಿನ ತೀರ್ಮಾನದ ಕಾರಣದಿಂದಾಗಿ ಪಿಪಿಎಫ್ ಬಡ್ಡಿ ದರವು ಶೇ 7.1ರ ಮಟ್ಟದಲ್ಲಿ, ಎನ್‌ಎಸ್‌ಸಿ ಬಡ್ಡಿ ದರವು ಶೇ 6.8ರ ಮಟ್ಟದಲ್ಲಿ ಮುಂದುವರಿಯಲಿದೆ.

ಸಣ್ಣ ಉಳಿತಾಯ ಯೋಜನೆಗಳ ಬಡ್ಡಿ ದರವನ್ನು ಪ್ರತಿ ಮೂರು ತಿಂಗಳಿಗೊಮ್ಮೆ ಅಧಿಸೂಚನೆಯಲ್ಲಿ ಪ್ರಕಟಿಸಲಾಗುತ್ತದೆ. ಒಂದು ವರ್ಷದ ಅವಧಿ ಠೇವಣಿಗೆ ಶೇ 5.5ರಷ್ಟು, ಸುಕನ್ಯಾ ಸಮೃದ್ಧಿ ಯೋಜನೆಯ ಬಡ್ಡಿ ದರವು ಶೇ 7.6ರಷ್ಟು ಇರಲಿದೆ.

## ನಿಲ್ಲದ ಇಂಧನ ದರ ಏರಿಕೆ



ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಗುರುವಾರ ಪೆಟ್ರೋಲ್ ಮತ್ತು ಡೀಸೆಲ್ ದರವನ್ನು ಲೀಟರಿಗೆ ತಲಾ 80 ಪೈಸೆಯಷ್ಟು ಹೆಚ್ಚಿಸಿವೆ. ಇದರಿಂದಾಗಿ ದೆಹಲಿಯಲ್ಲಿ ಪೆಟ್ರೋಲ್ ದರ ಲೀಟರಿಗೆ ₹ 101.81ಕ್ಕೆ, ಡೀಸೆಲ್ ದರ ಲೀಟರಿಗೆ ₹ 93.07ಕ್ಕೆ ಏರಿಕೆ ಆಗಿದೆ.

ಎಚ್‌ಪಿಸಿಎಲ್ ಜಾಲತಾಣದಲ್ಲಿ ಇರುವ ಮಾಹಿತಿಯ ಪ್ರಕಾರ, ಬೆಂಗಳೂರಿನಲ್ಲಿ ಪೆಟ್ರೋಲ್ ದರ ₹ 107.34ಕ್ಕೆ ಮತ್ತು ಡೀಸೆಲ್ ದರ ₹ 91.31ಕ್ಕೆ ತಲುಪಿದೆ. ಮಾರ್ಚ್ 22ರಿಂದ ದರ ಪರಿಷ್ಕರಣೆ ಮತ್ತೆ ಆರಂಭ ಆಗಿದ್ದು, ಗುರುವಾರದವರೆಗೆ ಬೆಂಗಳೂರಿನಲ್ಲಿ ಪೆಟ್ರೋಲ್ ದರವು ಲೀಟರಿಗೆ ₹ 6.7ರಷ್ಟು ಮತ್ತು ಡೀಸೆಲ್ ದರ ₹ 6.3ರಷ್ಟು ಹೆಚ್ಚಳ ಆಗಿದೆ.



### ಕೇಂದ್ರ ಸಚಿವ ರಾಮೇಶ್ವರ ತೆಲಿ ಲೋಕಸಭೆಯಲ್ಲಿ ಹೇಳಿಕೆ

# ಬೆಲೆ ಇಳಿಕೆಗೆ ಸಂಗ್ರಹಾಗಾರದ ತೈಲ

ನವದೆಹಲಿ (ಪಿಟಿಐ): ಕಚ್ಚಾ ತೈಲದ ಬೆಲೆ ಏರಿಕೆಯನ್ನು ನಿಯಂತ್ರಿಸಲು ಸಂಗ್ರಹಾಗಾರದಿಂದ ತೈಲವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವ ಕ್ರಮವನ್ನು ತಾನು ಬೆಂಬಲಿಸುವುದಾಗಿ ಕೇಂದ್ರ ಸರ್ಕಾರ ಹೇಳಿದೆ.

ಸಂಗ್ರಹಾಗಾರದಲ್ಲಿ ಇರುವ 18 ಕೋಟಿ ಬ್ಯಾರೆಲ್ ತೈಲವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವ ಬಗ್ಗೆ ಅಮೆರಿಕ ಚಿಂತನೆ ನಡೆಸಿದೆ ಎಂಬ ವರದಿಗಳು ಪ್ರಕಟವಾದ ನಂತರದಲ್ಲಿ ಕೇಂದ್ರ ಈ ಮಾತು ಹೇಳಿದೆ. ಅಮೆರಿಕದ ಆಲೋಚನೆ ಕುರಿತ ವರದಿ ಪ್ರಕಟವಾದ ನಂತರ ಕಚ್ಚಾ ತೈಲ ಬೆಲೆ ತುಸು ಇಳಿಕೆ ಕಂಡಿದೆ.

‘ಜಾಗತಿಕ ಇಂಧನ ಮಾರುಕಟ್ಟೆಯಲ್ಲಿನ ಪರಿಸ್ಥಿತಿಯನ್ನು ಕೇಂದ್ರ ಸರ್ಕಾರವು ಸೂಕ್ಷ್ಮವಾಗಿ ಅವಲೋಕಿಸುತ್ತಿದೆ’ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಖಾತೆ ರಾಜ್ಯ ಸಚಿವ ರಾಮೇಶ್ವರ ತೆಲಿ ಲೋಕಸಭೆಗೆ ತಿಳಿಸಿದ್ದಾರೆ.

**ಮುಖ್ಯಾಂಶಗಳು**
- ದೇಶದಲ್ಲಿರುವ ತೈಲ ಸಂಗ್ರಹ 74 ದಿನಗಳಿಗೆ ಸಾಕು
- ಸಂಗ್ರಹಾಗಾರದ ತೈಲ ಬಿಡುಗಡೆ ಮಾಡಲಿರುವ ಅಮೆರಿಕ

‘ಕಚ್ಚಾ ತೈಲ ಬೆಲೆ ತಗ್ಗಿಸಲು, ಮಾರುಕಟ್ಟೆಯಲ್ಲಿನ ಅಸ್ಥಿರತೆಯನ್ನು ನಿವಾರಿಸಲು ಎಲ್ಲ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಕೇಂದ್ರ ಸರ್ಕಾರ ಸಿದ್ಧವಿದೆ’ ಎಂದು ಅವರು ಹೇಳಿದ್ದಾರೆ. 2021ರ ನವೆಂಬರ್‌ನಲ್ಲಿ ಭಾರತವು ತನ್ನ ಸಂಗ್ರಹಾಗಾರದಲ್ಲಿನ 50 ಲಕ್ಷ ಬ್ಯಾರೆಲ್ ತೈಲವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲು ಒಪ್ಪಿತ್ತು.

ಭಾರತವು 53.3 ಲಕ್ಷ ಟನ್ ತೈಲವನ್ನು ತನ್ನ ಸಂಗ್ರಹಾಗಾರಗಳಲ್ಲಿ ಇರಿಸಿಕೊಂಡಿದೆ. ಇದು ದೇಶದ ಒಂಭತ್ತೂವರೆ ದಿನಗಳ ಬೇಡಿಕೆ ಪೂರೈಸಲು ಸಾಕು ಎಂದು ಎಂದು ತೆಲಿ ಹೇಳಿದ್ದಾರೆ. ಇದರ ಜೊತೆಗೆ ತೈಲ ಮಾರಾಟ ಕಂಪನಿಗಳು ಒಟ್ಟು 64.5 ದಿನಗಳಿಗೆ ಆಗುವಷ್ಟು ತೈಲ ಸಂಗ್ರಹವನ್ನು ಹೊಂದಿವೆ. ಹೀಗಾಗಿ, ದೇಶಕ್ಕೆ 74 ದಿನಗಳಿಗೆ ಅಗತ್ಯವಿರುವ ತೈಲ ಸಂಗ್ರಹ ಇದೆ ಎಂದು ಅವರು ತಿಳಿಸಿದ್ದಾರೆ.

‘ಗೃಹ ಬಳಕೆಯ ಅಡುಗೆ ಅನಿಲ ಸಿಲಿಂಡರ್ ಬೆಲೆಯನ್ನು ನಿಯಂತ್ರಿಸುವ ಕೆಲಸವನ್ನು ಸರ್ಕಾರವು ಮಾಡುತ್ತದೆ. ಅಂತರರಾಷ್ಟ್ರೀಯ ಮಟ್ಟದಲ್ಲಿನ ಬೆಲೆ ಏರಿಕೆಯಿಂದ ಜನಸಾಮಾನ್ಯರನ್ನು ರಕ್ಷಿಸುವ ಉದ್ದೇಶದಿಂದ ಹೀಗೆ ಮಾಡಲಾಗುತ್ತದೆ’ ಎಂದು ಅವರು ಹೇಳಿದ್ದಾರೆ. ಆದರೆ, ಇದಕ್ಕೆ ಸಂಬಂಧಿಸಿದಂತೆ ಹೆಚ್ಚಿನ ವಿವರ ನೀಡಿಲ್ಲ.

## ಅಡುಗೆ ಎಣ್ಣೆ ದಾಸ್ತಾನು: ಅವಧಿ ವಿಸ್ತರಣೆ

ನವದೆಹಲಿ (ಪಿಟಿಐ): ಅಡುಗೆ ಎಣ್ಣೆ ಮತ್ತು ಎಣ್ಣೆಬೀಜಗಳ ದಾಸ್ತಾನಿಗೆ ಮಿತಿ ಹೇರಿದ್ದನ್ನು ಕೇಂದ್ರ ಸರ್ಕಾರವು ಡಿಸೆಂಬರ್‌ವರೆಗೆ ವಿಸ್ತರಿಸಿ ಗುರುವಾರ ಆದೇಶಿಸಿದೆ. ದೇಶಿ ಮಾರುಕಟ್ಟೆಯಲ್ಲಿ ಅಡುಗೆ ಎಣ್ಣೆ ಬೆಲೆಯನ್ನು ಮಿತಿಯಲ್ಲಿ ಇರಿಸುವ ಉದ್ದೇಶದಿಂದ ಈ ತೀರ್ಮಾನ ಕೈಗೊಳ್ಳಲಾಗಿದೆ.

ಏಪ್ರಿಲ್ 1ರಿಂದ ಇದು ಜಾರಿಗೆ ಬರಲಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ.

ರಿಟೇಲ್ ಮಾರಾಟಗಾರರು ಮತ್ತು ರಿಟೇಲ್ ಮಳಿಗೆಗಳು ತಲಾ 30 ಕ್ವಿಂಟಲ್, ಸಗಟು ಮಾರಾಟಗಾರರು 500 ಕ್ವಿಂಟಲ್, ದೊಡ್ಡ ಸಂಖ್ಯೆಯಲ್ಲಿ ಮಳಿಗೆಗಳನ್ನು ಹೊಂದಿರುವ ಕಂಪನಿಗಳ ಡಿಪೊಗಳು 1,000 ಕ್ವಿಂಟಲ್ ಅಡುಗೆ ಎಣ್ಣೆ ದಾಸ್ತಾನು ಇಟ್ಟುಕೊಳ್ಳಬಹುದು ಎಂದು ಹೊಸ ಆದೇಶದಲ್ಲಿ ಹೇಳಲಾಗಿದೆ.

# ಐಎಂಎ: ಅಡ ಇಟ್ಟ ಚಿನ್ನ 6ರಿಂದ ವಾಪಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಚ್ಚಿನ ಲಾಭಾಂಶದ ಆಮಿಷಕ್ಕೆ ಒಳಗಾಗಿ ಐಎಂಎ (ಐ ಮಾನಿಟರಿ ಅಡ್ವೈಸರಿ) ಕಂಪನಿಯಲ್ಲಿ ಚಿನ್ನಾಭರಣ ಅಡ ಇಟ್ಟು ಮೋಸ ಹೋಗಿದ್ದ ಗ್ರಾಹಕರಿಗೆ, ಅದನ್ನು ಏ. 6ರಿಂದ ಹಿಂದಿರುಗಿಸಲಾಗುವುದು ಎಂದು ಈ ವಂಚನೆ ಪ್ರಕರಣದ ತನಿಖೆಯ ವಿಶೇಷಾಧಿಕಾರಿ (ಸಕ್ಷಮ ಪ್ರಾಧಿಕಾರಿ) ತಿಳಿಸಿದ್ದಾರೆ.

‘ಸಾಲಗಾರರು ಸಾಲದ ಬಾಕಿ, ಇಲ್ಲಿಯವರೆಗಿನ ಭದ್ರತಾ ಶುಲ್ಕವನ್ನು ಏ. 5ರಂದು ಸಂಜೆ 5 ಗಂಟೆಯ ಒಳಗೆ ಪಾವತಿಸಬೇಕು. ಪಾವತಿಸಲು ಬಾಕಿ ಇರುವ ಮೊತ್ತವನ್ನು ವೆಬ್‌ಸೈಟ್‌ನಲ್ಲಿ imaclaims.karnataka.gov.in ಗೆ ಹೋಗಿ ‘claim submission process’ ಕ್ಲಿಕ್ ಮಾಡಿ ಅದರಲ್ಲಿ ‘IMA Gold Loan Details’ ಆಯ್ಕೆ ಮಾಡಿಕೊಳ್ಳಬೇಕು’ ಎಂದೂ ಅವರು ತಿಳಿಸಿದ್ದಾರೆ.

‘ಗ್ರಾಹಕರು ನೆಫ್ಟ್ ಅಥವಾ ಆರ್‌ಟಿಜಿಎಸ್ ಮೂಲಕ ಬಾಕಿ ಮೊತ್ತವನ್ನು ಸಕ್ಷಮ ಪ್ರಾಧಿಕಾರದ ಬ್ಯಾಂಕ್ ಖಾತೆಗೆ ಜಮೆ ಮಾಡಬೇಕು. ಬಳಿಕ ಹಣ ಪಾವತಿಸಿದ ಯುಟಿಆರ್ ಸಂಖ್ಯೆಯನ್ನು ವೆಬ್ ಲಿಂಕ್‌ನಲ್ಲಿ ನಮೂದಿಸಬೇಕು. ಅಡ ಇಟ್ಟ ಚಿನ್ನ ಹಿಂಪಡೆಯಲು ನಿಗದಿಪಡಿಸಿದ ದಿನ ಮತ್ತು ಸಮಯದ ಬಗ್ಗೆ ಗ್ರಾಹಕರ ಮೊಬೈಲ್‌ಗೆ ಸಂದೇಶ ಬರಲಿದೆ. ಹೆಚ್ಚಿನ ಮಾಹಿತಿಗೆ 080–29565353, 29566556, 29604556 ಸಂಖ್ಯೆಗೆ ಕರೆ ಮಾಡಬಹುದು’ ಎಂದೂ ವಿವರಿಸಿದ್ದಾರೆ.

**ಮುಖ್ಯಾಂಶಗಳು**
- ತನಿಖೆಯ ವಿಶೇಷಾಧಿಕಾರಿ ಮಾಹಿತಿ
- ಗ್ರಾಹಕರ ಮೊಬೈಲ್ ಸಂಖ್ಯೆಗೆ ಸಂದೇಶ

‘ಗ್ರಾಹಕರು ಹೆಸರು, ಸಿಎಂಎಸ್ ನಂಬರ್, ಕಸ್ಟಮರ್ ಐಡಿ ಮತ್ತು ಯುಟಿಆರ್ ನಂಬರ್‌ನ್ನು 7975568880 ಮೊಬೈಲ್ ಸಂಖ್ಯೆಗೆ ವಾಟ್ಸ್ ಆ್ಯಪ್ ಮಾಡಬೇಕು. ಆಭರಣಗಳನ್ನು ವಿಶ್ವೇಶ್ವರಯ್ಯ ಗೋಪುರದ (ಪೋಡಿಯಂ ಬ್ಲಾಕ್) ಮೂರನೇ ಮಹಡಿಯಲ್ಲಿರುವ ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರದ ಕಚೇರಿಯಲ್ಲಿ ಹಿಂದಿರುಗಿಸಲಾಗುವುದು. ಮಾಹಿತಿಗೆ ಸಹಾಯವಾಣಿ (080–468859590) ಸಂಪರ್ಕಿಸಬಹುದು’ ಎಂದೂ ಅವರು ತಿಳಿಸಿದ್ದಾರೆ.

## ದೇಶದಾದ್ಯಂತ ಮಾರುಕಟ್ಟೆ ಧಾರಣೆ

| | |
|---|---|
| **ಏಲಕ್ಕಿ ಧಾರಣೆ** | |
| **ಸಕಲೇಶಪುರ** | |
| ಕೂಳೆ | 430-450 |
| ನಡುಗೋಲು | 500-550 |
| ರಾಶಿ | 600-650 |
| ರಾಶಿ ಉತ್ತಮ | 650-700 |
| ಜರಡಿ | 750-800 |
| ಹೆರಕಿದ್ದು | 1100-1150 |
| ಹಸಿರು ಸಾಧಾರಣ | 600-700 |
| ಹಸಿರು ಉತ್ತಮ | 900-950 |
| ಹಸಿರು ಅತಿ ಉತ್ತಮ | 1200-1250 |
| ಕಾಳು ಮೆಣಸು | 500 |
| **ಅಡಿಕೆ** | |
| **ಬಂಟ್ವಾಳ** | |
| ಕೋಕ | 12500-25000 |
| ಹೊಸತು | 27500-45000 |
| ಹಳತು | 46000-53000 |
| **ಪುತ್ತೂರು** | |
| ಕೋಕ | 11000-26000 |
| ಹೊಸತು | 27500-45000 |
| **ಶಿರಸಿ** | |
| ಬೆಟ್ಟೆ | 37699-43699 |
| ಬಿಳಿಗೋಟು | 21900-32326 |
| ಚಾಲಿ | 36059-40399 |
| ರಾಶಿ | 44419-47909 |
| **ಯಲ್ಲಾಪುರ** | |
| ಬಿಳಿಗೋಟು | 26840-32200 |
| ಚಾಲಿ | 36140-40570 |
| ಕೋಕ | 18899-30899 |
| ಕೆಂಪುಗೋಟು | 32775-36109 |
| ರಾಶಿ | 46809-50699 |
| ತಟ್ಟಿಬೆಟ್ಟೆ | 38520-44949 |
| **ಶಿವಮೊಗ್ಗ** | |
| ಗೊರಬಲು | 16000-25000 |
| ಸರಕು | 67500-67500 |
| **ರಬ್ಬರ್ ಧಾರಣೆ** | |
| **ಎನ್.ಆರ್.ಪುರ** | |
| ಆರ್‌ಎಸ್‌ಎಸ್4 | 171.50 |
| ಆರ್‌ಎಸ್‌ಎಸ್5 | 165.50 |
| ಗುಡ್ ಲಾಟ್ | 161.50 |
| **ರಾಮನಗರ ರೇಷ್ಮೆಗೂಡು** | |
| ಮಿಶ್ರತಳಿ | 256-781 |
| ದ್ವಿತಳಿ | 166-839 |

**ಕಾಫಿ** (50 ಕೆ.ಜಿಗೆ ₹ ಗಳಲ್ಲಿ)

| | ಮೂಡಿಗೆರೆ | ಹಾಸನ | | |
|---|---|---|---|---|
| | ಮುದ್ರೆಮನೆ | ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
| ಎಪಿ | 15750 | 15600 | 15600 | 221.85 ಸೆಂಟ್ಸ್ |
| ಎಸಿ | 8150 | 7900 | 8300 | |
| ಆರ್‌ಪಿ | 9000 | 8900 | 9050 | ಲಂಡನ್ |
| ಆರ್‌ಸಿ | 4280 | 3950 | 4025 | 2152 ಡಾಲರ್ಸ್ |

## ಮುಂಬೈ ಧಾರಣೆ

**ಶೇಂಗಾ**
31-3-2022

| | |
|---|---|
| ಜಾವಾ 70/80(ಹೊಸ) | 10650-10700 |
| ಜಾವಾ 80/90(ಹೊಸ) | 10350-10400 |
| ದಪ್ಪ ಮಧ್ಯಪ್ರದೇಶ(ಹೊಸ) | 10600-10650 |
| ದಪ್ಪ ಗುಜರಾತ್(ಹೊಸ) | 9600-9650 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1610 (1615) |
| ಒಂದು ವಾರದ ಡೆಲಿವರಿ | 1605 (1610) |
| ಸೋಯಾ ಕಚ್ಚಾ | 1425 (1437) |
| ಪಾಮ್ ವಾರದ ಡೆಲಿವರಿ | 1433 (1438) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | --- (---) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**
ಅಪರಂಜಿ ಚಿನ್ನ 10ಗ್ರಾಂ
51,400 (51,350)
ಬೆಳ್ಳಿ ಕೆ.ಜಿ
67,200 (67,050)
ಆವರಣದಲ್ಲಿ ಹಿಂದಿನ ದಿನದ ಧಾರಣೆ

## ಹೂಡಿಕೆದಾರರ ಸಂಪತ್ತು ₹ 59.75 ಲಕ್ಷ ಕೋಟಿ ವೃದ್ಧಿ

ನವದೆಹಲಿ (ಪಿಟಿಐ): ಷೇರುಪೇಟೆಯಲ್ಲಿ ನೋಂದಾಯಿತ ಹೂಡಿಕೆದಾರರ ಸಂಪತ್ತು ಮೌಲ್ಯವು 2021–22ನೇ ಹಣಕಾಸು ವರ್ಷದಲ್ಲಿ ₹ 59.75 ಲಕ್ಷ ಕೋಟಿಯಷ್ಟು ಹೆಚ್ಚಾಗಿದೆ.

ಸೆನ್ಸೆಕ್ಸ್ ಶೇಕಡ 18ರಷ್ಟಕ್ಕಿಂತ ಹೆಚ್ಚು ಏರಿಕೆ ಕಂಡಿದ್ದರಿಂದ ಹೂಡಿಕೆದಾರರ ಸಂಪತ್ತು ಮೌಲ್ಯದಲ್ಲಿ ಈ ಪ್ರಮಾಣದ ಏರಿಕೆ ಕಂಡುಬಂದಿದೆ. ಮಾರ್ಚ್ 31ರ ಅಂತ್ಯಕ್ಕೆ ಷೇರುಪೇಟೆಯ ಒಟ್ಟಾರೆ ಬಂಡವಾಳ ಮೌಲ್ಯ ₹ 264.06 ಲಕ್ಷ ಕೋಟಿಗಳಿಗೆ ತಲುಪಿದೆ.

# ‘ಬಂಗಾರ’ಕ್ಕೆ 50



ರಾಜಕುಮಾರ್

‘ಬಂಗಾರದ ಮನುಷ್ಯ’ ಚಿತ್ರಕ್ಕೀಗ ಐವತ್ತು ತುಂಬಿದ ಸಂಭ್ರಮ. ಕನ್ನಡ ಸಿನಿಮಾ ಉದ್ಯಾನದ ಚಿನ್ನದ ಮಲ್ಲಿಗೆಯ ಹೊಳಪು ಮತ್ತು ಪರಿಮಳ ಈಗಲೂ ತಾಜಾ.

ರಘುನಾಥ ಚ.ಹ.

ಐವತ್ತು ವರ್ಷಗಳ ಹಿಂದೆ, 1972ರ ಮಾರ್ಚ್ 31ರಂದು ತೆರೆಕಂಡ ‘ಬಂಗಾರದ ಮನುಷ್ಯ’ ಸಿನಿಮಾದ ನೆನಪುಗಳನ್ನು ಮೆಲುಕುಹಾಕುವುದೂ ಉತ್ಕರ್ಷದ ದಿನಗಳ ಬಂಗಾರದ ಗಣಿಯ ನೆನಪುಗಳನ್ನು ಹೆಕ್ಕುವುದೂ ಭಿನ್ನವೇನಲ್ಲ. ‘ಬಂಗಾರದ ಮನುಷ್ಯ’ ಹಲವು ಕಾರಣಗಳಿಂದ ಅಪರಂಜಿ ಚಿನ್ನ.

‘ಬಂಗಾರದ ಮನುಷ್ಯ’ ಸಿನಿಮಾ ರೂಪುಗೊಂಡಿದ್ದೇ ಒಂದು ಸ್ವಾರಸ್ಯಕರ ಕಥೆ. ಟಿ.ಕೆ. ರಾಮರಾವ್‌ರ ಕಾದಂಬರಿ ಹಸ್ತಪ್ರತಿ ರೂಪದಲ್ಲಿದ್ದಾಗಲೇ ‘ಪ್ರಜಾಮತ’ದ ಸಂಪಾದಕ ದ್ವಾರಕಾನಾಥ್‌ರ ಮೂಲಕ ನಿರ್ದೇಶಕ ಸಿದ್ದಲಿಂಗಯ್ಯನವರಿಗೆ ತಲುಪಿತ್ತು. ಕಾದಂಬರಿ ಮೆಚ್ಚಿಕೊಂಡ ಅವರು, ಹಲವು ನಿರ್ಮಾಪಕರನ್ನು ಸಂಪರ್ಕಿಸಿದರೂ ಯಾರೊಬ್ಬರೂ ಸಿನಿಮಾ ನಿರ್ಮಾಣಕ್ಕೆ ಮುಂದಾಗಲಿಲ್ಲ. ಹಾಗೆ ಕೈಚೆಲ್ಲಿದವರಲ್ಲಿ ಕೆ.ಸಿ.ಎನ್. ಗೌಡರೂ ಒಬ್ಬರು. ಮುಂದೆ ಕಾದಂಬರಿ ಪುಸ್ತಕರೂಪದಲ್ಲಿ ಬಂತು. ಒಂದು ದಿನ, ‘ಇದು ಚೆನ್ನಾಗಿದೆ ನೋಡಿ’ ಎಂದು ಕೆ.ಸಿ.ಎನ್. ಗೌಡರು ಪುಸ್ತಕ ಹಿಡಿದುಕೊಂಡು ಬಂದರು. ‘ಇದರ ಬಗ್ಗೆ ಈ ಮೊದಲೇ ನಿಮ್ಮ ಬಳಿ ಹೇಳಿದ್ದೆ. ನೀವು ಒಪ್ಪಿರಲಿಲ್ಲ’ ಎಂದು ಸಿದ್ಧಲಿಂಗಯ್ಯ ಗೊಣಗಿದರು. ಗೌಡರು ಪ್ರತಿಕ್ರಿಯಿಸಿದ್ದು: ‘ಈಗ ಸಿನಿಮಾ ಮಾಡೋಣ.’

ಕೆ.ಸಿ.ಎನ್. ಗೌಡರೊಂದಿಗೆ ಗೋಪಾಲ್ ಹಾಗೂ ಆರ್. ಲಕ್ಷ್ಮಣ್ ‘ಬಂಗಾರದ ಮನುಷ್ಯ’ ಚಿತ್ರ ನಿರ್ಮಾಣದಲ್ಲಿ ಕೈಜೋಡಿಸಿದ್ದರು. ಆ ಚಿತ್ರಕ್ಕೆ ಆ ಕಾಲಕ್ಕೆ ಖರ್ಚಾದ ಮೊತ್ತ ಹನ್ನೆರಡೂವರೆ ಲಕ್ಷ (ಹತ್ತೊಂಬತ್ತು ಪ್ರಿಂಟ್) ರೂಪಾಯಿ. ಸಿನಿಮಾ ತೆರೆಕಂಡಾಗ ಒಳ್ಳೆಯ ಆರಂಭವೇನೂ ದೊರೆಯಲಿಲ್ಲ. ಎರಡು ದಿನ ಹೌಸ್‌ಫುಲ್ ಬೋರ್ಡ್ ಬೀಳಲಿಲ್ಲ. ಸಿನಿಮಾ ನೋಡಿದ ನಿರ್ದೇಶಕ ಪುಟ್ಟಣ್ಣ ಕಣಗಾಲ್, ‘ಗೌಡರನ್ನು ದೇವರೇ ಕಾಪಾಡಬೇಕು!’ ಎಂದು ಉದ್ಗರಿಸಿದ್ದರು. ‘ಸಿದ್ಧಲಿಂಗಯ್ಯ ಗೌಡರನ್ನು ಮುಳುಗಿಸಿದ’ ಎಂದು ಗಾಂಧಿನಗರವೂ ಅಡಿಗೆರೆ ಎಳೆಯಿತು. ಪೇಚುಮೋರೆ ಹಾಕಿಕೊಂಡ ಗೌಡರಿಗೆ ಸಿದ್ಧಲಿಂಗಯ್ಯನವರು ಹೇಳಿದ್ದು: ‘ಸ್ವಾಮಿ, ನೀವು ದುಡ್ಡು ಗೋಣಿಚೀಲದಲ್ಲಿ ಸುರಿಯಲಿಲ್ಲ. ನೋಟು ನೋಟನ್ನೂ ಎಣಿಸಿಕೊಟ್ಟಿದ್ದೀರಿ. ಆ ತಾಳ್ಮೆ ಈಗಲೂ ಇರಲಿ.’ ಆ ಮಾತನ್ನು ನಿಜಗೊಳಿಸುವಂತೆ ಮೂರನೇ ದಿನ ಹೌಸ್‌ಫುಲ್ ಬೋರ್ಡ್ ಬೆಳಕುಕಂಡಿತು!

‘ಬಂಗಾರದ ಮನುಷ್ಯ’ ಬಿಡುಗಡೆಯ ದಿನ ಪತ್ರಕರ್ತರಿಗೆ ಸಿನಿಮಾ ತೋರಿಸುವುದಕ್ಕೂ ಹಿಂಜರಿದಿದ್ದ ನಿರ್ಮಾಪಕರು, ಮೂರು ದಿನಗಳ ಕಲೆಕ್ಷನ್ ನೋಡಿದ ನಂತರವೇ ಮಾಧ್ಯಮದವರಿಗೆ ಸಿನಿಮಾ ತೋರಿಸಿದರು. ನಂತರದ್ದು 104 ವಾರಗಳ ದಾಖಲೆ ಪ್ರದರ್ಶನ.

ವಿದ್ಯಾವಂತ ತರುಣನೊಬ್ಬ ಬಂಜರು ಭೂಮಿಗೆ ಬೆವರು ಬಸಿದು ಕೃಷಿ ಮಾಡುವ ಕಥೆ ‘ಬಂಗಾರದ ಮನುಷ್ಯ’ ಚಿತ್ರದ್ದು. ಕಥಾನಾಯಕನ ಕೃಷಿ ಸಾಧನೆಯ ಜೊತೆಗೆ ಪ್ರೇಮದ ಕಥೆ, ತ್ಯಾಗದ ಉದಾತ್ತತೆಯೂ ಚಿತ್ರದಲ್ಲಿದೆ. ‘ಆಗದು ಎಂದು ಕೈಲಾಗದು ಎಂದು ಕೈ ಕಟ್ಟಿ ಕುಳಿತರೆ / ಸಾಗದು ಕೆಲಸವು ಮುಂದೆ...’, ‘ದುಡಿಮೆಯ ನಂಬಿ ಬದುಕು / ಅದರಲೆ ದೇವರ ಹುಡುಕು...’ ಎನ್ನುವ ಸಿನಿಮಾದ ಸ್ಫೂರ್ತಿಗೀತದಿಂದ ಪ್ರೇರಿತರಾಗಿ, ಅನೇಕ ಕೃಷಿ ಪದವೀಧರರು ನೇಗಿಲು ಹಿಡಿದಿದ್ದರು. ತಮ್ಮ ಎಸ್ಟೇಟ್‌ಗಳಿಗೆ ‘ಬಂಗಾರದ ಮನುಷ್ಯ ಎಸ್ಟೇಟ್’ ಎಂದು ನಾಮಕರಣ ಮಾಡಿದವರೂ ಇದ್ದರು.

‘ಬಂಗಾರದ ಮನುಷ್ಯ’ ಸಿನಿಮಾದ ಅದ್ಭುತ ಯಶಸ್ಸಿಗೆ ಕಾರಣವೇನು? ‘ಬಂಗಾರದ ಮನುಷ್ಯ’ ಚಿತ್ರದ ನಾಯಕ ರಾಜೀವನ ಪಾತ್ರ ಅನೇಕ ಸಹೃದಯರಿಗೆ ತಮ್ಮದೇ ಪಾತ್ರ ಅನ್ನಿಸಿದ್ದು ಸಿನಿಮಾದ ಯಶಸ್ಸಿಗೆ ಪ್ರಮುಖ ಕಾರಣ. ಮತ್ತೊಂದು ಕಾರಣ, ಚಿತ್ರತಂಡದ ಬದ್ಧತೆ. ಸಿನಿಮಾದ ರಜತ ಮಹೋತ್ಸವ ಸಂದರ್ಭದಲ್ಲಿ ಗೌಡರು – ‘ಒಂದು ಗುಲಗಂಜಿಯಷ್ಟು ಬಂಗಾರವನ್ನು ಪಡೆಯಲು ಗಣಿಯಲ್ಲಿ ಎಷ್ಟು ಪರಿಶ್ರಮ ಪಡುತ್ತಾರೆಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಅಷ್ಟೇ ಪರಿಶ್ರಮ ಬಂಗಾರದ ಮನುಷ್ಯ ಚಿತ್ರದ ಯಶಸ್ಸಿನ ಹಿಂದೆಯೂ ಇದೆ’ ಎಂದಿದ್ದರು. ಅವರ ಮಾತು ನಿಜ. ಸಿನಿಮಾದ ಆತ್ಮದಂತಿರುವ ಸಂಗೀತವನ್ನೇ ನೋಡಿ: ಸಂಗೀತ ನಿರ್ದೇಶಕ ಜಿ.ಕೆ. ವೆಂಕಟೇಶ್ ಕರ್ನಾಟಕದಾದ್ಯಂತ ಸಂಚರಿಸಿ ಸಂಗ್ರಹಿಸಿದ್ದ ಜನಪದ ಗೀತೆಗಳ ಪ್ರೇರಣೆಯನ್ನು ರಾಗ ಸಂಯೋಜನೆಗೆ ಬಳಸಿಕೊಂಡಿದ್ದರು. ಕಂಪೋಸಿಂಗ್ ಸಂದರ್ಭದಲ್ಲಿ ನಿರ್ದೇಶಕ, ಗೀತರಚನೆಕಾರರೊಂದಿಗೆ – ಚಿತ್ರದ ಹಂಚಿಕೆದಾರರು, ನಿರ್ಮಾಪಕರು, ನಾಯಕ ರಾಜ್ ಕುಮಾರ್, ನೃತ್ಯ ನಿರ್ದೇಶಕ ಉಡುಪಿ ಜಯರಾಂ ಹಾಗೂ ಛಾಯಾಗ್ರಾಹಕರೂ ಇರುತ್ತಿದ್ದರಂತೆ. ಹಾಡುಗಳ ಚಿತ್ರೀಕರಣಕ್ಕೆ ನಿರ್ದೇಶಕರು ಕ್ರೇನ್ ಬಯಸಿದಾಗ, ಗೌಡರು ಹೊಸ ಕ್ರೇನನ್ನೇ ಖರೀದಿಸಿದರಂತೆ.



ಸಿದ್ದಲಿಂಗಯ್ಯ

‘ಬಂಗಾರದ ಮನುಷ್ಯ’ ತೆರೆಕಂಡು ಐವತ್ತು ವರ್ಷಗಳಾದವು. ಈ ಐದು ದಶಕಗಳಲ್ಲಿ ಕನ್ನಡದ ಬೆಳ್ಳಿತೊರೆಯಲ್ಲಿ ಸಾಕಷ್ಟು ನೀರು ಹರಿದಿದೆ. ಆದರೆ, ಮತ್ತೊಬ್ಬ ರಾಜೀವನನ್ನು ಸೃಷ್ಟಿಸುವುದು ಚಿತ್ರರಂಗಕ್ಕೆ ಸಾಧ್ಯವಾಗಿಲ್ಲ. ‘ಬಂಗಾರದ ಮನುಷ್ಯ’ ಯುಗದ ಸಿನಿಮಾ: ಕಥನ, ಕನ್ನಡತನ, ನಿರೂಪಣೆ, ಆಶಯ, ಯಶಸ್ಸು, ಸಾಮಾಜಿಕ ಪರಿಣಾಮ – ಎಲ್ಲ ದೃಷ್ಟಿಗಳಿಂದಲೂ ‘ಬಂಗಾರದ ಮನುಷ್ಯ’ನಿಗೆ ಪರ್ಯಾಯಗಳಿಲ್ಲ. ❖



ಉಪೇಂದ್ರ

ಕೆಲಕಾಲ ನಿರ್ದೇಶನದಿಂದ ಬ್ರೇಕ್ ತೆಗೆದುಕೊಂಡಿದ್ದ ನಟ ಉಪೇಂದ್ರ ಮತ್ತೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಅವರ ನಟನೆಯ ‘ಹೋಮ್ ಮಿನಿಸ್ಟರ್’ ಇಂದು ಬಿಡುಗಡೆಯಾಗುತ್ತಿದೆ. ಆ ನೆಪದಲ್ಲಿ ರಿಯಲ್ ಸ್ಟಾರ್ ಜೊತೆಗೆ ಸಿನಿ ಕ್ಷೇತ್ರ, ಪ್ರಜಾಕೀಯದ ಬಗ್ಗೆ ನಡೆಸಿದ ಸಂದರ್ಶನದ ಝಲಕ್ ಇಲ್ಲಿದೆ...

# ಪ್ರಯೋಗದತ್ತ ರಿಯಲ್ ಸ್ಟಾರ್

ಶರತ್ ಹೆಗ್ಡೆ

- **ಯಾರಿವರು ‘ಹೋಮ್ ಮಿನಿಸ್ಟರ್’?**

ಈ ‘ಹೋಮ್ ಮಿನಿಸ್ಟರ್’ ಬಗ್ಗೆ ಎಲ್ಲರಿಗೂ ಕುತೂಹಲ ಇದೆ. ಅವರು ಯಾರು ಎನ್ನುವುದನ್ನು ಚಿತ್ರದಲ್ಲೇ ನೋಡಬೇಕು. ಟ್ರೇಲರ್ ಈಗಾಗಲೇ ಕುತೂಹಲ ಹುಟ್ಟಿಸಿದೆ. ಇದೊಂದು ಕುಟುಂಬ ಪ್ರಧಾನ ಚಿತ್ರ. ಚಿತ್ರವು ಕೋವಿಡ್ ಸಂದರ್ಭದ ಸನ್ನಿವೇಶಗಳನ್ನು ಮುಂದಿಟ್ಟುಕೊಂಡು, ವರ್ಕ್ ಫ್ರಂ ಹೋಮ್ ಇತ್ಯಾದಿ ವಿಷಯಗಳ ಬಗ್ಗೆ ತಮಾಷೆಯಾಗಿ ಕಥೆ ಹೇಳುತ್ತಾ ಹೋಗಿದೆ. ಒಂದು ಫ್ಲ್ಯಾಟ್‌ನಲ್ಲಿ ನಡೆಯುವ ಕಥೆಯಿದು. ಇಡೀ ಚಿತ್ರ ಹೊಸ ಮಜಾ ಕೊಡುತ್ತದೆ.

- **ಕಥೆಯ ಕೊನೆಯಲ್ಲಿ ಏನೋ ಹೊಸ ವಿಷಯ ಹೇಳಲು ಹೊರಟಂತಿದೆ...**

ಹೌದು, ಸಣ್ಣ ತಿರುವು ಕೊಟ್ಟಿದ್ದೇವೆ. ಹೊಡೆದಾಟ, ಗುಂಡು ಹಾರಾಟ ಇವೆಲ್ಲಾ ಇತಿಮಿತಿಯಲ್ಲಷ್ಟೇ ಇವೆ. ಮನರಂಜನೆಯಲ್ಲಿ ಎಲ್ಲವೂ ಇರಬೇಕಲ್ವಾ? ಹಾಗಾಗಿ ಅದನ್ನು ಅಳವಡಿಸಿದ್ದೇವೆ. ಟ್ರೇಲರ್ ನೋಡಿದ ಅನೇಕರು ಈ ಅಂಶದ ಬಗ್ಗೆ ಕೇಳಿದ್ದಾರೆ. ಅವೆಲ್ಲದ್ದಕ್ಕೂ ಚಿತ್ರದಲ್ಲಿ ಉತ್ತರವಿದೆ.

- **‘ಕಬ್ಜ’ ಎಲ್ಲಿಯವರೆಗೆ ಬಂದಿತು?**

‘ಕಬ್ಜ’ ಶೂಟಿಂಗ್ ಮುಂದಿನ ತಿಂಗಳು ಮುಗಿಯಲಿದೆ. ಬಳಿಕ ಶೂಟಿಂಗ್ ನಂತರದ ಕೆಲಸಗಳು ನಡೆಯಲಿವೆ. ಸೆಪ್ಟೆಂಬರ್ ವೇಳೆಗೆ ‘ಕಬ್ಜ’ವನ್ನು ತೆರೆಯಲ್ಲಿ ಕಾಣಬಹುದು.

- **ನಿರ್ದೇಶಕರಾಗಿ ಕೆಲಕಾಲದ ಅಂತರದ ಬಳಿಕ ಬರುತ್ತಿದ್ದೀರಿ. ಹೊಸ ಅಪ್‌ಡೇಟ್‌ಗಳು ಏನಿವೆ?**

ತುಂಬಾ ಬದಲಾವಣೆಗಳು ಆಗಿವೆ. ಕಥೆ, ವಿಷಯ, ಚಿತ್ರಗಳ ಸಂಖ್ಯೆ ಎಲ್ಲವೂ ಹೆಚ್ಚಿವೆ. ಕೋವಿಡ್ ಕೂಡ ಕೆಲ ಕಾಲ ಬ್ರೇಕ್ ನೀಡಿತು. ನಾನೂ ಪ್ರಜಾಕೀಯ, ಕಿಟ್ ವಿತರಣೆ ಇತ್ಯಾದಿಗಳಲ್ಲಿ ಬ್ಯುಸಿ ಆಗಿದ್ದೆ. ಹಾಗಾಗಿ ಈ ಅಂತರದಲ್ಲಿ ಹೊಸ ಸ್ಕ್ರಿಪ್ಟ್ ಓದುವುದು, ಬರೆಯುವುದು, ಟ್ರೆಂಡ್‌ಗಳನ್ನು ಗಮನಿಸುವುದು ಇತ್ಯಾದಿ ಇದ್ದೇ ಇರುತ್ತಿತ್ತು. ಅವುಗಳು ನನ್ನ ಮುಂದಿನ ಚಿತ್ರದಲ್ಲಿ ಕಾಣಿಸಲಿವೆ.

- **U ಅನ್ನುವ ಲಾಳದ ಶೀರ್ಷಿಕೆ ಕೊಟ್ಟಿದ್ದೀರಲ್ಲಾ? ಹೊಸದೇನು ಹೇಳುತ್ತಿದ್ದೀರಿ?**

ಎಲ್ಲರೂ ವಿಭಿನ್ನವಾದ ಚಿತ್ರ ಮಾಡುತ್ತೇವೆ ಎಂದೇ ಹೇಳುತ್ತಾರೆ. ಆದರೆ, U ಚಿತ್ರ ಏನು ಎಂಬ ಆಲೋಚನೆಯನ್ನು ಜನರೇ ಮಾಡಬೇಕು. ಅವರ ಆಲೋಚನೆಗೊಂದಿಷ್ಟು ಕೆಲಸ ಸಿಗಬೇಕು. ಅವರು ಹೊಸ ಪರಿಕಲ್ಪನೆಯನ್ನು ನಿರೀಕ್ಷಿಬೇಕು. ಆ ನಿಟ್ಟಿನಲ್ಲಿ U ಒಳ್ಳೆಯ ಚಿತ್ರವಾಗಿ ಮೂಡಿಬರಲಿದೆ.

- **ಪ್ರಜಾಕೀಯದ ಕಾರುಬಾರುಗಳು ಏನು?**

ತುಂಬಾ ಚೆನ್ನಾಗಿ ನಡೆದಿದೆ. ಇಲ್ಲಿ ವಿಚಾರಗಳೇ ಪ್ರಚಾರವಾಗಬೇಕು. ಹಾಗಾಗಿ ದೊಡ್ಡಮಟ್ಟದ ಪ್ರಚಾರ ಮಾಡುತ್ತಿಲ್ಲ. ಆದರೆ, ಒಂದು ಬದಲಾವಣೆಯತ್ತ ಹೆಜ್ಜೆ ಇಟ್ಟಿರುವುದಂತೂ ನಿಜ. ಮುಂದಿನ ಚುನಾವಣೆಯಲ್ಲಿ ಪ್ರಜಾಕೀಯ ಖಂಡಿತವಾಗಿಯೂ ತನ್ನ ಇರುವಿಕೆ ತೋರಿಸಲಿದೆ. ಏನಿದ್ದರೂ ಪ್ರಜೆಗಳೇ ಮುಂದೆ ಬರಬೇಕು, ಮುನ್ನಡೆಸಬೇಕು. ❖

# ಯುಗಾದಿಗೆ ಆರು ಚಿತ್ರಗಳು



ಡಾರ್ಲಿಂಗ್ ಕೃಷ್ಣ ಹಾಗೂ ಎಸ್ತರ್ ನರೋನ್ಹ

ಯುಗಾದಿಹಬ್ಬದ ಹೊಸ್ತಿಲಿನಲ್ಲಿ ಚಂದನವನದ ತೆರೆಗಳಲ್ಲೂ ಸಿನಿ ಹಬ್ಬ. ಪ್ಯಾನ್ ಇಂಡಿಯಾ ಸಿನಿಮಾಗಳಾದ ‘ಜೇಮ್ಸ್’ ಹಾಗೂ ‘ಆರ್. ಆರ್.ಆರ್’ ಬಿಡುಗಡೆ ಕಾರಣದಿಂದ ಕಳೆದ ಎರಡು ವಾರದಿಂದ ಕನ್ನಡದ ಸಿನಿಮಾಗಳು ಬಿಡುಗಡೆಯಾಗಿರಲಿಲ್ಲ. ಯಶ್ ನಟನೆಯ ಪ್ಯಾನ್ ಇಂಡಿಯಾ ಸಿನಿಮಾ ಕೆ.ಜಿ.ಎಫ್.–2 ಏ.14ಕ್ಕೆ ತೆರೆಕಾಣುತ್ತಿದ್ದು, ಈಗ ದೊರಕಿರುವ ಸಣ್ಣ ಅಂತರದಲ್ಲಿ ಇಂದು ಆರು ಸಿನಿಮಾಗಳು ಬಿಡುಗಡೆಯಾಗುತ್ತಿವೆ.

‘ಹೋಮ್ ಮಿನಿಸ್ಟರ್’ ಆಗಿ ಉಪೇಂದ್ರ ಏ.1ರಂದು ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಈ ಚಿತ್ರದಲ್ಲಿ ಹೊಸ ಅವತಾರದಲ್ಲೂ ಉಪೇಂದ್ರ ಕಾಣಿಸಿಕೊಳ್ಳಲಿದ್ದಾರೆ. ಸುಜಯ್ ಕೆ. ಶ್ರೀಹರಿ ನಿರ್ದೇಶಿಸಿರುವ ಈ ಚಿತ್ರದ ನಾಯಕಿಯಾಗಿ ವೇದಿಕ ನಟಿಸಿದ್ದಾರೆ.

ವಿಶ್ವದ ಹಲವು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪ್ರದರ್ಶನಗೊಂಡು ಪ್ರಶಸ್ತಿ ಬಾಚಿದ, ನಟ ದಿವಂಗತ ಸಂಚಾರಿ ವಿಜಯ್ ನಟನೆಯ ‘ತಲೆದಂಡ’, ಡಾರ್ಲಿಂಗ್ ಕೃಷ್ಣ ನಟನೆಯ ‘ಲೋಕಲ್ ಟ್ರೈನ್’, ಗುರುಪ್ರಸಾದ್ ಅಭಿನಯದ ‘ಬಾಡಿಗಾಡ್’, ಯಶ್ ಶೆಟ್ಟಿ ನಟನೆಯ ‘ಇನ್‌ಸ್ಟಂಟ್ ಕರ್ಮ’, ಬಂಜಾರ ಚಿತ್ರ ‘ಸೇವಾ ದಾಸ್’ ಕೂಡಾ ಇಂದು ರಿಲೀಸ್ ಆಗುತ್ತಿವೆ.

**‘ತ್ರಿಕೋನ’ ಮುಂದಕ್ಕೆ:** ಚಂದ್ರಕಾಂತ್ ನಿರ್ದೇಶನದ ‘ತ್ರಿಕೋನ’ ಚಿತ್ರ ಏ.1ರಂದು ತೆರೆಕಾಣಬೇಕಿತ್ತು. ಆದರೆ ಚಿತ್ರಮಂದಿರಗಳ ಅಭಾವದ ಕಾರಣದಿಂದ ಕೊನೆಯ ಕ್ಷಣದಲ್ಲಿ ಚಿತ್ರ ಬಿಡುಗಡೆಯನ್ನು ಚಿತ್ರತಂಡವು ಮುಂದೂಡಿದ್ದು, ಏ.8ರಂದು ಚಿತ್ರವು ತೆರೆಕಾಣಲಿದೆ. ❖

# ಮಹಿಳಾ ಕ್ರಿಕೆಟ್ ತಂಡದ ಕೋಚ್ ಪೊವಾರ್ ಅವಧಿ ಮುಕ್ತಾಯ

ನವದೆಹಲಿ (ಪಿಟಿಐ): ಭಾರತ ಮಹಿಳಾ ಕ್ರಿಕೆಟ್ ತಂಡದ ಮುಖ್ಯ ಕೋಚ್ ರಮೇಶ್ ಪೊವಾರ್ ಅವರ ಗುತ್ತಿಗೆ ಅವಧಿ ಪೂರ್ಣಗೊಂಡಿದೆ. ಕೋಚ್ ಆಗಿ ಮುಂದುವರಿಯಬೇಕಾದರೆ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ನಿಯಮಗಳ ಪ್ರಕಾರ ಅವರು ಮತ್ತೆ ಅರ್ಜಿ ಸಲ್ಲಿಸಬೇಕಾಗಿದೆ.

ವಿಶ್ವಕಪ್ ಟೂರ್ನಿಯಲ್ಲಿ ಮಿಥಾಲಿ ರಾಜ್ ಬಳಗ ನಿರಾಶಾದಾಯಕ ಪ್ರದರ್ಶನ ನೀಡಿದ್ದಾರೆ. ಹೀಗಾಗಿ ತಂಡದಲ್ಲಿ ಬದಲಾವಣೆಗಳು ಆಗುವ ಸಾಧ್ಯತೆಗಳು ಇವೆ. ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯ (ಎನ್‌ಸಿಎ) ಮುಖ್ಯಸ್ಥ ವಿವಿಎಸ್ ಲಕ್ಷ್ಮಣ್ ತಂಡಕ್ಕೆ ಚೇತರಿಕೆ ತುಂಬಲ ಶ್ರಮಿಸುತ್ತಿದ್ದು ಹೊಸ ಆಟಗಾರ್ತಿಯರನ್ನು ಮುನ್ನೆಲೆಗೆ ತರುವ ಚಿಂತನೆಯಲ್ಲಿದ್ದಾರೆ. 2020ರ ಟ್ವೆಂಟಿ20 ವಿಶ್ವಕಪ್ ಟೂರ್ನಿಯಲ್ಲಿ ತಂಡ ಫೈನಲ್ ಪ್ರವೇಶಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಡಬ್ಲ್ಯು ವಿ ರಾಮನ್ ಅವರ ಬದಲಿಗೆ ಪೊವಾರ್ ಅವರನ್ನು ನೇಮಕ ಮಾಡಲಾಗಿತ್ತು. ಆದರೆ ಅವರ ಅವಧಿಯಲ್ಲಿ ನಿರೀಕ್ಷಿತ ಸಾಧನೆ ಕಂಡುಬರಲಿಲ್ಲ.




# ಪ್ರಶಸ್ತಿ ಸುತ್ತಿಗೆ ಇಂಗ್ಲೆಂಡ್

ಕ್ರೈಸ್ಟ್ ಚರ್ಚ್ (ಎಎಫ್‌ಪಿ): ಇಂಗ್ಲೆಂಡ್ ತಂಡ ಮಹಿಳೆಯರ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಪ್ರಶಸ್ತಿ ಹಂತಕ್ಕೆ ಲಗ್ಗೆ ಇರಿಸಿದೆ.


ಡ್ಯಾನಿ ವ್ಯಾಟ್

ಗುರುವಾರ ನಡೆದ ಸೆಮಿಫೈನಲ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾವನ್ನು ಇಂಗ್ಲೆಂಡ್ 137 ರನ್‌ಗಳಿಂದ ಮಣಿಸಿತು.

ಆರಂಭಿಕ ಬ್ಯಾಟರ್ ಡ್ಯಾನಿ ವ್ಯಾಟ್ (129; 125 ಎಸೆತ, 12 ಬೌಂಡರಿ) ಅವರ ಶತಕ ಮತ್ತು ಆರನೇ ಕ್ರಮಾಂಕದ ಸೋಫಿಯಾ ಡಂಕ್ಲಿ (60; 72 ಎ, 4 ಬೌಂ) ಅವರ ಅರ್ಧಶತಕದ ನೆರವಿನಿಂದ ಇಂಗ್ಲೆಂಡ್ 8ಕ್ಕೆ 293 ರನ್ ಗಳಿಸಿತ್ತು.

ಗುರಿ ಬೆನ್ನತ್ತಿದ ದಕ್ಷಿಣ ಆಫ್ರಿಕಾ 38 ಓವರ್‌ಗಳಲ್ಲಿ 156 ರನ್‌ಗಳಿಗೆ ಪತನ ಕಂಡಿತು. ಎಡಗೈ ಸ್ಪಿನ್ನರ್ ಸೋಫಿ ಎಕ್ಲೆಸ್ಟೋನ್ ಅವರ ಪ್ರಬಲ ದಾಳಿ ತಂಡದ ಸುಲಭ ಜಯಕ್ಕೆ ಕಾರಣವಾಯಿತು.

**ವ್ಯಾಟ್‌ಗೆ ಕೈಚೆಲ್ಲಿದ ಕ್ಯಾಚ್‌ಗಳ ಲಾಭ:** ಹ್ಯಾಗ್ಲಿ ಓವಲ್‌ನಲ್ಲಿ ಟಾಸ್ ಗೆದ್ದ ದಕ್ಷಿಣ ಆಫ್ರಿಕಾ ಎದುರಾಳಿ ತಂಡವನ್ನು ಬ್ಯಾಟಿಂಗ್‌ಗೆ ಆಹ್ವಾನಿಸಿತು.

**ಆರಂಭದಲ್ಲಿ ಎರಡು ವಿಕೆಟ್‌ಗಳನ್ನು ಕಳೆದುಕೊಂಡ ತಂಡಕ್ಕೆ ಡ್ಯಾನಿ ವ್ಯಾಟ್ ಬಲ ತುಂಬಿದರು. ದಕ್ಷಿಣ ಆಫ್ರಿಕಾ ಫೀಲ್ಡರ್‌ಗಳು ಐದು ಕ್ಯಾಚ್‌ಗಳನ್ನು ಕೈಚೆಲ್ಲಿದರು. ಇದರ ಲಾಭ ಪಡೆದುಕೊಂಡ ವ್ಯಾಟ್ ಭರ್ಜರಿ ಬ್ಯಾಟಿಂಗ್ ಮಾಡಿದರು.**

ಮತ್ತೊಂದು ತುದಿಯಲ್ಲಿ ಸತತವಾಗಿ ವಿಕೆಟ್‌ಗಳು ಉರುಳುತ್ತಿದ್ದವು. ಹೀಗಾಗಿ 26ನೇ ಓವರ್‌ನಲ್ಲಿ 4ಕ್ಕೆ 126 ರನ್ ಗಳಿಸಿ ಸಂಕಷ್ಟದಲ್ಲಿತ್ತು. ಈ ಸಂದರ್ಭದಲ್ಲಿ ವ್ಯಾಟ್ ಜೊತೆಗೂಡಿದ ಸೋಫಿಯಾ ಡಂಕ್ಲಿ 116 ರನ್‌ಗಳನ್ನು ಸೇರಿಸಿ ತಂಡದ ಮೊತ್ತವನ್ನು ಏರುಗತಿಯಲ್ಲಿ ಸಾಗಿಸಿದರು.

## ಸ್ಕೋರ್ ಕಾರ್ಡ್

**ಇಂಗ್ಲೆಂಡ್ 8ಕ್ಕೆ 293 (50 ಓವರ್‌ಗಳಲ್ಲಿ)**
ಬ್ಯೂಮೌಂಟ್ ಸಿ ಚೆಟ್ಟಿ ಬಿ ಕಾಪ್ 7 (14 ಎ, 4x1), ವ್ಯಾಟ್ ಸಿ ಲೀ ಬಿ ಕ್ಲಾಸ್ 129 (125 ಎ, 4x12), ನೈಟ್ ಎಲ್‌ಬಿಡಬ್ಲ್ಯು ಬಿ ಖಾಕಾ 1 (19 ಎ), ಶೀವರ್ ಸಿ ಕಾಪ್ ಬಿ ಶಬ್ನಿಮ್ 15 (18 ಎ, 4x1), ಆ್ಯಮಿ ಸಿ ಟ್ರಯಾನ್ ಬಿ ಕಾಪ್ 28 (32 ಎ, 4x3), ಸೋಫಿಯಾ ಸಿ ಲೀ ಬಿ ಶಬ್ನಿಮ್ 60 (72 ಎ, 4x4), ಬ್ರಂಟ್ ಬಿ ಕ್ಲಾಸ್ 9 (9 ಎ, 4x1), ಎಕ್ಲೆಸ್ಟೋನ್ ಬಿ ಶಬ್ನಿಮ್ 24 (11 ಎ, 4x5), ಕ್ರಾಸ್ ಔಟಾಗದೆ 0 (0 ಎ)
**ಇತರೆ** (ಬೈ 4, ವೈಡ್ 16) 20
**ವಿಕೆಟ್ ಪತನ:** 1-10 (ಟಾಮಿ ಬ್ಯೂಮೌಂಟ್, 3.2), 2-51 (ಹೀದರ್ ನೈಟ್, 12.4), 3-77 (ನ್ಯಾಟ್ ಶೀವರ್, 17.1), 4-126 (ಆ್ಯಮಿ ಜೋನ್ಸ್, 25.4), 5-242 (ಡ್ಯಾನಿ ವ್ಯಾಟ್, 44.2), 6-261 (ಕ್ಯಾಥರಿನ್ ಬ್ರಂಟ್, 46.5), 7-281 (ಸೋಫಿಯಾ ಡಂಕ್ಲಿ, 49.1), 8-293 (ಸೋಫಿಯಾ ಎಕ್ಲೆಸ್ಟೋನ್, 49.6)
**ಬೌಲಿಂಗ್:** ಶಬ್ನಿಮ್ ಇಸ್ಮಾಯಿಲ್ 10–0–46–3, ಮರಿಜನ್ ಕಾಪ್ 10–0–52–2, ಅಯಬೊಂಗ ಖಾಕ 10–0–66–1, ಮಸಬಟ ಕ್ಲಾಸ್ 10–1–55–2, ಕ್ಲೋ ಟ್ರಯಾನ್ 10–0–70–0
**ದಕ್ಷಿಣ ಆಫ್ರಿಕಾ 156 (38 ಓವರ್)**
ಲಿಜೆಲಿ ಸಿ ಶೀವರ್ ಬಿ ಶ್ರಬ್‌ಸೋಲ್ 2 (15 ಎ), ವೊಲ್ವಾರ್ಟ್ ಸಿ ಮತ್ತು ಬಿ ಶ್ರಬ್‌ಸೋಲ್ 0 (2 ಎ), ಗೂಡಾಲ್ ಬಿ ಡೀನ್ 28 (49 ಎ, 4x4), ಲೂಜ್ ಬಿ ಕ್ರಾಸ್ 21 (24 ಎ, 4x2), ಪ್ರೀಜ್ ಬಿ ಎಕ್ಲೆಸ್ಟೋನ್ 30 (48 ಎ, 4x2), ಮರಿಜಾನ್ ಬಿ ಎಕ್ಲೆಸ್ಟೋನ್ 21 (28 ಎ, 4x2), ಟ್ರಯಾನ್ ಸಿ ಶೀವರ್ ಬಿ ಎಕ್ಲೆಸ್ಟೋನ್ 3 (10 ಎ), ತ್ರಿಷಾ ಸ್ಟಂಪ್ಡ್ ಜೋನ್ಸ್ ಬಿ ಎಕ್ಲೆಸ್ಟೋನ್ 21 (28 ಎ, 4x1), ಶಬ್ನಿಮ್ ಸಿ ಡೀನ್ ಬಿ ಎಕ್ಲೆಸ್ಟೋನ್ 12 (14 ಎ, 4x2), ಕ್ಲಾಸ್ ಸಿ ಬ್ಯೂಮೌಂಟ್ ಬಿ ಎಕ್ಲೆಸ್ಟೋನ್ 3 (10 ಎ), ಅಯಬೊಂಗ ಔಟಾಗದೆ 0 (0 ಎ)0 (0 ಎ)
**ಇತರೆ** (ಲೆಗ್‌ಬೈ 5, ವೈಡ್ 10) 15
**ವಿಕೆಟ್ ಪತನ:** 1-1 (ಲಾರಾ ವೊಲ್ವಾರ್ಟ್, 1.2), 2-8 (ಲಿಜೆಲಿ ಲೀ, 3.6), 3-44 (ಸೂನ್ ಲೂಜ್, 11.5), 4-67 (ಲಾರಾ ಗೂಡಾಲ್, 18.3), 5-96 (ಮರಿಜಾನ್ ಕಾಪ್, 25.3), 6-101 (ಕ್ಲೋ ಟ್ರಯಾನ್, 27.5), 7-110 (ಮಿಗ್ನನ್ ಡು ಪ್ರೀಜ್, 29.6), 8-148 (ಶಬ್ನಿಮ್ ಇಸ್ಮಾಯಿಲ್, 35.3), 9-152 (ಮಸಬಟ ಕ್ಲಾಸ್, 37.2), 10-156 (ತ್ರಿಷಾ ಚೆಟ್ಟಿ, 37.6)
**ಬೌಲಿಂಗ್:** ಕ್ಯಾಥರಿನ್ ಬ್ರಂಟ್ 4–2–9–0, ಅನ್ಯಾ ಶ್ರಬ್‌ಸೋಲ್ 5–0–27–2, ನ್ಯಾಟ್ ಶೀವರ್ 5–0–16–0, ಕೇಟ್ ಕ್ರಾಸ್ 6–0–22–1, ಚಾರ್ಲಿ ಡೀನ್ 10–0–41–1, ಸೋಫಿ ಎಕ್ಲೆಸ್ಟೋನ್ 8–0–36–6

**ಫಲಿತಾಂಶ: ಇಂಗ್ಲೆಂಡ್‌ಗೆ 137 ರನ್‌ಗಳ ಜಯ; ಫೈನಲ್ ಪ್ರವೇಶ**






# ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

## RENTAL PROPERTIES

### Accommodation Available

### Industrial And Factory

**YESHWANTHAPUR 12000** Sqft Industrial Land For Rent with 3000 Sqft RCC Building Power Borewell Near KLE Dental College. 'Rajadhani Associates' 9845009392/ 08023131609

### House

**R.M.V. SECOND** Three BHK Bungalow Site 3800Feet Corner for rent- 9986033339, mundhralightings@gmail.com

## REAL ESTATE SELLING

### Flat

### Mahalakshmi Layout

**READY TO** Move, 3 BHK Flats, 1 KM from Iskcon Temple & Metro Station, 94 Lakhs. Few Flats Left. 9845014364/ 9513999423

### Vijayanagar

**2-BHK** FLAT FOR SALE- 1051 sqft=Rs.44 lakhs Fixed, 919 saft=Rs.38.50 lakhs Fixed at Pipeline Road, Vijayanagar, Bangalore. Contact: 9880034233, 9110432149

### Sites

### Arkavathi Layout

**SEMI COMMERCIAL** 40x60 BDA Site For Sale at Arkavathi Layout Near Hennur Main Road Contact: 7676900174 8892297674

### HBR Layout

**HBR LAYOUT** 4th Block, 40X60 East Facing, 40 Feet Road Site Sale, 16,500/- PSqft. 9945724472.

### Banashankari

**BANASHANKARI 6TH** Stage, Anjanapura, Vishweswaraiah Layout, BDA/A Katha 20x30, 30x40, 40x60, 50x80, BUYING/ SELLING, Immediate settlement. SHIVARAJU: 9845390290, 9591369367.

### General

**PRESTIGE GOLFSHIRE MARINA, Plot of 13345 Sft for sale on Nandi Hills Road, For details, call: 7259886212.**

### Hosur Road

**"SALE: SITE,** Building, Residential, Commercial 20x30, 30x40, 40x60, 50x80 HOSA Road, HSR, Koramangala, Nagarabhavi. 9880080388"

**APPROX ONE** Acre Industrial Land near Attibele Off: Hosur Road for Sale. Brokers Excuse. Contact: 9620938350/ 9844243147.

### Multiple Locations

**SITE 30X50** at Girinagar 2 phase, New building at D group layout Nagarabhavi 2nd stage (G+3 Floors), Site 30x40 at Andhrahalli D group layout Contact Prakash Property Consultant 8310590306

### Magadi Road

**SITES FOR SALE**
CNR Infra @ Tavarekere Town
BMRDA 'A' Katha
Sites Available
Ready for Registration & Construction
Bank loan Available...
Contact
9535311817 / 9448315875

### Mysore Road

**EAGLETON GOLF** RESORT, Mysore Road, 40X75 North Facing Site Sale, Gated Community, 3,800/- PSqft. 9945724472.

### Vishweshwariah Layout

**BDA SITE** Sale Vishweshwaraiah 30x40 1st Block North 9000, 30x40 4th Block North 5800 Negotiable. 50x80 6th Block 60ft Road:- 8892901567/ 9341733480

## PROPERTY CORNER

**Rent - Commercial Space**
**1800+1700 sft,**
Available for Courier Godown / local stock point for on-line Companies, in Cloth Market (Srirampura) Ramachandrapura, Bangalore 560021
Rent Rs 22 per sq.ft.
Call: 9342244093. 7411708501

## JOB OPPORTUNITIES

### General

**WANTED SMART** & Dynamic Experienced SALESMEN/ SALES WOMEN for Multinational Silks/ Textiles Showroom in Marathahalli. Good salary plus other allowances. Interested candidates walk-in at Sudarshan Silks, Marathhalli next Broad Band Factory Showroom. Mobile Shekar: 9972235447, Shivanna- 9008966899

### Marketing & Sales

**MAHLE REQUIRES** dynamic and self-motivated Sales Officer to handle aftermarket sales in the state of Karnataka. Graduate having good communication and interpersonal skill may apply to hr@prassociates.services

**WANTED SALES** Promotors for Leading Oil Brand Qualification SSLC & Above with Smartphone Mandatory Pls Contact: 8317435038/ 7892325629 Email: ideeaz@gmail.com

### Graphic Designers

**WANTED DTP** Operator/ Graphic Designer Corel Draw, Illustrator & Photoshop for a Pvt Limited Company in around Rajajinagar Contact: 23307910/ 9108458798

## BUSINESS

### Business Offers

### Finance

**HOUSING LOANS** @ 6.5% Loan Against Property @ 7.5% Business Loans @ 10.5% & Balance Transfer. Call Srinidhi: 9739645566

**WANTED BUSINESS** Partner Non Veg Hotel 10 Lakhs Investment Monthly Income 2 Lakhs: 9606701007/ 8892501007

## PERSONAL

### Change of Name

**CHANGE OF NAME**
I, FELIX JEROME DAVIS, Residing at B6, Gagan Manor, Dinnur Road, R.T. Nagar, Bangalore-560032, have changed my name to **JEROME DAVIS**, vide affidavit dated 31-03-2022 before Notary S. Samuel Solomon, Bangalore.

**I, ZOHARA** ABDUL RUB W/o. Abdul Rub T.S. R/a #1-286, 6th Cross, Ganesha Temple Road Leelavathi Extention Madduru Post Mandya- 571428 Declare That ZOHARA ABDUL RUB and ZOHARA NAFEESA one and The Same Person. Vide Affidavit Dated: 31.03.2022 Before Notary, Bharathi, Tumkur.

**CHANGE OF NAME**
I, HEMANGI SUTHAR, Residing at #356, 1st Main, 7th Cross, Maduramma Temple Street, Yamaluru, Bengaluru-560037, have changed my name to **HEMANGI RASHMIKANT SUTHAR,** vide affidavit dated 31.03.2022, before Notary Sivakumara M.N, Bangalore. Henceforth, I shall be called **HEMANGI RASHMIKANT SUTHAR,** only.

**I, VARADAN** ELUMALA, residing, at No.250,2nd Cross, Binnipete, Bangalore-560023, have changed my name to VARDARAJ EALUMALAI,Date of Birth: 04-04-1966, vide affidavit dated: 31-03-2022 before Notary G.Hemalatha, Bangalore.

**I, MUDDAMMA** resident of 819/69, Kothanur village, J.P.Nagar 8th phase, Bangalore-560076 have changed my name to RADHAMMA vide affidavit dated 30/03/2022 sworn before notary Ambika.S, Bangalore.

**CAUTION NOTICE**
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement



### ರಾಬಿನ್ ಉತ್ತಪ್ಪ ಅರ್ಧಶತಕ ವ್ಯರ್ಥ; ಚೆನ್ನೈ ಸೂಪರ್ ಕಿಂಗ್ಸ್ ತಂಡಕ್ಕೆ ನಿರಾಶೆ

# ಮಿಂಚಿದ ಕ್ವಿಂಟನ್, ಎವಿನ್; ಲಖನೌ ವಿನ್

**ಮುಂಬೈ:** ಕ್ವಿಂಟನ್ ಡಿ ಕಾಕ್ ಮತ್ತು ಎವಿನ್ ಲೂಯಿಸ್ ಅರ್ಭಟದಿಂದಾಗಿ ಲಖನೌ ಸೂಪರ್ ಜೈಂಟ್ಸ್ ತಂಡವು ಐಪಿಎಲ್ ಟೂರ್ನಿಯಲ್ಲಿ ಮೊದಲ ಜಯದ ಸಿಹಿ ಸವಿಯಿತು.

ಬ್ರೆಬೋರ್ನ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಕೆ.ಎಲ್. ರಾಹುಲ್ ನಾಯಕತ್ವದ ಲಖನೌ ತಂಡ 6 ವಿಕೆಟ್‌ಗಳಿಂದ ಹಾಲಿ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಜಯಭೇರಿ ಬಾರಿಸಿತು.

ಟಾಸ್ ಗೆದ್ದ ಲಖನೌ ನಾಯಕ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ರಾಬಿನ್ ಉತ್ತಪ್ಪ (50; 27ಎ) ಮತ್ತು ಶಿವಂ (49; 30ಎ) ಅವರ ಬ್ಯಾಟಿಂಗ್ ಬಲದಿಂದ ಚೆನ್ನೈ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 210 ರನ್ ಗಳಿಸಿತು. ಈ ಕಠಿಣ ಗುರಿಯನ್ನು ಬೆನ್ನಟ್ಟಿದ ರಾಹುಲ್ ಬಳಗ 19.3 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 211 ರನ್ ಗಳಿಸಿತು. ರವೀಂದ್ರ ಜಡೇಜ ನಾಯಕತ್ವದ ಚೆನ್ನೈ ತಂಡವು ಸತತ ಎರಡನೇ ಸೋಲನುಭವಿಸಿತು.

ಲಖನೌ ತಂಡದ ನಾಯಕ ರಾಹುಲ್ (40 ರನ್) ಮತ್ತು ಕ್ವಿಂಟನ್ (61; 45ಎ) ಮೊದಲ ವಿಕೆಟ್‌ಗಳಿಗೆ 99 ರನ್ ಸೇರಿಸಿ ಉತ್ತಮ ಅಡಿಪಾಯ ಹಾಕಿಕೊಟ್ಟರು. 11ನೇ ಓವರ್‌ನಲ್ಲಿ ಇವರ ಜೊತೆಯಾಟ ಮುರಿದುಬಿದ್ದ ಮೇಲೆ ಉಳಿದ ಬ್ಯಾಟರ್‌ಗಳು ಯೋಜನಾಬದ್ಧ ಆಟವಾಡಿದರು.

ಮನೀಷ್ ಪಾಂಡೆ (5ರನ್) ಅವರೊಬ್ಬರನ್ನು ಬಿಟ್ಟರೆ ಉಳಿದ ಬ್ಯಾಟರ್‌ಗಳು ಉತ್ತಮವಾಗಿ ಆಡಿದರು. ಎವಿನ್ ಲೂಯಿಸ್ (ಔಟಾಗದೆ 55; 23ಎ) ಮಧ್ಯಮ ಕ್ರಮಾಂಕದಲ್ಲಿ ಮಿಂಚಿದರು. ಲೂಯಿಸ್ ಈ ಋತುವಿನಲ್ಲಿ ವೇಗದ ಅರ್ಧಶತಕ ಪೂರ್ಯೆಸಿದರು. ದೀಪಕ್ ಹೂಡಾ ಕೂಡ ಮಿಂಚಿದರು. ಯುವ ಪ್ರತಿಭೆ ಆಯುಷ್ ಬದೋನಿ (ಔಟಾಗದೆ 19; 9ಎ) ತಂಡವನ್ನು ವಿಜಯದ ಗೆರೆ ದಾಟಿಸಿದರು.

**ಮುಖ್ಯಾಂಶಗಳು**

- ಐಪಿಎಲ್‌ನಲ್ಲಿ 171 ವಿಕೆಟ್ ಗಳಿಸಿದ ಬ್ರಾವೊ
- ಲಸಿತ್ ಮಾಲಿಂಗ ಅವರ ದಾಖಲೆ ಮುರಿದ ಬೌಲರ್
- ಆರು ಎಸೆತಗಳಲ್ಲಿ 16 ರನ್ ಗಳಿಸಿದ ಧೋನಿ

**ರಾಬಿನ್–ಅಲಿ ಜೊತೆಯಾಟ:** ಟೂರ್ನಿಯಲ್ಲಿ ಇದೇ ಮೊದಲ ಪಂದ್ಯ ವಾಡಿದ ಇಂಗ್ಲೆಂಡ್ ಆಲ್‌ರೌಂಡರ್ ಮೋಯಿನ್ ಅಲಿ (35; 22ಎ, 4X4, 6X2) ಮತ್ತು ರಾಬಿನ್ ಸೇರಿ ಎರಡನೇ ವಿಕೆಟ್ ಜೊತೆಯಾಟದಲ್ಲಿ 56 ರನ್‌ಗಳನ್ನು ಸೇರಿಸಿದರು. ಕೊಡಗಿನ ರಾಬಿನ್ 25 ಎಸೆತಗಳಲ್ಲಿ ಅರ್ಧಶತಕ ಪೂರ್ಯೆಸಿದರು.

ಲೆಗ್‌ಸ್ಪಿನ್ನರ್ ರವಿ ಎಂಟನೇ ಓವರ್‌ನಲ್ಲಿ ಈ ಜೊತೆಯಾಟವನ್ನು ಮುರಿಯುವಲ್ಲಿ ಯಶಸ್ವಿಯಾದರು. ರವಿ ಬೀಸಿದ ಎಲ್‌ಬಿಡಬ್ಲ್ಯು ಬಲೆಗೆ ರಾಬಿನ್ ಬೀಳುವುದರೊಂದಿಗೆ ಅಂದದ ಪಾಲುದಾರಿಕೆಯ ಆಟಕ್ಕೆ ತೆರೆಬಿತ್ತು.

ಕ್ರೀಸ್‌ಗೆ ಬಂದ ಶಿವಂ ದುಬೆ ಬೌಲರ್‌ಗಳ ಬೆವರಿಳಿಸಿದರು. ಆತ್ಮವಿಶ್ವಾಸದಿಂದ ಬ್ಯಾಟ್ ಬೀಸುತ್ತಿದ್ದ ಮೋಯಿನ್ ಅಲಿಯನ್ನು ಮಧ್ಯಮವೇಗಿ ಆವೇಶ್ ಖಾನ್ ಕ್ಲೀನ್‌ಬೌಲ್ಡ್ ಮಾಡಿದರು.

ಶಿವಂ ಜೊತೆಗೂಡಿದ ಅಂಬಟಿ ರಾಯುಡು ರನ್ ಗಳಿಕೆಗೆ ವೇಗ ನೀಡಿದರು. ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ ಇವರಿಬ್ಬರೂ 37 ಎಸೆತಗಳಲ್ಲಿ 60 ರನ್ ಸೇರಿಸಿದರು. ಅದರಲ್ಲಿ ಅಂಬಟಿಯ ಕಾಣಿಕೆ 27 ರನ್‌ಗಳು.

17ನೇ ಓವರ್‌ನಲ್ಲಿ ಅಂಬಟಿ ವಿಕೆಟ್ ಕಬಳಿಸಿದ ರವಿ ಜೊತೆಯಾಟವನ್ನು ಮುರಿದರು. ಆವೇಶ್ ಖಾನ್ ಬೌಲಿಂಗ್‌ನಲ್ಲಿ ದುಬೆ ಔಟಾದರು. ನಾಯಕ ರವೀಂದ್ರ ಜಡೇಜ ಒಂಬತ್ತು ಎಸೆತಗಳಲ್ಲಿ 17 ಮತ್ತು ನಿಕಟಪೂರ್ವ ನಾಯಕ ಮಹೇಂದ್ರ ಸಿಂಗ್ ಧೋನಿ ಆರು ಎಸೆತಗಳಲ್ಲಿ 16 ರನ್ ಗಳಿಸಿದರು.



ಎವಿನ್ ಲೂಯಿಸ್ (ಬಲ) ಅರ್ಧಶತಕ ಗಳಿಸಿದ ಸಂಭ್ರಮ –ಪಿಟಿಐ ಚಿತ್ರ

**ಆರೆಂಜ್ ಕ್ಯಾಪ್**

(ಹೆಚ್ಚು ರನ್‌ಗಳಿಸಿದವರು)

| ಆಟಗಾರ | ತಂಡ | ರನ್ |
|---|---|---|
| ಫಫ್‌ಡುಪ್ಲೆಸಿ | ಬೆಂಗಳೂರು | 93 |
| ಇಶಾನ್‌ಕಿಶನ್ | ಮುಂಬೈ | 81 |
| ರಾಬಿನ್ | ಚೆನ್ನೈ | 78 |

**ಪರ್ಪಲ್ ಕ್ಯಾಪ್**

(ಹೆಚ್ಚು ವಿಕೆಟ್‌ಗಳಿಸಿದವರು)

| ಆಟಗಾರ | ತಂಡ | ವಿಕೆಟ್ |
|---|---|---|
| ಹಸರಂಗ | ಬೆಂಗಳೂರು | 5 |
| ಉಮೇಶ್ | ಕೋಲ್ಕತ್ತ | 4 |
| ಆಕಾಶ್ | ಬೆಂಗಳೂರು | 4 |

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

**ಪಾಯಿಂಟ್ ಪಟ್ಟಿ**

| ತಂಡ | ಪಂದ್ಯ | ಗೆಲುವು | ಸೋಲು | ರದ್ದು | ಟೈ | ಅಂಕ |
|---|---|---|---|---|---|---|
| ರಾಜಸ್ಥಾನ | 1 | 1 | 0 | 0 | 0 | 2 |
| ಡೆಲ್ಲಿ | 1 | 1 | 0 | 0 | 0 | 2 |
| ಪಂಜಾಬ್ | 1 | 1 | 0 | 0 | 0 | 2 |
| ಗುಜರಾತ್ | 1 | 1 | 0 | 0 | 0 | 2 |
| ಕೋಲ್ಕತ್ತ | 2 | 1 | 1 | 0 | 0 | 2 |
| ಲಖನೌ | 2 | 1 | 1 | 0 | 0 | 2 |
| ಬೆಂಗಳೂರು | 2 | 1 | 1 | 0 | 0 | 2 |
| ಚೆನ್ನೈ | 2 | 0 | 2 | 0 | 0 | 0 |
| ಮುಂಬೈ | 1 | 0 | 1 | 0 | 0 | 0 |
| ಹೈದರಾಬಾದ್ | 1 | 0 | 1 | 0 | 0 | 0 |

* ಗುರುವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

## ಸ್ಕೋರ್ ಕಾರ್ಡ್

**ಚೆನ್ನೈ ಸೂಪರ್ ಕಿಂಗ್ಸ್ 7ಕ್ಕೆ 210 (20 ಓವರ್)**

ರಾಬಿನ್ ಎಲ್‌ಬಿಡಬ್ಲ್ಯು ಬಿ ರವಿ 50 (27 ಎ, 4x8, 6x1), ಋತುರಾಜ್ ರನ್ ಔಟ್ (ರವಿ ಬಿಷ್ಣೋಯಿ) 1 (4 ಎ), ಮೋಯಿನ್ ಬಿ ಆವೇಶ್ 35 (22 ಎ, 4x4, 6x2), ಶಿವಂ ಸಿ ಲೂಯಿಸ್ ಬಿ ಆವೇಶ್ 49 (30 ಎ, 4x5, 6x2), ಅಂಬಟಿ ಬಿ ರವಿ 27 (20 ಎ, 4x2, 6x2), ರವೀಂದ್ರ ಸಿ ಮನೀಷ್ ಬಿ ಟೈ 17 (9 ಎ, 4x3), ಧೋನಿ ಔಟಾಗದೆ 16 (6 ಎ, 4x2, 6x1), ಪ್ರಿಟೋರಿಯಸ್ ಎಲ್‌ಬಿಡಬ್ಲ್ಯು ಬಿ ಟೈ 0 (1 ಎ), ಬ್ರಾವೊ ಔಟಾಗದೆ 1 (1 ಎ)

**ಇತರೆ** (ಬೈ 4, ಲೆಗ್‌ಬೈ 7, ವೈಡ್ 3) 14

**ವಿಕೆಟ್ ಪತನ:** 1-28 (ಋತುರಾಜ್ ಗಾಯಕವಾಡ್, 2.3), 2-84 (ರಾಬಿನ್ ಉತ್ತಪ್ಪ, 7.3), 3-106 (ಮೋಯಿನ್ ಅಲಿ 10.1), 4-166 (ಅಂಬಟಿ ರಾಯುಡು, 16.2), 5-189 (ಶಿವಂ ದುಬೆ, 18.2), 6-203 (ರವೀಂದ್ರ ಜಡೇಜ, 19.2), 7-203 (ಡ್ವೇನ್ ಪ್ರಿಟೋರಿಯಸ್, 19.3)

**ಬೌಲಿಂಗ್:** ಆವೇಶ್ ಖಾನ್ 4-0-38-2, ದುಷ್ಮಂತ ಚಮೀರ 4-0-49-0, ಆ್ಯಂಡ್ರ್ಯೂ ಟೈ 4-0-41-2, ಕೃಣಾಲ್ ಪಾಂಡ್ಯ 3-0-35-0, ರವಿ ಬಿಷ್ಣೋಯಿ 4-0-24-2, ದೀಪಕ್ ಹೂಡಾ 1-0-12-0

**ಲಖನೌ ಸೂಪರ್ ಜೈಂಟ್ಸ್ 4ಕ್ಕೆ 211 (19.3 ಓವರ್)**

ರಾಹುಲ್ ಸಿ ಅಂಬಟಿ ಬಿ ಪ್ರಿಟೋರಿಯಸ್ 40 (26 ಎ, 4x2, 6x3), ಕ್ವಿಂಟನ್ ಸಿ ಧೋನಿ ಬಿ ಪ್ರಿಟೋರಿಯಸ್ 61 (45 ಎ, 4x9), ಮನೀಷ್ ಸಿ ಬ್ರಾವೊ ಬಿ ತುಷಾರ್ 5 (6 ಎ), ಲೂಯಿಸ್ ಔಟಾಗದೆ 55 (23 ಎ, 4x6, 6x3), ದೀಪಕ್ ಸಿ ಜಡೇಜ ಬಿ ಬ್ರಾವೊ 13 (8 ಎ, 4x1, 6x1), ಆಯುಷ್ ಔಟಾಗದೆ 19 (9 ಎ, 6x2)

**ಇತರೆ** (ಲೆಗ್‌ಬೈ 6, ವೈಡ್ 12) 18

**ವಿಕೆಟ್ ಪತನ:** 1-99 (ಕೆ.ಎಲ್. ರಾಹುಲ್, 10.2), 2-106 (ಮನೀಷ್ ಪಾಂಡೆ, 11.2), 3-139 (ಕ್ವಿಂಟನ್ ಡಿ ಕಾಕ್, 14.4), 4-171 (ದೀಪಕ್ ಹೂಡಾ, 17.2)

**ಬೌಲಿಂಗ್:** ಮುಕೇಶ್ ಚೌಧರಿ 3.3-0-39-0, ತುಷಾರ್ ದೇಶಪಾಂಡೆ 4-0-40-1, ಡ್ವೇನ್ ಬ್ರಾವೊ 4-0-35-1, ರವೀಂದ್ರ ಜಡೇಜ 2-0-21-0, ಮೋಯಿನ್ ಅಲಿ 1-0-14-0, ಡ್ವೇನ್ ಪ್ರಿಟೋರಿಯಸ್ 4-0-31-2, ಶಿವಂ ದುಬೆ 1-0-25-0

**ಫಲಿತಾಂಶ: ಲಖನೌ ಸೂಪರ್ ಜೈಂಟ್ಸ್‌ಗೆ 6 ವಿಕೆಟ್‌ಗಳ ಜಯ**

# ಗೆಲ್ಲುವ ಛಲದಲ್ಲಿ ಮಯಂಕ್–ಶ್ರೇಯಸ್

**ಮುಂಬೈ (ಪಿಟಿಐ):** ಕನ್ನಡಿಗ ಮಯಂಕ್ ಅಗರವಾಲ್ ಈಗ ಭರ್ತಿ ಆತ್ಮವಿಶ್ವಾಸದಲ್ಲಿದ್ದಾರೆ. ಈ ಬಾರಿಯ ಐಪಿಎಲ್‌ನಲ್ಲಿ ಅವರ ನಾಯಕತ್ವದ ಪಂಜಾಬ್ ಕಿಂಗ್ಸ್ ತಂಡವು ಗೆಲುವಿನ ಆರಂಭ ಮಾಡಿರುವುದು ಅದಕ್ಕೆ ಕಾರಣವಾಗಿದೆ.

ಶುಕ್ರವಾರ ನಡೆಯಲಿರುವ ಪಂದ್ಯದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ತಂಡ ದ ಎದರೂ ಜಯ ಸಾಧಿಸುವ ಹುಮ್ಮಸ್ಸಿನಲ್ಲಿ ಮಯಂಕ್ ಬಳಗವಿದೆ.

ಶ್ರೇಯಸ್ ಅಯ್ಯರ್ ನಾಯಕತ್ವದ ಬಳಗವು ಮೊದಲ ಪಂದ್ಯದಲ್ಲಿ 'ಹಾಲಿ ಚಾಂಪಿಯನ್' ಚೆನ್ನೈ ಸೂಪರ್ ಕಿಂಗ್ಸ್ ಎದುರು ಗೆದ್ದಿತ್ತು. ಆದರೆ, ಎರಡನೇ ಪಂದ್ಯದಲ್ಲಿ ಫಫ್ ಡುಪ್ಲೆಸಿ ನಾಯಕತ್ವದ ಆರ್‌ಸಿಬಿ ಮುಂದೆ ಸೋತಿತ್ತು. ಅದರಿಂದಾಗಿ ಮತ್ತೆ ಗೆಲುವಿನ ಲಯ ಕಂಡುಕೊಳ್ಳುವ ಛಲದಲ್ಲಿದೆ.

ಬೆಂಗಳೂರು ಎದುರಿನ ಪಂದ್ಯದಲ್ಲಿ ಕೋಲ್ಕತ್ತ ತಂಡವು ಬ್ಯಾಟಿಂಗ್ ವೈಫಲ್ಯ ಅನುಭವಿಸಿತ್ತು. ಆದರೆ, ಬೌಲಿಂಗ್‌ನಲ್ಲಿ ಯಥಾಪ್ರಕಾರ ಉತ್ತಮ ಸಾಧನೆ ತೋರಿತ್ತು. ಅದರಲ್ಲಿಯೂ ಉಮೇಶ್ ಯಾದವ್ ತಮ್ಮ ಉತ್ತಮ ಲಯವನ್ನು ಮುಂದುವರಿಸಿದ್ದರು. ಅದರಿಂದಾಗಿ ಆರ್‌ಸಿಬಿಯು ಬಹಳ ಕಷ್ಟಪಟ್ಟು ಜಯ ಸಾಧಿಸಿತ್ತು. ರಹಾನೆ, ಶ್ರೇಯಸ್, ವೆಂಕಟೇಶ್ ಅಯ್ಯರ್ ಮತ್ತು ಆ್ಯಂಡ್ರೆ ರಸೆಲ್ ಬ್ಯಾಟಿಂಗ್‌ನಲ್ಲಿ ತಮ್ಮ ಲಯಕ್ಕೆ ಮರಳಿದರೆ, ಮಯಂಕ್ ಬಳಗದ ಬೌಲಿಂಗ್ ಪಡೆಗೆ ಕಠಿಣ ಸವಾಲು ಎದುರಾಗಲಿದೆ.

ಪಂಜಾಬ್ ತಂಡವು ಮೊದಲ ಪಂದ್ಯದಲ್ಲಿ ತೋರಿದ ಛಲ, ತಂತ್ರಗಾರಿಕೆ ಮತ್ತು ದಿಟ್ಟತನವನ್ನು ಮುಂದುವರಿಸಿದರೆ ಸಾಕು ಗೆಲುವು ಸುಲಭವಾಗಬಹುದು. ಬೆಂಗಳೂರು ಎದುರಿನ ಪಂದ್ಯದಲ್ಲಿ 205 ರನ್‌ಗಳ ದೊಡ್ಡ ಗುರಿಯನ್ನು ಯಶಸ್ವಿಯಾಗಿ ಸಾಧಿಸಿತ್ತು. ಈ ಹಾದಿಯಲ್ಲಿ ಪಂಜಾಬ್ ತಂಡದ ಯಾವುದೇ ಬ್ಯಾಟರ್ ಕೂಡ ಅರ್ಧಶತಕ ಗಳಿಸಿರಲಿಲ್ಲ. ಆದರೂ ಸಂಘಟಿತ ಪ್ರಯತ್ನದಿಂದ ತಂಡವನ್ನು ಗೆಲುವಿನ ದಡ ಸೇರಿಸಿದ್ದರು. ಬೌಲಿಂಗ್‌ನಲ್ಲಿ ಅನುಭವದ ಕೊರತೆ ಎದ್ದು ಕಂಡಿತ್ತು. ಸಂದೀಪ್ ಶರ್ಮಾ, ರಾಹುಲ್ ಚಾಹರ್ ಮತ್ತು ಅರ್ಷದೀಪ್ ಸಿಂಗ್ ಅವರ ಮೇಲೆ ಮಯಂಕ್ ಹೆಚ್ಚು ಅವಲಂಬಿತವಾಗುವ ಪರಿಸ್ಥಿತಿ ಇದೆ. ಮುಖ್ಯ ಕೋಚ್ ಅನಿಲ್ ಕುಂಬ್ಳೆ ಮತ್ತು ಮಯಂಕ್ ಸೇರಿ ಬೌಲಿಂಗ್ ವಿಭಾಗದಲ್ಲಿ ಮಾಡುವ ಬದಲಾವಣೆಯೂ ಇಲ್ಲಿ ಪ್ರಮುಖವಾಗಲಿದೆ. ಬೌಲಿಂಗ್ ಆಲ್‌ರೌಂಡರ್ ರಿಷಿ ಧವನ್ ಅವಕಾಶ ಪಡೆಯುವ ಸಾಧ್ಯತೆ ಹೆಚ್ಚಿದೆ.

**ಪಂದ್ಯ ಆರಂಭ: ರಾತ್ರಿ 7.30**

**ನೇರಪ್ರಸಾರ: ಸ್ಟಾರ್ ಸ್ಪೋರ್ಟ್ ನೆಟ್‌ವರ್ಕ್, ಹಾಟ್ ಸ್ಟಾರ್**



ಶ್ರೇಯಸ್ ಅಯ್ಯರ್

### ಮುಂಬೈ ತಂಡಕ್ಕೆ ಮರಳಿದ ಸೂರ್ಯ

**ಮುಂಬೈ (ಪಿಟಿಐ):** ಬೆರಳಿನ ಗಾಯ ದಿಂದ ಗುಣಮುಖರಾಗಿರುವ ಬ್ಯಾಟರ್ ಸೂರ್ಯಕುಮಾರ್ ಯಾದವ್ ಮುಂಬೈ ಇಂಡಿಯನ್ಸ್ ತಂಡಕ್ಕೆ ಮರಳಿದ್ದಾರೆ.

ಹೋದ ತಿಂಗಳು ವೆಸ್ಟ್ ಇಂಡೀಸ್ ಎದುರಿನ ಸರಣಿಯಲ್ಲಿ ಅವರ ಬೆರಳಿಗೆ ಪೆಟ್ಟುಬಿದ್ದಿತ್ತು. ಅದರ ನಂತರ ಅವರು ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯಲ್ಲಿ ಆರೈಕೆ ಮತ್ತು ಪುನಶ್ಚೇತನ ಶಿಬಿರದಲ್ಲಿದ್ದರು. ಅದರಿಂದಾಗಿ ಐಪಿಎಲ್ ಟೂರ್ನಿಯಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಎದುರು ನಡೆದಿದ್ದ ಪಂದ್ಯದಲ್ಲಿ ಆಡಿರಲಿಲ್ಲ.

ರಾಜಸ್ಥಾನ ರಾಯಲ್ಸ್ ಎದುರು ನಡೆಯಲಿರುವ ಪಂದ್ಯದಲ್ಲಿ ಅವರು ಕಣಕ್ಕೆ ಇಳಿಯುವರು ಎಂದು ಮುಂಬೈ ತಂಡದ ಮೂಲಗಳು ತಿಳಿಸಿವೆ.

# ಫಿಫಾ ವಿಶ್ವಕಪ್ ಡ್ರಾ ಇಂದು

**ದೋಹಾ (ಎಎಫ್‌ಪಿ):** ಇದೇ ವರ್ಷ ಆಯೋಜನೆಯಾಗಿರುವ ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ಪಂದ್ಯಗಳ ಡ್ರಾ ಶುಕ್ರವಾರ ನಡೆಯಲಿದೆ.



ಫಿಫಾ ಅಧ್ಯಕ್ಷ ಇನ್ಫೆಂಟಿನೊ

ನವೆಂಬರ್ 21 ರಿಂದ ಡಿಸೆಂಬರ್ 18 ರವರೆಗೆ ನಡೆಯಲಿರುವ ವಿಶ್ವಕಪ್ ಟೂರ್ನಿಯಲ್ಲಿ ಆಡಲಿರುವ ತಂಡಗಳನ್ನು ನಾಲ್ಕು ಪಾಟ್ (ವಿಭಾಗ) ಗಳಲ್ಲಿ ವಿಂಗಡಿಸಲಾಗಿದೆ. ಆತಿಥೇಯ ಕತಾರ್ ತಂಡವು ಪಾಟ್ ಒಂದರಲ್ಲಿ ಸ್ಥಾನ ಪಡೆದುಕೊಂಡಿದೆ.

ಮಾರ್ಚ್ 31ಕ್ಕೆ ಅಂತ್ಯಗೊಂಡ ಫಿಫಾ ವಿಶ್ವ ರ್‍ಯಾಂಕಿಂಗ್ ಅಧಾರದಲ್ಲಿ ಶ್ರೇಯಾಂಕ ನೀಡಲಾಗಿದೆ. ಜೂನ್ 13 ಮತ್ತು 14ರಂದು ಕತಾರ್‌ನಲ್ಲಿ ಇಂಟರ್ ಕಾಂಟಿನೆಲ್ ಪ್ಲೇ ಆಫ್ ನಡೆಯಲಿದೆ.

ಒಟ್ಟು ಎಂಟು ಗುಂಪುಗಳಲ್ಲಿ ತಂಡಗಳನ್ನು ವಿಂಗಡಿಸಲಾಗುವುದು. ತಲಾ ಒಂದು ಗುಂಪಿನಲ್ಲಿ ನಾಲ್ಕು ತಂಡಗಳು ಸ್ಥಾನ ಪಡೆಯಲಿವೆ.

**ಸಮಯ: ರಾತ್ರಿ 9.30ರಿಂದ**

**ನೇರಪ್ರಸಾರ: ವೂಟ್ ಸೆಲೆಕ್ಟ್, ಹಿಸ್ಟರಿ ಟಿವಿ 18 ಎಚ್‌ಡಿ**

### ಡ್ರಾಗಾಗಿ ವಿಂಗಡಿಸಲಾದ ಪಾಟ್ಸ್



- ಪಾಟ್ 1: ಕತಾರ್, ಬ್ರೆಜಿಲ್, ಬೆಲ್ಜಿಯಂ, ಫ್ರಾನ್ಸ್, ಇಂಗ್ಲೆಂಡ್, ಅರ್ಜೆಂಟಿನಾ, ಸ್ಪೇನ್, ಪೋರ್ಚುಗಲ್
- ಪಾಟ್ 2: ಮೆಕ್ಸಿಕೊ, ನೆದರ್‌ಲೆಂಡ್ಸ್, ಡೆನ್ಮಾರ್ಕ್, ಜರ್ಮನಿ, ಉರುಗ್ವೆ, ಸ್ವಿಟ್ಜರ್‌ಲೆಂಡ್, ಅಮೆರಿಕ, ಕ್ರೊವೆಷ್ಯಾ
- ಪಾಟ್ 3: ಸೆನೆಗಲ್, ಇರಾನ್, ಜಪಾನ್, ಮೊರೊಕೊ, ಸರ್ಬಿಯಾ, ಪೋಲೆಂಡ್, ದಕ್ಷಿಣ ಕೊರಿಯಾ, ಟುನಿಷಿಯಾ.
- ಪಾಟ್ 4; ಕ್ಯಾಮರೂನ್, ಕೆನಡಾ, ಇಕ್ವೆಡಾರ್, ಸೌದಿ ಅರೇಬಿಯಾ, ಘಾನಾ, ವೇಲ್ಸ್/ಸ್ಕಾಟ್ಲೆಂಡ್/ಉಕ್ರೇನ್, ಏಷ್ಯನ್/ದಕ್ಷಿಣ ಅಮೆರಿಕ ಪ್ಲೇ ಆಫ್ ಹಾಗೂ ಕಾನ್‌ಕೆಸೆಫ್. ಒಸಿನಿಯಾ ಪ್ಲೇ ಆಫ್ ವಿಜೇತರು.




ಮಿಥುನ್ ಮಂಜುನಾಥ್ –ಬಿಡಬ್ಲ್ಯುಎಫ್ ವೆಬ್‌ಸೈಟ್ ಚಿತ್ರ

### ಆರ್ಲಿಯನ್ಸ್ ಮಾಸ್ಟರ್ಸ್ ಬ್ಯಾಡ್ಮಿಂಟನ್

# ಮಿಥುನ್ ಮಂಜುನಾಥ್ ಪ್ರೀಕ್ವಾರ್ಟರ್‌ಗೆ ಪ್ರವೇಶ

ಆರ್ಲಿಯನ್ಸ್, ಫ್ರಾನ್ಸ್ (ಪಿಟಿಐ): ಭಾರತದ ಮಿಥುನ್ ಮಂಜುನಾಥ್, ಕಿರಣ್ ಜಾರ್ಜ್ ಮತ್ತು ಮೀರಬ ಲುವಾಂಗ್ ಮೈಸ್ನಮ್ ಅವರು ಇಲ್ಲಿ ನಡೆಯುತ್ತಿರುವ ಆರ್ಲಿಯನ್ಸ್ ಮಾಸ್ಟರ್ಸ್ ಸೂಪರ್ 100 ಬ್ಯಾಡ್ಮಿಂಟನ್ ಟೂರ್ನಿಯ ಪ್ರೀ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದಾರೆ.

ಗುರುವಾರ ನಡೆದ ಪಂದ್ಯದಲ್ಲಿ ಕರ್ನಾಟಕದ ಮಿಥುನ್ ಮಂಜುನಾಥ್ 21-14, 21-10ರಲ್ಲಿ ಸಿದ್ಧಾರ್ಥ್ ಪ್ರತಾಪ್ ಸಿಂಗ್ ಅವರನ್ನು ಮಣಿಸಿದರು. ಜಾರ್ಜ್ ಮೂರನೇ ಶ್ರೇಯಾಂಕಿತ ನೆದರ್ಲೆಂಡ್ಸ್ ಆಟಗಾರ ಮಾರ್ಕ್ ಕಲ್ಜೊ ಎದುರು 19-21, 21-16, 23-21ರಲ್ಲಿ ಜಯ ಗಳಿಸಿದರು. ಎಂಟನೇ ಶ್ರೇಯಾಂಕದ ತೊಬಿ ಪೆಂಟಿ ಅವರನ್ನು ಮೀರಬ ಗೆದ್ದರು. ಇಂಗ್ಲೆಂಡ್ ಆಟಗಾರನನ್ನು ಮೀರಬ 21-16, 21-16ರಲ್ಲಿ ಮಣಿಸಿದರು.

ಜನವರಿಯಲ್ಲಿ ಒಡಿಶಾ ಸೂಪರ್ 100 ಟೂರ್ನಿಯ ಪ್ರಶಸ್ತಿ ಗೆದ್ದಿರುವ ಜಾರ್ಜ್ 16ರ ಘಟ್ಟದ ಪಂದ್ಯದಲ್ಲಿ ಇಂಡೊನೇಷ್ಯಾದ ಕ್ರಿಸ್ಟಿಯನ್ ಆದಿನಾಥ ಅವರನ್ನು, ಮೀರಬ ಹಾಂಗ್‌ಕಾಂಗ್‌ನ ಚಾನ್ ಯಿನ್ ಚಾಕ್ ಅವರನ್ನು ಮತ್ತು ಮಂಜುನಾಥ್ ಎರಡನೇ ಶ್ರೇಯಾಂಕದ ಡೇನ್ ಹನ್ಸ್ ಕ್ರಿಸ್ಟಿಯನ್ ಅವರನ್ನು ಎದುರಿಸುವರು.

ಮಹಿಳೆಯರ ಡಬಲ್ಸ್‌ನಲ್ಲಿ ಭಾರತದ ಅಶ್ವಿನಿ ಭಟ್ ಮತ್ತು ಶಿಖಾ ಗೌತಮ್ 21-23 21-12 21-10ರಲ್ಲಿ ಡೆನ್ಮಾರ್ಕ್‌ನ ಅಮೆಲಿ ಶುಲ್ಸ್ ಮತ್ತು ಕ್ರಿಸ್ಟಿನ್ ಬೂಶ್ ಅವರನ್ನು ಮಣಿಸಿದರು. ಪುರುಷರ ಡಬಲ್ಸ್‌ನಲ್ಲಿ ಪಿ.ಎಸ್. ರವಿಕುಮಾರ್ ಮತ್ತು ಶಂಕರ್ ಪ್ರಸಾದ್ ಉದಯಕುಮಾ ರ19-21, 21-11, 21-12ರಲ್ಲಿ ಜರ್ಮನ್‌ನ ಮರ್ವಿನ್ ಡಡ್ಕೊ ಮತ್ತು ಪ್ಯಾಟ್ರಿಕ್ ಶೀಲ್ ಎದುರು ಗೆದ್ದರು.

# ಜೂನಿಯರ್ ಹಾಕಿ ವಿಶ್ವಕಪ್: ಭರವಸೆಯಲ್ಲಿ ಭಾರತ ತಂಡ

ಪೊಚೆಫ್‌ಸ್ಟ್ರೂಮ್ (ಪಿಟಿಐ): ಮೂವರು ಒಲಿಂಪಿಯನ್ನರ ಬಲ ಹೊಂದಿರುವ ಭಾರತ ತಂಡ ಮಹಿಳೆಯರ ಎಫ್‌ಐಎಚ್ ಜೂನಿಯರ್ ಹಾಕಿ ವಿಶ್ವಕಪ್ ಟೂರ್ನಿಯಲ್ಲಿ ಉತ್ತಮ ಸಾಧನೆಯ ನಿರೀಕ್ಷೆಯೊಂದಿಗೆ ಕಣಕ್ಕೆ ಇಳಿಯಲಿದೆ.

ಶುಕ್ರವಾರ ಆರಂಭವಾಗಲಿರುವ ಟೂರ್ನಿಯಲ್ಲಿ ಭಾರತ ಮೊದಲ ಪಂದ್ಯ ಶನಿವಾರ ನಡೆಯಲಿದೆ. 'ಡಿ' ಗುಂಪಿನ ಹಣಾಹಣಿಯಲ್ಲಿ ತಂಡ ವೇಲ್ಸ್ ವಿರುದ್ಧ ಸೆಣಸಲಿದೆ.

ಭಾನುವಾರದ ಪಂದ್ಯದಲ್ಲಿ ಜರ್ಮನಿ ವಿರುದ್ಧ ಆಡಲಿದೆ. ನಾಯಕಿ ಸಲಿಮಾ ಟೆಟೆ, ಮಿಡ್‌ಫೀಲ್ಡರ್ ಶರ್ಮಿಳಾ ದೇವಿ ಮತ್ತು ಸ್ಟ್ರೈಕರ್ ಲಾಲ್‌ರೆಮ್ಸಿಯಾಮಿ ಅವರು ಒಲಿಂಪಿಕ್ಸ್‌ನಲ್ಲಿ ಆಡಿದ ಅನುಭವ ಹೊಂದಿದ್ದಾರೆ. ಆದ್ದರಿಂದ ಅವರ ಮೇಲೆ ನಿರೀಕ್ಷೆ ಮೂಡಿದೆ.

ಗುಂಪು ಹಂತದಲ್ಲಿ ಭಾರತ ಮೂರು ಪಂದ್ಯಗಳಲ್ಲಿ ಆಡಲಿದೆ. ಕೊನೆಯ ಪಂದ್ಯದಲ್ಲಿ ತಂಡಕ್ಕೆ ಮಲೇಷ್ಯಾ ಎದುರಾಳಿ. ಕ್ವಾರ್ಟರ್ ಫೈನಲ್ ಪಂದ್ಯಗಳು ಏಪ್ರಿಲ್ 8ರಿಂದ ನಡೆಯಲಿವೆ.




ಸಲೀಮಾ ಟೆಟೆ –ಟ್ವಿಟರ್ ಚಿತ್ರ

20 ವರ್ಷದ ಸಲಿಮಾ ಟೆಟೆ ಭಾರತ ತಂಡದ ಮಿಡ್‌ಫೀಲ್ಡ್ ವಿಭಾಗದ ಶಕ್ತಿಯಾಗಿದ್ದಾರೆ. ಒಲಿಂಪಿಕ್ಸ್‌ನಲ್ಲಿ ಅವರ ಸಾಮರ್ಥ್ಯ ಪ್ರಕಟಗೊಂಡಿದೆ.

ಒಲಿಂಪಿಕ್ಸ್‌ನಲ್ಲಿ ಆಡಿದ ಮಿಜೋರಾಂನ ಮೊದಲ ಆಟಗಾರ್ತಿಯಾಗಿರುವ ಲಾಲ್‌ರೆಮ್ಸಿಯಾಮಿ ಅವರು ಚುರುಕಿನ ಆಟಕ್ಕೆ ಹೆಸರು ಗಳಿಸಿದ್ದಾರೆ.

20 ವರ್ಷದ ಶರ್ಮಿಳಾ ವೇಗದ ಡ್ರಿಬ್ಲಿಂಗ್ ಮೂಲಕ ಎದುರಾಳಿಗಳ ಪಾಳಯದಲ್ಲಿ ಆತಂಕ ಸೃಷ್ಟಿಸಬಲ್ಲರು.

ಉಪನಾಯಕಿ ಇಶಿಕಾ ಚೌಧರಿ, ಗೋಲ್‌ಕೀಪರ್ ಬಿಚು ದೇವಿ ಖಾರಿಬಂ, ಡಿಫೆಂಡರ್ ಅಕ್ಷತಾ ಅಬಾಸೊ ದೇಖಲೆ ಮತ್ತು ಸಂಗೀತಾ ಕುಮಾರಿ ಕೂಡ ಭರವಸೆ ಮೂಡಿಸಿದ್ದಾರೆ.



ದಕ್ಷಿಣ ಆಫ್ರಿಕಾದ ತೆಂಬಾ ಬವುಮಾ –ಎಎಫ್‌ಪಿ ಚಿತ್ರ

# ಕ್ರಿಕೆಟ್: ಎಲ್ಗರ್, ತೆಂಬಾ ಅರ್ಧಶತಕದ ಮಿಂಚು

ಡರ್ಬನ್: ನಾಯಕ ಡೀನ್ ಎಲ್ಗರ್ ಮತ್ತು ಸರೆಲ್ ಎರ್ವಿ ಜೋಡಿಯು ನೀಡಿದ ಉತ್ತಮ ಆರಂಭದ ನೆರವಿನಿಂದ ದಕ್ಷಿಣ ಆಫ್ರಿಕಾ ತಂಡವು ಗುರುವಾರ ಆರಂಭವಾದ ಬಾಂಗ್ಲಾದೇಶ ಎದುರಿನ ಮೊದಲ ಟೆಸ್ಟ್ ಪಂದ್ಯದಲ್ಲಿ ದೊಡ್ಡ ಮೊತ್ತ ಕಲೆಹಾಕುವತ್ತ ಹೆಜ್ಜೆ ಇಟ್ಟಿದೆ. ಕಿಂಗ್ಸ್‌ಮೇಡ್ ಕ್ರೀಡಾಂಗಣದಲ್ಲಿ ಟಾಸ್ ಗೆದ್ದ ಬಾಂಗ್ಲಾದೇಶ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಡೀನ್ (67; 101ಎ) ಮತ್ತು ಸರೆಲ್ (41; 102ಎ) ಮೊದಲ ವಿಕೆಟ್ ಜೊತೆಯಾಟದಲ್ಲಿ 113 ರನ್ ಸೇರಿಸಿದರು. 34ನೇ ಓವರ್‌ನಲ್ಲಿ ಡೀನ್ ಮತ್ತು ನಂತರದ ಓವರ್‌ನಲ್ಲಿ ಸರೆಲ್ ಔಟಾದರು. ಈ ಹಂತದಲ್ಲಿ ತೆಂಬಾ ಬವುಮಾ (ಬ್ಯಾಟಿಂಗ್ 53) ಮತ್ತು ಕೈಲ್ (ಬ್ಯಾಟಿಂಗ್ 27) ಅವರು ಇನಿಂಗ್ಸ್‌ಗೆ ಮತ್ತಷ್ಟು ಬಲ ತುಂಬಿದರು. ಮುರಿಯದ ಐದನೇ ವಿಕೆಟ್ ಜೊತೆಯಾಟದಲ್ಲಿ 53 ರನ್ ಸೇರಿಸಿದರು. ಇದರಿಂದಾಗಿ ಮೊದಲ ದಿನದಾಟದ ಅಂತ್ಯಕ್ಕೆ ಆತಿಥೇಯ ತಂಡವು 76.5 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 233 ರನ್ ಗಳಿಸಿತು. ಮಂದಬೆಳಕಿನ ಕಾರಣದಿಂದಾಗಿ ನಿಗದಿಗಿಂತ 25 ನಿಮಿಷ ಮೊದಲೇ ದಿನದಾಟ ಅಂತ್ಯಗೊಳಿಸಲಾಯಿತು.

**ಸಂಕ್ಷಿಪ್ತ ಸ್ಕೋರು; ಮೊದಲ ಇನಿಂಗ್ಸ್: ದಕ್ಷಿಣ ಆಫ್ರಿಕಾ:** 76.5 ಓವರ್‌ಗಳಲ್ಲಿ 4ಕ್ಕೆ233 (ಡೀನ್ ಎಲ್ಗರ್ 67, ಸರೆಲ್ ಎರ್ವಿ 41, ಕೀಗನ್ ಪೀಟರ್ಸನ್ 19, ತೆಂಬಾ ಬವುಮಾ ಬ್ಯಾಟಿಂಗ್ 53, ರಿಯಾನ್ ರಿಕೆಲ್ಟನ್ 21, ಕೈಲ್ ವೆರೆಯನ್ ಬ್ಯಾಟಿಂಗ್ 27, ಇಬಾದತ್ ಹುಸೇನ್ 58ಕ್ಕೆ1, ಖಲೀದ್ ಅಹಮದ್ 49ಕ್ಕೆ1, ಮೆಹದಿ ಹಸನ್ 57ಕ್ಕೆ1)

# ಸಂತೋಷ್ ಟ್ರೋಫಿ 16ರಿಂದ

ನವದೆಹಲಿ (ಪಿಟಿಐ): ಕೇರಳದ ಮಲಪ್ಪುರಂನಲ್ಲಿ ಇದೇ 16 ರಿಂದ 75ನೇ ಸಂತೋಷ್ ಟ್ರೋಫಿ ರಾಷ್ಟ್ರೀಯ ಫುಟ್‌ಬಾಲ್ ಚಾಂಪಿಯನ್‌ಷಿಪ್ ನಡೆಯಲಿದೆ. ಕೊಟಪ್ಪಾಡಿ ಕ್ರೀಡಾಂಗಣದಲ್ಲಿ ಟೂರ್ನಿ ನಡೆಯಲಿದ್ದು ಉದ್ಘಾಟನೆ ಪಂದ್ಯದಲ್ಲಿ ಪಶ್ಚಿಮ ಬಂಗಾಳ ಮತ್ತು ಪಂಜಾಬ್ ಮುಖಾಮುಖಿಯಾಗಲಿವೆ. ಏ 28 ಮತ್ತು 29ರಂದು ಸೆಮಿಫೈನಲ್,ಮೇ 2ರಂದು ಫೈನಲ್ ಪಂದ್ಯಗಳು ನಡೆಯಲಿವೆ. ಎ ಗುಂಪಿನಲ್ಲಿ ಮೇಘಾಲಯ, ಪಂಜಾಬ್, ಪಶ್ಚಿಮ ಬಂಗಾಳ, ರಾಜಸ್ಥಾನ ಮತ್ತು ಕೇರಳ, ಬಿ ಗುಂಪಿನಲ್ಲಿ ಕರ್ನಾಟಕ, ಗುಜರಾತ್, ಒಡಿಶಾ, ಸರ್ವಿಸಸ್, ಮಣಿಪುರ ತಂಡಗಳು ಸೆಣಸಲಿವೆ.

# ಆಸ್ಟ್ರೇಲಿಯಾ ರೇಸ್‌ಗೆ ಸೆಬಾಸ್ಟಿಯನ್

ಲಂಡನ್ (ರಾಯಿಟರ್ಸ್): ಸೆಬಾಸ್ಟಿಯನ್ ವೆಟಲ್ ಮುಂದಿನ ವಾರ ಆಸ್ಟ್ರೇಲಿಯಾದಲ್ಲಿ ನಡೆಯಲಿರುವ ಆ್ಯಸ್ಟನ್ ಮಾರ್ಟಿನ್ ಸ್ಪರ್ಧಿಸುವರು ಎಂದು ಫಾರ್ಮುಲಾ ಒನ್ ತಂಡವು ಗುರುವಾರ ತಿಳಿಸಿದೆ. ಕೊರೊನಾ ಸೋಂಕಿನಿಂದ ಬಳಲಿದ್ದ ವೆಟಲ್ ಈ ಸ್ಪರ್ಧೆಯ ಮೊದಲ ಎರಡು ಸುತ್ತುಗಳಲ್ಲಿ ಭಾಗವಹಿಸಿರಲಿಲ್ಲ.

# ಹಾಕಿ: ಹರಿಯಾಣಕ್ಕೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಬಾಲಕಿಯರ ತಂಡವು ಆಂಧ್ರ ಪ್ರದೇಶದ ಕಾಕಿನಾಡದಲ್ಲಿ ನಡೆಯುತ್ತಿರುವ ಹಾಕಿ ಟೂರ್ನಿಯಲ್ಲಿ ಸೋಲಿಗೆ ಶರಣಾಯಿತು.

12ನೇ ಹಾಕಿ ಇಂಡಿಯಾ ಜೂನಿಯರ್ ಮಹಿಳೆಯರ ರಾಷ್ಟ್ರೀಯ ಚಾಂಪಿಯನ್‌ಷಿಪ್ ಇಲ್ಲಿ ನಡೆಯುತ್ತಿದ್ದು ಕರ್ನಾಟಕ 2-6ರಿಂದ ಹರಿಯಾಣ ಎದುರು ಸೋತಿತು.

ಗುರುವಾರ ನಡೆದ ಪಂದ್ಯದಲ್ಲಿ ಹರಿಯಾಣದ ಸಾಕ್ಷಿ ರಾಣಾ (20ನೆ ನಿ, 42ನೆ ನಿ), ಪಿಂಕಿ (37), ನೀಲಂ (43), ಇಷಿಕಾ (51) ಮತ್ತು ದಿಶಾ (54ನಿ) ಗೋಲು ಗಳಿಸಿದರು.